
ಸ್ಕಾಲರಶಿಪ್ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ

ಪ್ರಶ್ನೋತ್ತರ ಭಾಷಾಭ್ಯಾಸ



ಭಾಗ ೧ ಮತ್ತು ೨



ಲೇಖಕರು :

ಚಿ. ಶ್ರೀ. ಕುಲಕರ್ಣಿ, ಎಸ್. ಟಿ. ಸಿ.
ಮಾಳಮಡ್ಡಿ, ಧಾರವಾಡ

★

ಪ್ರಕಾಶಕರು :

ಕೆ. ಎಸ್. ಕುಲಕರ್ಣಿ, ಬುಕ್ ಡಿಪೋ
ಸ್ಟೇಶನ್ ರೋಡ ಹುಬ್ಬಳ್ಳಿ

ಸುಧಾರಿಸಿದ ಆವೃತ್ತಿ

೫೧] [ಬೆಲೆ ೧ ರೂ.

ಮುದ್ರಕರು :
ಶ್ರೀ. ಎಂ. ಜಿ. ಪಾಟೀ
ವಸಂತ ಮುದ್ರಣಾಲ
ಧಾರವಾಡ

ಪ್ರಕಾಶಕರು :
ಶ್ರೀ. ಕೆ. ಎಸ್. ಕುಲಕರ್ಣಿ ಬುಕ್ ಡಿಪೋ
ಸ್ಟೇಶನ್ ರೋಡ
ಹುಬ್ಬಳ್ಳಿ

ನನ್ನ ನುಡಿ

(೧)

ಈ ಪುಸ್ತಕವು ಅನುಭವದ ಸಾರವಾಗಿದೆ. ಇದು ಸಕಲರ ಅವಶ್ಯಕತೆಗಳನ್ನು ಪೂರ್ಣ ಮಾಡುವದೆಂದು ನಂಬಿರುವೆನು. ಇದು ಪರೀಕ್ಷೆಗೆ ಬಹಳೇ ಸಹಾಯಕಾರಿಯಾದುದಾಗಿದೆ. ಇದು ಭಾಷಾ ವಿಷಯದ ಎಲ್ಲ ಪ್ರಶ್ನೆಗಳಿಗೆ ಉತ್ತರ ಬಿಡಿಸಲು ಬರುವಂತಿದೆ ಹೊಸ ಕಾಲವು ಬಂದಂತೆ ಪರೀಕ್ಷೆಯ ರೀತಿಯೂ ಬದಲಾಗುತ್ತ ಹೋಗುತ್ತದೆ. ಅದಕ್ಕೆ ಅನುಗುಣವಾಗಿ ಪುಸ್ತಕಗಳೂ ಬದಲಾಗಲೇ ಬೇಕು. ಈ ಆವೃತ್ತಿಯು ಹಿಂದಿನ ಆವೃತ್ತಿಗಿಂತ ತೀರ ಭಿನ್ನವಾದ ದ್ದಾಗಿದೆ. ಬಹುಭಾಗವನ್ನು ಮತ್ತೊಮ್ಮೆ ಬರೆದು ತೆಗೆದಿರುವೆನು. ಇದು ಪರೀಕ್ಷೆಗೆ ಕೂಡುವವರಿಗೆ ಕೈಗನ್ನಡಿಯಂತೆ ಸಹಾಯವಾಗುವ ದೆಂಬುದರಲ್ಲಿ ಸಂದೇಹವಿಲ್ಲ. ಕಾರಣ ವಿದ್ಯಾರ್ಥಿಗಳೂ ಶಿಕ್ಷಕರೂ ಹಿಂದಿನಂತೆ ಇಂದಿಗೂ ನನ್ನ ಗ್ರಂಥಗಳನ್ನು ಕೊಂಡು ಸಹಾಯ, ಸಹ ಕಾರ ನೀಡಿ ಸೂಚನೆಗಳನ್ನು ಅರುಹಬೇಕೆಂದು ಬೇಡುವೆ.

ನಮ್ರ ಸೇವಕ

ಚಿ. ಶ್ರೀ. ಕುಲಕರ್ಣಿ

ಅನುಕ್ರಮಣಿಕೆ

ಭಾಗ ೧.

ಭಾಗ ೨.

ಹೊಸಮಾದರಿಯ

ಪ್ರಶ್ನೋತ್ತರ

ಭಾಷಾಭ್ಯಾಸ

ಭಾಗ ೧.

೧. ಸರಳಾನುವಾದ

ಸರಳಾನುವಾದವೆಂದರೆ ಕೊಟ್ಟ ಪರಿಚ್ಛೇದದ (ಗದ್ಯವೇ ಆಗಲಿ ಪದ್ಯವೇ ಆಗಲಿ) ವಿಷಯವನ್ನು ಸರಳ (ಸುಲಭ) ಮಾತಿನಲ್ಲಿ ಹೇಳುವದು ಅಥವಾ ಬರೆಯುವದು.

ಸರಳಾನುವಾದ ಮಾಡಬೇಕಾದಾಗ ಗಮನಿಸಬೇಕಾದ ಮಾತುಗಳು: — (೧) ಕೊಟ್ಟ ವಿಷಯದಲ್ಲಿ ಇಲ್ಲದ್ದನ್ನು ಸೇರಿಸಬಾರದು. ಇದ್ದದ್ದನ್ನು ಬಿಡಬಾರದು. (೨) ಕೊಟ್ಟ ಭಾಗವನ್ನು ಮೊದಲು ಓದಿಕೊಂಡು ಅರ್ಥ ತಿಳಿದುಕೊಳ್ಳಬೇಕು. (೩) ಅನುವಾದವನ್ನು ಸ್ವಂತ ಮಾತಿನಲ್ಲಿ ಬರೆಯಲು ಯತ್ನಿಸಬೇಕು. (೪) ಕೊಟ್ಟ ಭಾಗದ ಅರ್ಥವು ಕೆಡದಂತೆ ಎಚ್ಚರ ಪಡಬೇಕು. (೫) ದೊಡ್ಡ ವಾಕ್ಯಗಳ ಅರ್ಥವನ್ನು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹೇಳಬೇಕು. ಆದರೆ ವಿಸ್ತರಿಸಿ ಬರೆಯಲು ಹೋಗಬಾರದು. (೬) ಅನುವಾದ ಮಾಡಿದ ಬಳಿಕ ಅದನ್ನು ಮೂಲಕ್ಕೆ ಹೋಲಿಸಿ ನೋಡಬೇಕು.

ಗದ್ಯಭಾಗಗಳು

(೧) ಈ ಜಗತ್ತಿನಲ್ಲಿ ಪ್ರತಿಯೊಬ್ಬನು ಸುಖ ದೊರಕಿಸುವದಕ್ಕಾಗಿ ಹಾತೊರೆಯುತ್ತಾನೆ. ಬೇಸಿಗೆಯಲ್ಲಿ ಹರಿಣಗಳು ಮೃಗಜಲಕ್ಕೆ ಮನ ಸೋತು ಅದರ ಬೆನ್ನು ಹತ್ತಿ ನಿರಾಶೆ ಹೊಂದುವಂತೆ ಆತನ ಸ್ಥಿತಿಯಾಗು

ತ್ತದೆ. ಸುಖವು ಶಾಂತನಿಗೂ, ದಾಂತನಿಗೂ ಸಮಚಿತ್ತವುಳ್ಳವನಿಗೂ ಲಭಿಸುತ್ತದೆ.

ಸರಳಾನುವಾದ:— ಪ್ರತಿಯೊಬ್ಬನು ಸುಖವಾಗಿರುವದಕ್ಕೆ ಇಚ್ಛಿಸು ವನು. ಆದರೆ ಆತನ ಪ್ರಯತ್ನಗಳು ಸುಖ ಸಿಗುವ ದಾರಿಯಲ್ಲಿರುವದಿಲ್ಲ. ಬೇಸಿಗೆಯಲ್ಲಿ ಚಿಗರೆಯು ಮೃಗಜಲಕ್ಕೆ ನೀರೆಂದು ಅದರ ಬೆನ್ನಹತ್ತಲು ಅದಕ್ಕೆ ನೀರು ಸಿಗದೆ ನೀರಡಿಕೆಯು ಇನ್ನಷ್ಟು ಹೆಚ್ಚುವದು. ಅದರಂತೆ ಮನುಷ್ಯನಿಗೂ ಸುಖವು ದೊರೆಯುವದಿಲ್ಲ. ಸುಖವು ಶಾಂತವಾದ ಚಿತ್ತ ವುಳ್ಳವನಿಗೂ ದಾನ ಮಾಡುವವನಿಗೂ ಸುಖದುಃಖಗಳನ್ನು ಸಮನಾಗಿ ನೋಡುವವನಿಗೂ ದೊರೆಯುವದು.

(೨) ಈ ಕೆಳಗಿನ ಗದ್ಯಭಾಗವನ್ನು ನಿಮ್ಮ ಮಾತುಗಳಲ್ಲಿ ತಿರುಗಿ ಬರೆಯಿರಿ (೧೯೪೩.)

ಹಲವು ಕುರುಡರು ಸೂರ್ಯನನ್ನು ದಿಟ್ಟಿಸಿ ನೋಡಿ ಅವನಲ್ಲಿ ಬೆಳಕೇ ಇಲ್ಲವೆಂದು ಹೇಳುವದುಂಟು. ಕನ್ನಡದಲ್ಲಿ "ಬಳ್ಳಿಗುರುಡರು ಕೂಡಿ ಹಳ್ಳದಲ್ಲಿ ಬೀಳ್ವಂತೆ" ಎಂಬದೊಂದು ಮಾತಿದೆಯಲ್ಲ; ಅದರ ಅರ್ಥವೂ ಹೀಗೆಯೇ ಪಾರತಂತ್ರ್ಯದಲ್ಲಿಯೇ ಹುಟ್ಟಿಬೆಳೆದ ಹಲವರು ಕೂಡಿದರೂ ಎಷ್ಟುದೂರ ನಿರೀಕ್ಷಿಸಿದರೂ ಅವರ ದೃಷ್ಟಿಗೆ ಸ್ವಾತಂತ್ರ್ಯಸುಖದ ಕಲ್ಪನೆ ನಿಲುಕಲಾರದೆಂಬುದು ಈ ಮಾತಿನ ರಹಸ್ಯವು. ಹೊಟ್ಟೆತುಂಬ ರೊಟ್ಟಿ, ಮೈತುಂಬ ಬಟ್ಟೆ ಇಷ್ಟಾದರೂ ಎಲ್ಲರಿಗೂ ದೊರೆತಾಗ ಆ ಜನರಿಗೆ ಆರ್ಥಿಕ ಸ್ವಾತಂತ್ರ್ಯವು ದೊರೆಯಿತೆನ್ನಬಹುದು. ತಾವೇ ಆರಿಸಿ ಕಳುಹಿಸಿದ ಜನ ರುಳ್ಳ ಸರಕಾರವು ತಮ್ಮನ್ನು ಆಳುವಂತಾದಾಗ ಅವರಿಗೆ ರಾಜಕೀಯ ಸ್ವಾಂತಂತ್ರ್ಯವು ದೊರೆತಂತಾಗುವದು. ಇದಲ್ಲದೆ ಔದ್ಯೋಗಿಕ ಸ್ವಾತಂತ್ರ್ಯ, ಭಾಷಣ ಸ್ವಾಂತತ್ರ್ಯ ಲೇಖನ ಸ್ವಾತಂತ್ರ್ಯ, ವಿಚಾರದಲ್ಲಿ ಸಮಾವೇಶ ವಾಗುವದು.

ಸರಳಾನುವಾದ:— ಕುರುಡರಿಗೆ ಕಣ್ಣು ಕಾಣುವದಿಲ್ಲ; ಹುಟ್ಟುಕುರು ಡರು ಕೂಡಿ ದಾರಿ ನಡೆದರೆ ಹಳ್ಳದಲ್ಲಿ ಹೋಗಿ ಬೀಳುವವರೇ! ಅದರಂತೆ ಹಲವು ಕುರುಡರು ಸೂರ್ಯನನ್ನು ದಿಟ್ಟಿಸಿ ನೋಡಿ ಅವನಲ್ಲಿ ಬೆಳಕೇ ಇಲ್ಲ

ವೆಂದು ಹೇಳಿದರೆ ಯಾರು ನಗಲಿಕ್ಕಿಲ್ಲ ! ಅವಂಗೆ ಕಾಣಿಸುವದೇ ಇಲ್ಲ. ಅಂದಮೇಲೆ ಸೂರ್ಯನ ಬೆಳಕಿನ ಅರಿವು ಅವರಿಗೆ ಹೇಗಾಗಬೇಕು! ಅದರಂತೆ ಪಾರತಂತ್ರ್ಯದಲ್ಲಿಯೇ ಹುಟ್ಟಿ ಬೆಳೆದು ಜೀವನ ಕಳೆದವರಿಗೆ ಸ್ವಾತಂತ್ರ್ಯ ಸುಖದ ಕಲ್ಪನೆ ಬರುವದು ಅಸಾಧ್ಯ. ಎಲ್ಲರಿಗೂ ಹೊಟ್ಟೆತುಂಬ ಊಟ ಮೈತುಂಬ ಅರಿವೆಯಾದರೂ ದೊರೆತರೆ ಮಾತ್ರ ಅರ್ಥಿಕ ಸ್ವಾತಂತ್ರ್ಯ ದೊರೆಯಿತೆನ್ನ ಬಹುದು. ಪ್ರಜರಿಂದ ಆರಿಸಲ್ಪಟ್ಟವರು ರಾಜ್ಯ ಆಳುವಂತಾ ದಾಗ ಮಾತ್ರ ರಾಜಕೀಯ ಸ್ವಾತಂತ್ರ್ಯವು ದೊರೆತಂತಾಗುವದು. ಇವ ಲ್ಲದೆ ಉದ್ಯೋಗಕ್ಕೆ ಸಂಬಂಧಿಸಿದ ಸ್ವಾತಂತ್ರ್ಯ, ಭಾಷಣ ಲೇಖನಗಳ ಸ್ವಾತಂತ್ರ್ಯ ಮುಂತಾದವು ಮನುಷ್ಯ ಜಾತಿಯ ಸ್ವಾತಂತ್ರ್ಯ ವಿಚಾರದ ಬೇರೆಬೇರೆ ಭಾಗಗಳೆಂದು ಹೇಳಬಹುದು.

ಪ್ರ:—(೩) " ಯಾಕಬೇ. ಏನದಾವ ತೆಲಿಮ್ಯಾಗ; ತಗಿಯಲಾ !"

"ಯಾಕೊ ದವುಳ್ಳವನs, ನಂತೆಲಿಮ್ಯಾಗಿನ್ನು ತಗ್ಯಾಕೇನ ನಿಂಜೀವ ಬ್ಯಾಡಾಗೇತೀ ?"

" ಅಲ್ಲಬೆ, ಬುಟ್ಯಾಗಿನ್ನೊವ್ ಏನದಾವೂ ಅನ್ನಿ "

" ಕಾಣಬ್ಯಾರೇ ಬಾಳೀ ಹಣ್ ಅಂತ ಬೂಗಳಾಕ ಹತ್ತೇನಲ್ಲ ! "

" ಹ್ಯಾಂ ಕೊಡ್ತೀ ? "

" ಹ್ಯಾಂ ಕೊಡ್ತೀ ? "

" ಬತ್ತ ಈ ಸರಿಯೇ ಎಪ್ಪ !"

" ನೋಡ ಮತ್ತ, ಗಟ್ಟೇ ಮಾತ ! "

" ಆಯ್ ನಮ್ಮಪ್ಪs, ಏನ ದೊಡ್ಯಾಪಾರಾ ಮಾಡಾಂ ಕಾಣಿಸಿ ಯೊಳ ! "

" ಹಾಂಗಾರs ತಗೊ ಈ ಬತ್ತದ ಕಾಳ, ತಾ ಒಂದ ಬಾಳೀಹಣ್; ಹೂಂ ತಗೀ ಮತ್ತs "

" ಚೀ ಹೋಗೋ ನಮ್ಮಪ್ಪ ! ಯಾರದಾರ ಮಾರಿಗೆ ಮಸಿಹಚ್ಚೀ.

ಈ ಸಂಭಾಷಣವನ್ನು ಇದ್ದಕ್ಕಿದ್ದಂತೆ ಗ್ರಂಥಸ್ಥಭಾಷೆಯಲ್ಲಿ ವರ್ಣಿ

ಗ್ರಂಥಸ್ಥ ಭಾಷೆ ‘ ಯಾಕವಾ ’ ನಿನ್ನ ತಲೆಯಮೇಲೆ ಏನು ಅವೆ ತೆಗದು ತೋರಿಸು.

“ ಯಾಕೆ ಮೂರ್ಖನೇ, ನನ್ನ ತಲೆಯಮೇಲಿನದನ್ನು ತೆಗೆಯ ಲಿಕ್ಕೆ ನಿನಗೆ ಜೀವವು ಬೇಡಾಗಿದೆಯೋ ? ”

‘ ಹಾಗಲ್ಲವಾ, ಬುಟ್ಟಿಯೊಳಗೆ ಏನು ಅವೆ ಎಂದೆ ’

‘ ಬೋರೀ ಹಣ್ಣು ’ ಅಂತಾ ಬೊಗಳುತ್ತಿರುವೆನಲ್ಲ ’

‘ ಹೇಗೆ ಕೊಡುತ್ತಿ ’ ?

‘ ಬತ್ತಕ್ಕೆ ಸರಿಯಾಗಿ ’

‘ ನೋಡು ಮತ್ತೆ ಗಟ್ಟಿ, ಮಾತು ’

“ ಅಹಾ, ನೀನು ದೊಡ್ಡ ವ್ಯಾಪಾರ ಮಾಡುವವನಂತೆ ಕಾಣಿಸುತ್ತಿ !

‘ ಹಾಗಾದರೆ ಈ ಬ[illegible]ದ ಕಾಳು ತೆಗೆದುಕೋ ; ಒಂದು ಬಾರೇ ಹಣ್ಣು ತಾ ’ ಬೇಗಕೊಡು ಮತ್ತೆ !

‘ ಛೀ ಹೋಗೋ ಮೂರ್ಖ! ಯಾರದಾದರೂ ಮೋರೆಗೆ ಮಸಿಹಚ್ಚಿ ’

ಪದ್ಯ

ಪ್ರ:— ೧ ಕೆಳಗೆ ಕೊಟ್ಟ ಪದ್ಯದ ಸರಳಾನುವಾದವನ್ನು ಬರೆಯಿರಿ. (೧೯೪೦)

ದೇವಿ ಬಿಡು ಶೋಕಮಂ; ಪುತ್ರಯುಗಮಂ ಪಡೆವೆ ;
ಭಾವಿಸದಿರಿನ್ನು ಸಂದೇಹಮಂ; ಜನಕಂಗೆ
ನಾವನ್ಯರಲ್ಲ ನಮ್ಮಾಶ್ರಮಕ್ಕೆಬಂದು ನೀಂ ಸುಖದೊಳಿರ್ದೊಡೆ ನಿನ್ನನು
ಆವಾವ ಬಯಕೆಯುಂಟೆಲ್ಲಮಂ ಸಲಿಸಿ, ತಾ
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ
ರಾವಣಾರಿಯ ರಾಣಿಯಂ ನಿಜ ತಪೋವನಕೆ ವಾಲ್ಮೀಕಿ ಕರೆತಂದನು ॥

ಸರಳಾನುವಾದ: ‘ ಹೇ ದೇವಿಯೇ, ದುಃಖವನ್ನು ಬಿಡು. ಪುತ್ರ ರೀರ್ವರನ್ನು ಹೊಂದುವೆ; ಸಂಶಯವನ್ನು ಇನ್ನು ಭಾವಿಸಬೇಡ ; ಜನಕ ಮಹಾರಾಜನಿಗೆ ನಾವು ಬೇರೆಯವರಲ್ಲ. ನಮ್ಮ ಆಶ್ರಮಕ್ಕೆ ಬಂದು ನೀನು

ಸುಖದಿಂದ ಇರು; ನಿನ್ನ ಎಲ್ಲ ಬಯಕೆಗಳನ್ನು [illegible]ವು. ನಾವೆಲ್ಲ ಸಲುಹಿಕೊಂಡು ಹೋಗುವೆವು. ಅಂಜಬೇಡ" ವಾಲ್ಮೀಕಿ ಮುನಿಯು ಹೀಗೆ ಸೀತೆಯನ್ನು ಸಂತೈಸಿ ತನ್ನ ತಪೋವನಕ್ಕೆ ಕರೆತಂದನು.

ಪ್ರ:-೨ ಕೆಳಗೆಕೊಟ್ಟ ಪದ್ಯಗಳ ಸರಳಾನುವಾದ ಬರೆಯಿರಿ. (೧೯೪೧)

ತೊರೆ (ಹೊಳೆ, ಪ್ರವಾಹ)

ಬೆಟ್ಟದ ಸೀಮೆಯ ಮೋಡದ ಮೋರೆಯು |
ಮುಸುಕಿರೆ ಲೀಲೆಯೊಳದರೊಳಗೆ ||
ಮಿಂಚಿನ ರೇಖೆಯ ತೆರದಲಿ ಹೊಳೆಯುತ |
ಗಿರಿಯೊಡೆಯಿಂದಂ ನಾನಿಳಿವೆ ||
ಹುಡುಕುತ ಹಾದಿಯ ಸುಳಿಯುತ ಕಾಡೊಳು |
ಮೊರೆಯುತ ಹರಿದೆನು ಭೋರ್ಗರೆದು ||
ಹೊನಲಿನ ಸೆಳೆತಕೆ ಸಿಲುಕಿದ ಗಿಡಗಳು |
ಶರಣೆಂದವು ತಲೆಬಾಗುತಲಿ ||
ಬೆಂದಿಹ ಭೂಮಿಗೆ ತಂಪನು ಕೊಡುತ |
ಕಳೆದೆನು ಲೋಕದ ನೀರಡಿಕೆ ||
ಲೋಕಕೆ ಅನ್ನವ ನೀಯುವ ಕಾರ್ಯಕೆ |
ನಾ, ನೆರವಾಗುತೆ ಎಡೆಬಿಡದೆ ||
ಭತ್ತದ ಎಳೆತೆನೆ ಎನ್ನಯ ಹಾಲನು |
ಹೀರುವುದು, ತನಿರಸ ಸೀಗಬ್ಬು ||
ಹೂಗಳು ಜೇನನು, ತೆಂಗೆಳನೀರನು |
ಬೇಡುತ ಕೊಂಬುವು ನನ್ನಿಂದ ||
ಕೊಡುವುದೆ ಇಹದಲಿ ದಾನಿಯ ಧರ್ಮವು |
ಎನ್ನುತ ನನ್ನನು ನಾ ಕೊಟ್ಟೆ ||
ನಾಡಿನ ಕೊಳೆಯನು ಸೇವಕನಂತೆಯೆ |
ತೊಳೆದೆನು ಗೌರವಕಾಶಿಸದೆ ||

(ಹೊನಲು=ಪ್ರವಾಹ)

ಸರಳಾನುವಾದ:— ಬೆಟ್ಟದ ಸೀಮೆಯೊಳಗೆ ಮೋಡದ ಮಾಲೆಯು ಮುಸುಕಿರಲು ಅದರೊಳಗೆ ಮಿಂಚಿನಂತೆ ಹೊಳೆಯುತ್ತ ಗಿರಿಮಧ್ಯದಿಂದ ಇಳಿದು ಬಂದು ಹೊಳೆ ಹರಿಯಿತು. ಸಪ್ಪಳ ಮಾಡುತ್ತ ಹಾದಿಯನ್ನು ಹುಡುಕುತ್ತ, ಕಾಡಿನಲ್ಲಿ ತಿರುಗುತ್ತ, ನೊರೆಯುತ್ತ ಹೊಳೆ ಹರಿಯಿತು. ಪ್ರವಾಹದ ಸೆಳೆತಕ್ಕೆ ಸಿಕ್ಕ ಗಿಡಗಳು ಶರಣೆಂದು ತಲೆಬಾಗಿದವು ಹೊಳೆಯು ಬಂದಂಥ ಭೂಮಿಗೆ ತಂಪನ್ನು ಕೊಡುತ್ತ ಲೋಕದ ನೀರಡಿಕೆಯನ್ನು ಶಾಂತ ಮಾಡಿತು. ಅದು ಲೋಕಕ್ಕೆ ಆಹಾರವನ್ನು ಕೊಡುವ ಕಾರ್ಯದಲ್ಲಿ ಸಹಾಯ ಮಾಡಿ ಬಡವಾಯಿತು. ಭತ್ತದ ಎಳೆತೆನೆಗಳು ಅದರ ಹಾಲನ್ನು ಹೀರುವವು. ಸೀ ಕಬ್ಬು, ಹೂಗಳು, ಜೇನು, ತೆಂಗು ಅದರಿಂದ ಎಳೆ ನೀರನ್ನು ಬೇಡಿ ಪಡೆಯುವವು. ಈ ಜಗತ್ತಿನಲ್ಲಿ ಕೊಡುವುದೇ ದಾನಿಯ ಧರ್ಮವೆಂದು ತಿಳಿದು ಅದು ಕೊಟ್ಟೇ ಕೊಟ್ಟಿತು. ಮತ್ತು ಗೌರವಕ್ಕೆ ಇಚ್ಛಿಸದೆ ನಾಡಿನ ಕೊಳೆಯನ್ನು ಅದು ತೊಳೆಯಿತು.

ಪ್ರ:— ೩ ಕೆಳಗಿನ ಕವಿತೆಗಳ ಸರಳಾನುವಾದನ್ನು ಬರೆಯಿರಿ:— (೧೯೪೨)

ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ
ಜೊಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ
ಭರತಖಂಡದ ಹಿತವೆ ನನ್ನ ಹಿತ ಎಂದು
ಭರತಮಾತೆಯ ಸುತರೆ ಸೋದರರು ಎಂದು
ಭಾರತಾಂಬೆಯ ಕೀರ್ತಿ ನಮಗೆಂದು
ನುಗ್ಗು ಮುಂದಕೆ ಧೀರ ಕಾಳಗದ ಕಣಕೆ
ನುಗ್ಗು ಬೆದರದೆ ನೀಚ ನಾಯಿಗಳ ಮುಂದೆ
ಬಾಳನೊರೆಯಿಂದ ಹಿರಿ ನುಗ್ಗು ನಡೆ ಕಟ್ಟಿ ಹರಿ
ತಡೆಯ ಬಂದವರ ಇರಿ ಒಲಿಯುವಳು ಜಯನ ಸಿರಿ
ಜನ್ಮವೊಂದಳಿದರೇಂ ನೂರಿಹವು ಮುಂದೆ
ಕಾಳಗದೊಳಳಿಯಲೇಂ ಸಾವು ಸುಖ ಕಲಿಗೆ.

ಸರಳಾನುವಾದ:— ತರುಣರಿರಾ, ಮುಂದೆ ಮುಂದೆ ನಡೆಯಿರಿ. ಜೊಗ್ಗಬೇಡಿರಿ ಕುಗ್ಗಬೇಡಿರಿ; ಹಿಗ್ಗಿ ಮುಂದೆ ನಡೆಯಿರಿ. ಭರತಖಂಡದ

ಹಿತವು ನಿಮ್ಮ ಹಿತವೆಂದೂ, ಭರತಭೂಮಿಯ ಮತವೇ ನಿಮ್ಮ ಮತ
ವೆಂದೂ ತಿಳಿಯಿರಿ. ಭರತಮಾತೆಯ ಮಕ್ಕಳೆಲ್ಲರು ಬಂಧುಗಳೆಂದು ಭಾವಿ
ಸಿರಿ. ಭಾರತಾಂಬೆಗೆ ಬರುವ ಕೀರ್ತಿ ನಮ್ಮ ಕೀರ್ತಿಯೆಂದು ತಿಳಿದು
ಧೀರನೇ ಕಾಳಗದ ಕಣಕ್ಕೆ ಮುಂದಕ್ಕೆ ನುಗ್ಗು. ನೀಚ ಸ್ವಾರ್ಥಿಗಳ ಮುಂದೆ
ಬೆದರದೆ ನುಗ್ಗು. ನಡೆ, ಒರೆಯಿಂದ ಖಡ್ಗವಹಿರಿ, ಬಂಧನವ ಹರಿದೊಗೆದು
ನುಗ್ಗು. ತಡೆಯಲು ಬಂದವರನ್ನು ಇರಿಯಿರಿ. ಅದರಿಂದ ಜಯಲಕ್ಷ್ಮಿಯು
ಒಲಿಯುವಳು. ಈಗ ಒಂದು ಜನ್ಮವು ಹೋದರೂ ಮುಂದೆ ನೂರು ಜನ್ಮ
ಗಳಿರುವವು. ಯುದ್ಧದಲ್ಲಿ ಹೇಗೆ ಸಾಯಲೆಂದು ಚಿಂತಿಸಬೇಡ, ವೀರನಿಗೆ
ಸಾಯುವದೇ ಸುಖ.

ಪ್ರ:— ೪ ಈ ಪದ್ಯಗಳ ಸರಳಾನುವಾದ ಬರೆಯಿರಿ (೧೯೫೦)

(ರಾಮರಾಯನು ವೀರಸ್ವರ್ಗವನ್ನೈದಿದ ಬಳಿಕ ವಿಜಯನಗರದ
ವಿಜಯ ವಧುವಿಂತೆಂದು ತೆರಳಿದಳು.)

ಮಾಧವನು ಹೊತ್ತಿಸಿದ ಹುಕ್ಕದೊರೆಯೆದೆಯೆಣ್ಣೆ
ಯಾ ಧೀರಬುಕ್ಕನಿಂಬೆಳಕುವೆರ್ಚಿದ ವೀರ್ಯ
ದೀ ದೀಪವೀವರೆಗು ಕನ್ನಡರಸುಗಳೆದೆಯ ಗೂಡಿನೊಳ್ಪೊಳೆದು ಬೆಳೆದು
ಚೋದಿಸುತ್ತಿರ್ದ್ದುದೀ ನಾಡ ಕೆಚ್ಚೆದೆಗಳನು
ಮೇದಿನಿಯು ಸುಖದ ಸಾಗರವಾಗಿ ಮೆರೆದತ್ತು
ದೀ ದಿನದೊಳಾರ್ದ್ದುದಕಟಕಟ ಕಾಳ್ಕಾಡ ಪಾಳೂರೊಳಾಂ ನಿಲಲಾರೆನು
ಅಣ್ಣ ಕನ್ನಡಿಗರಿರ ನನ್ನ ನಡೆಗೊಡುವಿರಾ ?
ಮುನ್ನಿನಂತಿರಿಸುವಿರಾ ? ಬಾಯೊಳಿರ ಹೇಳಲಿ
ಲ್ಲಿನ್ನು ನಾಂ ನಿಲಲಾರೆ ನೀವು ಕನ್ನಡ ಚಿನ್ನ ರನ್ನ ಪುತ್ಥಳಿಗಾಗಿ
ತಿಣ್ಣ ಬರಿಸುವ ಕಂಟಕಂಗಳನು ತರಿದೊಟ್ಟಿ
ನನ್ನಿ ಮಿಗೆ ಜೀವನದ ತಳಹಾಕಿ ಕಲಿತನದಿ
ಕನ್ನಡದ ಗುಡಿವಿಡಿದು ವೀರಗರ್ಜ್ಜನೆಯಿಂದ ಕರೆಯೆ ಬನ್ನಿಂ ಬರುವೆನು

ಉತ್ತರ:–ಮಾಧವಾಚಾರ್ಯರು ಹುಕ್ಕ ದೊರೆಯ ಎದೆಯ ಎಣ್ಣೆ
ಯಲ್ಲಿ(ಸ್ವರಾಜ್ಯ) ದೀಪವನ್ನು ಹೊತ್ತಿಸಿದರು. ಧೀರ ಬುಕ್ಕನಿಂದ ಬೆಳಕು
ಮಾಡಿದರು. ಅದು. ಈ ವರೆಗೂ ಕನ್ನಡ ಅರಸುಗಳ ಎದೆಯ ಗೂಡಿನಲ್ಲಿ

ಹೊಳೆದು ಬೆಳೆದು, ನಾಡಿನ ಶೂರರಿಗೆ ದಾರಿ ತೋರಿ, ಭೂಮಿಗೆ ಸುಖದ ಸಾಗರವಾಗಿ ಮೆರೆದು, ಈ ದಿನ ಅಕಟಕಟಾ, ಯಮನ ಊರಾಗಿ ಹಾಳೂ ರಾಗಿ ಹೋಯಿತಲ್ಲ! ನಾನು (ವಿಜಯ ವಧು) ಇಲ್ಲಿ ನಿಲ್ಲಲಾರೆನು.

ಅಣ್ಣ ಕನ್ನಡಿಗರೇ! ನಡೆಯಗೊಡುವಿರಾ? ಮುಂಚಿನಂತೆ ನನ್ನನ್ನು ಇಡುವಿರೋ? ನಾನು ಇನ್ನು ಬಾ ಎಂದು ಕರೆಯದ ಹೊರತು ಇಲ್ಲಿ ನಿಲ್ಲ ಲಾರೆ, ನೀವು ಕನ್ನಡ ಬಂಗಾರದ ರತ್ನದ ಪ್ರತಿಮೆಗಳಾಗಿ ಕಠಿಣವಾದ ಕಂಟಕಗಳನ್ನು ದೂರಮಾಡಿ, ನನ್ನ ಜೀವನದ ತಳಿಹಾಕಿ ಕಲಿತನದಿಂದ ಕನ್ನಡದ ಧ್ವಜವನ್ನು ಹಿಡಿದು ವೀರಗರ್ಜನೆ ಮಾಡುತ್ತ ಕರೆಯ ಬಂದರೆ ಮಾತ್ರ ಬರುವೆನು.

ಪ್ರ:- ೫ ಕೆಳಗಿನ ಪದ್ಯದ ಸರಳಾನುವಾದ ಬರೆಯಿರಿ. (೧೯೪೪)

ಹಣ್ಣು ಕಾಯ್ಗಳನಿತ್ತು ದೇವಗೆ ಹಲವರು ಪೂಜೆಗೈವರು।
ಅನ್ನ ಪಾನವನುಣಿಸುತಲಾತಗೆ ಮತ್ತೆ ಕೆಲವರು ಒಯ್ವರು॥
ಗುಡಿಯ ಮಂಟಪದಲ್ಲಿ ನೆರೆವರು ಮಂಗಳಾರತಿ ಪಡೆವರು॥
ಶಾಸನೆಸೆವರು ಕೈಲಿ ಮುಗಿವರು ಬೇಡಿ ಹರಕೆಯ ಹೊರುವರು॥
ನಾನು ಬೇರೆಯ ಗುಡಿಗೆ ಹೋದೆನು ಬನವೆ ನನ್ನ ದೇಗುಲ।
ದೇವರಲ್ಲಿಯ ಎಲ್ಲ ಶಿಲ್ಪಿಕೆ ವರ್ಣಸುಂದರ ಸಂಕುಲ॥
ಅಲ್ಲಿ ಕರ್ತನು ಸುಮವನೆನ್ನೊಡನಿನಿಯ ಹಕ್ಕಿಯಲಿ ಕೊರಲ।
ಕರುಣೆ ತೋರಿಸಿ ಮಾತನಾಡಿಸಿ ಬಂದು ನಿಲುವನು ಕರದಲ್ಲಿ॥
ಗುಡಿಯಗೋಪುರ ನೀಲಿಯಾಗಸ ಮುಗಿಲು ಕೆತ್ತನೆ ಚಿತ್ತರ।
ಆತ್ಮತೋಷವೆ ಮಂತ್ರಘೋಷವು ನನ್ನ ದೇವರ ಹತ್ತಿರ॥
ಪರರು ನಂಬಿಹರೆಂದು ಮುಂದಕೆ ಕಾಂಬೆವಾತನ ಎನ್ನುತ।
ನಾನು ಕೂಡಿದೆನವನ ನಾಗಲೆ ಸೃಷ್ಟಿ ಸೊಬಗನು ಮೆಚ್ಚುತ॥
ನನ್ನ ದೇವರು ದಯೆಯ ಮೂರುತಿ ಆಪ್ತನಿಷ್ಟನು ಗೆಳೆಯನು।
ಎಲ್ಲ ಸಮಯದಿ ನೀಡಿ ಸೊಗಸನು ನನ್ನ ಬಳಿಯಲಿ ಸುಳಿವನು॥

ಸರಳಾನುವಾದ:- ಹಣ್ಣುಕಾಯಿಗಳನ್ನು ದೇವರಿಗೆ ಅರ್ಪಿಸಿ ಕೆಲವರು ಪೂಜೆ ಮಾಡುವರು. ಬೇರೆ ಕೆಲವರು ಆತನಿಗೆ ಅನ್ನ ನೀರುಗಳನ್ನು (ನೈವೇದ್ಯ)ಉಣಿಸುವದಕ್ಕೆ ಒಯ್ಯುವರು ಗುಡಿಯ ಮಂಟಪದಲ್ಲಿ ಒಟ್ಟಾಗಿ

ಕಲಿತು, ಮಂಗಳಾರುತಿಯನ್ನು ಮಾಡುವರು. ದುಡ್ಡು ಒಗೆಯುವರು. ಕೈಮುಗಿದು ಬೇಡಿಕೊಂಡು ಹರಕೆ ಹೊರುವರು.

ನಾನು ಬೇರೆ ಪ್ರಕಾರದ ಗುಡಿಗೆ ಹೋದೆನು ತೋಟವೇ ನನ್ನ ದೇವರಗುಡಿ. ಅಲ್ಲಿ ದೇವರ ಹತ್ತರ ಇರುವ ಚಲ್ವಿಕೆಯೂ ಬಣ್ಣವೂ ಕೂಡಿ ಸುಂದರವಾಗಿ ಕಾಣುವದು. ಅಲ್ಲಿ ಇಂಪಾದ ಹಕ್ಕಿಯ ದನಿಯಲ್ಲಿ ಈತನು ನನ್ನ ಗೂಡ ಮಾತನಾಡುವನು. ಕರುಣೆಯನ್ನು ತೋರಿಸಿ ಮಾತನಾಡುತ್ತ ಕೈಯಲ್ಲಿ ಬಂದುಸಲ್ಲಿಸುವನು; ನೀಲಿ ಬಣ್ಣದ ಆಕಾಶವೇ ಗುಡಿ ಗೋಪುರಗಳು; ಮುಗಿಲೇ [illegible] ಚಿತ್ರಗಳು; ಅತ್ಯಂತೋಷವೇ ಮಂತ್ರಗಳ ಧ್ವನಿಯು; ಬೇರೆಯವರು ನಂಬಿರುವರೆಂದು ಈತನನ್ನು ನಾನು ಮುಂದೆ ಕಾಣುವೆನೆಂದು ಅನ್ನುತ್ತ, ಸೃಷ್ಟಿಯ ಸೊಬಗಿಗೆ ಮೆಚ್ಚಿ ನಾನು ಅವನನ್ನು ಆಗಲೇ ಕೂಡಿದೆನು. ನನ್ನ ದೇವರು ದಯೆಯ ಮೂರುತಿ ಇದ್ದು, ಆಪ್ತನಿಷ್ಠನೂ ಗೆಳೆಯನೂ ಇರುವನು; ಮತ್ತು ಎಲ್ಲ ವೇಳೆಯಲ್ಲಿ ಆನಂದವನ್ನು ಕೊಡುತ್ತ ನನ್ನ ಹತ್ತರ ಓಡ್ಯಾಡುವನು.

ಪ್ರ:-೬ ಕೆಳಗೆ ಕೊಟ್ಟ ಕವಿತೆಯ ಸರಳಾನುವಾದವನ್ನು ಬರೆಯಿರಿ.

ಭಾರತ ದೇವಿ (೧೯೪೬)

ಕೊಟ್ಟು ಬೇಸರದಮ್ಮ ಡಿಟ್ಟಿಸಿ ದಣಿಯದಮ್ಮ ।
ಸಿಟ್ಟೇರದ ಸ್ಮರಣೆಯ ಮಮತೆಯಮ್ಮ ॥
ನಿಟ್ಟುರದ ನುಡಿಗೆಮ್ಮ ದುಷ್ಟ ಚಾಳಿಗೆ ಬೆನ್ನ ।
ತಟ್ಟಿ ಮುದ್ದಿಸಿ ತಿದ್ದಿ ಸಲುಹಿತಾಯಮ್ಮ ॥
ಮಂದಾಕಿನಿಯ ಪುಣ್ಯ ಜಲದಿ ಮೀಯಿಸುತೆಮ್ಮ ।
ವಿಂಧ್ಯಾಚಲದ ಚಂದನವ ಮೈಗೆ ಪೂಸಿ ।
ಕೆಂದಳಿರ ಹಾಸಿ ಸುಮಗಂಧ ಗಾಳಿಯ ಬೀಸಿ ।
ಅಂದದಾ ಸಾಮಗಾನದಿ ಜೋಗುಳಿಡುವಮ್ಮ ॥
ಧನಧಾನ್ಯ ಪುಷ್ಪಭರಿತಾದೀ ವಸುಂಧರೆಯು ।
ಕನಸುಗಳು ಹೊಸದಾದ ಭರತಭೂಮಿ ॥
ಜನಿಸಿ ನಾವಿಲ್ಲಿ ಬೆಳೆದು ಬಾಳುವೆವಿಲ್ಲಿ ।
ಎನಿತು ಪುಣ್ಯವೋ ದೊರೆತುದಿದೆ ಜನ್ಮಭೂಮಿ ॥

ಎಲೈ ದೇವಿಯೇ ನಮಗೆ ಎಷ್ಟು ಕೊಟ್ಟರೂ ನಿನಗೆ ಬೇಸರಿಕೆಯಿಲ್ಲ ನಮ್ಮನ್ನು ಎಷ್ಟು ನೋಡಿದರೂ ನಿನಗೆ ತೃಪ್ತಿ ಇಲ್ಲ. ನಾವು ಎಷ್ಟೋ ತೊಂದರೆ ಕೊಟ್ಟರೂ ನಿನಗೆ ಸ್ವಲ್ಪಸಹ ಕೋಪವಿಲ್ಲ. ನೀನು ನಮ್ಮ ಮಮತೆಯ ಮಾತೆಯು. ನೀನು ನಮ್ಮ ನಿಷ್ಠುರ ಮಾತುಗಳನ್ನು ದುಷ್ಟ ನಡಾವಳಿಯನ್ನು ಬೆನ್ನ ಮೇಲೆ ಕೈಆಡಿಸಿ ಪ್ರೀತಿಯಿಂದ ತಿದ್ದಿ ಜೋಕೆ ಮಾಡುತ್ತಿರುವಿ ಗಂಗಾನದಿಯ ಪವಿತ್ರ ನೀರಿನಿಂದ ನಮಗೆ ಮೈತೊಳೆದು ವಿಂಧ್ಯಾಚಲದ ಚಂದನವನ್ನು ಮೈಗೆಹಚ್ಚಿ ಕೆಂಪಾದ ಚಿಗುರನ್ನು ಹಾಸಿ ಸುವಾಸನೆಯಿಂದಕೂಡಿದ ಗಾಳಿಯನ್ನು ಬೀಸುತ್ತ ಸಾಮಗಾನದಿಂದ ಜೋಗಳ ಹಾಡುವ ನೀನು ಭಾರತ ಮಾತೆಯೇ ನಮ್ಮ ಭೂಮಿಯು ಧನಧಾನ್ಯಾದಿಗಳಿಂದ ಹೂಗಳಿಂದಲೂ ಸದಾ ತುಂಬಿರುವದು. ನಾವು ಇಲ್ಲಿ ಹೊಸತರದ ಸವಿ ಕನಸುಗಳನ್ನು ಕಾಣುವೆವು. ಭರತ ಖಂಡದಲ್ಲಿ ನಾವು ಹುಟ್ಟಿಬೆಳೆದು ಬಾಳಬೇಕಾದರೆ ನಿಜವಾಗಿ ಅದೆಷ್ಟೋ ಪುಣ್ಯ ಮಾಡಿರಬೇಕು.

ಪ್ರ:— ೭. ಕೆಳಗಿನ ಶ್ಲೋಕವನ್ನು ನಿಮ್ಮ ಮಾತಿನಲ್ಲಿ ಸರಳಾನುವಾದ ಮಾಡಿ ಬರೆಯಿರಿ. (೧೯೬೮)

ಅತಿಲಜ್ಜೆಗೆಟ್ಟನ್ಯರಾಳಾಗಿ, ದುಡಿದು ದಾ ।
ವತಿಗೊಂಡು ಧನವನಾರ್ಜಿಸಿ, ಹರಿಶ್ಚಂದ್ರ ಭೂ–
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂಹಸಿವುನಿದ್ದೆಯಂ ತೊರೆದು
ಬಂದು ॥
'ಸುತನ ಕರೆ' ಎಂದಡೇನೆಂಬನಾವುದತೋರಿ ।
ಪತಿಯ ಮರುಕವನು ಮರೆಯಿಸುವೆನುಗ್ರಾಹಿಗಾ ।
ಹುತಿಯಾದೆನೆಂದು ಪೇಳುವೆನೆ ಎನ್ನ ಕಂದ ಎಂದಿಂದುಮುಖಿ
ಬಾಯ್ಬಿಟ್ಟಳು ॥

ಉ:— ಕಮಲದಂತೆ ಮುಖವುಳ್ಳವಳಾದ ತಾರಾಮತಿಯು ತನ್ನ ಮಗನಾದ ರೋಹಿದಾಸನು ಮರಣ ಹೊಂದಿದಾಗ ಈ ರೀತಿ ದು:ಖಿಸಿದಳು. "ಹರಿಶ್ಚಂದ್ರದೊರೆಯು ಲಜ್ಜೆಯನ್ನು ಬಿಟ್ಟು ಅನ್ಯರ ಆಳಾಗಿ ಹಸಿವೆ,

ನಿದ್ರೆಗಳನ್ನು ಬಿಟ್ಟು ಹಣವನ್ನು ಗಳಿಸಿ ನಮ್ಮನ್ನು ಬಂಧಮುಕ್ತ ಮಾಡಲು ಯತ್ನಿಸುತ್ತಿರುವನು ಆತನು ಬಂಧು ಮಗನನ್ನು ಕರೆ ಎಂದರೆ, ನಾನು ಏನು ಹೇಳಲಿ? ಯಾರನ್ನು ತೋರಿಸಿ. ಗಂಡನ ದುಃಖವನ್ನು ಮರೆಯಿಸಲಿ? ಉಗ್ರವಾದ ಹಾವಿಗೆ ಆಹುತಿಯಾದನೆಂದು ಹೇಳಲಾ?”

ಪ್ರಶ್ನೆ: - ೮. ಕೆಳಗಿನ ಶ್ಲೋಕವನ್ನು ನಿಮ್ಮ ಮಾತಿನಲ್ಲಿ ಸರಳಾನುವಾದ ಮಾಡಿ ಬರೆಯಿರಿ: (೧೯೪೯)

ವರುಣದೇವತೆ ಮುತ್ತುಗಳನಿತ್ತು, ಭೂದೇವಿ।
ವರಸುವರ್ಣವನಿತ್ತು, ವನಗಳು ವಸಂತದೊಳ।
ಗೆರೆದು ಪೂಮಳೆಯಿಂದ ಸಿಂಗರಿಸಿ ಸಲೆ ನಿಮಗವೌಲ್ಯತೆಯನೀಯುತಿಹವು।
ನರರ ಹೃದಯೇಚ್ಛೆಗಳು ತಮ್ಮ ವೈಭವವನು।
ಸುರಿದಿಹವು ನಿಮ್ಮ ತಾರುಣ್ಯಕ್ಕೆ ಮರುಳಾಗಿ।
ತರುಣಿಯರೆ ನೀವರ್ಧ ಪೆಣ್ಣುಳಿದರ್ಧನಾನರಿಯೆ ಕನಸೊ ಮಾಯೆಯೋ॥

ಸರಳಾನುವಾದ:- ೮. ಜಲದೇವತೆಯು ಮಳೆಯೆಂಬ ಹನಿಗಳನ್ನು ಕೊಡಲು, ಭೂಮಿಯು ಉತ್ತಮವಾದ ಬೆಳೆಯನ್ನೂ ವನಗಳು ವಸಂತ ಮಾಸದಲ್ಲಿ ಹೂವಿನ ಮಳೆಯನ್ನೂ ಕೊಡುವವು. ಹಾಗೂ ನಿಮಗೆ ಅತ್ಯುತ್ತಮವಾಗಿ ಅಡವಿಯನ್ನು ಶೃಂಗಾರ ಮಾಡುವವು. ಜನರ ಹೃದಯದ ಇಚ್ಛೆಗಳು ತಮ್ಮ ಸಂಪತ್ತನ್ನು ತರುಣಿಯರೇ, ನಿಮ್ಮ ತಾರುಣ್ಯಕ್ಕೆ ಮರುಳಾಗಿ ಸೂರೆಗೊಳ್ಳುವವು. ತರುಣಿಯರೇ ನೀವು ಅರ್ಧಾಂಗಿಗಳು. ಉಳಿದ ಅರ್ಧ ಕನಸೋ, ಮಾಯೆಯೋ ಎಂಬುದನ್ನು ನಾನು ಅರಿಯಲಾರೆನು.

೨. ಭಾವಾರ್ಥ

ಪದ್ಯದ ಭಾವವನ್ನು ಅರ್ಥಮಾಡಿ ಬರೆಯುವದು ಅಥವಾ ಕವಿಯ ಭಾವನೆಗಳನ್ನು (ಅಭಿಪ್ರಾಯಗಳನ್ನು) ನಮ್ಮ ಮಾತುಗಳಲ್ಲಿ ಎತ್ತಿ ಬರೆಯುವದು ಭಾವಾರ್ಥವು.

ಪ್ರ:—೧. ಕೆಳಗೆ ಕೊಟ್ಟ ಪದ್ಯಗಳ ಭಾವಾರ್ಥವನ್ನು ಬರೆಯಿರಿ—
(ಹೆ. ಮು. ೧೯೪೩)

ನೋಡಿ ವಸ್ತ್ರಾಭರಣ ಕಾಂತಿಯ |
ನೋಡಿ ಬಾಹ್ಯಾಚರಣೆ ನುಡಿಗಳ |
ಮಾಡಿದಿರು ನಿರ್ಣಯವ ನೀಂ ಸತ್ಪುರುಷರಿವರೆಂದು ||
ನೋಡು ಮೊದಲವರಂತರಂಗವ |
ನೋಡು ಬಳಿಕಾ ಜನರ ಕೃತ್ಯವ |
ಮಾಡದಿರು ನಿಂದೆಯನು ದೀನರ ಹೀನರಿವರೆಂದು ||೧||
ಕೊಡಲಿಯೊಂದತಿ ದೈನ್ಯದಿಂದಲಿ |
ಗಿಡವೇ ಕರುಣಿಸು ಸಣ್ಣ ಕಾವನು |
ಒಡೆಯ, ಬೇಡೆನು ಹೆಚ್ಚನೇನನು ಗಿಡವು ದಯದಿಂದ ||
ಕೊಡಲು ಕೊಡಲಿಯು ಕೊಂಡು ಕೂಡಿಸೆ |
ಗಿಡವು ಕಡಿಯಲು ನಡುಗಿ ಹಹಹಾ ! |
ಗಿಡವು ನಡುಗಿತು. ಬಿದ್ದಿತಾಗಲೆ ಗಿಡವು ಮೇಲಾಗಿ ||೨||

ಭಾವಾರ್ಥ:— ಜನರ ಥಳ ಥಳ ಹೊಳೆಯುವ ಉಡಿಗೆ ತೊಡಿಗೆಗಳನ್ನೂ ಹೊರಗಿನ ಆಚರಣೆಗಳನ್ನೂ ವಾಕ್‌ಚಾತುರ್ಯವನ್ನೂ ನೋಡಿ. ಸತ್ಪುರುಷರೆಂದು ತಿಳಿಯಬೇಡ; ಮೊದಲು ಅವರ ಅಂತರಂಗವನ್ನು ಪರೀಕ್ಷಿಸು; ಆ ಮೇಲೆ ಅವರ ಕೃತ್ಯವನ್ನು ನೋಡು; ಆದರೆ ಇವರು ದೀನರು ಹೀನರೆಂದು ನಿಂದೆಯನ್ನು ಮಾಡಬೇಡ.

ಒಂದು ಕೊಡಲಿಯು ಬಹಳ ಅಂತಃಕರಣದಿಂದ ಗಿಡದ ಹತ್ತರ ಹೋಗಿ ನನಗೆ ಸಣ್ಣ ಕಾವನ್ನು ಕೊಡು, ಇದಕ್ಕೂ ಹೆಚ್ಚು ಏನನ್ನೂ ಬೇಡುವದಿಲ್ಲ, ಎಂದು ಬೇಳಿಕೊಂಡಿತು. ಆಗ ಗಿಡವು ದಯೆಯಿಂದ ದಯ ಪಾಲಿಸಿತು. ಕೊಡಲಿಯು ಕಾವಿನ ಸಹಾಯದಿಂದ ಗಿಡವನ್ನು ಕಡಿಯಲು ಆರಂಭಿಸಿತು. ಗಿಡವು ನಡುಗಿ ಬುಡಮೇಲಾಗಿ ಬಿದ್ದಿತು.

ಸಾರಾಂಶ: ಕೊಡಲಿಯು ಕಾವು ಕುಲಕ್ಕೆ ಮೃತ್ಯು. ಮೋಸಗಾರರು ಈ ರೀತಿ ಉಂಡಮನೆಯ ಗಳ ಎಣಿಸುತ್ತಾರೆ.

೨. ಕೆಳಗಿನ ಪದ್ಯಗಳ ಭಾವವನ್ನು ಸ್ಪಷ್ಟವಾಗುವಂತೆ ನಿಮ್ಮ ಭಾಷೆಯಲ್ಲಿ ಬರೆಯಿರಿ:— (೧೯೪೬)

ಅಳಲದಿರು ಬಡವನೆಂದಳಲದಿರು ನೀ |
ಇಳೆಯಾಣ್ಮನಾದಿವ್ಯಸಂಪದವಿರಲು ||
ಸಂಜೆ ಮುಂಜಾವುಗಳ ಹೂಬಿಸಿಲಹೊನ್ನು ತಾ
ರಂಜಿಸುತೆ ಸುತ್ತಲೂ ಸೂರೆಯಾಗಿರಲು
ನಂಜಿನಂತಿಹ ಜಗದ ಹೊನ್ನಿಗಾಸೆಯ ಪಡೆದಿ
ಅಂಜಿ ಹಿಂಜರಿಯುತಲಿ ನೀನದನು ಮರೆಯೈ ||೧||

ಇರುಳು ಬಂದಂತೆ ಕಂಬನಿಯುದುರಿಸುವದೇಕೆ?
ಇರುಳು ತೋರುವ ಚುಕ್ಕಿ ಮುತ್ತುಗಳ ನೋಡೈ !
ತರಳ ಬೆಳಗಾಗುತಿರಲುದುರಿಹವು ನಿನಗಾಗಿ
ಅರಳಾಗಿ ಸೌಸವನ ಸೂಸುತಿರಲು ||೨||

ಮುಗಿಲಿನೊಳು ಮೂಡಿರುವ ಕಾಮನಾ ಬಿಲ್ಲಿನೊಳು
ಝಗ ಝಗಿಸುತಿರುವ ನವರತ್ನಗಳ ಪ್ರಭೆಯು
ಒಗೆತಿರಲು ನೀನದನು ನೋಡಿ ನಲಿವುದನುಳಿದು
ಹಗಲಿರುಳು ಬಡವನೆಂದಳುತಿರುವದೇಕೆ ? ||೩||

ಹಚ್ಚ ಹಸುರಿನ ಹುಲ್ಲುಗದ್ದೆಯೊಳು ತಾ ಕುಳಿತು
ಅಚ್ಚ ನೀಲಿಯ ಮುಗಿಲನೆ ನೋಡಿ ನೋಡಿ
ಇಚ್ಛೆಯೊಲು ಹಾಡುತಿಹ ಹಕ್ಕಿಗಳ ಸರಗೇಳಿ
ಮೆಚ್ಚಿ ದೆಲೆಯುಳಿದ ವೈಭವಕಾಸೆಯೇಕೆ ? ||೪||

ಎಣಿಸುತಿರಲೀ ದಿವ್ಯ ಸಂಪತ್ತು, ನಿನಗಿರಲು
" ಹಣವಿಲ್ಲ! ಹಾ !" ಎಂದು ಅಳುತ ಕೂರುವರೇ ?
ಹಣದ ಕೋಟೆಯುಗಳಿಸಿ, ಇದು ಗಳಿಸದನೆ ಬಾಳು
ಹಣದ ಬಾಳ್ವೆಗೆ ಸರಿಯು || ತಿಳಿದು ನೀ ನೋಡೈ ||೫||

ಆಣ್ಮ=ಆಳುವವ; ಸೌಸವ-ಒಳ್ಳೇ ವಾಸನೆ; ಸರ-ಸ್ವರ; ಕೂರು — ಕೂಡು

ಭಾವಾರ್ಥಃ ಎಲೈ ಮಾನವನೇ, ಸೂರ್ಯನ ಸುಂದರ ಸಂಪತ್ತು ಇರ ಲಿಕ್ಕೆ ನೀನು ಬಡವನೆಂದು ದುಃಖಪಡಬೇಡ; ಸಂಜೆ ಮುಂಜಾವುಗಳಲ್ಲಿ ಹೊಂಬಿಸಿಲು ಬಂಗಾರದಂತೆ ಎಲ್ಲ ಕಡೆಯಲ್ಲಿಯೂ ಶೋಭಿಸುತ್ತ ಹರಡಿರು ತ್ತದೆ. ಹೀಗಿರಲು ನೀನು ವಿಷದಂತಿರುವ ಜಗದ ಹೊನ್ನಿಗೆ ಆಶೆಪಡಬೇಡ ಅದಕ್ಕೆ ಅಂಜಿ ಹಿಂದೆ ಸರಿಯುತ್ತ ನೀನು ಅದನ್ನು ಮರೆತು ಬಿಡು. (೧) ರಾತ್ರಿಯಾಯಿತೆಂದು ಕಣ್ಣೀರು ಉದರಿಸಬೇಡ ರಾತ್ರಿಯಲ್ಲಿ ಆಕಾಶವು ತೋರಿಸುವ ಮುತ್ತುಗಳಂಥ ತಾರೆಗಳನ್ನು ನೋಡಿ ಧನ್ಯನಾಗು. ಬೆಳ ಗಾಗಲು ಅವು ನಿನಗಾಗಿ ಉದುರಿದವೆಂದು ಭಾವಿಸು; ಮೊಗ್ಗುಗಳು ನಿನ್ನ ಸಲುವಾಗಿ ಅರಳಿ ಸುವಾಸನೆಯನ್ನು ಬೀರುತ್ತವೆ. ( ) ಆಕಾಶದಲ್ಲಿ ಕಾಮನ ಬಿಲ್ಲು ಏಳು ಬಣ್ಣದಿಂದ ನವರತ್ನಗಳಂತೆ ಥಳಥಳ ಹೊಳೆಯುತ್ತಿರಲು ನೀನು ಅದನ್ನು ನೋಡಿ ಆನಂದ ಪಡುವದನ್ನು ಬಿಟ್ಟು ಹಗಲಿರುಳು ಬಡವ ನೆಂದು ಅಳುತ್ತಿರುವದು ಏಕೆ? (೩) ಹಸರು ಬಣ್ಣದಿಂದ ಮಿರುಗುವ ಹುಲ್ಲು ಗದ್ದೆಯೊಳಗೆ ನೀಲವರ್ಣದ ಆಕಾಶವನ್ನು ನೋಡಿ ಇಚ್ಛೆಯಿಂದ ಹಾಡುತ್ತಿ ರುವ ಹಕ್ಕಿಗಳ ಸ್ವರ ಕೇಳಿ ಆನಂದಪಡು; ಉಳಿದ ವೈಭವಕ್ಕೆ ಏಕೆ ಆಸೆ ಮಾಡುವಿ (೪) ಸರಿಸಮಾನವಾದ ಈ ಅಮೋಘವಾದ ಸಂಪತ್ತು ನಿನಗೆ ದೊರೆತಿರಲು, ಅಯ್ಯೋ, ನನ್ನ ಹತ್ತರ ಹಣವಿಲ್ಲ ಎಂದು ಏಕೆ ಅಳುತ್ತ ಕೂಡ್ರುವಿ? ಕೋಟಿಗಟ್ಲೆ ಹಣವ ಗಳಿಸಿದರೂ ಈ ಸಂಪತ್ತನ್ನು ಗಳಿಸದವನ ಬಾಳುವೆಯು (ಸೃಷ್ಟಿಯ ಸ್ವಾಭಾವಿಕ ಸೌಂದರ್ಯವನ್ನು ನಿರೀಕ್ಷಿಸದವನ ಜನ್ಮ) ವಿಚಾರಿಸಿ ನೋಡಿದರೆ ಬಾಳುವೆಯಂತೆ ಎಲ್ಲವೂ ವ್ಯರ್ಥವೇ ಸರಿ.

೩. ಕೆಳಗಿನ ಪದ್ಯಕ್ಕೆ ಅದರ ಭಾವವು ಸ್ಪಷ್ಟವಾಗುವಂತೆ ನಿಮ್ಮ ಮಾತಿನಲ್ಲಿ ಭಾವಾರ್ಥವನ್ನು ಬರೆಯಿರಿಃ (೧೯೩೯)

ಚರಣನಖ ದಿಧೀತಿಯ ಪೀತಾಂ।
ಬರದ ದಿವ್ಯ ವಿಭೂಷಣದ ಭಾ।
ಸುರ ಶರೀರದ ಹೊಗರ ಹೊಸ ಜವ್ವನದ ವಿಭ್ರಮದ ॥
ಪರಮ ತೇಜೋಮಯನು ಮಾಯಾ।

ನರನು ಬಂದನು ನೆರೆದ ಪೃಥ್ವೀ |
ಶ್ವರ ಸಭಾ ಮಧ್ಯದಲಿ ಬೆರಗಾಗಿರೆ ಸಮಸ್ತ ಜನ ||೧||

ಸುರರಿಗೀಶ್ವರನಂತೆ ಧರಣೀ |
ಸುರರಿಗಮಲ ಪ್ರಕೃಡೋಲಿತ |
ರರಿಗೆ ರಾಜಕುಮಾರನಂದದಿ ನಿಖಿಳರಾಯರಿಗೆ ||

ಧರೆಗಧೀಶ್ವರನಾಗಿ ಮಾನಿನಿ |
ಯರಿಗೆ ಮನ್ಮಥನವೋಲ್ಗೋಚರಿದನು |
ಗುರುವಾಯಿಯಲಿ ಗಜಗತಿಯ ಗಮನದಲಿ ||೨||

(ದೀಧಿತಿ=ಕಾಂತಿ; ವಿಭ್ರಮ=ಬೆಡಗು, ಅಂದದ)

ಭಾವಾರ್ಥ:—(೧) ರಾಮನು ಸ್ವಯಂವರ ಮಂಟಪಕ್ಕೆ ಬರುವಾಗ ಬೇರೆ ಬೇರೆಯವರಿಗೆ ಹೇಗೆ ಕಂಡನೆಂಬುದನ್ನು ಕವಿಯು ಬಣ್ಣಿಸಿದ್ದಾನೆ. ಉಗುರಿನಲ್ಲಿ ಸಹ ಕಾಂತಿಯುಳ್ಳವನೂ ಭ್ರಾಂತಿಯಾಗುವಂತೆ ಹೆಚ್ಚಾದ ತೇಜಸ್ಸುಳ್ಳವನೂ ಮಾಯಾರೂಪದ ಮನುಷ್ಯನೂ ಆದ ರಾಮನು.ಅರಸರ ಸಭೆಯ ಮಧ್ಯಕ್ಕೆ ಬರಲು, ಎಲ್ಲ ಜನರು ಬೆರಗಾದರು. (೨) ಅವನು ದೇವತೆಗಳಿಗೆ ಈಶ್ವರನಂತೆಯೂ ಅರಸರಿಗೆ ನಿರ್ಮಲವಾದ ಸೃಷ್ಟಿಕರ್ತನಂತೆಯೂ, ಉಳಿದವರಿಗೆ ರಾಜಕುಮಾರನಂತೆಯೂ ಯಾವತ್ತು ರಾಜರಿಗೆ ಸಾರ್ವಭೌಮನಂತೆಯೂ ಹೆಂಗಳೆಯರಿಗೆ ಮನ್ಮಥನಂತೆಯೂ ಕಂಡನು. ಮತ್ತು ಆತನು ಒಳ್ಳೇ ಗಾಂಭೀರ್ಯದಿಂದ ಆನೆಯ ನಡಿಗೆಯಂತೆ ನಡೆಯುತ್ತ ಬಂದನು.

೪. ಕೆಳಗಿನ ಪದ್ಯಗಳ ಭಾವಾರ್ಥವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ— (೧೯೪೧)

(ಸಂದರ್ಭ:-ಅಭಿಮನ್ಯು ರಣದಲ್ಲಿ ಮಡಿದಿರಲು ಪುತ್ರಶೋಕದಿಂದ ಅಳುತ್ತಿರುವ ತನ್ನ ತಂಗಿಯಾದ ಸುಭದ್ರೆಗೆ ಕೃಷ್ಣನು ಸಮಾಧಾನ ಹೇಳುತ್ತಾನೆ.)

ಕಾಲಬಳಿ ಬೀಳ್ವ ತಂಗಿಯನು ಪಿಡಿದೆತ್ತಿ ಗೋ ।
ಪಾಲನಲ್ಲಿಯೆ ಕುಳಿತು ತೊಡೆಯ ಮೇಲ್ಮಲಗಿಸುತೆ ।
ತಾಳಲಾರದ ದುಃಖ ಬಂದುದೇ ? ನಿನಗೆಂದು ಮನದೆ ಮರುಗುತೆ ಶೋಕಕೆ ॥

ಮೂಲವಹ ಮೋಹವಂ ಕಳೆವ ತಿಳಿವಿಲ್ಲದಿರೆ ।
ಮೇಲಣಿನ್ನ ನಿತು ಮಾತಿಂ ಶಾಂತಿಬಾರದೆಂ- ।
ದಾಲಲನೆಗಾಗ ಮಾನಸದೊಳಗೆ ತರತರದ ಭಾವಮಂ ಮೂಡಿಸಿದನು ॥

ಕಾರ್ತಿಕದ ಚಂದಿರನ ಬಿಳಿಯ ಪ್ರಭೆಯಂತೆಸೆವ ।
ಕೀರ್ತಿಯಂ ದಶದಿಶೆಗೆ ಪಸರಿಸಿದ ವಿಕ್ರಮದ ।
ಮೂರ್ತಿಯಂ ಗರ್ಭದೊಳ್ ಧರಿಸಿದಾಪೆರ್ಮೆಸಾಲದೆ ? ಪೇಳ್ಸುಭದ್ರೆ ನಿನಗೆ ॥
ಬರಿದಾಗಿ ಜೀವಿಸುವ ಬಹಳಸಂವತ್ಸರಗ ।
ಳಿರವಿನಿಂ ಬಂದ ಫಲವೇನು ? ಹುಲ್ಲನು ತಂದ ।
ಪಿರಿಯ ಹೊರೆಗೈದು ಅದನೊಟ್ಟಿ ಪಿಂದಪ್ಪ ಬಣವೆ ಮಾಡಿ ಕೊನೆಯಲಿ ಕಿಡಿಯಲಿ ॥

ಇರಿಸವಂದದಿ ಪೂಳ್ಪುದಿನದ ಭಾರದಿ ಬೆಳೆದ ।
ಬರಿಯ ಬಾಳನು ಸಾವಿಗಿತ್ತಾದುದೇಂ ? ಕೊನೆಗೆ ।
ಗುರುತಿಲ್ಲದಂತಿಳಿವುದಲ್ತೆ ? ನಿಸ್ಸಾರವಾ ಬಾಳು ಬಾಳಲ್ಲ ಭದ್ರೆ ॥
(ಪೆರ್ಮೆ=ಅಭಿಮಾನ; ಬರಿದೆ=ವ್ಯರ್ಥ; ಇರುವು=ಇರುವಿಕೆ)

ಭಾವಾರ್ಥ:–ಮಗನ ವಿರಹವನ್ನು ಸಹಿಸದೆ ಬೇರ್ಕಡಿದ ಬಳ್ಳಿಯಂತೆ ಅಣ್ಣನ ಕಾಲಮೇಲೆ ಬೀಳುತ್ತಿರುವ ಸುಭದ್ರೆಯನ್ನು ಕೃಷ್ಣನು ಹಿಡಿದೆಬ್ಬಿಸಿ ಅಲ್ಲಿಯೇ ಕುಳಿತು: ತೊಡೆಯ ಮೇಲೆ ಮಲಗಿಸಿಕೊಂಡು “ ನಿನಗೆಸಹಿಸಲ ಶಕ್ಯವಾದ ದುಃಖವು ಬಂದಿತೇ ? ” ಎಂದು ಮನಸ್ಸಿನಲ್ಲಿ ತಂಗಿಯ ಶೋಕವನ್ನು ನೋಡಿ ಮರುಗಿದನು ಮೂಲದಲ್ಲಿಯೇ ಮಮತೆಯನ್ನು ಬಿಡುವ ತಿಳುವಳಿಕೆ ಇಲ್ಲದಿದ್ದರೆ, ಮೇಲಿನ ಮಾತಿನಿಂದ ಶಾಂತಿ ಬಾರದೆಂದು ತಿಳಿದು ತಂಗಿಯ ಮನಸ್ಸಿನೊಳಗೆ ಬಗೆ ಬಗೆಯ ಭಾವನೆಗಳನ್ನು ಶಾಂತಿಗಾಗಿ ಮೂಡಿಸಿದನು; ಏ ಸುಭದ್ರೆಯೇ, ಕೇಳು ಮೋಡವಿಲ್ಲದ ಹುಣ್ಣಿಮೆಯ

ಚಂದ್ರನ ಶುಭ್ರ ಪ್ರಕಾಶವು ಎಲ್ಲ ಕಡೆಗೂ ಹಬ್ಬುವಂತೆ ನಿನ್ನ ಶೂರ ಮಗನ ಕೀರ್ತಿಯು ದಶದಿಕ್ಕುಗಳಲ್ಲಿ ವ್ಯಾಪಿಸಿದೆ; ಅಂಥ ಮಗನು ನಿನ್ನ ಹೊಟ್ಟೆಯಿಂದ ಹುಟ್ಟಿದ ಅಭಿಮಾನವು ನಿನಗೆ ಸಾಲದೇ? ಬಹಳ ದಿವಸ ಹೇಡಿಯಾಗಿ ಬದುಕುವ ಮಗನಿದ್ದು ಏನು ಫಲ? ಹುಲ್ಲನ್ನು ತಂದು ದೊಡ್ಡ ಹೊರೆಗಳನ್ನು ಮಾಡಿ ಅವನ್ನು ಒಟ್ಟಿ, ದೊಡ್ಡ ಬಣಿವೆ ಮಾಡಿದರೂ ಅದು ಒಂದು ಕಿಡಿಯಿಂದ ನಾಶವಾಗುವದು. ಅದರಂತೆ ವ್ಯರ್ಥವಾಗಿ ಆಯುಷ್ಯ ಕಳೆದು ಬೆಳೆದಂಥವರು ಸಾವಿಗೆ ತುತ್ತಾದರೂ ಏನು ಪ್ರಯೋಜನ? ಕೊನೆಗೆ ಯಾರಿಗೂ ಗೊತ್ತಿಲ್ಲದಂತೆ ಬಿದ್ದು ಹೋಗುವವರಲ್ಲವೇ? ನಿಸ್ಸಾರವಾದ (ಸ್ವಾರಸ್ಯವಿಲ್ಲದ) ಆ ಜೀವನ, ಜೀವನವೇ ಅಲ್ಲ! ಎಂದು ಮುಂತಾಗಿ ಬೋಧಿಸಿದನು.

೫. ಕೆಳಗಿನ ಪದ್ಯಗಳ ಭಾವಾರ್ಥವನ್ನು ಬರೆಯಿರಿ (೧೯೪೨)

ಸಂದರ್ಭ:—(ಲಕ್ಷ್ಮಣನು ಸೀತಾದೇವಿಯನ್ನು ಅಡವಿಯಲ್ಲಿ ಬಿಟ್ಟು ಹೋಗುತ್ತಿರಲು)

ತಾಯನೀಗಡು [illegible]ಲ್ಲುವಂ ತೆ[illegible]ಸ್ಯ ।
ತ್ಸ್ಯಾಯಾಸದಿಂದ[illegible] ।
ತಾಯ ಕೇಳ್, ದುಃಖಿಸುವುಚಿತವಾಗಿ ಲಕ್ಷ್ಮಣ ಸಾಗಿದನತ್ತಲಿವಳಿತ್ತಲು ॥
ಬಾಗಿ[illegible]ರಿ ಕಂಗೆಟ್ಟು ನೈರಾಶ್ಯ[illegible]ವಾಗಿ ।
ಹಾ! ಎಂದೊರಲು[illegible] ಭೀತಿ[illegible] ॥
ತಾಯುವಂ [illegible] ಬಿಟ್ಟೆಳೆವಳ್ಳಿಯಂತೆ ॥೧॥

ಅರಸ ಕೇಳಲ್ಲಿರ್ದ ಪಕ್ಷಿನ್ಮೃಗಂತ[illegible]ಳ್ ।
ಧರಣಿಸುತೆಯುಂ ಬಳಸಿ [illegible] ಜೆ[illegible] ।
ಲ್ಪಿರದೆ ಕಂಬನಿಗರೆದು ನಿಃಶ್ಶಬ್ದಮಾದ ರಿತು ನ್ಪುಲ್ಮೇವುಗಳನು ತೊರೆದು ॥
ಕೊರಗುತಿರ್ದುವು [illegible]ಗಬಳ್ಳಿಗಳು ಬಾಡಿ ।
ಸೊರಗುತಿರ್ದುವು ಕೆ[illegible]ಭ[illegible]ದಿಂ [illegible]ಂ ।
ಕರಗುತಿರ್ದುವು ದಗದೊಳುತ್ತಮರ ದುಃಖಮಂ ಕಂಡು ಸೈರಿಸುವ
ರುಂಟೇ? ॥೨॥

ಭಾವಾರ್ಥ: (೧) ಲಕ್ಷ್ಮಣನು ಸೀತಾದೇವಿಯನ್ನು ಅಡವಿಯಲ್ಲಿ ತಾಯಿಯನ್ನು ಎಳೆ ಕರವು ಅಗಲುವಂತೆ ಅತಿ ಆಯಾಸದಿಂದ ಬಿಟ್ಟನು. ದುಃಖಯುತನಾಗಿ ಗಂಗೆ ದಾಟಿ ಸಾಗಿ ಹೋದನು. ಇತ್ತ ಸೀತಾದೇವಿಯು ಬಾಯಾರಿ, ಕಂಗೆಟ್ಟು, ಲಕ್ಷ್ಮಣನನು ಕಾಣಿಸದ್ದರಿಂದ ಅಯ್ಯೋ ಎಂದು ಬೆದರಿ ಅಂಜಿಕೆ, ಚಿಂತೆಗಳಿಂದ ಕೂಡಿದವಳಾಗಿ ತನ್ನನ್ನೇ ಮರೆತು ಭೂಮಿಗೆ ಬಿದ್ದಳು. ಬೇರು ಕಿತ್ತುಬಿಟ್ಟ ಎಳೆಬಳ್ಳಿಯಂತೆ ಅವಳ ಸ್ಥಿತಿಯಾಯಿತು.

(೨) ಜನಮೇಜಯರಾಜನಿಗೆ ವೈಶಂಪಾಯನ ಮುನಿಗಳು ರಾಮಾಯಣದ ಕಥೆಯನ್ನು ಮುಂದೆ ಹೇಳುತ್ತಾರೆ:— ಎಲೈ ರಾಜನೇ! ಕೇಳು— ಅಲ್ಲಿರುವ ಪಕ್ಷಿ, ಮೃಗ, ಜಂತುಗಳು ಸೀತೆಯನ್ನು ಸುತ್ತುಗಟ್ಟಿ ನಿಂತವು. ಮುದುರಿಕೊಂಡು, ಕಣ್ಣೀರು ಸುರಿಸಿ, ಜಾತಿಯ ವೈರತ್ವವನ್ನು ಮರೆತು, ಹುಲ್ಲು ಮೇವುಗಳನ್ನು ಬಿಟ್ಟು ಕೊರಗುತ್ತಿದ್ದವು. ಗಿಡಬಳ್ಳಿಗಳು ಕೂಡ ಬಾಡಿ ಸೊರಗುತ್ತಿದ್ದವು. ದುಃಖದ ವೇಗದಲ್ಲಿ ಕಲ್ಲುಗಳು ಕರಗಿದವು. ಜಗತ್ತಿನಲ್ಲಿ ಉತ್ತಮರ ದುಃಖವನ್ನು ನೋಡಿ ಮರುಗದವರು ಯಾರೂ ಇಲ್ಲವೆಂಬುದಕ್ಕೆ ಈ ಮಾತುಗಳು ಉದಾಹರಣೆಯಾಗಿವೆ.

೩. ಸಾರ ಸಂಗ್ರಹ. (ಸಂಕ್ಷೇಪ ಬರೆಹ)

ವಿಸ್ತಾರವಾದ ಭಾಗದ ಸಾರವನ್ನು (ಸಾರಂಶವನ್ನು) ಸಂಗ್ರಹಿಸಿ ಬರೆಯುವದು ಸಾರಸಂಗ್ರಹವು. ಇದಕ್ಕೆ ಸಂಕ್ಷೇಪ ಬರೆಹವೆಂತಲೂ ಹೆಸರು. ವ್ಯವಹಾರದಲ್ಲಿ ಇದರ ಉಪಯುಕ್ತತೆ ಹೆಚ್ಚು. ಸ್ವಾರಸ್ಯವನ್ನು ಸ್ವಲ್ಪದರಲ್ಲಿ ಹೇಳುವ ವಾಡಿಕೆಯುಂಟು. ಸಾರಾಂಶ ಬರೆಯುವವರು ಕೆಳಗಿನ ಮಾತುಗಳನ್ನು ಗಮನಿಸಬೇಕು.

ರೀತಿ:— (೧) ಕೊಟ್ಟ ಭಾಗವನ್ನು ಕೆಲವು ಬಾರಿ ಲಕ್ಷ್ಯಪೂರ್ವಕವಾಗಿ ಓದಿ ಅರ್ಥ ತಿಳಿದುಕೊಳ್ಳಬೇಕು. (೨) ಅದರ ಪ್ರತಿಯೊಂದು ಭಾಗದ ಭಾವವನ್ನು ಗಮನಿಸಬೇಕು (೩) ಮುಖ್ಯ ಮಾತುಗಳನ್ನು

ಒಂದೂ ಬಿಡದಂತೆ ಬರೆದಿಡಬೇಕು. (೪) ಪುನರುಕ್ತಿಗಳನ್ನು ತೆಗೆದು ಹಾಕಬೇಕು. ಅದರ ವಿವರಣೆಯನ್ನು ಬಿಡಬೇಕು. (೫) ಉದಾಹರಣೆಗಳನ್ನು ಬಿಡಬಹುದು. (೬) ಸ್ವಂತದ ವಿಚಾರಗಳನ್ನು ಅದರಲ್ಲಿ ಬೆರೆಸಲಾಗದು. ಮತ್ತು ಇಲ್ಲದ್ದನ್ನು ಅದರಲ್ಲಿ ಕೂಡಿಸಬಾರದು. (೭) ಸಾರಾಂಶವು ಸುಮಾರು ಕೊಟ್ಟ ಭಾಗದ ⅓ ದಷ್ಟು ಆಗಬೇಕೆಂಬುದನ್ನು ಯಾವಾಗಲೂ ನೆನಪಿಡಬೇಕು. (೮) ಆರಂಭಕ್ಕೆ, ಹೆಚ್ಚು ಟಿಪ್ಪಣಿಯನ್ನು ಮಾಡಿಟ್ಟುಕೊಳ್ಳುವದು ಒಳಿತು. (೯) ಕೊನೆಯದಾಗಿ ಇನ್ನೊಮ್ಮೆ ಕೊಟ್ಟ ಭಾಗವನ್ನೂ, ಸಾರಾಂಶವನ್ನೂ ಓದಬೇಕು. ಹಾಗೂ ಸಾರಾಂಶವು ಸರಿಯಾಗಿದೆಯೋ ಹೇಗೆಂಬುದನ್ನು ನೋಡಿಕೊಳ್ಳಬೇಕು (೧೦) ನಿಮ್ಮ ಭಾಷೆಯನ್ನು ಉಪಯೋಗಿಸಬೇಕು.

ಸಾರಾಂಶ ಬರೆಹವು ರೂಢಿಯಿಂದಲೇ ಬರತಕ್ಕಂಥಾದ್ದು. ಬಾವಿಯಲ್ಲಿ ಬೀಳದ ಹೊರತು ಈಸು ಬರುವದು ಹೇಗೆ ಸಾಧ್ಯವಿಲ್ಲವೋ ಅದರಂತೆ ವಿಸ್ತಾರ ಭಾಗಗಳ ಸಾರ ಬರೆಯುವ ರೂಢಿ ಮಾಡಿದರೆ ಮಾತ್ರ ಸಾಧಿಸುವ ವಿಷಯುವದು. ರೂಢಿಗಾಗಿ ಕೆಲವುಗಳನ್ನು ಇಲ್ಲಿ ಉದಾಹರಣೆ ರೂಪವಾಗಿ ಕೊಟ್ಟಿದ್ದೇವೆ. ಬಾಲಕರು ಅವುಗಳ ಉತ್ತರಗಳನ್ನು ನೋಡದೆ ತಾವೇ ಬರೆದು ನಮ್ಮ ಉತ್ತರಗಳಿಗೆ ಹೋಲಿಸಿ ನೋಡಬೇಕು.

ಪ್ರ: ೧. ಮುಂದೆ ಕೊಟ್ಟ ವಾಕ್ಯಸಮೂಹದ ಸಾರಾಂಶವನ್ನು ನಿಮ್ಮ ಸ್ವಂತ ಮಾತಿನಲ್ಲಿ ೩-೪ ಸಾಲುಗಳಲ್ಲಿ ಬರೆಯಿರಿ:—(೧೯೩೫)

ವ್ಯಸನಗಳುಳ್ಳಂಥ ಮನುಷ್ಯನು ತನ್ನ ಮನಸ್ಸಿನ ತೃಪ್ತಿಗಾಗಿ, ಬಹಳ ಹಣವನ್ನು ವೆಚ್ಚಮಾಡುವನು. ಉದಾಹರಣಾರ್ಥವಾಗಿ, ಈ ದೇಶದಲ್ಲಿ ಸೆರೆ ಕುಡಿಯುವ ಜನರಲ್ಲಿ ಬಹಳ ಜನರು ಒಕ್ಕಲತನ ಮಾಡುವವರೂ ಕೂಲಿಕಾರರೂ ಇರುವರು. ಅವರಲ್ಲಿ ಎಷ್ಟೋ ಜನರು ತೀರ ಬಡವರು; ಆದರೂ ಅವರು ತಾವು ಗಳಿಸಿದ ಹಣದಲ್ಲಿ ಬಹಳ ಭಾಗವನ್ನು ಸೆರೆ ಕುಡಿಯಲಿಕ್ಕೆ ವೆಚ್ಚಮಾಡುತ್ತಾರೆ. ಇದರಿಂದ ಅವರಿಗೂ ಅವರ ಕುಟುಂಬದ ಜನರಿಗೂ ಸಾಕಷ್ಟು ಅನ್ನವೂ ಅರಿವೆಯೂ ದೊರೆಯುವದಿಲ್ಲ. ಈ ಜನರು ಸೆರೆ ಕುಡಿಯುವದನ್ನು ಬಿಟ್ಟರೆ, ಅದಕ್ಕೆ ವೆಚ್ಚವಾಗುವ ಹಣದಿಂದ

ಬೇರೆ ಪದಾರ್ಥಗಳನ್ನು ಕೊಂಡುಕೊಳ್ಳಬಹುದು. ಇಲ್ಲವೆ ಆ ಹಣವನ್ನು ತಮ್ಮ ಹುಡುಗರ ಶಿಕ್ಷಣಕ್ಕೆ ವೆಚ್ಚಮಾಡಬಹುದು. ಒಂದು ವೇಳೆ ಒಬ್ಬ ಮನುಷ್ಯನು ತನಗೂ ತನ್ನ ಕುಟುಂಬಕ್ಕೂ ಅವಶ್ಯವಾದ ಪದಾರ್ಥಗಳನ್ನು ಪೂರೈಸಿಕೊಂಡ. ಸರಿ ಕೊಳ್ಳಲು ಸಾಕಷ್ಟು ಹಣವುಳ್ಳವನಿದ್ದರೂ ಅನವು ಕೂಡ ಅದಕ್ಕಾಗಿ ವೆಚ್ಚಮಾಡುವದು ಕೇವಲ ದುಂದುಗಾರಿಕೆಯೇ ಸರಿ. ಯಾಕೆಂದರೆ ಅವನು ಆ ಹಣದಿಂದ ತನ್ನ ಹಾಗು ಕುಟುಂಬದ ಅಥವಾ ತನ್ನ [illegible] ಹಿತವನ್ನು ನೂರಾರು ಪ್ರಕಾರಗಳಿಂದ ಮಾಡಬಹುದು.

ಸಾರಾಂಶ:- ವ್ಯಸನಗಳುಳ್ಳವನು ದುಂದುಗಾರನು. ಸೆರೆ ಕುಡಿಯುವವರಲ್ಲಿ ಬಡವರಾದ ಒಕ್ಕಲಿಗರೂ ಕೂಲಿಕಾರರೂ ಇರುವರು. ಅವರ ಆದಾಯವೆಲ್ಲ ಕುಡಿಯುವದಕ್ಕೆ ವೆಚ್ಚವಾಗುತ್ತದೆ. ಆ ಹಣದಿಂದ ಕುಟುಂಬದ ಎಲ್ಲ ಅವಶ್ಯಕತೆಗಳೂ ಮಕ್ಕಳ ಶಿಕ್ಷಣವೂ ಸಿಗುವದು. ವ್ಯಸನಾಧೀನ ಶ್ರೀಮಂತನ ಹಣವನ್ನು ಅನೇಕ ಬಗೆಯ ಹಿತದ ಕಾರ್ಯಗಳಿಗೆ ವೆಚ್ಚಮಾಡಬಹುದು.

ಪ್ರ:— ೨. ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಸಂಕ್ಷೇಪಿಸಿ ಬರೆಯಿರಿ. ([illegible])

ಕರ್ನಾಟಕ ಏಕೀಕರಣದ ವಿಷಯದಲ್ಲಿ ಜನತೆಯು ಎಷ್ಟು ಆತುರವಾಗಿರುವದೆಂಬುದನ್ನು ನಾವೆಲ್ಲರೂ ಬಲ್ಲೆವು. ನೂರು ಜನರಿರುವ ಚಿಕ್ಕ ಹಳ್ಳಿಗೆ ಹೋದರೂ ಅಲ್ಲಿ ಈ ಮಾತು ಕೇಳಬರುವುದು. ಜನಸಂಖ್ಯೆ, ವಿಸ್ತಾರ, ಪ್ರಾಕೃತಿಕ ಅನುಕೂಲತೆಗಳು, ಆದಾಯದ ಸ್ಥಿತಿಗಳು, ಇತಿಹಾಸ ಸಾಹಿತ್ಯ, ಸಂಸ್ಕೃತಿ ಈ ಎಲ್ಲ ವಿಷಯಗಳು ನಮ್ಮ ಏಕೀಕರಣಕ್ಕೆ ತುಂಬ ಅನುಕೂಲವಾಗಿವೆ. ಮನುಷ್ಯನ ದೃಷ್ಟಿಯಿಂದಲೂ ದೈವಸಂಕಲ್ಪದಿಂದಲೂ ನಮ್ಮ ಕರ್ನಾಟಕದ ಭಾಗಗಳೆಲ್ಲ ಒಂದಾಗಿ, ಒಂದು ಕರ್ನಾಟಕ ಪ್ರಾಂತವಾಯಿತೆಂದು ತಿಳಿಸುವ ಇಷ್ಟರಿಂದಲೇ ನಮ್ಮ ಕಾರ್ಯವು ಮುಗಿದಂತಾಗಿಲ್ಲ. ನಾವೆಲ್ಲರೂ ಭಾರತಮಾತೆಯ ಮಕ್ಕಳು. ಬಡತನವು ಕಣ್ಣು ಮುಂದೆ ಕಟ್ಟಿದ ಕಠಿಣವಾದ ಪ್ರಶ್ನೆ·

ದೇಶದ ಪ್ರಜೆಗಳೆಲ್ಲರಿಗೂ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಇವು ದೊರೆತ ಹೊರತು ಜಗತ್ತಿನಲ್ಲಿ ನಾವು ತಲೆ ಎತ್ತಿ ಬಾಳುವ ಆಶೆ ಇಲ್ಲ. ಇಂಗ್ಲಂಡ, ಅಮೇರಿಕೆಗಳಂಥ ಸಂಪನ್ನ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮಸ್ಥಿತಿಯು ತೀರ ಅಸಮಾಧಾನಕರವಾಗಿಯೇ ತೋರುವುದು. ಆದ್ದರಿಂದ ಆಬಾಲವೃದ್ಧರು, ಪುರುಷರು, ಸ್ತ್ರೀಯರು ಎಲ್ಲರೂ ತಮ್ಮ [illegible] ವೇಳೆಯಲ್ಲಿ ಏನಾದರೂ ಹೋರೆ ಮಾಡಿ, ಅಲ್ಪಸ್ವಲ್ಪ ಗಳಿಸಿಕೊಳ್ಳಬಹುದು. ನಾವು ಬೆಳೆದ ಹತ್ತಿಯನ್ನು ನಾವೇ ನೂತು, ನೇಯ್ದು ಸಿದ್ಧಪಡಿಸಿಕೊಂಡು ಖಾದಿಯು ಚೀನ ಚಂದೇರಿಯ, ಪರದೇಶದ ಪೀತಾಂಬರಕ್ಕಿಂತಲೂ ಹೆಚ್ಚೆಂದು ತಿಳಿಯಬೇಕು. ನಾವು ಧೈರ್ಯ, ಸಾಹಸ, ಪ್ರಯತ್ನಗಳಿಂದ ಭಾರತಮಾತೆಯ ಉದ್ಧಾರಕ್ಕೆ ಟೊಂಕ ಕಟ್ಟಬೇಕು. ಹರಿದು ಹಂಚಿಹೋದ ಕರ್ನಾಟಕವು ಒಂದಾಗಿ, [illegible] ಪ್ರಾಂತಗಳನ್ನು ಸಂಗಟ್ಟಿಸಿದ ದಿನವೇ, ಸುದಿನವೆಂದು ಭಾವಿಸಬೇಕು.

ಸಾರಾಂಶ:— ಜನರಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಜಾಗೃತಿಯುಂಟಾಗಿದೆ. ಇದಕ್ಕೆ ಎಲ್ಲ ರೀತಿಯ [illegible] ಅನುಕೂಲ ಪರಿಸ್ಥಿತಿ ಉಂಟು. ಕರ್ನಾಟಕ ಪ್ರಾಂತನಿರ್ಮಾಣಕ್ಕೆ ಕನ್ನಡಿಗರ ಕಾರ್ಯವು ಮುಗಿಯಲಿಲ್ಲ. ಭಾರತದ ಬಡತನವು ಎಲ್ಲರ ಕಣ್ಣು ಮುಂದೆ ಕಟ್ಟಿದೆ. ತುಲನಾತ್ಮಕ ದೃಷ್ಟಿಯಿಂದ ಪರೀಕ್ಷಿಸಿದರೆ, ಬೇರೆ ಸಂಪನ್ನ ರಾಷ್ಟ್ರಗಳಿಗಿಂತ ಭಾರತದ ಸ್ಥಿತಿಯು ಅತಿ ದುಃಸಹವಾಗಿದೆ. ಆದಕ್ಕಾಗಿ ನಾವೆಲ್ಲರೂ ಸತತೋದ್ಯೋಗಿಗಳಾಗಬೇಕು. ಸ್ವದೇಶದಲ್ಲಿಯ ವಸ್ತುಗಳು ಪರದೇಶದ ಸುಂದರವಾದ ವಸ್ತುಗಳಿಗಿಂತ ಮಿಗಿಲೆಂದು ಭಾವಿಸಬೇಕು.

ಪ್ರ: ೨. ಕೆಳಗಿನ ಅವತರಣದ ಸಾರಾಂಶವನ್ನು ನಿಮ್ಮ ಭಾಷೆಯಲ್ಲಿ ಬರೆಯಿರಿ. (೧೯೪೮)

ಆದಿ ಜನರು ನಮ್ಮವರು. ನಮ್ಮ [illegible] ಅವರೊಡನೆ ಸಹಾನುಭೂತಿಯಿಂದ ಬಳಕೆಯನ್ನಿಡುವದು [illegible]; ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಮತಾಂತರ [illegible] ರನ್ನಾಗಿ ಹೊಣಗಾಡುತ್ತಿರುತ್ತಾರೆ. ಇಂಥವರನ್ನು [illegible]ವದೇ

ನಮ್ಮ ಸ್ವಾಭಿಮಾನ. ಬಹಳ ದಿನಗಳಿಂದ ಬಳಿಕೆಯಿಲ್ಲದ ಜನಾಂಗ ದೊಡನೆ ಸಹಕಾರವೆಂದರೆ ಮನಸ್ಸಿಗೆ ಅಸಹ್ಯವಾಗಗೊಡದೆ, ನಡು ನುಡಿ ಗಳಿಂದ ಆಹಾರ ಉದ್ಯೋಗಗಳಿಂದ ಸುಧಾರಿಸಿ, ನಾಗರಿಕತೆಯ ಸಂಸ್ಕಾರ ವನ್ನು ಕೊಟ್ಟು, ಬಳಿಕೆಯಲ್ಲಿ ತರುವದೇ ಉದಾರಭಾವ. ನೀವು ಕೇರಿಯವರಲ್ಲ, ಊರವರೇ. ಎಂಬೆಂಬ ಆಶಾವಾದವನ್ನು ತೋರಿಸು ವದು, ವಿದ್ಯಾಬುದ್ಧಿಗಳಿಂದ ಅವರನ್ನು ಮುಂದುವರಿಯುವಂತೆ ಮಾಡು ವುದು, ಸಾರ್ವಜನಿಕ ಕಾರ್ಯಗಳಲ್ಲಿ ಅವರನ್ನು ಸೇರಿಸಿಕೊಳ್ಳುವದು ಹರಿಜನೋದ್ಧಾರದ ಬಗೆಗಳಾಗಿವೆ. ಊರವರು ಹರಿಜನರೊಡನೆ ಪ್ರೇಮದ ಬಳಿಕೆಯನ್ನಿಡಬೇಕು. ಅವರನ್ನು ನೀಚ ಜನರಂತೆ ಕಾಣ ಬಾರದು. ಅವರಲ್ಲಿ ಸಹಾನುಭೂತಿಯನ್ನು ತೋರಬೇಕು. ಅನೀತಿಯ ಮಾರ್ಗಗಳಿಂದ ಅವರನ್ನು ಪಾರುಮಾಡಬೇಕು. ಸಾರ್ವಜನಿಕ ಸಂಘ- ಶಾಂತಿ-ಮಂದಿರಗಳಲ್ಲಿ ಅವರಿಗೆ ಪ್ರವೇಶವಿರಬೇಕು. ಸಹಕಾರ ಸಂಘ ಗಳಿಂದ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಹೀಗೆ ಉದ್ಧಾರ ಕ್ಕಾಗಿ ಉದಾರ ಮನಸ್ಸಿನಿಂದ ಪ್ರಯತ್ನಿಸಬೇಕು. ಅವರಾದರೂ ನಯ ವಿನಯಗಳಿಂದ ಸುಧಾರಣೆಯ ಮೆಟ್ಟಿಲುಗಳನ್ನು ಏರಬೇಕು. ಲೋಕ ವಿರುದ್ಧವಾಗುವಂತೆ ನಡೆಯಬಾರದು.

ಸಾರಾಂಶ:— ಬಂಧುಗಳಾದ ಅಂತ್ಯಜರ ಕೂಡ ಸಹಾನುಭೂತಿ ಯಿಂದ ನಡೆಯಬೇಕು. ಮಹಾತ್ಮರ ಅಂತ್ಯಜೋದ್ಧಾರದ ಕಾರ್ಯವನ್ನು ಅನುಸರಿಸುವದು ಸ್ವಾಭಿಮಾನ; ಅಂತ್ಯಜರ ನಡೆನುಡಿ, ಆಹಾರ, ಉದ್ಯೋಗ, ನಾಗರಿಕತೆಯನ್ನು ಸುಧಾರಿಸುವದು ಉದಾರಭಾವ. ಶಿಕ್ಷಣ, ಸಾರ್ವಜನಿಕ ಕಾರ್ಯಗಳಲ್ಲಿ ಸೇರಿಸಿಕೊಳ್ಳುವದು, ಹರಿಜನೋದ್ಧಾರದ ಅಂಗಗಳು; ಊರವರು ಹರಿಜನರನ್ನು ನೀತಿಯಿಂದ ನಡೆಯಹಚ್ಚಿ, ಜಲಾ ಶಯ, ಸಂಘ ಶಾಲೆ, ಮನೆ-ಮಠಗಳಲ್ಲಿ ಪ್ರವೇಶಕೊಟ್ಟು, ಆರ್ಥಿಕ ಸ್ಥಿತಿ ಯನ್ನು ಸುಧಾರಿಸಿ ಉದಾರಮನಸ್ಸಿನಿಂದಲೂ ಪ್ರೀತಿಯಿಂದಲೂ ಅವರ ಉದ್ಧಾರಕ್ಕಾಗಿ ಪ್ರಯತ್ನಿಸಬೇಕು. ಅವರೂ ನಯವಿನಯಗಳಿಂದ ಸುಧಾರಿಸುವಂತೆ ಯತ್ನಿಸಬೇಕು. ಲೌಕಿಕರನ್ನಿಸಬೇಕು.

ಪ್ರ:— ೪. ಈ ಕೆಳಗಿನ ಅವತರಣದ ಸಾರಾಂಶವನ್ನು ಅದರ ಒಂದು ಮೂರಾಂಶಕ್ಕೆ ಮೀರದಷ್ಟು ನಿಮ್ಮ ಮಾತುಗಳಲ್ಲಿ ಬರೆಯಿರಿ. (೧೯೪೧)

ಹಣವನ್ನು ಹೇಗೆ ದೊರಕಿಸಬೇಕೆಂಬದಕ್ಕೆ ಉಚಿತವಾದ ಉತ್ತರವನ್ನು ಯಾರೂ ಹೇಳರು. ಇದನ್ನು ಪ್ರತಿಯೊಬ್ಬರು ಅಭ್ಯಾಸಮಾಡಿ ತಾವೇ ಬಿಡಿಸತಕ್ಕದ್ದು. ಆದರೆ ಗಳಿಸುವದೊಂದು ಹಾದಿ ದೊರೆತರೆ, ಅದನ್ನು ಉಳಿಸಿಕೊಳ್ಳುವುದು, ಬೆಳೆಸಿಕೊಳ್ಳುವುದು ಅವರವರ ದುಡಿತ; ಕರ್ತೃತ್ವಶಕ್ತಿ ಹಾಗೂ ಮಿತವ್ಯಯಗಳನ್ನು ಅವಲಂಬಿಸಿರುತ್ತದೆ. ಇವುಗಳಲ್ಲಿ ಮಿತವ್ಯಯವೇ ಎಲ್ಲಕ್ಕೂ ಮಾರ್ಗದರ್ಶಕವಾಗಿರುತ್ತದೆ. ಮಿತವ್ಯಯವೆಂದರೆ ಜಿಪುಣತನವಲ್ಲ, ಇದೊಂದು ಕಲೆ, ಇದರಿಂದಲೇ ಜಗತ್ತಿನಲ್ಲಿ ಪತ್ತು ಬೆಳೆಯುವದು; ಪ್ರಪಂಚದಲ್ಲಿ ಮಾನಮರ್ಯಾದೆಗಳು ಸಿಕ್ಕುವವು. ಹಾಗೂ ಮಾನವನು ವ್ಯವಹಾರ ಚತುರನಾಗುವನು. ಹಣದ ವೆಚ್ಚಕ್ಕೆ ಹಿಡಿತದ ಇಕ್ಕಳು ಬೇಕೇಬೇಕು. ದೊಡ್ಡ ವ್ಯಾಪಾರೋದ್ಯಮಿಗಳು ಅಸಂಖ್ಯ ಹಣವನ್ನು ಗಳಿಸಬಹುದು, ಕಳೆಯಬಹುದು; ಅವರಿಗೆ ಮಿತವ್ಯಯದ ಆವಶ್ಯಕತೆಯಿಲ್ಲ. ಮಧ್ಯಮ ತರಗತಿಯವರಿಗೆ ಇದರ ಮಹತ್ವವು. ಕೂಲಿಕಾರರ ಗಳಿಕೆಯುಳ್ಳವರ ಮಿತವ್ಯಯ ಗೊತ್ತುಪಡಿಸುವದು ಅರ್ಥಶಾಸ್ತ್ರಜ್ಞರಿಗೆ ಸಹ ಅಸಾಧ್ಯವು ಸಾಧಾರಣವಾಗಿ ಪಟ್ಟಣಗಳಲ್ಲಿ ಮಧ್ಯಮ ತರಗತಿಯ ಪ್ರಾಪಂಚಿಕರೇ ಹೆಚ್ಚಾಗಿರುವರು. ಅವರು ಗಳಿಕೆಯ ವಿಚಾರವಿಲ್ಲದೆ ಮನಬಂದಂತೆ ವೆಚ್ಚಮಾಡಿ, ದುರ್ದೆಸೆಗೂ ಅಪಮಾನಕ್ಕೂ ಈಡಾಗುವರಲ್ಲದೆ, ಆತ್ಮಹತ್ಯ ಮಾಡಿಕೊಳ್ಳುವಂತಹ ಪ್ರಸಂಗಗಳನ್ನು ತಂದುಕೊಂಡ ಉದಾಹರಣೆಗಳು ಅನೇಕವಿರುವವು "ಹಾಸಿಗೆ ಇದ್ದಷ್ಟೇ ಕಾಲು ಚಾಚು" ಎಂಬನಾಣ್ಣುಡಿಯು "ಮಿತವ್ಯಯದಿಂದ ಸಂಸಾರ ಸಾಗಿಸು" ಎಂಬರ್ಥದಲ್ಲಿಯೇ ಇದೆ ಪ್ರಾಪಂಚಿಕನು ಮಿತವ್ಯಯದಿಂದ ಸಂಸಾರ ಸಾಗಿಸಿದರೆ ಸುವಿಚಾರಿಯೂ, ಸುವ್ಯವಸ್ಥಿತನೂ ಆಗುವನಲ್ಲದೆ, ತುಂಬ ಅಚ್ಚುಕಟ್ಟುಳ್ಳವನೂ ಆಗುವನು. ಮಿತವ್ಯಯವೇ ಬಾಳುವೆಯ ತಳಹದಿಗಳು.

ಸಾರಾಂಶ: ಹಣ ದೊರಕಿಸುವ ಉಚಿತ ಹಾದಿಯು ಅಭ್ಯಾಸದಿಂದ ಸಿಗುವದು. ಹಣವನ್ನು ಉಳಿಸಿ-ಬೆಳಸಿಕೊಳ್ಳುವದು ದುಡಿತ, ಮಿತವ್ಯಯ ಮೊದಲಾದವುಗಳನ್ನು ಅವಲಂಬಿಸಿದೆ. ಮಿತವ್ಯಯದಿಂದ ಸ್ವತ್ತು, ವ್ಯವಹಾರ ಚಾತುರ್ಯ, ಗೌರವ ಉಂಟಾಗುತ್ತವೆ. ಹಣದ ವೆಚ್ಚಕ್ಕೆ ಹಿಡಿತದ ಇಕ್ಕಳು ಬೇಕೇಬೇಕು. ದೊಡ್ಡ ವ್ಯಾಪಾರಿಗೆ ಮಿತವ್ಯಯದ ಆವಶ್ಯಕತೆಯಿಲ್ಲ; ಮಧ್ಯಮ ತರಗತಿಯವರಿಗೆ ಇಲ್ಲದಿದ್ದರೆ ದುರ್ದೆಸೆ. 'ಹಾಸಿಗೆಯಿದ್ದಷ್ಟು ಕಾಲು ಚಾಚಬೇಕು' ಮಿತವ್ಯಯಿಯ ಬಾಳುವೆಯು ಅಚ್ಚುಕಟ್ಟಿನದೂ ಸುವಿಚಾರದ್ದೂ ಸುವ್ಯವಸ್ಥೆಯುಳ್ಳದ್ದೂ ಆಗುವದು

ಪ್ರ: ೫. ಕೆಳಗಿನ ವಾಕ್ಯವೃಂದಗಳ ಸಾರಾಂಶವನ್ನು ⅓ಕ್ಕೆ ಮಿತಗೊಳಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ. (೧೯೪೭)

ಹೊಸ ಕಾಲದ ಸುಧಾರಣೆಯ ರಹಸ್ಯವೆಲ್ಲ ವೇಗದಲ್ಲಿದೆಯೆಂದು ಹೇಳಬಹುದು. ಜೀವನದ ಪ್ರತಿಯೊಂದು ಕಾರ್ಯದಲ್ಲಿ ವೇಗಕ್ಕಾಗಿ ಹಸಿವ ಮಿತಿಮೀರುತ್ತದೆ. ಆಟ-ನೋಟ-ಮಾಟಗಳೆಲ್ಲವುಗಳಲ್ಲಿಯೂ ವೇಗವು ಬೇಕಾಗಿದೆ. ಇಂದು ಬೆಳಗ್ಗೆ ಚಿಕ್ಯಾಗೋ ನಗರದಲ್ಲಿರಬೇಕು. ಸಂಜೆಗೆ ಲಂಡನ ನಗರಕ್ಕೆ ಬರಬೇಕು. ಈ ಕ್ಷಣದಲ್ಲಿ ಇಂಗ್ಲಂಡಿನಲ್ಲಿ ನಡೆಯುತ್ತಿರುವ ಪ್ರತಿಯೊಂದು ವಿಷಯವು ಅದೇಕ್ಷಣದಲ್ಲಿ ಹಿಂದುಸ್ಥಾನದಲ್ಲಿರುವ ನಮಗೆ ಕಾಣಿಸಬೇಕು; ಕೇಳಿಸಬೇಕು. ಒಟ್ಟಿಗೆ ನಮಗೀಗ ಮನೋವೇಗವನ್ನು ಮೀರುವ ಚಟುವಟಿಕೆ ಬೇಕಾಗಿದೆ.

ವೇಗವು ಕೆಲವಷ್ಟಿಗೆ ಬೇಕೆಂಬುದು ನಿಜ; ನಿಶ್ಚಲತೆ, ಮರಣ ಸೂಚನೆಯೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅತಿವೇಗವು ವಿನಾಶದ ಬಂಧು ಎಂಬುದನ್ನು ಮರೆಯಬಾರದು. ಈ ಸೃಷ್ಟಿಯಲ್ಲಿ ಮಾನವನು ಮಾತ್ರ ವೇಗಕ್ಕಾಗಿ ತೊಳಲುತ್ತಿರುವನು. ಗಿಡ-ಮರಗಳ ಜೀವನಕ್ರಮದಲ್ಲಾಗಲಿ, ಪಶುಪಕ್ಷಿಗಳ ಗಮನದಲ್ಲಾಗಲಿ ನಾವು ಈ ವೇಗದ ಆಕಾಂಕ್ಷೆಯನ್ನು ಕಾಣುವದಿಲ್ಲ. ಒಂದು ಮಾವಿನ ಮರದ ಜೀವನವನ್ನು ನೋಡೋಣ ಅದು ಬೆಳೆಯುವದಕ್ಕೆ, ಪ್ರಾಯಕ್ಕೆ

ಬರುವದಕ್ಕೆ ಎಷ್ಟು ಕಾಲಹರಣ ಮಾಡುವದು! ಅದರ ಮೇಲ್ಲು ಗಿಡಗಳ ಪ್ರತಿ ಫಲವೆಂಬಂತೆ ಆದರ ಆಯುಷ್ಯವು ಎಷ್ಟು ದೀರ್ಘ? ಇನ್ನೂ ವೇಗಕ್ಕಾಗಿ ಕೂಗುವ ಮಾನವನು ಗಿಡ ಮರಗಳು ತಮ್ಮ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕದಿರುವದನ್ನು ಕಂಡು, ಬೇಗ ಅವುಗಳಿಗೆ ಕಸಿಮಾಡುವನು ಅವು ಗಳಿಂದ ಬೇಗ ಫಲವನ್ನು ಉಣ್ಣುವದಕ್ಕೆ. ಅವು ಬೇಗ ಫಲಿಸಿ ಬೇಗ ಸಾಯುವದನ್ನು ಆತನು ನೋಡಬೇಡವೇ?

ಇನ್ನು ಮಾನವನು ರಚಿಸಿಕೊಂಡ ಕೈಗಾರಿಕೆಯ ಯಂತ್ರೋಪ ಕರಣಗಳನ್ನು ನೋಡುವ. ಮೊದಲಿನ ಕಾಲದಲ್ಲಿ ನಮಗೆ ಈಗಿನಷ್ಟು ಗರಜುಗಳೇ ಇರಲಿಲ್ಲ. ಈಗ ಅವುಗಳನ್ನೆಲ್ಲ ಹುಟ್ಟಿಸಿ ಅವುಗಳ ಉತ್ಪ ತ್ತಿಗೆ ಯಂತ್ರಗಳನ್ನು ಮಾಡಿರುವದು, ರೋಗವನ್ನು ಕರೆತಂದು ಔಷಧಿ ಯನ್ನು ತಯಾರಿಸಿದಂತೆ. ಇಂದು ಈ ಯಂತ್ರದಿಂದ ನಾಲ್ಕಾರು ಜನ ಶ್ರೀಮಂತರಾದರೆ, ಸಾವಿರಾರು ಜನ ಹೊಟ್ಟೆಗೆ ರೊಟ್ಟಿ ಇಲ್ಲದೆ ಜೀವ ನ್ಮೃತಾವಸ್ಥೆಯಲ್ಲಿ ನರಳುತ್ತಿರುವದನ್ನು ಒಂದು ದೇಶವು ಇನ್ನೊಂದು ದೇಶದ 'ವ್ಯಾಪಾರಿಸುಲಿಗೆ' ಯಲ್ಲಿ ಮುಳುಗುತ್ತಿರುವದನ್ನೂ ಕಾಣುವೆವು.

ಸಾರಾಂಶ: ಜೀವನ[illegible]ರ್ಗಕ್ಕೂ ಅಟೆ-ನೋಟ-ಮಾತಕ್ಕೂ ವೇಗವು ಬೇಕಾಗಿದೆ. ಅಧುನಿಕ ವಿಮಾನ, ರೇಡಿಯೋ [illegible]ಂತಾದ ಯಂತ್ರಗಳ ಸಹಾಯದಿಂದ ಮನೋವೇಗವನ್ನು [illegible]ಕೆ ಬೇಕಾಗಿದೆ. [illegible]ಲತೆಯು ಮರಣದ ಸೂಚನೆಯು[illegible] [illegible]ವೇಗ ವಿನಾಶದ [illegible] ಮಾನವನ ಹೊಸತು [illegible] ಆಕಾಂಕ್ಷೆಯು [illegible] ಹೂವಿನ ಮ[illegible] ಫಲ[illegible]ಡು ವದಕ್ಕೆ ದೀರ್ಘಕಾಲ ಒಡಿಯುವದೆಂದು ಬೇಗ [illegible] ಕಸಿಮಾಡಿ ದರೆ, ಅದು ಬೇಗ ಸಾಯುವದು. ಕೈಗಾ[illegible] [illegible]ಕರಣಗಳನ್ನು ಹುಟ್ಟಿಸುವದೆಂದರೆ, ರೋಗವನ್ನು ಕರೆತಂದು ಔಷಧವನ್ನು ತಯಾರಿಸಿ ದಂತೆ. ಯಂತ್ರದಿಂದ ಕೆಲವರು ಶ್ರೀಮಂತರಾದರೂ ಬಹುಜನರು ಮಾತ್ರ ಬಡವರೂ ವ್ಯಾಪಾರ ಹೀನರೂ ಆಗುವರು.

ಪ್ರ: ೬. ಮನುಷ್ಯನು ಸುಖಕ್ಕಾಗಿ ಹಾತೊರೆಯುತ್ತಾನೆ. ಜಗತ್ತಿ ನಲ್ಲಿ ಸುಖವನ್ನೂ ಸ್ವಾಸ್ಥ್ಯವನ್ನೂ ಪಡೆಯಲು ಹೆಣ್ಣು-ಗಂಡು ಕೂಡಿಯೇ

ಇಚ್ಛಿಸುತ್ತವೆ. ಸುಖವೇನು? ಬರಿಯ ಸಂಪತ್ತಿನಲ್ಲದೆಯೋ? ಸಂಪತ್ತನ್ನು ಸುಖಮಯವಾಗಿ ಉಪಯೋಗಿಸುವದರಲ್ಲಿದೆ. ಜೀವನವನ್ನು ಹೆಚ್ಚು ಹೆಚ್ಚಾಗಿ ಸುಂದರವಾಗಿ ಮಾಡುವದರಲ್ಲಿದೆ. ಇಂಥ ಸೌಂದರ್ಯವನ್ನು ದೊರಕಿಸಲು ಬುದ್ಧಿವಂತಿಕೆ ಬೇಕು. ಅದು ನಮ್ಮ ಹೆಂಗಳೆಯರಲ್ಲಿ ಹೆಚ್ಚಾದ ಹಾಗೆ ಜೀವನ ಸೌಖ್ಯವು ಹೆಚ್ಚುವದು. ಮನುಷ್ಯನಿಗೆ ನಾಗರಿಕತೆಯ ಆನಂದವೆಲ್ಲ ದೊರೆಯಬೇಕಾದರೆ, ಗಂಡಸರು—ಹೆಂಗಸರು ಕೂಡಿಯೇ ವಿದ್ಯೆಯನ್ನು ಗಳಿಸಬೇಕು.

ಸಮಾಜ ಸ್ವಾಸ್ಥ್ಯವು ನಮಗೆ ಬೇಕಾಗಿದ್ದರೆ, ದೇಶಸ್ವಾತಂತ್ರ್ಯವು ನಮಗೆ ಬೇಕಾಗಿದ್ದರೆ, ಸ್ತ್ರೀ ಶಿಕ್ಷಣವಿಲ್ಲದೆ ಇವು ಸಿಕ್ಕಬಹುದೆ? ಸಮಾಜದ ಅರ್ಧಾಂಗವು ಹೆಣ್ಣು ಮಕ್ಕಳು. ಅವರು ವಿದ್ಯಾವಂತರಾಗದಿರಲು ಅರ್ಧಾಂಗವಾಯುವಿನ ರೋಗಿಯಂತೆ ಸಮಾಜವು ಶಾಂತಿಹೀನವಾಗುವದು. ದೇಶದ ಭವಿಷ್ಯತ್ತು ಬೆಳೆಯುವದು ತಾಯ್ತನವು ಉಡಿಯಲಿ. ತಾಯಿ ಚಿಕ್ಕಂದಿನಲ್ಲಿ ಕಲಿಸಿದ ಪಾಠವು ಸಾಯುವ ವರೆಗೆ ನೆಲೆಯಾಗುವದು. ಇಂಥ ಪಾಠಗಳನ್ನು ಕಲಿಸುವ ಯೋಗ್ಯತೆಯನ್ನು ನಾವು ನಮ್ಮ ಹೆಣ್ಣುಮಕ್ಕಳಿಗೆ ಕೊಡಬೇಕು. ಗಂಡಂದಿರನ್ನು ಅದರಂತೆ ನಡೆಯಿಸುವ ಭಾರವನ್ನು ಹೊರಲು ಸತಿಯರಿಗೂ ವಿದ್ಯಾವಂತಿಕೆಯು ಬೇಕು. ಇದಿಲ್ಲದೆ ಸಮಾಜದಲ್ಲಿ ಶಾಂತಿಯು ನೆಲೆಗೊಳ್ಳುವದೆಂತು !!

ಮೇಲ್ಕಂಡ ವಾಕ್ಯವೃಂದಗಳನ್ನು ಸರಿಯಾಗಿ ಓದಿ, ಅವುಗಳ ಸಾರಾಂಶವನ್ನು ಒಂದು ಮೂರನೇಯಂಶಕ್ಕೆ ಮೀರದಂತೆ ನಿಮ್ಮ ಮಾತುಗಳಲ್ಲಿ ಬರೆಯಿರಿ. [ಹೆ ಮು. [illegible]]

ಸಾರಾಂಶ:— ಎಲ್ಲರೂ ಸುಖವನ್ನೂ ಸ್ವಾಸ್ಥ್ಯವನ್ನೂ ಬಯಸುತ್ತಾರೆ. ಸುಖವು ಸಂಪತ್ತಿನ ಉಪಯೋಗದಲ್ಲಿಯೂ ಸುಂದರವಾದ ಜೀವನದಲ್ಲಿಯೂ ಇದೆ. ಬುದ್ಧಿವಂತಿಕೆಯಿಂದ ಸೌಂದರ್ಯವೂ ನಾಗರಿಕತೆಯ ಆನಂದವೂ ದೊರಕುವದು. ಆದಕ್ಕಾಗಿ ಎಲ್ಲರೂ ವಿದ್ಯೆಯನ್ನು ಗಳಿಸಬೇಕು. ಸ್ತ್ರೀ ಶಿಕ್ಷಣದಿಂದ ಸಮಾಜದ ಸ್ವಾಸ್ಥ್ಯವೂ ದೇಶದ

ಸ್ವಾತಂತ್ರ್ಯವೂ ಸಿಗುವದು. ಸಮಾಜದ ಅರ್ಧಾಂಗವಾದ ಸ್ತ್ರೀಯರು ವಿದ್ಯಾವಂತರಾಗದಿರಲು ಸಮಾಜವು ಶಾಂತಿಹೀನವಾಗುವದು ಶಾಂತಿ ನೆಲೆಗೊಳ್ಳಬೇಕಾದರೆ ತಾಯ್ತನ ಮತ್ತು ಗೃಹಶಿಕ್ಷಣಗಳವಶ್ಯ.

ಪ್ರ: ೬. ಕೆಳಗೆ ಕೊಟ್ಟ ವಾಕ್ಯವೃಂದವನ್ನು ಸುಮಾರು ಮೂರರಲ್ಲಿ ಒಂದು ಪಾಲು ಆಗುವಂತೆ ಸಂಕ್ಷೇಪಿಸಿ ಬರೆಯಿರಿ: [೧೯೪೬]

ಕರ್ನಾಟಕ ಸಾಮ್ರಾಜ್ಯವು ಸುಮಾರು ಒಂದು ಸಾವಿರ ವರ್ಷಗಳವರೆಗೆ ಅಖಂಡವಾಗಿ ಉಚ್ಛ್ರಾಯದಿಂದ ಮೆರೆದು, ಮುಪ್ಪಾಗಿ, ಕೊನೆಗೆ ತಾಳೀಕೋಟೆಯ ಕಾಳಗದಲ್ಲಿ ಒಂದು ದೊಡ್ಡ ಅಶ್ವತ್ಥವೃಕ್ಷವು ಉರುಳಿಕೊಂಡು ಬೀಳುವಂತೆ ಕಡಕೊಂಡು ಬಿದ್ದುದರಿಂದ ಕರ್ನಾಟಕದಲ್ಲಿ ಮಾತ್ರವೇ ಅಲ್ಲ, ಇಡೀ ಭರತಖಂಡದಲ್ಲಿ ಹಾಹಾಕಾರವೆದ್ದಿತು. ಆಗಿನ ಕಾಲದ ಶತ್ರುಗಳಾದ ಮುಸಲ್ಮಾನರು, ಸ್ವಾಭಾವಿಕವಾಗಿಯೇ ಆ ವಿಜಯದಿಂದ ಉಬ್ಬಿದವರಾಗಿ ವ್ಯಾಪಕತಃ ಕೊಳ್ಳೆಸುಲಿಗೆಗಳನ್ನು ನಡಿಸಿದರು ೧೫೬೫ ನೆಯ ಇಸ್ವಿಯ ನಂತರದ ೬೦-೭೦ ವರುಷಗಳೆಂದರೆ, ಹಿಂದುಸ್ಥಾನವು ವಿಶೇಷತಃ ಕರ್ನಾಟಕವು [illegible] ಕಷ್ಟಗಳನ್ನು ಅನುಭವಿಸಿದ ಕಾಲವು. ಆದರೆ ಹಿಂದೂ ಜನರು ತಾಳೀಕೋಟೆಯ ಮಹಾಯುದ್ಧದಲ್ಲಿ ಸಂಪೂರ್ಣವಾಗಿ ಸೋತಿದ್ದರೂ ಅವರ ಶೌರ್ಯವು ನಷ್ಟವಾಗಿರಲಿಲ್ಲ; ಅವರ ಉತ್ಸಾಹವು ಕುಗ್ಗಿರಲಿಲ್ಲ; ವೀರಶ್ರೀಯು [illegible]ವಾಗಿರಲಿಲ್ಲ; ಅಭಿಮಾನವು ಅಡಗಿರಲಿಲ್ಲ. ಆದುದರಿಂದ ವಿಜಯನಗರದ ಸಾಮ್ರಾಜ್ಯವು ನಷ್ಟವಾಗಿದ್ದರೂ ಅದರ ಅರಸರು ನಾಮಾವಶೇಷವಾಗಿದ್ದರೂ ಸಾಮಾನ್ಯ ಜನತೆಯಲ್ಲಿ ಶತ್ರುಗಳ ಬಗ್ಗೆ ಇದ್ದ ದ್ವೇಷವು ಮೇಲಿಂದ ಮೇಲೆ ಹೊರಹೊಮ್ಮುತ್ತಿತ್ತು. ವೈರಿಗಳನ್ನು ಹತ್ತಿಕ್ಕಿ ಪುನಃ ಸ್ವರಾಜ್ಯವನ್ನು ಸ್ಥಾಪಿಸಬೇಕೆಂಬ ಲವಲವಿಕೆಯೂ, ಇದ್ದ ಹಿಂದೂ ರಾಜ್ಯಗಳನ್ನು ಬಲಪಡಿಸಬೇಕೆಂಬ ಆಕಾಂಕ್ಷೆಯೂ ಸಾಮಾನ್ಯ ಜನತೆಯಲ್ಲಿ ಕಂಡು ಬರುತ್ತಿದ್ದವು. ಮಹಾರಾಷ್ಟ್ರ ಸಾಮ್ರಾಜ್ಯದ ಉದಯವೂ, ಮೈಸೂರ ರಾಜ್ಯದ ದೃಢತೆಯೂ ಈ ಆಕಾಂಕ್ಷೆಗಳ [illegible]ಗಳು.

ಸಾರಾಂಶ: [illegible] ಕರ್ನಾಟಕ ಸಾಮ್ರಾಜ್ಯವು ೧೫೬೫ರ ತಾಳೀಕೋಟೆಯ ಕಾಳಗದಲ್ಲಿ ನಷ್ಟವಾಯಿತು. ಆಗ ಮುಸ

ಲ್ಮಾನ ವೈರಿಗಳು ಕೊಲೆ-ಸುಲಿಗೆಗಳಿಂದ ಹಾಹಾಕಾರವನ್ನುಂಟು ಮಾಡಿದರು. ಕರ್ನಾಟಕವು ಕಲ್ಪನಾತೀತ ಕಷ್ಟನಷ್ಟಗಳನ್ನನುಭವಿಸಿತು. ಆದರೂ ಹಿಂದುಗಳ ವೀರಶ್ರೀ, ಉತ್ಸಾಹ, ಅಭಿಮಾನಗಳು ಸ್ವರಾಜ್ಯದ ಬೀಜವನ್ನು ಊರಿದವು. ಮಹಾರಾಷ್ಟ್ರದ ಉದಯ, ಮೈಸೂರಿನ ಧೃಢತೆಗಳು ಇದರ ಪರಿಣಾಮಗಳು.

ಪ್ರ: ೮ ಕೆಳಗಿನ ಅವತರಣವನ್ನು ಒಂದು ಮೂರನೆಯ ಅಂಶದಷ್ಟು ಆಗುವಂತೆ ಸಂಕ್ಷೇಪಿಸಿ ಬರೆಯಿರಿ. (೧೯೪೫)

ಸುಸಂಸ್ಕೃತನಾದ ಯಾವ ಬುದ್ಧಿಶಾಲಿಗಾಗಲಿ, ಧೈರ್ಯಶಾಲಿಗಾಗಲಿ ದುಡ್ಡನ್ನೇ ತನ್ನ ವಿಚಾರಗಳ ಮುಖ್ಯ ವಿಷಯವನ್ನಾಗಿಟ್ಟುಕೊಳ್ಳುವದು ಸಾಧ್ಯವಿಲ್ಲ ಹಾಗೆ ಮಾಡುವದೆಂದರೆ ಅವನು ತನ್ನ ದಿನದ ಊಟವನ್ನು ತನ್ನ ಆಲೋಚನೆಗಳಿಗೆಲ್ಲ ಮುಖ್ಯ ವಸ್ತುವನ್ನಾಗಿ ಇಟ್ಟುಕೊಂಡ ಹಾಗೆಯೇ ಆರೋಗ್ಯದಿಂದಿರುವವರೆಲ್ಲರಿಗೂ ಊಟವೇನೋ ಆನಂದದ ವಿಷಯ. ಆದರೆ ಊಟವೇ ಅವರ ಜೀವನದ ಮುಖ್ಯ ಧ್ಯೇಯವಾಗಿರುವದಿಲ್ಲ. ಅದ[illegible] ಸಾಮಾನ್ಯವಾಗಿ ಎಲ್ಲರಿಗೂ ಹಣಸಂಪಾದನೆಯು ಸೇರುವದು-ಸೇರಬೇ[illegible] ನ್ಯಾಯವೇ; ಹಾಗು ಅದನ್ನು ಶೇಖರಿಸುವ ಸತತೋದ್ಯೋಗಿಗ[illegible]ರಿಗೆ ಆನಂದವೆನಿಸಲೂಬಹುದು ಇಷ್ಟರಿಂದಲೇ ಅವರ ಬಾ[illegible] ಮುಖ್ಯ ಧ್ಯೇಯವು ಹಣವಾಗಲಾರದು. ಅದು ಅದ[illegible]ಂತಲೂ ಶ್ರೇಷ್ಠವಾದ ಯಾವದೋ ಗುರಿಯಾಗಿರಲಿಕ್ಕೇಬೇಕು. ಉದಾಹರಣೆಗಾಗಿ [illegible]ವನಾದ ಭಟನು, ಮುಖ್ಯತಃ ಚೆನ್ನಾಗಿ ಕಾದಲಿಕ್ಕೆ ಇಷ್ಟಪಡುವನು. ಅವನಿಗೆ ತನ್ನ ಕೆಲಸಕ್ಕೆ ವೇತನವು ಸಿಕ್ಕಾಗ ಆನಂದವಾಗುವದು. ಇದು ಸರಿಯೇ! ಹಾಗು ಅದೇ ಸಂಬಳ ನಾಲ್ಕಾರು ವರ್ಷ ಬಾಕಿ ನಿಂತರೆ ಅವನಿಗೆ ಅಸಮಾಧಾನವೂ ಆಗುವದು. ಹೀಗಿದ್ದರೂ ಅವನ ಬಾಳುವೆಯ ಸಫಲತೆಯು ಯುದ್ಧಗಳಲ್ಲಿ ಗೆಲ್ಲುವದರಲ್ಲಿ ಇರುವದಲ್ಲದೆ, ಗೆದ್ದ ಯುದ್ಧಗಳಿಗಾಗಿ ಸಂಬಳವನ್ನು ಸ್ವೀಕರಿಸುವದರಲ್ಲಿಲ್ಲ.

ಸಾರಾಂಶ:— ಸಾಮಾನ್ಯವಾಗಿ ಎಲ್ಲರಿಗೂ ಊಟದಲ್ಲಿಯೂ ಹಣ ಸಂಪಾದನೆಯಲ್ಲಿಯೂ ಆನಂದವೆನಿಸುವದು. ಆದರೆ ಸುಸಂಸ್ಕೃತ, ಬುದ್ಧಿ

ಶಾಲಿ, ಧೈರ್ಯಶಾಲಿಯ ಬಾಳುವೆಯ ಮುಖ್ಯ ಧ್ಯೇಯ ಇವೆರಡೂ ಅಲ್ಲ. ಉದಾ—ಭಟನಿಗೆ ಸಂಬಳ ದೊರೆತಾಗ ಆನಂದ; ದೊರೆಯದಿದ್ದಾಗ ಅಸಮಾಧಾನವಾದರೂ ಅವನ ಬಾಳುವೆಯ ಸಫಲತೆಯು ಯುದ್ಧಗಳನ್ನು ಗೆಲ್ಲುವದರಲ್ಲಿ ಇರುವದಲ್ಲದೆ, ಗೆದ್ದ ಯುದ್ಧಗಳಿಗಾಗಿ ಸಂಬಳವನ್ನು ಸ್ವೀಕರಿಸುವದರಲ್ಲಿ ಇಲ್ಲ.

ಪ್ರ:—೯. ಕೆಳಗಿನ ಅವತರಣಗಳನ್ನು ಸುಮಾರು ಒಂದು ಮೂರನೆಯ ಅಂಶದಷ್ಟಕ್ಕೆ ಸಂಕ್ಷೇಪಿಸಿ ಬರೆಯಿರಿ:— (೧೯೪೬)

"ಕರ್ನಾಟಕದ ಸ್ತ್ರೀಯರೇನು ಕಡಿಮೆ ಪ್ರಸಿದ್ಧರೇ? ನಮ್ಮ ಕರ್ನಾಟಕದ ಸ್ತ್ರೀಯರ ಹೆಸರುಗಳು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಷ್ಟು ಉಜ್ವಲವಾಗಿವೆ. ಸುಪ್ರಸಿದ್ಧ ಪುಲಿಕೇಶಿ ಮಹಾರಾಜನ ಹಿರಿಯ ಸೊಸೆಯಾದ ವಿಜಯ ಮಹಾದೇವಿಯು, ಅಬಲೆಯಾದರೂ ರಾಜ್ಯಭಾರವನ್ನು ಬಹು ಚಾತುರ್ಯದಿಂದ ತೂಗಿಸಿಕೊಂಡು ಹೋಗಲಿಲ್ಲವೇ? ಪಶ್ಚಿಮ ಚಾಲುಕ್ಯರ ಎರಡನೆಯ ಸೋಮೇಶ್ವರನ ಹಿರಿಯ ಸೊಸೆಯಾದ ಮೈರಾಳದೇವಿಯು ಆಗಿನ ಕಾಲಕ್ಕೆ ಮುಂಬಯಿ ಪ್ರಾಂತದಷ್ಟು ದೊಡ್ಡದಾದ ಬನವಾಸಿ ಪ್ರಾಂತವನ್ನು ಆಳಿದುವದು, ಕರ್ನಾಟಕ ಸ್ತ್ರೀ ಸಮಾಜಕ್ಕೆ ಎಷ್ಟು ಗೌರವಾಸ್ಪದವಾದ ಸಂಗತಿಯು! ಪಶ್ಚಿಮ ಚಾಲುಕ್ಯರ ಮೂರನೆಯ ಜಯಸಿಂಹನ ತಂಗಿಯರಾದ "ಅಕ್ಕದೇವಿಯರ ಕಿಸುಕಾಡ ಪಟ್ಟೆಂಸುಖ ಸಂಕಥಾ ವಿನೋದದಿಂ ಆಳುತ್ತಿರೆ" ಆಗಿನ ಕಾಲಕ್ಕೆ ಗೋಕಾವಿಯಲ್ಲಿದ್ದ ಬಂಡಾಯವನ್ನು ಮುರಿದೊತ್ತಿ "ರಣಭೈರವಿ" ಎಂಬ ತಮ್ಮ ಅಭಿದಾನವನ್ನು ಸಾರ್ಥಕಗೊಳಿಸಿದ ಸಂಗತಿಯನ್ನು ಕೇಳಿದೊಡನೆ, ಯಾವ ಕನ್ನಡಿಗನಮುಂದೆ ಆ ವೀರಾಂಗನೆಯ ಚಿತ್ರವು ಬಂದು ನಿಲ್ಲದೆ ಇದ್ದೀತು? ಕಂಟಿ ನೀಲಮ್ಮ, ಹೊನ್ನಮ್ಮ, ಗಿರಿಯಮ್ಮ ಇವರು ರಚಿಸಿದ "ಪ್ರಸಾದ ಸಂಪಾದನೆ" "ಹದಿಬದೆಯ ಧರ್ಮ" "ಚಂದ್ರಹಾಸ ಚರಿತ್ರ" ಇವೇ ಮೊದಲಾದ ಗ್ರಂಥರತ್ನಗಳನ್ನು ಕನ್ನಡಿತಿಯರಿಗೆ ಆಮರಣವೂ ಆದರ್ಶವಾಗದೆ ಇರವು! ಮೊನ್ನೆ ಮೊನ್ನೆ ಕರ್ನಾಟಕದ ಕಣ್ಣಿಗೆ ಬಿದ್ದಿರುವ "ವೀರ ಕಂಪಣರಾಯ ಚರಿತ್ರ"ವೆಂಬ ಅತ್ಯಂತ ಸರಸವಾದ ಸಂಸ್ಕೃತ

ಕಾವ್ಯದ ಕರ್ತೃ[illegible]ಯೂ ಶುದ್ಧ ಕರ್ನಾಟಕದ [illegible]ಪುತ್ರಿಯೇ! ಅವಳ ಹೆಸರು ಗಂಗಾದೇವಿ ಅವಳು ವಿಜಯನಗರದ ಪ್ರಖ್ಯಾತ ಅರಸನಾದ ಬುಕ್ಕರಾ[illegible]ನ ಸಾಕ್ಷಾತ್ ಸೊಸೆ [illegible] ಸಾರಾಂಶ [illegible] ಗರಾದ ಕರ್ನಾಟಕ [illegible]ಕವಿ[illegible]ನ್ನು ನಿತ್ಯದಲ್ಲಿ ಸ್ಮರಿಸಿ [illegible] ಅಡಿ[illegible] ಕುಳಿತು ಕವಿಗಳು ಕವಿತೆಯ ಸ್ಫೂರ್ತಿಯನ್ನು ಪಡೆಯಬೇಕು.

ಸಾರಾಂಶ: - ಕನ್ನಡ ನಾಡಿನ ಸ್ತ್ರೀಯರ ಮೇಲ್ಮೆ, ಕನ್ನಡ ನಾಡಿನ ಸ್ತ್ರೀರತ್ನಗಳ ಚಾತುರ್ಯ, ಸಾಹಸಗಳ ಚರಿತ್ರೆಯು, ಇತಿಹಾಸದಲ್ಲಿ ಅಜರಾ ಮರವಾಗಿದೆ ಪಶ್ಚಿಮ ಚಾಲುಕ್ಯರ ಮೂರನೆ[illegible]ಯಸಿಂಹನ ತಂಗಿ ಯಾದ ಅಕ್ಕಾದೇವಿ, ಪುಲಿಕೇಶಿಯ ಹಿರಿಯ ಸೊಸೆಯಾದ ಮಹಾದೇವಿ ಇವರೇ ಮೊದಲಾದ ಸ್ತ್ರೀರತ್ನಗಳ ಯುದ್ಧಕಲೆ ಚಾತುರ್ಯಮತ್ತು ಮುತ್ಸದ್ದಿ ತನಗಳು ಸ್ತ್ರೀಸಮಾಜಕ್ಕೆ ಗೌರವಾಸ್ಪದವಾಗಿವೆ. ಅಲ್ಲದೆ ಕಂಟೀ ನೀಲಮ್ಮ, ಹೊನ್ನಮ್ಮ, ಗಿರಿಯಮ್ಮ, ಗಂಗಾದೇವಿ ಮೊದಲಾದವರು ಸಲ್ಲಿಸಿದ ಸಾಹಿತ್ಯ ಸೇವೆಯೂ ಕೂಡ ಅನ[illegible]ವಾಗಿದೆ ಇವರೆಲ್ಲರ ಆದರ್ಶವನ್ನು ನಮ್ಮ ಈಗಿನ ಕನ್ನಡ ಕವಿಗಳು [illegible]ರ್ನಾಟಕದ ವೀರರೂ ನಿತ್ಯದಲ್ಲಿ ನೆನೆದು ಪಾಠ ಕಲಿಯಬೇಕು.

ಪ್ರ: - ೧೨. ಕೆಳಗಿನ [illegible]ಕೆಯನ್ನು ಅದರ ಒಂದು ಮೂರ ನೆಯ ಅಂಶವಾಗುವಂತೆ ಸಂಕ್ಷೇಪಿಸಿ ಬರೆಯಿರಿ. [೧೯೪೭ ಎಪ್ರೀಲ]

ಎಷ್ಟೋ ವರ್ಷಗಳು ಗತಿಸಿದರೂ ಭರತಖಂಡದ ಕೋಟ್ಯವಧಿ ಹಳ್ಳಿ ಗಳ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗದೆ, ಅದು ಯಥಾ ಪ್ರಕಾರವಾಗಿ ಉಳಿದಿರುವದೆಂದು ಕೆಲವರ ಅಭಿಪ್ರಾಯ. ಅದು ಸಮಂಜಸವಲ್ಲ. ನಿಜಾಂಶ ವೇನಂದರೆ, ಎಷ್ಟೋ ವರ್ಷಗಳ ವರೆಗೆ ಹಳ್ಳಿಗಳಲ್ಲಿ ಸಂಪತ್ತೂ ಕಸಬು ಕಾಯಕಗಳೂ ವ್ಯವಹಾರಗಳೂ ಸುಖಶಾಂತಿ[illegible] ನೆಲೆಸಿದ್ದವು. ಕೈಗಾರಿಕೆ ಕಲಾಕೌಶಲ್ಯಗಳಲ್ಲಿ ಹಳ್ಳಿಗರು ಅಸಾಧಾರಣವಾದ ನುಂಪಡಿ ಯನ್ನು ಹೊಂದಿದ್ದರು ಆದರೂ ಯಾವದೋ ಒಂದು ಭಯಂಕರ [illegible] ಪ್ರಭಾವದಿಂದ[illegible] ಏನೋ ಎಂಬಂತೆ ಸದ್ಯಕ್ಕೆ ಹಳ್ಳಿಗರು [illegible] ಎಳಲಿ ಬೆಂಡಾಗಿದ್ದಾರೆ ಯಾವ ಪ್ರಾಮಾಣಿಕತನದ

ಉದ್ಯೋಗವೂ ಇಲ್ಲದೆ ಕೇವಲ ನಿರುದ್ಯೋಗಿಗಳಾಗಿಯೇ ಜೀವಿಸುವ ದುರ್ಧರ [illegible] ಸಂಗಸ್ತ [illegible] ನೊಂದಿರುತ್ತದೆ ಈ ಪ್ರಕಾರ ದಾರಿದ್ರ್ಯ, ದೀನಾವಸ್ಥೆಗಳಲ್ಲಿ ದೇಶವು [illegible] ವಾಗಿ ತಲೆಯೆತ್ತಲು ಹೆಣಗಾಡುತ್ತಲುವದು. ಮೊದಲಿನ [illegible] ತಿಗೂ ಬಹಳೇ ವ್ಯತ್ಯಾಸವಿದೆ ಸದ್ಯಕ್ಕೆ ಹಳ್ಳಿಯಲ್ಲಿ ಪೂರ್ವಕಾಲದ ಸ್ವಾವಲಂಬನೆ, ಸ್ವಪೋಷಣೆ, ಪ್ರೇಮಭಾವನೆಯ ಚಿಹ್ನಗಳು ಕಾ[illegible]ರವು. ಹಳ್ಳಿಯ ನಿವಾಸಿಗಳು ಮೊದಲು ಅಪಾರವಾದ ಮತ್ತು ಸುಗ[illegible]ದ ಫಲಗಳನ್ನು ಉಪಭೋಗಿಸುತ್ತಿದ್ದರು. ಆದರೆ ಈಗ ಕಸಬು ಕಾಯಕಗಳನ್ನೆಲ್ಲ ಕಳೆದು[illegible] ಪರಾವಲಂಬಿಗಳಾಗಿ ಜೀವಿಸತೊಡಗಿದ್ದಾರೆ. ಹಳ್ಳಿಗರು ಕೇವಲ "ಕಚ್ಚಾ" ದ್ರವ್ಯಗಳ ಉತ್ಪಾದಕರೂ ಅವ[illegible]ನ್ನು ಪರದೇಶಗಳಿಗೆ ಕಳಿ[illegible]ವರೂ ಆಗಿಬಿಟ್ಟಿದ್ದಾರೆ. ಅವರ ಮನೆಗಳು [illegible] ರಗಳಾಗಿಲ್ಲ. ಬ್ರಿಟಿಶರು ಈ ದೇಶಕ್ಕೆ [illegible] ನಂತರವೂ ಬಹಳ [illegible] ವರ್ಷಗಳ ವರೆಗೆ ಹಳ್ಳಿಗಳಲ್ಲಿ [illegible] ಕಲಾಕೌಶಲ್ಯಗಳು ತಲೆದೋರುತ್ತಿದ್ದವು. ಆದರೆ ಈಗ ಹಳ್ಳಿಗಳಲ್ಲಿ [illegible]ಕೆಗಳ ಎಲ್ಲ ಎಳೆಗಳು ಹರಿದು ಹೋಗಿವೆ. ಆ ಎಳೆಗಳನ್ನು ಕೂಡಿಸಿ ದಾರವನ್ನು ಮಾಡುವ ಕೆಲಸವು ನಮ್ಮನ್ನು ಕೂಡಿದೆ. ವ[illegible]ರೆತ ಗ್ರಾಮೋದ್ಯೋಗವನ್ನು ಪುನರುಜ್ಜೀವನಗೊಳಿಸಬೇಕಾಗಿರುವದು.

ಸಾರಾಂಶಃ ಹಳ್ಳಿಗಳಲ್ಲಿಯ ಸಂಪತ್ತೂ ಕಸಬು-ಕಾಯಕಗಳೂ ಸುಖಶಾಂತಿಗಳೂ ಮಾಯವಾಗಿ ಹಳ್ಳಿಗರು ನಿರುದ್ಯೋಗಿಗಳಾಗಿ ದುಃಖದಲ್ಲಿ ಬಿದ್ದು ಬಳಲುತ್ತಿದ್ದಾರೆ. ಸದ್ಯಕ್ಕೆ ಹಳ್ಳಿಗರು ಪೂರ್ವಕಾಲದ ಸ್ವಾವಲಂಬನೆ ಸ್ವಪೋಷಣೆ, ಪ್ರೇಮಭಾವ [illegible] ಗುಣಗಳನ್ನು ಕಳೆದುಕೊಂಡು, ಪರಾವಲಂಬಿಗಳಾಗಿದ್ದಾರೆ. ಕೇವಲ ಕಚ್ಚಾ ದ್ರವ್ಯಗಳ ಉತ್ಪಾದಕರಾಗಿದ್ದಾರೆ. ಬ್ರಿಟಿಶರು ಬಂದ ಬಳಿಕವೂ ಎಷ್ಟೋ [illegible] ವರುಷಗಳ ವರೆಗೆ ಹಳ್ಳಿಗಳು ಕಲಾಕೌಶಲ್ಯದ ಕೇಂದ್ರಗಳಾಗಿದ್ದವು [illegible] ಈಗ ಆ ಹಳೆಯ ಗ್ರಾಮೋದ್ಯೋಗವನ್ನು ಪುನರುಜ್ಜೀವನಗೊಳಿಸಬೇಕಾಗಿದೆ.

ಪ್ರಃ— ೧೧. ಕೆಳಗಿನ ಅವತರಣಿಕೆಯನ್ನು ಅದರ ಒಂದು ಮೂರನೆಯ ಅಂಶದಷ್ಟಾಗುವಂತೆ ಸಂಕ್ಷೇಪಿಸಿ ಬರೆಯಿರಿಃ-([illegible] ಅಕ್ಟೋಬರ)

ಸ್ವದೇಶಾಭಿಮಾನವೆಂಬುದು ಒಂದು ದಿವ್ಯಜ್ಯೋತಿಯು. ಈ ಜ್ಯೋತಿಯಿಂದಲೇ ಸಕಲ ಪ್ರಾಣಿಗಳಿಗೆ ಆನಂದ. ಜ್ಞಾನ ವೈಶಿಷ್ಟ್ಯದಿಂದ ಸಕಲ ಪ್ರಾಣಿಗಳ ಒಡೆಯನೆನಿಸಿದ, ಮನುಷ್ಯಪ್ರಾಣಿಯಲ್ಲಿ ಈ ಜ್ಯೋತಿಯು ವಿಶೇಷವಾಗಿ ತೋರಿ ಬೆಳಗುತ್ತಿರಲೇಬೇಕು ಈ ಜ್ಯೋತಿಯು ಯಾವನ ಹೃದಯದಲ್ಲಿ ಪ್ರಕಾಶಿಸುವದಿಲ್ಲವೋ ಅವನು ಮಾತ್ರ ಪಶುಪಕ್ಷಿಗಳಿಗಿಂತಲೂ ಹೀನನು. ' ಜನನೀ— ಜನ್ಮಭೂಮಿಗಳು ಸ್ವರ್ಗಕ್ಕಿಂತಲೂ ಮಿಗಿಲು ' ಹಂಪೆಗಿಂತ ತನ್ನ ಕೊಂಪೆಯೇ ಲೇಸು; ಸುಲೇಮಾನನ ರಾಜ್ಯದಲ್ಲಿರುವದಕ್ಕಿಂತ ತನ್ನ ಜನ್ಮ ಭೂಮಿಯಲ್ಲಿರುವದುತ್ತಮ. ಮನಾನಂದಗೊಳಿಸುವ ಪರದೇಶದ ಪುಷ್ಪ ತಲ್ಪದಲ್ಲಿ ಪವಡಿಸುವದಕ್ಕಿಂತ ತನ್ನ ದೇಶದ ಮುಳ್ಳು ಹಾಸಿಗೆಯಲ್ಲಿ ಒರಗುವದೊಳಿತು, ಖಾದಿಯು ಸ್ವರ್ಗದ ಹಾದಿ, ಎಂದು ಲೋಕಾನುಭವಿಗಳ ನುಡಿಯು ತಿರುಳೇ ಸ್ವದೇಶ ಪ್ರೀತಿಯೆಂಬ ದಿವ್ಯದೀಪಿಕೆಯಾಗಿದೆ. ಈ ದೀಪಿಕೆಯಿಂದ ಪ್ರಕಾಶಗೊಂಡಿರುವವನೇ ಮಾನ್ಯನು ! ಮಹಾತ್ಮನು !! ಮಹಾವ್ಯಕ್ತಿಯು !!!

" ದೇಶಭಕ್ತಿಯೇ ಈಶ ಭಕ್ತಿಯು " ! ಎಂದಾಡುವ ಆಧುನಿಕರ ' ಸ್ವದೇಶಭಕ್ತಿಯು ದೇವಭಕ್ತಿಯೊಳಗಿನ ಒಂದು ಭಾಗವಾಗಿದೆ. ' ಎಂದ ಪೈಗಂಬರರ, ' ಸ್ವಾಭಿಮಾನಿಯಾಗಿ ಸ್ವಾವಲಂಬನದಿಂದ ಕಾಯಕವೇ ಕೈಲಾಸವೆಂದಂದಾಚರಿಸುವದೇ ಲಿಂಗಪೂಜೆಯು 'ಎಂದ ಬಸವಣ್ಣನವರ, ' ತನ್ನವರು ಕಷ್ಟದಲ್ಲಿರುವಾಗ್ಗೆ ಅವರನ್ನು ಉಳಿದು, ಸ್ವಹಿತಕ್ಕಾಗಿ ಏಕಾಂಗಿಯಾಗಿ ತಪವನ್ನಾಚರಿಸುವದೇ ದೇಶದ್ರೋಹ, ಎಂದಿಹ ವಿದ್ಯಾರಣ್ಯರ ನಡೆನುಡಿಗಳಲ್ಲಿ ತೋರುತ್ತಿರುವದೇ, ಉಜ್ವಲ ದೇಶಪ್ರೀತಿಯು. ಇಂತಹ ಪ್ರೀತಿಯಿಲ್ಲದವನ ಹೃದಯವೂ ಬಾಳ್ವೆವೂ ನಿಸ್ಸಾರವಾದ ಭೂಮಿ, ಸ್ನೇಹರಹಿತದೀಪಿಕೆಗಳಂತೆಯೇ ! ಸ್ವೈ.

ಸಾರಾಂಶ:— ಸ್ವದೇಶಾಭಿಮಾನವೆಂಬ ದಿವ್ಯಜ್ಯೋತಿ ಇಲ್ಲದವನು ಪಶುಪಕ್ಷಿಗಳಿಗಿಂತ ಹೀನನು. ಜನ್ಮಭೂಮಿಯು ಸ್ವರ್ಗಕ್ಕಿಂತ ಮಿಗಿಲು; ಪರದೇಶದ ಪುಷ್ಪ ಶಯ್ಯೆಗಿಂತ ಸ್ವದೇಶದ ಮುಳ್ಳು ಹಾಸಿಗೆ ಶ್ರೇಷ್ಠವೆಂದು ತಿಳಿದವನೇ ಮಹಾತ್ಮನು; ಪೈಗಂಬರ, ಬಸವಣ್ಣ, ವಿದ್ಯಾರಣ್ಯ ಮೊದ

ಲಾದವರು ದೇಶಭಕ್ತಿಯೇ ಈಶಭಕ್ತಿಯೆಂದು ಸಾರಿರುವರು ದೇಶ ಭಕ್ತಿಯಿಲ್ಲದವನ ಬಾಳ್ವೆವ್ಯರ್ಥ.

ಪ್ರ— ೧೨. ಕೆಳಗಿನ ಅವತರಣಿಕೆಯನ್ನು ಒಂದು ಮೂರನೆಯ ಅಂಶದಷ್ಟಾಗುವಂತೆ ಸಂಕ್ಷೇಪಿಸಿ ಬರೆಯಿರಿ. (೧೯೪೮)

" ಸಮೀಪಸ್ಥನ ಹಿತವನ್ನು ಅಸಡ್ಡೆಮಾಡಿ ದೂರಸ್ಥನ ಸೇವೆಯನ್ನು ನಾನು ಮಾಡಕೂಡದು. ಇದರಲ್ಲಿ ದ್ವೇಷವಿಲ್ಲ, ಅಸೂಯೆಯಿಲ್ಲ; ದಂಡಿಸುವ ಉದ್ದೇಶವಿಲ್ಲ; ಯಾವತರದ ಸಂಕುಚಿತ ಬುದ್ಧಿಯೂ ಇದರಲ್ಲಿ ಇಲ್ಲ. ಏಕೆಂದರೆ ನನ್ನ ಅಭಿವೃದ್ಧಿಗೆ ಬೇಕಾದಂತಹ ವಸ್ತುವನ್ನು, ಪೃಥ್ವಿಯ ಯಾವ ಭಾಗದಿಂದಲಾದರೂ ತರಿಸಿಕೊಳ್ಳುವೆನು. ನನಗೆ ಹಿತವಲ್ಲದ ಅಥವಾ ಜನ್ಮತಃ ನನಗೆ ಸಮೀಪಸ್ಥರಾದವರಿಗೆ ಹಿತವಲ್ಲದ ವಸ್ತುವು ಎಷ್ಟು ಸೊಗಸಾಗಿದ್ದರೂ ನಾನು ಅದನ್ನು ಕೊಂಡುಕೊಳ್ಳುವದಿಲ್ಲ, ಉಪಯುಕ್ತವಾದ ಪುಸ್ತಕಗಳನ್ನು ನಾನು ಪೃಥ್ವಿಯ ಯಾವಮೂಲೆಯಿಂದಾದರೂ ತರಿಸಿಕೊಳ್ಳುವೆನು. ಚಿಕಿತ್ಸೆಗೆ ಬೇಕಾದ ಶಸ್ತ್ರಸಾಮಗ್ರಿಯನ್ನು ಇಂಗ್ಲಂಡಿನಿಂದ ಕೊಳ್ಳುತ್ತೇನೆ; ಗುಂಡು, ಸೂಜಿ, ಸೀಸದ ಕಡ್ಡಿಗಳನ್ನು ಆಸ್ಟ್ರಿಯದಿಂದ ಕೊಳ್ಳುತ್ತೇನೆ; ಗಡಿಯಾರಗಳನ್ನು ಸ್ವಿಝರ್ಲಂಡಿನಿಂದ ತರಿಸಿಕೊಳ್ಳುತ್ತೇನೆ. ಆದರೆ ಎಷ್ಟು ದಿವ್ಯವಾಗಿದ್ದರೂ ಇಂಗ್ಲಂಡಿನಿಂದಾಗಲಿ, ಜಪಾನದಿಂದಾಗಲಿ, ಮತ್ತಾವ ದೇಶದಿಂದಾಗಲಿ ಬರುವ ಹತ್ತಿಯ ಬಟ್ಟೆಯಲ್ಲಿ ಒಂದಂಗುಲದಷ್ಟನ್ನು ಕೂಡನಾನು ಕೊಳ್ಳಲು ಒಲ್ಲೆ ಏಕಂದರೆ ಹಾಗೆ ಮಾಡುವದರಿಂದ ನನ್ನ ಒಡನಾಡಿಗಳಾಗಿರುವ ಲಕ್ಷಾಂತರ ಜನರಿಗೆ ಅಹಿತವಾಗುವದಲ್ಲದೆ, ಮುಂದೆಇನ್ನೂ ಹೆಚ್ಚಿನ ಆಪತ್ತನ್ನೇ ತಂದಿಟ್ಟಂತಾಗುವದು. ದಡ್ಡ. ದರಿದ್ರರಾಗಿರುವ ಕೋಟಿಗಟ್ಟಲೆ ಭಾರತೀಯರು ನೂತು, ನೇಯ್ದ ವಸ್ತ್ರವನ್ನು ಕೊಳ್ಳಲೊಲ್ಲೆ ಎನ್ನುತ್ತ, ಅದಕ್ಕಿಂತಲೂ ಉತ್ತಮವಾಗಿರಬಹುದಾದ ವಿದೇಶೀವಸ್ತ್ರವನ್ನು ಕೊಂಡುಕೊಳ್ಳುವದು ಪಾಪಕೃತ್ಯವೆಂದೇ ನನ್ನ ಮತ. ಪರದೇಶೀ ಕೈಗಾರಿಕೆಗಳನ್ನು ಪರದೇಶಿಯಾದ ಮಾತ್ರಕ್ಕೆ ಬಹಿಷ್ಕರಿಸಿ, ದೇಶಕ್ಕೆ ಯುಕ್ತವಲ್ಲದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿ ತೊಡಗಿ, ದೇಶದ ಹಣವನ್ನೂ ಕಾಲ

ವನ್ನೂ ವ್ಯರ್ಥಗೊಳಿಸುವದು, ಅಕ್ಷಮ್ಯವಾದ ಮತ್ತು ದಂಡನೀಯವಾದ ಮೂರ್ಖತೆ; ಅದು ಸ್ವದೇಶಿತತ್ವಕ್ಕೆ ವಿರುದ್ಧವಾದುದು.

ಸಾರಾಂಶ:— ನಾನು ಸಮೀಪಸ್ಥನ ಹಿತವನ್ನು ಅಸಡ್ಡೆಮಾಡಿ ದೂರಸ್ಥನ ಸೇವೆಯನ್ನು ಮಾಡಕೂಡದು. ನನ್ನ ದೇಶಕ್ಕೆ ಅಹಿತ ವನ್ನುಂಟು ಮಾಡುವ ಪರದೇಶದ ವಸ್ತುಗಳನ್ನು ನಾನು ಕೊಳ್ಳುವದಿಲ್ಲ. ನಾನು ಪುಸ್ತಕಗಳನ್ನು ಬೇರೆ ದೇಶಗಳಿಂದ ತರಿಸಿಕೊಳ್ಳುವೆನು. ಆದರೆ ಎಷ್ಟು ದಿವ್ಯವಾಗಿದ್ದರೂ ಒಂದು ಅಂಗುಲ ಬಟ್ಟೆಯನ್ನು ನಾನು ಪರದೇಶ ದಿಂದ ಕೊಂಡುಕೊಳ್ಳುವದಿಲ್ಲ. ಯಾಕಂದರೆ ಅದರಿಂದ ನಾನು ಲಕ್ಷಾಂತರ ಭಾರತೀಯರಿಗೆ ಅನ್ಯಾಯ ಮಾಡಿದಂತಾಗುವದು. ದೇಶಕ್ಕೆ ಯುಕ್ತ ವಲ್ಲದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಸ್ವದೇಶೀತತ್ವಕ್ಕೆ ವಿರೋಧ ವಾದುದು.

ಪ್ರಶ್ನೆ:— ೧೩. ಕೆಳಗಿನ ಅವತರಣಿಕೆಯನ್ನು ಅದರ ಒಂದು ಮೂರನೆಯ ಅಂಶದಷ್ಟಾಗುವಂತೆ ಸಂಕ್ಷೇಪಿಸಿ ಬರೆಯಿರಿ: (೧೯೪೯)

"ಯಾವ ದೇಶವಾದರೂ ತನ್ನನ್ನು ತಾನೇ ಆಳಬೇಕೆಂದು ಹೇಳು ವವರಲ್ಲಿ ಮಹಾತ್ಮರು ಒಬ್ಬರು. ದೇಶಕ್ಕೆ ಬಡತನವು, ಶರೀರಕ್ಕೆ ರೋಗ ವಿದ್ದಂತೆ ಎಂದು ಇವರು ಹೇಳಿರುವರು. ಇದಕ್ಕಾಗಿ ಪ್ರತಿವ್ಯಕ್ತಿಯೂ ಉದ್ಯೋಗವನ್ನು ಮಾಡಿಯೇ ತೀರಬೇಕೆಂಬುವದು ಇವರ ಕಟ್ಟೆಚ್ಚರಿಕೆ. ಚರಕವನ್ನು ತಿರುಗಿಸಿ ನೂಲುವದು ಇವರ ಪ್ರೀತಿಯ ಹೋರೆ. ಈ ಹೋರೆಯು ಇವರ ದಿನಚರ್ಯೆಯಲ್ಲಿ ಸೇರಿದೆ. ಮಕ್ಕಳೇ, ಚರಕದಿಂದ ನೂಲುತ್ತಿರುವ ಗಾಂಧಿಯ ಚಿತ್ರವನ್ನು ಮನೆ ಮನೆಯಲ್ಲಿ ನೀವು ಕಾಣ ಬಹುದು. ಪರದೇಶದ ಕೈಗಾರಿಕೆಯ ಒಡವೆಗಳನ್ನು ಕೊಂಡು, ದೇಶದ ಉದ್ಯೋಗ ಜೀವಿಗಳ ದುರ್ದೆಶೆಯನ್ನುಂಟು ಮಾಡುವದು ಪಾಪವೆಂದು ಇವರು ಬಗೆಯುವದು. ವಿಲಾಸರಹಿತವಾದ "ಸಾದಾ" ಜೀವನದಲ್ಲಿಯು ಮಹಾತ್ಮರು ಲೋಕಕ್ಕೆ ಆದರ್ಶಪ್ರಾಯರಾಗಿರುವರು. ಮಹಾತ್ಮಾ ಗಾಂಧೀಜಿಯವರು ಇಂಗ್ಲಂಡಕ್ಕೆ ಹೋದಾಗ, ಗತಿಸಿದ, ಪಂಚಮಜಾರ್ಜ ಬಾದಶಹರು ಇವರನ್ನು ಕಾಣಲು ಕರೆಸಿಕೊಂಡಾಗ, ಇವರು ಒಂದು

ಖಾದಿಯ ಪಂಚೆಯನ್ನುಟ್ಟುಕೊಂಡು ಒಂದು ಖಾದಿಯ ಪಂಚೆಯನ್ನು ಮೈಮೇಲೆ ಹೊದ್ದುಕೊಂಡು ಅವರು ಅವರ ದರ್ಶನವನ್ನು ತೆಗೆದುಕೊಂಡರಂತೆ. ಮಕ್ಕಳಿರಾ, ನೀವು ಆ ಚಿತ್ರವನ್ನು ಎಂದೂ ಮರೆಯಲಾರಿರಿ. ಮನುಷ್ಯರೆಲ್ಲರೂ ಸಮಾನರೆಂದೂ, ಜನ್ಮದಿಂದ ಅವರಲ್ಲಿ ಉಚ್ಚನೀಚ ಭಾವವು ಸಲ್ಲದೆಂದೂ ಅವರ ದೃಢವಾಗಿ ನಂಬಿರುವರು. ಆದುದರಿಂದ ಅವರ ಶಬ್ದ ಕೋಶದಲ್ಲಿ ಅಸ್ಪೃಶ್ಯ, ಅಂತ್ಯಜ ಮೊದಲಾದ ಶಬ್ದಗಳೇ ಇಲ್ಲ ಅಲ್ಲದೇ ಈಗಿನ ಶಿಕ್ಷಣಕ್ರಮದಿಂದ ಸುಶಿಕ್ಷಿತನೆನಿಸಿಕೊಂಡವನೂ ಕೂಡ ತನ್ನ ಕಾಲುಮೇಲೆ ನಿಂತು ಜೀವಿಸಲು ಸಮರ್ಥನಾಗುವನೆಂಬ ನಿರ್ಧಾರವಿಲ್ಲದಿರುವದರಿಂದ ನಮ್ಮ ಶಿಕ್ಷಣಪದ್ಧತಿಯನ್ನು ಬದಲಿಸಿ ಸುಶಿಕ್ಷಿತರೆಲ್ಲರೂ ಸ್ವಾವಲಂಬಿಗಳಾಗಿ ಜೀವಿಸಬಹುದಾದಂಥ ಹೊಸ ಶಿಕ್ಷಣಯೋಜನೆಯು ಅವಶ್ಯಕವೆಂದು ಅವರು ಪ್ರತಿಪಾದಿಸುವರು. ಮೊನ್ನೆ ಮೊನ್ನೆ ಹೊರಟ "ವರ್ಧಾಶಿಕ್ಷಣ ಯೋಜನೆಯು" ಈ ಸಮಸ್ಯೆಯನ್ನು ಬಿಡಿಸಲು ಹೊರಟ ಪ್ರಥಮ ಪ್ರಯೋಗವಾಗಿದೆ.

ಉ: ಮಹಾತ್ಮಾಜಿಯವರು ಪ್ರಜಾರಾಜ್ಯವಿರಬೇಕೆಂದೂ ದೇಶದ ಬಡತನವೆಂದರೆ ಶರೀರಕ್ಕೆ ರೋಗವೆಂದೂ ಹಾಗೂ ನಿರುದ್ಯೋಗವೇ ಅವರ ಮೂಲಕಾರಣವೆಂದೂ ಹೇಳುತ್ತಿದ್ದರು. ಅದಕ್ಕಾಗಿ ಪ್ರತಿಯೊಬ್ಬನೂ ಉದ್ಯೋಗವನ್ನು ಮಾಡಿಯೇ ತೀರಬೇಕೆಂಬುದನ್ನು ತಾವು ದಿನಾಲು ನೂತು ತೋರಿಸಿದರು, ಮಹಾತ್ಮಾಜಿಯವರು ಪಂಚಮಜಾರ್ಜರ ಭೆಟ್ಟಿಯನ್ನು ಒಂದು ಖಾದಿಯ ಒಕ್ಕಿ[illegible]ನ್ನು ಉಟ್ಟುಕೊಂಡು ತೆಗೆದುಕೊಂಡರು. ಇದರಿಂದ ಅವರು ಸಾದಾಜೀವನದ ಆದರ್ಶ[illegible]ದ್ದರೆಂಬುದು ಗೊತ್ತಾಗುವದು. ಮನುಷ್ಯರೆಲ್ಲರೂ ಸಮಾನರೆಂದೂ ಸುಶಿಕ್ಷಿತನೆನಿಸಿಕೊಂಡವನು ಸ್ವಾವಲಂಬಿಯಾಗಿ ಜೀವಿಸಲು ಸಮರ್ಥನಾಗಬೇಕೆಂದೂ 'ವರ್ಧಾ ಶಿಕ್ಷಣ ಯೋಜನೆ' ಯೆಂಬ ಹೊಸ ಶಿಕ್ಷಣ ಕ್ರಮವನ್ನು ಅಮಲಿನಲ್ಲಿ ತಂದರು.

ಪ್ರ:— ೧.. " ಈಗಿನ ಕಾಲದಲ್ಲಿ ರಂಗಮಂಟಪದಲ್ಲಿ ಬೇಕಾದ ದೃಶ್ಯಗಳನ್ನು ತೋರಿಸಲು ತಕ್ಕ ಪರದೆಗಳು, ಪಟಗಳುಮುಂತಾದ ಅನೇಕ

ಸಲಕರಣೆಗಳಿರುವವು. ಯಾವ ಕಾಲದ ಕಥೆಯೋ, ಅದಕ್ಕೆ ತಕ್ಕ ಉಡುಪುಗಳನ್ನು ಧರಿಸಿಕೊಂಡು ನಟರು ನಟಿಸುವರು. ಶೇಕ್ಸಪೀಯರನ ಕಾಲದಲ್ಲಿ ಅಂತಹದೊಂದಾದರೂ ಇರಲಿಲ್ಲ. ಚಿತ್ರ ಕೆಲಸಮಾಡಿದ ಪರದೆಯೂ ಇಲ್ಲ. ಒಂದು ಕಟ್ಟೆ; ಅದರ ಮೇಲೊಂದು ಚಾವಣ; ಹಿಂಭಾಗದಲ್ಲಿ ಚಂದ್ರಶಾಲೆಯಂತಹ ಉಪ್ಪರಿಗೆ; ಇದೆಷ್ಟೋ ಅಷ್ಟೇ ರಂಗಭೂಮಿ. ಪಕ್ಕಗಳಲ್ಲಿಯೂ ಹಿಂದುಗಡೆಯಲ್ಲಿಯೂ ವಸ್ತ್ರಗಳನ್ನು ಕಟ್ಟುವದೇನೇ ಪಥ್ಯ ನಟರಿಗೆ ಅವರವರ ಉಡುಪೇ ಹೀಗಿದ್ದುದರಿಂದ ಆಟಕ್ಕೆ ಕಳೆಗಟ್ಟಲು ನಟರು ಆಡುವ ಮಾತುಗಳೂ ತೋರುವ ಅಭಿನಯವೂ ಮುಖ್ಯವಾಗಿದ್ದವು. ಅಂತಹ ಸನ್ನಿವೇಶದಲ್ಲಿ ಜನರನ್ನು ಆಕರ್ಷಿಸುವಂತಹ ನಾಟಕಗಳನ್ನು ಬರೆದ ಶೇಕ್ಸಪಿಯರನು ನಿಜವಾಗಿಯೂ ದೊಡ್ಡವನು. ಆತನ ನಾಟಕಗಳಲ್ಲಿ ಶೋಕಪೂರಿತವಾದ ದೃಶ್ಯಗಳೂ, ಹಾಸ್ಯದಿಂದ ತುಂಬಿದ ನೋಟಗಳೂ ಇರುವವಲ್ಲದೆ ಮರೆಯಲಾಗದಂತಹ ಪದ್ಯರಚನೆಯಿದೆ ಸಭ್ಯರೆನಿಸಿದವರೆಲ್ಲರೂ ಸರ್ವಕಾಲಗಳಲ್ಲಿಯೂ, ಸರ್ವದೇಶಗಳಲ್ಲಿಯೂ ಅವುಗಳನ್ನು ಸ್ಮರಿಸುತ್ತಲಿರುವರು. ಆತನ ಕೃತಿಗಳು— “ಒಂದು ಕಾಲದಲ್ಲಿಮಾತ್ರವಲ್ಲ ಸರ್ವಕಾಲಗಳಲ್ಲಿಯೂ ಸರ್ವದೇಶಗಳಲ್ಲಿಯೂ ರಂಜಿಸುವ ನಿಧಿಯಾಗಿವೆ” ಎಂಬ ಮಾತು ಯಥಾರ್ಥ ಆತನ ಕಾಲದವರಿಗೆ ಪ್ರಾಯಶಃ ಆತನು ಅಷ್ಟು ದೊಡ್ಡವನೆಂದು ತೋರಲಿಲ್ಲ. ಕಣ್ಣೆದುರಿಗೋಡಾಡುತ್ತಿದ್ದ ಆಸ್ಥಾನಿಕನೋ ಅಧಿಕಾರಿಯೋ ಈ ಕವಿಗಿಂತಲೂ ಪ್ರಭಾವಶಾಲಿಯೆಂದು ಅವರೆಂದುಕೊಂಡಿರಬಹುದು ಆದರೆ ಶೇಕ್ಸಪಿಯರನು ಲೋಕಕ್ಕೆ ಮಾಡಿದಷ್ಟು ಉಪಕಾರವು ಮತ್ತಾರಿಂದಲೂ ಆಗಿಲ್ಲ. ತನ್ನ ಮನಸ್ಸಿನ ಭಾವನೆಗಳನ್ನೂ ಆಸೆಗಳನ್ನೂ ಪ್ರತಿಯೊಬ್ಬ ಮಾನವನು ತಿಳಿದುಕೊಳ್ಳುವಂತೆ ಮಾಡಿರುವದರಲ್ಲಿ ಶೇಕ್ಸಪಿಯರನ ಉಪಕಾರವು ಅಮೋಘವಾಗಿದೆ. ಆದ್ದರಿಂದ ಆತನನ್ನು ಚಿರಜೀವಿಯಾದ ವಿಶ್ವಕವಿಯೆಂದು ಯಥಾರ್ಥವಾಗಿ ಕರೆಯಬಹುದು.

ಈ ಪರಿಚ್ಛೇದದ ಸಾರಾಂಶವನ್ನು ಬರೆಯಿರಿ. ನಿಮ್ಮ ಸಾರಾಂಶವು ಇದರ ಮೂರನೆಯ ಪಾಲಿನಷ್ಟು ಆಗಬೇಕು; ಮತ್ತು ಅದರಲ್ಲಿ ಮೂಲದೊಳಗಿನ ಮಾತುಗಳೇ ಹೆಚ್ಚಾಗಿರಬೇಕು. (೧೯೫೦)

ಸಂಕ್ಷೇಪ ಬರಹ: — ಈಗಿನ ಕಾಲದಲ್ಲಿ ರಂಗಮಂಟಪ ರಚನೆಗೆ ಅನೇಕ ಸಲಕರಣೆಗಳು ಇರುವವು. ಆಯಾಕಾಲದ ಕಥೆಗೆ ತಕ್ಕಂತೆ ನಟರು ಉಡುಪುಧರಿಸುವರು.

ಶೇಕ್ಸಪಿಯರನ ಕಾಲದಲ್ಲಿ ರಂಗಮಂಟಪವೆಂದರೆ ಕೇವಲ ಒಂದು ಕಟ್ಟೆ. ಅವರವರ ಉಡುಪೇ ನಟರ ಉಡುಪು; ಆಗ ಅಭಿನಯಿಗಳಿಗೆ ಹೆಚ್ಚು ಮಹತ್ವವಿತ್ತು. ಶೇಕ್ಸಪಿಯರನು ಶೋಕ, ಹಾಸ್ಯ ಪದ್ಯರಚನೆ ಇವುಗಳಿಂದ ಕೂಡಿದ ಸರ್ವಕಾಲಗಳಲ್ಲಿಯೂ ಸರ್ವದೇಶಗಳಲ್ಲಿಯೂ ರಂಜನೆಯಾಗುವ ನಾಟಕಗಳನ್ನು ಬರೆದು ಪ್ರಸಿದ್ಧನಾದನು. ಇವನಷ್ಟು ಬೇರೆ ಯಾರೂ ಲೋಕಕ್ಕೆ ಕಲ್ಯಾಣ ಮಾಡಿಲ್ಲ ಇವನಿಗೆ ವಿಶ್ವಕವಿ ಎಂದು ಹೆಸರು ಬಿದ್ದಿದೆ. ಆಗಿನ ಕಾಲದವರಿಗೆ ಇವನು ಅಷ್ಟು ದೊಡ್ಡವನಾಗಿ ತೋರದಿದ್ದರೂ ಆತನನ್ನು ಚಿರಂಜೀವಿಯಾದ ವಿಶ್ವಕವಿಯೆಂದು ಯಥಾರ್ಥವಾಗಿ ಕರೆಯಬಹುದು.

೪. ಸಾರವಿಸ್ತಾರ

ವಿಸ್ತೃತ ಬರೆಹವೆಂದರೆ ಕೊಟ್ಟಸಂಗತಿಯ ಅರ್ಥವು ತಿಳಿಯುವಂತೆ ಅದನ್ನು ಬೆಳೆಸಿ ಬರೆಯುವದು.

ವಿಸ್ತರಿಸಿ ಬರೆಯುವಾಗ ಕೆಳಗಿನ ಮಾತುಗಳನ್ನು ಗಮನಿಸಬೇಕು. ೧) ಕೊಟ್ಟ ಮಾತನ್ನು ಪುನಃ ಪುನಃ ಓದಿ ಅದರ ತಿರುಳನ್ನು ತಿಳಿಯಿರಿ. ೨) ಸಾರವನ್ನು ವಿಸ್ತರಿಸುವದಕ್ಕಾಗಿ ತಕ್ಕ ಉದಾಹರಣೆಗಳನ್ನು ಹುಡುಕಿರಿ. ೩) ವಿಸ್ತಾರದಲ್ಲಿ ಬಿಗುವು ಉಳಿಯದಂತೆ ದ್ವಿರುಕ್ತಿಗಳು ಆಗದಂತೆ ಹೊಂದಿಸಿ ಬರೆಯಬೇಕು. ೪) ಕೊಟ್ಟ ಭಾಗದಲ್ಲಿಯ ಇಡಿನುಡಿ ನಾಣ್ಣುಡಿ ಮುಂತಾದವುಗಳ ವಿವರಣೆಯನ್ನು ಸುಲಭ ಶಬ್ದಗಳಿಂದ ತೋರಿಸಬೇಕು. (೫) ಸಾಂವಿಸ್ತಾರವು ಕನಿಷ್ಟ ಪಕ್ಷಕ್ಕೆ ಸಾರಾಂಶದ ಮೂರು ಮಡಿಯಷ್ಟು ಇರಬೇಕು. ೬) ಕೊನೆಯ ಸಾರವನ್ನೂ ವಿಸ್ತಾರವನ್ನೂ ಹೋಲಿಸಿ ನೋಡಬೇಕು.

— ೧೯೫೦ —

೧. ಅಂಗಯ್ಯ ಹುಣ್ಣಿಗೆ ಕನ್ನಡಿ ಯಾತಕ್ಕೆ ?

೨. ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡ ಬಹುದೇ ?

೩. ಮಂಗನ ಕೈಯಲ್ಲಿ ಮಾಣಿಕ ಕೊಟ್ಟಂತೆ.

೪. ಹೆಸರೇನೋ ಕ್ಷೀರಸಾಗರಭಟ್ಟ; ಆದರೆ ಮನೆಯಲ್ಲಿನೋಡಿದರೆ ಮಜ್ಜಿಗೆಯ ಹನಿಯಿಲ್ಲ.

ಈ ಲೋಕೋಕ್ತಿಗಳೊಳಗಿನ ಯಾವವಾದರೂ ಎರಡನ್ನು ಆಯ್ದು ಕೊಳ್ಳಿರಿ; ಮತ್ತು ವ್ಯವಹಾರದೊಳಗಿನ ನಿಮ್ಮ ಅನುಭವದ ಉದಾಹರಣೆ ಗಳನ್ನು ಕೊಡುತ್ತ ಪ್ರತಿಯೊಂದರ ಗುಟ್ಟನ್ನು ತಿಳಿಸುಹೇಳುವ ಚಿಕ್ಕ ವ್ಯಾಖ್ಯಾವಳಿಯನ್ನು ಬರೆಯಿರಿ. ಒಂದೊಂದು ವಾಖ್ಯಾವಳಿಯಲ್ಲಿ ಸುಮಾರು ಎಂಟೆಂಟು ವಾಕ್ಯಗಳಿರಲಿ.

ಉತ್ತರಃ— (೧) ಹುಣ್ಣು ಅಂಗೈಯಲ್ಲಿ ಇದ್ದರೆ ಅದನ್ನು ನೋಡ ಲಿಕ್ಕೆ ಕನ್ನಡಿಯ ಅವಶ್ಯಕತೆಯಿಲ್ಲ. ಕನ್ನಡಿಯನ್ನು ಕಾಣದವಸ್ತುಗಳನ್ನು ನೋಡಲು ಉಪಯೋಗಿಸುವರು. ಅಂಗೈಹುಣ್ಣು ಕಣ್ಣಿಗೆ ಕಂಡೇ ಕಾಣು ವದು. ಅದರಂತೆ ಅನುಭವದ ಮಾತುಗಳಿಗೆ ಕಣ್ಣಿನಿಂದ ನೋಡಿ ಮನ ಗಂಡ ಮಾತುಗಳಿಗೆ ಬೇರೆ ಉದಾಹರಣೆಗಳ ಆವಶ್ಯಕತೆಯೇ ಉಳಿಯುವ ದಿಲ್ಲ.

(೨) ಮಳೆಯು ಬೀಳಲು ಭೂಮಿಯಲ್ಲಿ ಹಸಿಯಾಗಿ ನೀರು ಹರಿ ಯುವದು. ಆಗ್ಗೆ ಎಲ್ಲ ಪ್ರಾಣಿಗಳಿಗೂ ಮನುಷ್ಯನಿಗೂ ಸಾಕಷ್ಟು ನೀರು ದೊರೆಯುವದು. ಮಳೆಯಾಗಲು ಹೊಳೆ ಹಳ್ಳಗಳು ತುಂಬಿ ಹರಿಯುವವು. ಮಳೆಯ ನೀರಿನಿಂದ ಸಕಲರಿಗೂ ತೃಪ್ತಿಯಾಗುವದು. ಆದರೆ ಮಳೆಯ ನೀರನ್ನೂ ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದರೆ ನೀರು ಬೊಗಸೆ ತುಂಬ ಕೂಡ ದೊರೆಯುವದಿಲ್ಲ. ಅದರಂತೆ ದೇವರು ಒಲಿದು ಕೊಟ್ಟಾಗ ಬೇಕಾ ದಷ್ಟು ತಕ್ಕೊಳ್ಳುವದು ಒಳಿತು. ದೇವರು ಒಲಿಯದಿದ್ದಾಗ ಮಂಜಿನ ನೀರಿಗೆ ಕೈಯೊಡ್ಡಿ, ವ್ಯರ್ಥ ಶ್ರಮ ಬಡುವಂತೆ ಬಾಯಿಬಿಡಬೇಕಾಗುತ್ತದೆ.

(೩) ಮಾಣಿಕವು ಬಹು ಬೆಲೆಯುಳ್ಳ ವಸ್ತು. ಆದರೆ ಅದನ್ನು ಅರಿತವರಿಗೇ ಅದರ ಬೆಲೆಯು ಮಹತ್ವವು ಗೊತ್ತಾಗುವದು. ಮಂಗನ ಕೈಯಲ್ಲಿ ಮಾಣಿಕವನ್ನು ಕೊಟ್ಟರೆ ಮಂಗವು ಮಾಣಿಕವನ್ನು ಸವಿಯಾದ ಹಣ್ಣು ಎಂದು ಕಡಿದು ನೋಡುವದು ಅದಕ್ಕೆ ಅದರ ಬೆಲೆಯು ಗೊತ್ತಾಗುವದಿಲ್ಲ. ಶ್ರೀರಾಮಚಂದ್ರನು ಹನುಮಂತನ ಸೇವೆಗೆ ಸಂತುಷ್ಟನಾಗಿ ಅವನಿಗೆ ಒಂದು ಬೆಲೆಯುಳ್ಳ ಹಾರವನ್ನು ಕೊಟ್ಟನು. ಆದರೆ ಹನುಮನು ಅದರ ಪ್ರತಿಯೊಂದು ಮುತ್ತನ್ನು ಕಡಿದು ನೋಡುತ್ತ ಕೆಳಗೆ ಚೆಲ್ಲಹತ್ತಿದನು. ಹೀಗೆ ಮಂಗನ ಕೈಯಲ್ಲಿ ಕೊಟ್ಟ ಮಾಣಿಕವು ವ್ಯರ್ಥವಾದದ್ದು.

(೪) ಚೆಂದವಾದ ಹೆಸರಿದ್ದರೂ ಅದರತಕ್ಕ ಗುಣಗಳಿಲ್ಲದಿದ್ದರೆ ಅದು ನಿರರ್ಥಕವಾದದ್ದಾಗುವದು. ಹಾಲಿನ ಸಮುದ್ರವೇ ಎಂಬ ಹೆಸರಿದ್ದರೂ ಒಂದು ಹನಿ ಮಜ್ಜಿಗೆ ಇಲ್ಲದಂಥವನ ಹೆಸರಿನ ಸಾರ್ಥಕತೆಯೇನು? ಕಾರಣ ಕೇವಲ ಹೆಸರಿಗೆ ಮಹತ್ವಕೊಡದೆ ಗುಣಕ್ಕೆ ಮಹತ್ವ ಕೊಡಬೇಕಾಗುತ್ತದೆ.

— ೧೯೪೯ —

೧. ಆಕಳು ಕಪ್ಪಿದರೆ ಹಾಲು ಕಪ್ಪೆ?

ಆಕಳು ಕಪ್ಪು ಇರುತ್ತದೆ. ಆದರೆ ಆಕಳ ಹಾಲು ಯಾವಾಗಲೂ ಸುಣ್ಣದಂತೆ ಬೆಳ್ಳಗೆ ಇರುತ್ತದೆ. ಕಾರಣ ಆಕಳ ಬಣ್ಣಕ್ಕೆ ಮೋಸ ಹೋಗದೆ ಅದರಲ್ಲಿರುವ ಹಾಲಿನಂತೆ ಬಣ್ಣದ ಗುಣ ಪರೀಕ್ಷೆ ಮಾಡಬೇಕು.

೨. ಮನೆಯ ದೀಪವೆಂದು ಮುದ್ದು ಕೊಡಬಹುದೇ?

ಯಾವ ವಸ್ತುವಾದರೂ ಅದರ ಗುಣಾವಗುಣಗಳನ್ನು ಅನುಲಕ್ಷಿಸಿ ಅದರಂತೆ ಅದನ್ನು ಉಪಯೋಗಿಸಬೇಕು. ದೀಪವು ಮನೆಯದು, ತನ್ನದು ತನಗೆ ತೀರ ಬೇಕಾದುದು ಎಂದು ತಿಳಿದು ಅದನ್ನು ಮುಸುಕಿನಲ್ಲಿ ಇಟ್ಟುಕೊಂಡರೆ ಅದು ಮೈಸುಡುವದು. ಅದಕ್ಕೆ ಮುದ್ದು ಕೊಟ್ಟರೆ ಬಾಯಿ

ಸುಡುವದು. ಕಾರಣ ವಸ್ತುಗಳ ಗುಣಧರ್ಮವನ್ನರಿತು ಅವುಗಳನ್ನು ಅದರಂತೆ ಉಪಯೋಗಿಸುವದು ಉಚಿತವಾದುದು.

೩. ಬೆಕ್ಕಿನ ಕನಸಿನಲ್ಲಿ ಇಲಿ

ಬೆಕ್ಕು ಯಾವಾಗಲೂ ತನ್ನ ಆಹಾರವಾದ ಇಲಿಯನ್ನು ಹುಡುಕುವದರಲ್ಲಿಯೇ ಇರುತ್ತದೆ. ಅದರ ಕನಸಿನಲ್ಲಿ ಇಲಿಯು ಹೊರತಾಗಿ ಬೇರೆ ವಸ್ತುಗಳು ಎಂದೂ ಬರುವದಿಲ್ಲ.

೪. ದುಡಿತವು ದುಡ್ಡಿನ ತಾಯಿ

ಮನುಷ್ಯನು ಕುಳಿತು ಉಂಡರೆ ಕುಡಿಕೆ ಹೊನ್ನು ಇದ್ದರೂ ಸಾಲುವದಿಲ್ಲ. ತೀರಿ ಹೋಗುವದು. ಅದರಂತೆ ದುಡಿಯುವ ಚಟವಿದ್ದರೆ ಅವನಿಗೆ ಧನ ಪ್ರಾಪ್ತಿಯಾಗುವದು. ದುಡಿಯದೆ ದುಡ್ಡು ದೊರೆಯುಲಾರದು. ಕಾರಣ ದುಡಿತವು ದುಡ್ಡಿಗೆ ಮೂಲ (ತಾಯಿ) ಎಂದು ಹೇಳಬಹುದು.

೫. ತಾಳಿದವನು ಬಾಳುವನು

ಮನುಷ್ಯನಿಗೆ ತನ್ನ ಮನಸ್ಸಿನ ವಿರುದ್ಧ ಪ್ರಸಂಗಗಳು ಬರುತ್ತವೆ ಆಗ ಅವನು ಶಾಂತರೀತಿಯಿಂದ ತಾಳಿಕೊಳ್ಳಲಿಕ್ಕೆ ಬೇಕು. ಪ್ರತಿಕೂಲ ಪ್ರಸಂಗದಲ್ಲಿ ಅವನು ತಾಳಿಕೊಳ್ಳದಿದ್ದರೆ ಹಾನಿಗೆ ಗುರಿಯಾಗುವನು. ಕಾರಣ ಆಗ ತಾಳಿದವನು ಈಗ ಬಾಳುವನು.

೬. ಮುತ್ತಿಗಿಂತ ಹೊತ್ತು ಉತ್ತಮ

ಮುತ್ತು ಹೋದರೆ ಮತ್ತೆ ಬರುವದು. ಆದರೆ ಹೊತ್ತು ಹೋದರೆ ತಿರುಗಿ ಬರುವದಿಲ್ಲ. ಒಮ್ಮೆ ಕಳಕೊಂಡ ವೇಳೆಯು ತಿರುಗಿ ಏನು ಕೊಟ್ಟರೂ ಬಾರದು. ಆದಕಾರಣ ಮುತ್ತಿಗಿಂತ ಹೊತ್ತು ಉತ್ತಮವಾದುದು.

— ಗಳಿಲ —

೧. ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು

ದುಡಿಯದೆ ದುಃಖಪಡದೆ ಇದ್ದದ್ದನ್ನು ಸವಿಸುತ್ತ ಹೋದರೆ ಎಷ್ಟು ದುಡ್ಡಿದ್ದರೂ ತೀರಿ ಹೋಗುವದು. ಹೊಸದಾಗಿ ಗಳಿಸದೆ ಹಳೆಯುದನ್ನು ತೀರಿಸುತ್ತ ಹೋದರೆ ಅದು ಎಷ್ಟು ದಿವಸ ಸಾಕಾದೀತು? ಹಳೆಯುದಕ್ಕೆ ಹೊಸದಾಗಿ ಕೂಡಿಸುತ್ತ ಹೋದರೆ ಅದು ತುಸುವಾದರೂ ಉಳಿದೀತು.

೨ ಸಂಕಟ ಬಂದಾಗ ವೆಂಕಟರಮಣ

ಮನುಷ್ಯನು ಸುಖಸ್ಥಿತಿಯಲ್ಲಿ ಇದ್ದಾಗ ಯಾರ ಹಂಗೂ ಹಿಡಿಯುವದಿಲ್ಲ. ಅದೇ ದುಃಖವು ಪ್ರಾಪ್ತವಾಗಲು ದೇವರನ್ನು ನೆನೆಸುವನು. ಮನುಷ್ಯನಿಗೆ ಸುಖವಿದ್ದರೆ ಅವನು ಎಲ್ಲವನ್ನು ಮರೆಯುತ್ತಾನೆ. ಹಾಗೂ ಸಂಕಟ ಬಂದರೂ ಕೂಡ ಬೇಗನೆ, ದೇವರನ್ನು ಅತನು ನೆನೆಯುವದಿಲ್ಲ. ಇನ್ನು ಮೇಲೆ ತಮ್ಮ ಸಂಕಟವನ್ನು ಯಾರೂ ಪರಿಹರಿಸುವದಿಲ್ಲವೆಂದು ಗೊತ್ತಾದ ಮೇಲೆ ಪರಮಾತ್ಮನನ್ನು ನೆನೆಯುವದನ್ನು ದ್ರೌಪದಿಯು ದುಶ್ಯಾಸನನು ಸೀರೆಯನ್ನು ಎಳೆಯುವಾಗ ಮೊದಲು ಪಾಂಡವರನ್ನು ಬೇಡಿಕೊಂಡು ಅವರು ರಕ್ಷಿಸಲಾರರೆಂದು ತಿಳಿದಮೇಲೆ ಕೃಷ್ಣನನ್ನು ಧ್ಯಾನಿಸಿದಳು.

೩. ಕಿವುಡನ ಮುಂದೆ ಕಿನ್ನರಿ ಬಾರಿಸು

ಏನೂ ಸಂಸ್ಕೃತ ತಿಳಿಯದವನ ಮುಂದೆ ನಾವು ಕಾಳಿದಾಸನ ಬಗ್ಗೆ ಮಾತನಾಡತೊಡಗಿದರೆ ಅವನಿಗೆ ಏನು ತಿಳಿಯಬೇಕು? ಆದ್ದರಿಂದ ನಾವು ಮಾತನಾಡಿದ್ದೆಲ್ಲವೂ ಬೋರ್ಗಲ್ಲ ಮೇಲೆ ಮಳೆಗರೆದಂತಾಗುವದು. ಗಾಯನವನ್ನು ಅರಿಯದವನ ಮುಂದೆ ಇದು ಇಂಥಿಂಥ ರಾಗ ಎಂದು ಹಾಡಿದರೆ ಅವನಿಗೆ ಏನು ಗೊತ್ತಾಗುವದು? ಹಾಗೆಯೇ ಕಿವುಡನಿಗೆ ಕಿನ್ನರಿ ಬಾರಿಸಿದ್ದು ತಿಳಿಯುವದಿಲ್ಲ.

೪. ಗುಡ್ಡಕ್ಕೆ ಕಲ್ಲು ಹೊರು

ಸಾಹಸಗಳಲ್ಲಿ ಬೇರೆ ಬೇರೆ ಪ್ರಕಾರಗಳುಂಟು. ಗಿಡದ ಮೇಲಿಂದ ಜಿಗಿಸಿದರೆ ಅದು ಏನು ಸಾಹಸ? ಅದರಿಂದೇನು ಪ್ರಯೋಜನ?

ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸದೆ ಇರುವದು ಯೋಗ್ಯವು [illegible] ಸಮುದ್ರದಲ್ಲಿಯ ನೀರು ತೆಗೆದು ಹಾಕಿ ಭೂಮಿಯನ್ನು [illegible]ವೆನೆಂಬುದು ಹುಚ್ಚು ಸಾಹಸ ಇದು ಗುಡ್ಡಕ್ಕೆ ಕಲ್ಲು [illegible] ಸರಿ.

೫. ಮಳೆಯ ನೀರಿಗೆ ಬಿಟ್ಟು ಮಂಜಿನ ನೀರಿಗೆ ಕೈ ಒಡ್ಡು

ಸಮೀಪದಲ್ಲಿ ಇದ್ದುದನ್ನು ಬಿಟ್ಟು ದೂರದಲ್ಲಿರುವದನ್ನು ಪಡೆಯಲು ಆಶೆಮಾಡುವದು ಮೂರ್ಖತನದ ಕೆಲಸ. ಸಮುದ್ರದಂಡೆಯಲ್ಲಿ ಬೇಕಾದಷ್ಟು ಉಪ್ಪು ಸಿಗುವದನ್ನು ಬಿಟ್ಟು ಸಾಂಬರಿನಿಂದಾಗಲೀ ಬೇರೆ ದೇಶದಿಂದಾಗಲೀ ಉಪ್ಪು ನಮಗೆ ಬರಲಿ ಎಂದು [illegible] ಕೆಲಸ. ನಮ್ಮಲ್ಲಿಯೇ ಬೇಕಾದಷ್ಟು ಚಹ ಬೆಳೆಯುತ್ತಿರುವದನ್ನು ಬಿಟ್ಟು, ಎರಡನೇ ದೇಶದ ಚಹಕ್ಕೆ ಮೋರೆ ತಿರುವಿದರೆ, ಅದರಿಂದೇನು ಪ್ರಯೋಜನ? ಮತ್ತು ಅದರಿಂದೇನು ನಮಗೆ ಲಾಭ?

೧೯೪೭ ಅಕ್ಟೋಬರ

೧. ದೂರದಿಂದ ಗುಡ್ಡ ಬೆಟ್ಟಗಳು ಬಲು ಚಂದ

ಗುಡ್ಡವು ದೂರದಿಂದ ಬಹಳ ಚಂದ ಕಾಣುತ್ತದೆ. ಆಗ ಅದರಲ್ಲಿಯ ಕಲ್ಲು ಮುಳ್ಳುಗಳು, ದರೆ ಕಂದರಗಳು, ಕ್ರೂರ ಪಶುಗಳು ಇವಾವೂ ಕಾಣುವದಿಲ್ಲ. ಇದರಂತೆ ಯಾವನೊಬ್ಬನ ದೋಷಗಳು ನಮಗೆ ಒಮ್ಮೆಲೆ ಕಾಣುವದಿಲ್ಲ. ಆದರೆ ಆತನ ಸಮೀಪ ವರ್ತಿಗಳಾಗಿ ಅತಿಸ್ನೇಹದಿಂದ ಇದ್ದರೆ ಅವನ ಹುಳುಕು ಹೊರಗೆ ಬರುವವು. ಇದರಂತೆ ಅವರು ಕಾಣಲಿಕ್ಕೆ ನಮಗೆ ಸಂಭಾವಿತರಾಗಿ ಕಂಡರೂ ಅವರ ಹೃದಯದಲ್ಲಿ ಏನಿದೆಯೆಂಬುದು ಗೊತ್ತಾಗುವದಿಲ್ಲ.

೨. ಹತ್ತ್ರ ಎಪ್ಪೆಗೆ [illegible] ತುಪ್ಪ

ಯಾವನೊಬ್ಬನು [illegible] ತೋರುವನು. ಅವನ ಮಹತ್ವವು ನಮಗೆ ಗೊತ್ತಾಗುವದಿಲ್ಲ. [illegible] ಮನುಷ್ಯ ನಮ್ಮನ್ನು ಅಗಲಿ ಹೋಗಲು ನಮಗೆ [illegible] ಒಂದೊಂದೇ ಸದ್ಗುಣ

ಗಳು ನೆನಪಿಗೆ ಬರುತ್ತವೆ. ಇದ್ದಾಗ ಅವನನ್ನು ಕರೆದು ಒಂದು ತುತ್ತು ಕೂಳು ಸಹ ಹಾಕದೆ ಸತ್ತ ಬಳಿಕ ಬಹಳ ದಿವಸ ವಿಸರಲೆ ತುಪ್ಪ ಸಕ್ಕರೆ ತಿನ್ನುವದು ಎಂಥ ವಿಪರ್ಯಾಸವೋ?

೩. ಅನ್ಯ ಸತ್ತರೆ ಜಗದ್ವ್ಯಾಪಾರ ನಿಲ್ಲುವದೇ?

ಈ ಜಗತ್ತು ಯಾರಿಂದಲೂ ನಡೆದು ನಿಲ್ಲುವದಿಲ್ಲ. ಕೆಲವು ಅಹಂಭಾವದ ಜನರು ತಾವಿಲ್ಲದೇ ಕಡ್ಡಿ ಕೂಡ ಅಲುಗಾಡುವದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ತಾವೇ ಸರ್ವ ಕಾರ್ಯಕರ್ತರು; ತಾವಿಲ್ಲದೆ ಜಗತ್ತು ಮುಳುಗಿ ಹೋಗುವದೆಂದು ತಿಳಿಯುವವರೂ ಉಂಟು. ಆದರೆ ಈ ಜಗತ್ತಿನಲ್ಲಿ ಜನರು ಹುಟ್ಟುತ್ತಾರೆ; ಸಾಯುತ್ತಾರೆ. ಆದು ನಡೆದೇ ಇದೆ. ನದಿಗಳು ಹರಿಯುತ್ತಲೇ ಇರುತ್ತವೆ.

೪. ಎಲ್ಲ ಬಲ್ಲವನ್ನ ಕೇಳಿದರೆ ಕಲ್ಲವನ್ನ

ಕೆಲವರು ತಾವು ಪಂಡಿತರು, ಸರ್ವಜ್ಞರು ಎಂದು ಭಾವಿಸುತ್ತಾರೆ. ಆದರೆ ಪ್ರಸಂಗಬಿದ್ದಾಗ ಅವರ ದಡ್ಡತನ ಸ್ಮೃತಿಗೆ ಬರುತ್ತದೆ. ಅವರು ಶುದ್ಧ ಶತಮೂರ್ಖರೆಂಬುದು ಆಗ ಗೊತ್ತಾಗುವದು. ಕಾರಣ ತಾವು ತಜ್ಞರೆಂದು ತಲೆಮೊರೆಸಬಾರದು.

೫. ಎತ್ತು ಎರೆಗೆ ಎಳೆದರೆ ಕೋಣ ಕೆರೆಗೆ ಎಳೆಯಿತು

ಸಹಕಾರದಿಂದ ಕಾರ್ಯಸಿದ್ಧಿಯಾಗುವದು. ಇಬ್ಬರಲ್ಲಿ ಒಬ್ಬರು ಮಾಡಿದ್ದನ್ನು ಇನ್ನೊಬ್ಬರು ಕೆಡಿಸಿದರೆ ಕಾರ್ಯಸಿದ್ಧಿಯಂತೂ ಆಗುವದಿಲ್ಲ. ತಿರುಗಿ ಇಬ್ಬರ ನಾಶವಾಗುವದು ಖಂಡಿತ. ನೇಗಿಲಕ್ಕೆ ಎತ್ತು ಕೋಣಗಳನ್ನು ಹೂಡಿದರೆ ಏನಾದೀತು? ಎತ್ತು ಒಂದು ಕಡೆಗೆ ಕೋಣ ಇನ್ನೊಂದೆಡೆಗೆ ಎಳೆಯುತ್ತಿದ್ದರೆ ಉಳುವುದಂತೂ ಆಗುವದೇ ಇಲ್ಲ. ಆದರೆ ಅವು ತಮ್ಮ ನಾಶವನ್ನೇ ಮಾಡಿಕೊಳ್ಳುತ್ತವೆ.

೬. [illegible]ಡುವಾಗ [illegible]ಂತೆ

ಯೋಗ್ಯತೆಯುಳ್ಳವರ ದರ್ಜೆಗೆ ದೊರಕಬೇಕಾದ ಸ್ಥಾನಮಾನಗಳು (ಸಂಬಳ ಇತ್ಯಾದಿ) ದೊರೆತಿಲ್ಲವೆಂದು ಕೊರಗುತ್ತಿರುವಾಗ ಯೋಗ್ಯತೆ

ಇಲ್ಲದವರು (ಕಡಿಮೆ ದರ್ಜೆಯ ನೌಕರರು) ಹೆಚ್ಚಿನದನ್ನೂ ಬಯಸಿದರೆ (ತಮ್ಮ ಯೋಗ್ಯತೆಗೆ ಮೀರಿದ್ದನ್ನು ಬಯಸಿದರೆ) ಅದು ಅವರಿಗೆ ಹೇಗೆ ದೊರಕಬೇಕು ? ಕಾರಣ ಮನುಷ್ಯನು ಅಲ್ಪಸಂತೋಷಿಯಾಗಿರಬೇಕು.

೭ ಮಾತು ಬಲ್ಲವ ಮಾಣಿಕ ತಂದ

ಎಲ್ಲರಿಗೂ ಮೆಚ್ಚಿಗೆಯಾಗುವ ಮಾತು ಆಡುವಂತಹನು ಅಥವಾ ಚನ್ನಾದ ಮಾತುಗಾರನು ಎಂತಹ ಸಂಕಟ ಪ್ರಸಂಗದೊಳಗಿಂದಲೂ ಪಾರಾಗುವನು. ಅವನು ತನ್ನ ಮಾತಿನಿಂದ ಜನಪ್ರಿಯನಾಗುವನು. ತನ್ನ ಕಾರ್ಯದಲ್ಲಿ ಯಶಸ್ಸು ಸಂಪಾದಿಸುವನು. ಮಾತು ಬಲ್ಲವನು ಮನೆಗೆ ಧನ–ಕನಕಾದಿಗಳನ್ನು ತರುವನು. ಮಾತನಾಡಲು ಬಾರದವನು ಮನೆಗೆ ಜಗಳ ತರುವನು.

೮. ಹೆತ್ತವರಿಗೆ ಹೆಗ್ಗಣ ಮುದ್ದು

ತಮ್ಮ ಮಕ್ಕಳು ಎಷ್ಟು ಕುರೂಪಿಗಳಾಗಿದ್ದರೂ ತಮಗೆ ಅವು ಮುದ್ದಾಗಿಯೇ ತೋರುವವು. ಕಾಗೆಯು ತನ್ನ ಮರಿಗಳಿಗೆ ಅದು ಕೋಗಿಲೆಯೆಂದೇ ಕರೆಯುತ್ತದೆಯಂತೆ. ತಮ್ಮದು ತಮಗೆ ಸುಂದರವಾಗಿಯೇ ತೋರುತ್ತದೆ.

೧೯೪೭ ಎಪ್ರಿಲ್

೧. ಕಾಸಿದ್ದರೆ ಕೈಲಾಸ

ಈ ಜಗತ್ತಿನಲ್ಲಿ ದುಡ್ಡಿನಿಂದಲೇ ಎಲ್ಲ ವ್ಯವಹಾರಗಳು ನಡೆಯುವವು. ದುಡ್ಡಿದ್ದರೆ ಆಪ್ತೇಷ್ಟರು ಮಾತನಾಡಿಸುವರು. ಶ್ರೀಮಂತರನ್ನು ಎಲ್ಲರೂ ಮಾತಾಡಿಸುವರು. ದುಡ್ಡಿದ್ದವನಿಗೆ ಎಲ್ಲಿ ಹೋದರೂ ಮಾನ ಮರ್ಯಾದೆ ದೊರೆಯುತ್ತವೆ ಬಡವನನ್ನು ಯಾರೂ ಮಾತನಾಡಿಸುವದಿಲ್ಲ. ಕಾಸಿದ್ದರೆ ಕೈಲಾಸವನ್ನೇ ತಂದು ಇಡಬಹುದು. ಅಂದರೆ ಎಲ್ಲ ಸೌಕರ್ಯಗಳು ದೊರೆಯುತ್ತವೆ

೨. ಗೇಣುದ್ದ ತಪ್ಪಿದರೆ ಮಾರುದ್ದ ತಪ್ಪುವದು

ಸಣ್ಣ ಸಣ್ಣ ಅಪರಾಧಗಳನ್ನು ಮಾಡಿದಾಗ್ಗೆ ಆ ಕೂಡಲೆ ಎಚ್ಚರಿಕೆ ಕೊಡದೆ ಹೋದರೆ ಅವನೇ ಮುಂದೆ ದೊಡ್ಡ ಅಪರಾಧ ಮಾಡುವನು.

ಮಕ್ಕಳು ಚಿಕ್ಕ ಪುಟ್ಟ ಕಳವು ಮಾಡಿದಾಗ ಪಾಲಕರು ಅವರನ್ನು ತಿದ್ದದೆ ಬಿಟ್ಟರೆ ಅವರೇ ಮುಂದೆ ದೊಡ್ಡ ದೊಡ್ಡ ಕಳವು ಮಾಡಲು ಸಿದ್ಧರಾಗುತ್ತಾರೆ. ಈಗ ಕ್ಷುಲ್ಲಕವೆಂದು ಕಂಡರೂ ಅವೇ ಮುಂದೆ ದೊಡ್ಡ ದೊಡ್ಡ ಅನರ್ಥಕ್ಕೆ ಕಾರಣವಾಗುತ್ತವೆ. ಕಡ್ಡಿಗೆ ಬೆಂಕಿ ಹತ್ತಿದರೂ ಸಾಕು. ಅದು ಗುಡ್ಡವನ್ನೇ ಸುಡುತ್ತದೆ.

೩. ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ

ಯಾವಾಗಲೂ ಪ್ರತಿಯೊಂದು ಕಾರ್ಯಕ್ಕೆ ಪರರನ್ನು ಅವಲಂಬಿಸಬಾರದು. ಪರರಿಂದ ಅವಶ್ಯವಿದ್ದಷ್ಟೇ ಸಹಾಯ ದೊರಕಿಸಬೇಕು. ಅತಿಯಾಗಿ ಸೇವೆ ಮಾಡಿಸಿಕೊಳ್ಳುವವನೂ ಪರಾವಲಂಬಿಯಾಗುತ್ತಾನೆ. ಅಂಬಲಿ ಕುಡಿಯುವವನಿಗೆ ನಿಜವಾಗಿ ಅವನ ಮೀಸೆ ತಿಕ್ಕಲು ಇನ್ನೊಬ್ಬನ ಅವಶ್ಯಕತೆ ಏನೂ ಇಲ್ಲ.

೪. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೇದು

ನಾವು ಜನರಕೂಡ ಪ್ರೇಮದಿಂದ ಮಾತುಗಳನ್ನು ಆಡುತ್ತಿದ್ದರೆ ಜನರೂ ನಮ್ಮಕೂಡ ಪ್ರೇಮದಿಂದ ಆಡುವರು. ನಾವು ಬೇರೆಯವರಿಗೆ ಬಿರುಸು ನುಡಿಗಳನ್ನು ಆಡಿದರೆ ಅವರೂ ನಮಗೆ ಪ್ರತಿಯಾಗಿ ಬಿರುಸು ಶಬ್ದಗಳನ್ನು ಆಡುವರು. ಧ್ವನಿಗೆ ಪ್ರತಿಧ್ವನಿಯು ಆಗುವದು. ಕಾರಣ ನಾವು ನಾಲಿಗೆಯಿಂದ ಚಲೋ ಶಬ್ದಗಳನ್ನೇ ಆಡುತ್ತಿದ್ದರೆ ನಾಡಿನ ಜನರಿಗೆಲ್ಲ ಪ್ರಿಯರಾಗುವೆವು.

೫. ಹಾಸಿಗೆ ಇದ್ದಷ್ಟು ಕಾಲು ಚಾಚು

ನಾವು ಮಲಗುವ ಹಾಸಿಗೆಯಲ್ಲಿ ಹಾಸಿಗೆ ಎಷ್ಟು ಇರುವದೋ ಅಷ್ಟೇ ಕಾಲು ಚಾಚಬೇಕು. ಹೆಚ್ಚು ಚಾಚಿದರೆ ಕಾಲು ಹೊರಗೆ ಬಂದು ನಮಗೆ ಚಳಿ ಹತ್ತುವದು. ಅದರಂತೆ ನಮ್ಮ ಆದಾಯವೆಷ್ಟು ಇರುತ್ತದೆಯೋ ಅಷ್ಟೇ ಖರ್ಚು ಮಾಡಬೇಕು. ಉತ್ಪನ್ನಕ್ಕಿಂತ ಹೆಚ್ಚು ಖರ್ಚು ಮಾಡಿದರೆ ಸಾಲದ ಶೂಲದಲ್ಲಿ ಬಿದ್ದು ತೊಳಲಾಡುವನು. ಆದುದರಿಂದ ಉತ್ಪನ್ನದಷ್ಟೇ ಖರ್ಚು ಮಾಡಿ ಸುಖಿಯಾಗುವದು ಒಳಿತು

೩. ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು

ಅರಸು ಧರ್ಮದಿಂದ ನಡೆದರೆ ದೇಶದಲ್ಲಿ ಶಾಂತತೆ ನೆಲಗೊಳ್ಳುವದು ಅನ್ಯಾಯಗಳು ಆಗುವದಿಲ್ಲ. ಅವನೇ ಅನ್ಯಾಯದಿಂದ ನಡೆಯಹತ್ತಿದರೆ ಪ್ರಜರು ಇನ್ನಷ್ಟು ಅಧರ್ಮದಿಂದ ನಡೆಯಲು ಆರಂಭಿಸುವರು. ಹೊರಸಿಗೆ ಕಾಲುಗಳು ಗಟ್ಟಿಯಾಗಿದ್ದರೆ ಮಾತ್ರ ಅದರ ಮೇಲೆ ಕೂಡಲಿಕ್ಕೆ ಬರುತ್ತದೆ. ಆದರೆ ಅದರ ಒಂದು ಕಾಲು ಮುರಿದರೂ ಅದು ಕುಳಿತವನನ್ನು ಕೆಡಹುತ್ತದೆ. ಅದರಂತೆ ಧರ್ಮವಿಲ್ಲದ ಅರಸನ ಸ್ಥಿತಿಯು ಆಗುತ್ತದೆ.

೪. ಹರಿಯೋತನಕ ಎಳೆಯಬಾರದು ಮುರಿಯೋತನಕ ಜಗ್ಗಬಾರದು

ಯಾವುದರಲ್ಲಿಯೂ ಅತಿ ಮಾಡಬಾರದು. ಹಗ್ಗವನ್ನು ಹರಿಯುವವರೆಗೆ ಜಗ್ಗಿದರೆ ಅದು ಎರಡು ತುಂಡು ಆಗುವದು. ಹಾಗೂ ಮುಂಚಿನ ಗಟ್ಟಿತನವು ಅದಕ್ಕೆ ಬರುವದಿಲ್ಲ. ಸಾಧಾರಣ ಮನುಷ್ಯನನ್ನಾದರೂ ಅತಿಯಾಗಿ ಪೀಡಿಸಿದರೆ ಅವನ ಸಹನೆ ಮೀರುವದು. ಅವನು ಎಷ್ಟು ಸಂಭಾವಿತನಾದರೂ ವಿರುದ್ಧ ನಿಲ್ಲುವನು.

— ೧೮೪೬ —

೧. ಹೊಟ್ಟೆ ತುಂಬಿದಮೇಲೆ ಹುಗ್ಗಿ ಮುಳ್ಳು ಮುಳ್ಳು

ಹಸಿವೆಯಿದ್ದಾಗ ಊಟ ರುಚಿ ಹತ್ತುವದು. ಆಗ ಚಟ್ನಿ ಹಾಗೂ ರೊಟ್ಟಿ ಬಹಳ ರುಚಿ ಅನಿಸುವದು. ಅದೇ ಹೊಟ್ಟೆ ತುಂಬಿದಾಗ ಪಂಚಭಕ್ಷ ಪರಮಾನ್ನದ ಊಟವಾದರೂ ಅದು ರುಚಿ ಅನ್ನಿಸುವದಿಲ್ಲ. ರುಚಿಗೆ ಹಸಿವೆಯೇ ಕಾರಣವು.

೨. ಅಟ್ಟಮೇಲೆ ಒಲೆ ಉರಿಯಿತು, ಕೊಟ್ಟಮೇಲೆ ಅಳಿಯ ಉಗಿದನು

ಅಡಿಗೆ ಮಾಡುವಾಗ ಒಲೆ ಉರಿದರೆ ಅದರ ಉಪಯೋಗವಾದಂತಾಗುವದು ಆದರೆ ಅಡಿಗೆಯಾದ ಮೇಲೆ ಒಲೆ ಉರಿದರೆ ಅದು ನಿರರ್ಥಕ.

ಅದರಂತೆ ಮದುವೆಯಾಗುವತನಕ ಅಳಿಯ ಹೇಗಾದರೂ ಲಗ್ನವಾದರೆ ಸಾಕೆಂದು ಸುಮ್ಮನೆ ಕೂಡುವದು. ಆದ ಲಗ್ನ ಸುಳ್ಳು ಅನ್ನಲು ಬರುವದಿಲ್ಲ. ಕಾರಣ ಹೆಣ್ಣು ಕೊಟ್ಟ ಮೇಲೆ ಅಳಿಯ ಕೋಪಿಸಿ ಕೂಡುವದುಂಟು.

೩. ಹುಣಸೆ ಮುಪ್ಪಾದರೂ ಹುಳಿ ಮುಪ್ಪೇ

ಹುಣಸೇಹಣ್ಣನ್ನು ಎಷ್ಟೋ ವರ್ಷಗಳವರೆಗೆ ಬಚ್ಚಿಡಲು ಅದು ತನ್ನ ಬಣ್ಣದಲ್ಲಿ ಮಾತ್ರ ಬದಲಾಗಬಹುದು. ಆದರೆ ತನ್ನ ಗುಣವನ್ನು ಮಾತ್ರ ಎಂದೂ ಬಿಡುವದಿಲ್ಲ.

೪. ಊರಿಗೆ ಅರಸನಾದರೂ ತಾಯಿಗೆ ಮಗ

ಅರಸನು ದೇಶದಲ್ಲಿ ಬಹಳ ಪ್ರಸಿದ್ಧನಾದರೂ ತನ್ನ ತಾಯಿಗೆ ಮಾತ್ರ ಅವನು ಅರಸನಂತೆ ಕಾಣದೆ ಕೇವಲ ಮಮತೆಯ ಹುಡುಗನಾಗಿಯೇ ತೋರುವನು.

೫. ಮನೆಗೆ ಬಂದವರಿಗೆ ಮನ್ನಣೆ ಕೊಡದವರು ಬೇರೆ ಮಾನವನ್ನು ಬಯಸಬಹುದೇ?

ಯಾರಾದರೂ ಮನೆಗೆ ಹೋದಾಗಲೇನಾದರೂ ಮನ್ನಣೆಯನ್ನು ಮಾಡದವರು ತಾವಾಗಿಯೇ ಸ್ವತಃ ಬೇರೆ ಮನ್ನಣೆಯನ್ನು ಪಡೆಯಲು ಎಂದೂ ಸಾಧ್ಯವಿಲ್ಲ. ಪ್ರಸಂಗ ಬಿದ್ದಲ್ಲಿ ಅಂಥವರ ಸಹಾಯವನ್ನು ಬಯಸಿದರೆ ಅದು ವ್ಯರ್ಥವಾದೀತು.

— ಟಿ. ಎಮ್. [illegible] —

(೧) ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು.

ಹನುಮ ಕಪಿ ಲಂಕೆಗೆ ಸೀತೆಯ ಶೋಧಕ್ಕಾಗಿ ಹೋದ. ಆತನನ್ನು ಹಿಡಿಯುವದು ಯಾರಿಂದಲೂ ಆಗದೆ ಹೋಯಿತು. ಆಗ ಇಡೀ ಲಂಕೆಯನ್ನೆಲ್ಲ ಸುಟ್ಟುಬಿಟ್ಟ. ಹೀಗಾಗಿ ಅಂಕೆ ಇಲ್ಲದ ಕಪಿ ಲಂಕೆಯನ್ನೆಲ್ಲ ಸುಟ್ಟಿತೆಂದು ಗಾದೆಯಾಯಿತು. ಮಕ್ಕಳನ್ನು [illegible]ವಿನೊಳಗೆ ಇಡದಿದ್ದರೆ ಅದು ತುಂಬಾ ತೊಂದರೆಯನ್ನುಂಟು ಮಾಡುವದು.

(೨) ಕಂಡದ್ದನ್ನಾಡಿದರೆ ಕೆಂಡದಂತೆ ಕೋಪ.

ಜನರು ಸ್ವಾಭಾವಿಕವಾಗಿ ಆದಷ್ಟು ತಮ್ಮ ತಪ್ಪುಗಳನ್ನು ಮುಚ್ಚಿ ಕೊಳ್ಳಲು ಯತ್ನಿಸುತ್ತಾರೆ. ಯಾರಾದರೂ ಅವುಗಳನ್ನು ಬೈಲಿಗೆಳೆದರೆ ಅಥವಾ ನೀವು ಇಲ್ಲಿ ತಪ್ಪುತ್ತೀರಿ. ಎಂದು ಬುದ್ಧಿವಾದವನ್ನು ಹೇಳಿದರೆ ಅವರಿಗೆ ಬಹಳ ಕೋಪ ಬರುತ್ತದೆ

(೩) ನಾಯಿಯಂತೆ ಬಾಲ, ತಾಯಿಯಂತೆ ಕರು.

ಗುರುವಿನಂತೆ ಶಿಷ್ಯ, ರಾಜರಂತೆ ಪ್ರಜೆ, ನಾಯಿಯಂತೆ ಬಾಲ, ತಾಯಿಯಂತೆ ಕರು ಇವೆಲ್ಲ ಒಂದೇ ಅರ್ಥದವು. ನಾಯಿಯು ತನ್ನ ಸ್ವಭಾವದಂತೆ ಇರುತ್ತದೆ. ಅದಕ್ಕನುಗುಣವಾಗಿ ಅದರ ಬಾಲವು ಡೊಂಕಾಗಿರುತ್ತದೆ, ತಾಯಿಯು ಆದರ್ಶಳಾಗಿದ್ದರೆ ಮಕ್ಕಳೂ ಜಗತ್ಪೂಜ್ಯ ರಾಗುವರು. ತಾಯಿಯ ನಡವಳಿಕೆಯು ಕರುವಿನ ಮೇಲೆ ಆಗದೇ ಹೋಗುವದಿಲ್ಲ. ಯಾಕಂದರೆ ಕರುವು ತಾಯಿಯ ಅನುಕರಣದಿಂದ ಕಲಿ ಯುತ್ತದೆ.

(೪) ತನ್ನಮರಿ ಹೊನ್ನಮರಿ. ಪರರ ಮರಿ ಕಾಗೆಮರಿ.

ಜಗತ್ತಿನಲ್ಲಿ ಪ್ರತಿಯೊಬ್ಬನು ತನ್ನ ವಸ್ತುವನ್ನು ಚೆನ್ನಾಗಿ ಜೋಕೆ ಮಾಡುವನು. ತನ್ನ ಮಕ್ಕಳನ್ನು ಮಮತೆಯಿಂದ ಬೆಳೆಸುವನು. ಮಕ್ಕಳು ಎಷ್ಟು ಕುರೂಪಿಗಳಿದ್ದರೂ ಅವುಗಳಿಗೆ ಅವನು ಹೊನ್ನಮರಿ ಎಂದು ಅಪ್ಪಿ ಕೊಳ್ಳುವನು. ಆದರೆ ಅದೇ ಹೆರವರ ಮಕ್ಕಳು ಸುಂದರರಿದ್ದರೂ ಅವನಿಗೆ ಅವರು ಕಾಗೆ ಮರಿಗಳಂತೆ ಕಾಣುವರು. ಹೆತ್ತವರಿಗೆ ಹೆಗ್ಗಣ ಮುದ್ದಲ್ಲವೇ?

— ೧೯೪೨ —

(೧) ಪಡೆವುದೊಂದೇ ಭೂಮಿ, ಕುಡಿವುದೊಂದೇ ನೀರು. ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ನಡುವೆ ಎತ್ತಣದು

ಎಲ್ಲ ಜನರು ಹುಟ್ಟಿ ಬೆಳೆದು ದೊಡ್ಡವರಾಗಿ ಮರಣ ಹೊಂದುವದು ಒಂದೇ ಭೂಲೋಕದಲ್ಲಿ, ಒಂದೇ ಭೂಮಾತೆಯ ಸನ್ನಿಧಿಯಲ್ಲಿ ಎಲ್ಲರೂ

ಕುಡಿಯುವದು ಒಂದೇ ನೀರು. ಅಸ್ಪೃಶ್ಯ, ನೀಚ ಕುಲದವರೆಲ್ಲರೂ ಕುಡಿಯುವ ನೀರು ಅದೇ. ಅದು ಭೇದವನ್ನು ಅರಿಯದು ಅದರಂತೆ ಅಗ್ನಿಯು ಇವನು ಮಾದಿಗನು ಇವನನ್ನು ಹೇಗೆ ಸುಡಲಿ ಎಂದು ಚಿಂತಿಸುವದಿಲ್ಲ. ಭೇದಭಾವ ವಿಲ್ಲದಲೆ ಎಲ್ಲರನ್ನು ಸಮನಾಗಿ ನೋಡುವದು ಕುಲಗೋತ್ರಗಳ ಭೇದವನ್ನು ಮಾಡಿಕೊಂಡವನು ಮನುಷ್ಯನು ಅದು ಈಶ ನಿರ್ಮಿತವಲ್ಲ.

(೨) ಸತ್ತ ಕತ್ತೆಯ ಹೊರ್ದ್ದರೆಳೆಬಿಡು ಹೊಲೆಯುವನ ಉತ್ತಮನು ಎಂದು ಹೆಸರೊಡನೆ ಹೊತ್ತವನೆ ನಿತ್ಯವೂ ಹೊಲೆಯ

ಸತ್ತ ಪ್ರಾಣಿಗಳನ್ನು ಹೊತ್ತು ಒಯ್ಯುವವನೇ ಹೊಲೆಯನೆಂದು ಹೇಳಿದರೆ ಅದು ತಪ್ಪು. ಉದ್ಯೋಗದ ಮೇಲಿಂದ ಜಾತಿಗಳಾಗಿವೆ. ಪರರ ಒಡವೆಗಳನ್ನು ಕದ್ದು ಒಯ್ಯುವವನು ಅರ್ಥಾತ್ ನೀಚ ಕಾರ್ಯಗಳನ್ನು ಮಾಡುವವನು ಜನರೊಳಗೆ ಅವನು ಉತ್ತಮ ಎಂದು ಎನ್ನಿಸಿಕೊಳ್ಳುತ್ತಿದ್ದರೂ ಅವನು ನಿಜವಾದ ಹೊಲೆಯ. ಕ್ಷತ್ರಿಯರ ರಕ್ತದಿಂದ ಹುಟ್ಟಿದವನಾದರೂ ಅವನು ಹೇಡಿಯಾಗಿದ್ದರೆ ಅವನಿಗೆ ಕ್ಷತ್ರಿಯನೆನ್ನುವದು ಹೇಗೆ ಅಯೋಗ್ಯವೋ ಅದರಂತೆ ಹೊಲೆ (ಕೀಳು) ಕೆಲಸ ಮಾಡುವವ ಬ್ರಾಹ್ಮಣನಾದರೂ ಆತನು ಹೊಲೆಯನೆಂದೇ ತಿಳಿಯಬೇಕು.

(೩) ಕಳಬೇಡ ಕೊಲಬೇಡ ದುಸಿರುಸುಸಿರಲು ಬೇಡ ಸಲಹಿದಾ ತಾಯ್ತಂದೆ ಗುರುಹಿರಿಯರೊಡನೆ ಮೀರಲುಬೇಡ.

ಮನುಷ್ಯನು ಯಾವಾಗಲೂ ನೀತಿ ಮಾರ್ಗವನ್ನು ಬಿಟ್ಟು ನಡೆಯಲಾಗದು. ಕಳವು ಮಾಡಬಾರದು. ಕೃತಿಯಿಂದಾಗಲಿ ಮನಸಿನಿಂದಾಗಲಿ, ಪರರನ್ನು ದುಃಖಿಸಬಾರದು ಪರರ ಮನ ನೋಯಿಸುವದೆಂದರೆ ಅವನನ್ನು ಕೊಂದಂತೆಯೇ ಸರಿ. ಸತ್ತರೂ ಸತ್ಯಮಾತಾಡುವದನ್ನು ಬಿಡಬಾರದು. ಯಾಕೆಂದರೆ ಸತ್ಯಕ್ಕೆ ಸಾವಿಲ್ಲ. ಸುಳ್ಳಿಗೆ ಸುಖವಿಲ್ಲ. ಎಂಬುದು ಎಲ್ಲರೂ ತಿಳಿದ ವಿಷಯ. ಬೆಳೆಸಿ ಪಾಲಿಸಿದ ತಾಯಿತಂದೆ ಗುರುಹಿರಿಯರ ಮಾತು ಎಂದಿಗೂ ಮೀರಿ ನಡೆಯಬಾರದು. ಏಕೆಂದರೆ ಅವರು ಯಾವಾಗಲೂ ನಮ್ಮ ಹಿರಿಯರ ದಾರಿಯನ್ನೇ ತೋರಿಸುತ್ತಿರುತ್ತಾರೆ.

(೪) ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ ಬಲ್ಲನೆಂಬಾ ಮಾತು ಹುರುಳಿಲ್ಲ ದಳಿಮಾತು ಗಿಳಿಮಾತು

ಜಗತ್ತಿನಲ್ಲಿ ಎಲ್ಲ ಬಲ್ಲವರು (ಸರ್ವಜ್ಞರು) ಇರುವದು ಅಶಕ್ಯ. ಸ್ವಲ್ಪ ತಿಳಿದವರು ಕೂಡ ಬಹುಜನರು ದೊರೆಯುವದಿಲ್ಲ. ಹಾಗೂ ಅವರು ತಾನು ತಿಳಿದವನೆಂದು ಎಂದೂ ಹೇಳಿಕೊಳ್ಳುವದಿಲ್ಲ. ಅದರಿಂದ ತಾನು ಬಲ್ಲನೆಂದು ಯಾರಾದರೂ ಹೇಳಿಕೊಂಡರೆ ಅದು ಜಂಭದ ಮಾತೇ ಹೊರತು ಆದರಲ್ಲಿ ಸ್ವಲ್ಪವೂ ಹುರುಳಿರುವದಿಲ್ಲ. ಕಾರಣ ಯಾವಾಗಲೂ ಬಹಳ ಮಾತಾಡುವವರನ್ನು ನಂಬಿ ಮೋಸ ಹೋಗಬಾರದು.

— ೧೯೪೦ —

(೧) ಕಬ್ಬು ಡೊಂಕಾದರೆ ಸವಿಯು ಡೊಂಕೇ ?

ಕಬ್ಬು ಡೊಂಕಾಗಿ ಬೆಳೆದಿರುತ್ತದೆ. ಆದರೆ ಅದು ತನ್ನ ಗುಣ ಸವಿಯನ್ನು ಎಂದಾದರೂ ಬಿಟ್ಟೀತೆ? ಎಂದಿಗೂ ಶಕ್ಯವಿಲ್ಲ. ಹಾಗೆಯೇ ತೋರಿಕೆಗೆ (ರೂಪಕ್ಕೆ) ಮೋಸ ಹೋಗದೆ ಗುಣ ಪರೀಕ್ಷಿಸಿ ಗೆಳೆತನ ಮಾಡಿರಿ.

(೨) ಅರಮನೆಯ ಮುಂದಿರಬೇಡ; ಕುದುರೆಯ ಹಿಂದಿರಬೇಡ.

ಕುದುರೆಯ ಹಿಂದಿರುವವನು ಯಾವಾಗ ಕುದುರೆಯ ಪೆಟ್ಟುಗಳನ್ನು ತಿನ್ನುವನೆಂಬುದು ನೇಮವಿರುವದಿಲ್ಲ. ಅದರಂತೆ ಅರಮನೆಯ ಮುಂದೆ ಓಡಾಡುವವನೂ ಯಾವಾಗ ರಾಜನಿಂದ ಶಾಸನ ಹೊಂದುವನೆಂಬುದು ಭರವಸೆಯಿಲ್ಲ. ಅದಕ್ಕಾಗಿ ಅವು, ತ್ಯಾಜ್ಯಗಳು.

(೩) ಅಡಿಕೆ ಕದ್ದ ಅಪಮಾನ ಆನೆ ಕೊಟ್ಟರೂ ಹೋದೀತೇ ?

ಒಮ್ಮೆ ಕಳ್ಳನೆಂದು ಬಿದ್ದ ಹೆಸರು ಏನುಮಾಡಿದರೂ ಹೋಗುವದಿಲ್ಲ. ಆ ಹೆಸರು ಅಡಿಕೆಯ ಕಳುವು ಮಾಡಿದ್ದಕ್ಕಾಗಿ (ಕ್ಷುಲ್ಲಕ ತಪ್ಪಿಗಾಗಿ) ಬಂದಿರಬಹುದು. ಅದಕ್ಕಾಗಿ ಆನೆಯನ್ನು ದಾನಕೊಟ್ಟರೂ ಅದು ಹೋಗುವದಿಲ್ಲ. ಅದ್ದರಿಂದ ಜನಕಂಜಿ ಅಪವಾದಕ್ಕೆ ಹೆದರಿ ಕೆಟ್ಟ ಹೆಸರು ಬಾರದಂತೆ ನಡೆ.

(೧) ಕೆಳಗಿನ ವಾಕ್ಯದ ಅರ್ಥವನ್ನು ವಿವರಿಸಿ ಬರೆಯಿರಿ. ಇದರ ಮೂರು ಮಡಿಯಷ್ಟು ಆಗಬಹುದು: —

ಭರತಖಂಡವು ತನ್ನದೊಂದು ಪರಿಪೂರ್ಣವಾದ ವಿಶಿಷ್ಟ ನಾಗರಿಕತೆ ಯನ್ನು ಪಡೆದಿರುವದರಿಂದ ಜಗತ್ತಿನ ನಾಗರಿಕ ರಾಷ್ಟ್ರಗಳ ಮಾಲಿಕೆ ಯಿಂದ ಅದನ್ನು ಬೇರ್ಪಡಿಸಿ ಹೇಳುವದು ಅಸಮಂಜಸವಾದರೂ ರಾಜ ಕೀಯ ಸೂತ್ರಗಳನ್ನಾಡಿಸುತ್ತಿರುವ ಕೆಲವು ಅಯೋಗ್ಯ ವ್ಯಕ್ತಿಗಳು ಭರತ ಖಂಡವು ಅನಾಗರಿಕವೆಂದು ಹೇಳುತ್ತಿರುವದು. ತೀರ ಹಾಸ್ಯಾಸ್ಪದವು.

ಉತ್ತರ:— ಭರತಖಂಡವು ಭೂಲೋಕದ ಸಾರವಿರುತ್ತದೆ. ಇದು ಸಕಲ ದೃಷ್ಟಿಯಿಂದ ಪರಿಪೂರ್ಣತೆಯನ್ನು ಹೊಂದಿದೆ ಎಂದು ಹೇಳ ಬಹುದು. ಪುರಾತನ ಕಾಲದಿಂದ ಇದು ಸುಧಾರಿಸಿದ ಜನಾಂಗವಾಗಿದೆ, ಇದಕ್ಕೆ ಸಾಹಿತ್ಯವಿದೆ. ಉಜ್ವಲವಾದ ಇತಿಹಾಸವಿದೆ. ಭೂಗೋಲದ ಉಳಿದ ಎಲ್ಲ ಖಂಡಗಳೂ, ದೇಶಗಳೂ ಇನ್ನೂ ನಿದ್ರಾವಸ್ಥೆಯಲ್ಲಿರುವಾಗ ಇದು ಜಾಗ್ರುತಾವಸ್ಥೆಯಲ್ಲಿದ್ದು ಇತಿಹಾಸದ ಪುಟಗಳನ್ನು ಸುವರ್ಣಾಕ್ಷರ ಗಳಿಂದ ಕೊರೆಯುತ್ತಿತ್ತು. ಆದುದರಿಂದ ಈಗ ಅದನ್ನು ಜಗತ್ತಿನ ನಾಗ ರಿಕ ರಾಷ್ಟ್ರಗಳ ಮಾಲಿಕೆಯಿಂದ ಬೇರ್ಪಡಿಸಿ ಹೇಳುವದು ಅಸಮಂಜಸವು.

ಭಾರತವು ಸ್ವಾತಂತ್ರ್ಯ ಸಂಕೋಲೆಗಳಿಂದ ಬಂಧಿತವಾಗಿ ಬಿದ್ದಿರು ವಾಗ ಅದು ಏನು ತೋರಿಸಲು ಸಾಧ್ಯವಿದೆ? ಅದು ರಾಜಕೀಯ ಸೂತ್ರ ಗಳನಾಡಿಸುತ್ತಿರುವಾಗ ಕೆಲ ಅಯೋಗ್ಯ ವ್ಯಕ್ತಿಗಳಿಂದ ಅಪಮಾನ ಹೊಂದುತ್ತ ನೆರಳುತ್ತಿದೆ. ಹಿಂದಿನ ವೈಭವ ವೆತ್ತ? ಈಗಿನ ಅಧೋಗತಿ ಎತ್ತ! ಅವರು ಹಿಂದಿನದನ್ನು ಮರೆತು, ಈಗ ಭರತಖಂಡವು ಅನಾಗರಿಕ ವೆಂದು ಹೇಳುತ್ತಿರುವರು. ಇದು ತೀರ ಹಾಸ್ಯಾಸ್ಪದವಲ್ಲದೆ ಇನ್ನೇನು?

(೨) "ಹೆಣ್ಣನ್ನೂ ಹೊನ್ನನ್ನೂ ಹಣ್ಣನ್ನೂ ಬಯಸದವರಾರು? ಹೆಣ್ಣು ಹುಟ್ಟಿದ್ದರೆ ಹುಣ್ಣು ಹುಟ್ಟಿದಂತೆಂದು ಹೇಳುವದು ಸಲ್ಲದು ಗಂಡು ಬೀಜವಾದರೆ ಹೆಣ್ಣು ಕ್ಷೇತ್ರವು, ಇನ್ನೊಂದು ದೃಷ್ಟಿಯಿಂದ ನೋಡಿದರೆ ಗಂಡಿಗಿಂತ ಹೆಣ್ಣೇ ಹೆಚ್ಚು ನಿಶ್ಚಿತವಾಗಿ ಕುಲದ-ಅದೇಕೆ, ಕುಲದ್ವಯದ- ಉದ್ಧಾರಮಾಡುವಳೆಂದು ಹೇಳಬಹುದು ಹೆಣ್ಣನ್ನು ಮಾರುವವರು ನರ ಪಶುಗಳು ಹೆಣ್ಣು ಸಿರಿ. ಹೆಣ್ಣಿಲ್ಲದಿದ್ದರೆ ಮನೆ ಮಸಣ. ಕಲಿತ ಹೆಣ್ಣಿದ್ದ

ಮನೆ ಭೂಲೋಕದ ಸ್ವರ್ಗ. ಹೆಣ್ಣು ಶಿಕ್ಷಿತೆ ಸುಸಂಸ್ಕೃತೆ ಆದರೆ ಜಗತ್ತು ಶಿಕ್ಷಿತ ಸುಸಂಸ್ಕೃತ ”

ಈ ವಾಕ್ಯವೃಂದದೊಳಗಿನ ಪ್ರತಿಯೊಂದು ವಾಕ್ಯದ ಅರ್ಥವನ್ನು ಹಿಗ್ಗಿಸಿ ಬರೆಯಿರಿ. (೧೯೫೦)

ಉ:— ಜಗತ್ತಿನೊಳಗೆ ಪ್ರತಿಯೊಬ್ಬ ಮಾನವನು ಹಗಲಿರಳು ದುಡಿದು ದುಃಖಪಡುವದು ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ; ಎಲ್ಲರೂ ಈ ಮೂರನ್ನು ಬಯಸುವರು. ಕೆಲವರು ಅಜ್ಞಾನದಿಂದ ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ ಎಂದು ತಪ್ಪಾಗಿ ತಿಳಿಯುವರು. ಆದರೆ ನಿಜವಾಗಿ ವಿಚಾರ ಮಾಡಿದರೆ ಇದು ಮೂರ್ಖತನದ ಮಾತೆಂದು ಕಂಡುಬರುವದು. ಜಗದ ಉತ್ಪತ್ತಿಯೇ ಹೆಣ್ಣಿನಿಂದ ಆಗುತ್ತದೆ. ಹೆಣ್ಣಿಲ್ಲದ ಒಂದು ಕ್ಷಣ ಕೂಡ ನಡೆಯುವದಿಲ್ಲ. ಹೀಗಿರುವಾಗ ಹೆಣ್ಣನ್ನು ಇಷ್ಟು ಕೀಳುಗಳೆಯುವದೇಕೆ? ಹೆಣ್ಣಿಲ್ಲದೇ ನಿಮ್ಮಸ್ತಿತ್ವ ನಡೆಯದು. ಹೆಣ್ಣಿನಿಂದಲೇ ಸುಖಸಂಸಾರ, ಹೆಣ್ಣಿಗಾಗಿ ಅಲ್ಲದೇ ಒಪ್ಪಿಲ್ಲಗಳಿಸುವದು. ಗೃಹಿಣಿ ಇಲ್ಲದ ಗೃಹವು ಸ್ಮಶಾನದಂತೆ ಕಾಣುವದು. ಹೆಣ್ಣಿಲ್ಲದೇ ಕುಲೋದ್ಧಾರಕಳು, ಕಾರಣ ಹೆಣ್ಣೇ ಸಂಪತ್ತು. ಹೆಣ್ಣನ್ನು ಮಾರಿ ಹೊಟ್ಟೆ ಹೊರಕೊಳ್ಳುವವರು ಪಶುಸಮಾನರು. ಕಲಿತ ಹೆಣ್ಣಿದ್ದ ಮನೆಯು ಭೂಲೋಕದ ಸ್ವರ್ಗವು. ಅಲ್ಲಿ ಸದಾಚಾರಗಳೂ ಸದಾನಂದವೂ ಸದಾ ನೆಲಿಸುವದು ಹೆಣ್ಣು ಸುಶಿಕ್ಷಿತೆಯಾದರೆ ಜಗತ್ತೇ ಸುಶಿಕ್ಷಿತವಾಗುವದು ಕಾರಣ ಸ್ತ್ರೀ ಶಿಕ್ಷಣವು ಅತ್ಯವಶ್ಯವಾದದು.

೫. ಗುಣವಿವೇಚನೆ

ಕೊಟ್ಟ ಗದ್ಯ ಅಥವಾ ಪದ್ಯಭಾಗದ ಗುಣಾವಗುಣಗಳನ್ನು ಅವಲೋಕಿಸುವದು ಗುಣವಿವೇಚನೆಯು. ಭಾಷೆಯು ಶೈಲಿ; ಶಬ್ದಗಳ ಹೊಂದಿಕೆ, ಭಾವಗಳ ನಿರೂಪಣೆ ಇತ್ಯಾದಿಗಳ ಬಗೆಗಳನ್ನು ಅವಲೋಕಿಸಿದರೆ, ಉದ್ದೇಶಕ್ಕೆ ಅನುಗುಣವಾದ ಸಂಗತಿಗಳು ದೊರೆಯುವವು.

ಈ ಜಗತ್ತಿನಲ್ಲಿ ಸಕಲ ಪರಿಪೂರ್ಣವಸ್ತುವು ದೊರೆಯುವದು ಅಸಂಭವವಾದರೂ ಪ್ರತಿಯೊಂದರಲ್ಲಿ ಲೇಖಕನ ಉದ್ದೇಶವು ಎಷ್ಟು ಆಳವಾಗಿ

ಸಫಲವಾಗಿದೆ ಎಂಬುದನ್ನು ನಿರೀಕ್ಷಿಸಿ ಹಂಸಕ್ಷೀರನ್ಯಾಯದಂತೆ ಗುಣಗ್ರಹಣ ಮಾಡುವದು ಒಳಿತು. ಮಾದರಿಗಾಗಿ ಪರೀಕ್ಷೆಯ ಪ್ರಶ್ನೆಗಳಿಂದ ಕೆಳಗಿನವುಗಳನ್ನು ಆರಿಸಿ ಉತ್ತರ ಬರೆದು ತೋರಿಸಲಾಗಿದೆ.

ಗದ್ಯ ಭಾಗಗಳು

(೧) ಫಲಾಪೇಕ್ಷೆ ಇಲ್ಲದೆ ಉಪಕಾರ ಮಾಡುವವರು ವಿರಳರು ಎಂಬುದನ್ನು ಲೋಕಕ್ಕೆ ತಿಳಿಸಲೆಂದು ಕಾಶೀ ವಿಶ್ವನಾಥನು ದೇವಾಲಯದ ಮುಂದೆ ರಾಜಾಂಗಣದಲ್ಲಿ ಒಂದು ಸೋಜಿಗದ ಚಿನ್ನದ ತಟ್ಟೆಯನ್ನು ಗಣಪತಿಯಿಂದ ಇಳಿಸಿದನು. ಅದರಲ್ಲಿ "ಪುಣ್ಯವಂತನಿಗೆ ಶಿವನ ಮೆಚ್ಚು" ಎಂಬ ಅಕ್ಷರಗಳು ಕೊರೆಯಲ್ಪಟ್ಟಿದ್ದವು.

ಬೆಳಿಗ್ಗೆ ಕಸಗೂಡಿಸುವವನು ಆ ತಟ್ಟೆಯನ್ನು ಕಂಡು "ನನ್ನ ಭಾಗ್ಯವು ತೆರೆಯಿತು" ಎಂದು ಸಂತೋಷದಿಂದ ಅದಕ್ಕೆ ಕೈ ನೀಡಿದನು. ಅವನ ಕೈ ತಾಗುತ್ತಲೇ ಅದು ಕಬ್ಬಿಣವಾಯಿತು. "ಆಹಾ! ಪುಣ್ಯವಂತರು ಮುಟ್ಟಿದರೆ ಮಣ್ಣು ಹೊನ್ನಾಗುವದು. ನಾನು ಮುಟ್ಟಿದರೆ ಚಿನ್ನವು ಕಬ್ಬಿಣವಾಯಿತು." ಎಂದು ಮರುಗಿ ಅದನ್ನು ಕೆಳಗೆ ಹಾಕಿದನು. ಒಡನೆಯೆ ಅದು ಚಿನ್ನವಾಗಿ ಪುನಃ ಹೊಳೆಯಹತ್ತಿತು.

ಈ ಆಶ್ಚರ್ಯವನ್ನು ನೋಡಲು ಅನೇಕ ಸಾಧುಸಂತರು, ಸಿರಿವಂತರು ದಾನಶೂರರು ಕೆರೆಬಾವಿಗಳನ್ನು ತೋಡಿಸಿದವರು, ದೇವಸ್ಥಾನ ಕಟ್ಟಿಸಿದವರು, ಪೌರಸಭೆಯಲ್ಲಿ ನೆರೆದು ಶಿವನ ಮೆಚ್ಚಿಗೆ ಕೈಯೊಡ್ಡಿ ನಿರಾಶೆ ಹೊಂದಿದರು. ಅವರೆಲ್ಲರು ಮುಟ್ಟಿದೊಡನೆ ಚಿನ್ನದ ತಟ್ಟೆಯು ಕಬ್ಬಿಣದ ತಟ್ಟೆಯಾಯಿತು. ನಾಚಿ ಹಿಂತೆರಳಿದರು. ಒಂದು ವಾರ ಕಳೆದು ಹೋದರೂ ಶಿವನ ಮೆಚ್ಚಿಗೆಗೆ ಯೋಗ್ಯನಾದ ಪುಣ್ಯವಂತನೇ ದೊರೆಯಲಿಲ್ಲ.

ಕೊನೆಗೆ ಒಬ್ಬ ಒಕ್ಕಲಿಗನು ವಿಶ್ವನಾಥನಿಗೆ ಬೇಡಿಕೊಂಡ ಹರಕೆಯನ್ನು ಸಲ್ಲಿಸಲಿಕ್ಕೆ ಕಾಶಿಗೆ ಬಂದಿದ್ದನು. ಸಾಲಾಗಿ ಕುಳಿತ ಭಿಕ್ಷುಕರ ತಂಡದಲ್ಲಿ ಕಾಲಿಗೆ ಬಲವಿಲ್ಲದ, ಕೈ ಮೋಟಾದ ಕಣ್ಣು ಕುರುಡಾದ ವೇದನೆಯಿಂದ ಹೊರಳಾಡುತ್ತಿದ್ದ ಮುದುಕನನ್ನು ಕಂಡು ಅವನು ಮುಂದೆ

ಹೋಗದೆ ಅವನ ಹತ್ತರ ಮೊಣಕಾಲೂರಿ ಕುಳಿತುಕೊಂಡು ಅಲ್ಲಿ ಅವನ ಕೈಕಾಲುಗಳನ್ನು ಒತ್ತುತ್ತಾ "ಅಜ್ಜಯ್ಯಾ ದೇವರು ದೊಡ್ಡವನು. ಅವನನ್ನು ನೆನೆದರೆ ಅವನೂ ನಿನ್ನನ್ನು ನೆನೆದಾನು" ಎಂದು ಸಂತೈಸಿದನು.

ಅವನು ರಾಜಾಂಗಣಕ್ಕೆ ಬಂದ ಕೂಡಲೆ ಪುರೋಹಿತನು ಅವನನ್ನು ಕರೆದು ಅವನಿಗೆ ಚಿನ್ನದ ತಟ್ಟೆಯನ್ನು ತೆರೆಯ ಹೇಳಿದನು. ಅದೇಕೆಂದು ಅವನಿಗೆ ತಿಳಿಯದಿದ್ದರೂ ಹಿರಿಯರ ಮಾತಿನಂತೆ ನಡೆಯುವದು ತನಗೆ ಯೋಗ್ಯವೆಂದರಿತು ತಟ್ಟೆಗೆ ಕೈನೀಡಿದನು. ಅವನ ಕೈಯಲ್ಲಿ ಅದು ಮೊದಲಿಗಿಂತಲೂ ಹೆಚ್ಚಿನ ಮಿರುಗಿನಿಂದ ಹೊಳೆಯ ಹತ್ತಿತು.

ಒಡನೆ ದೇವಸ್ಥಾನದ ಮಹಂತ "ಅಯ್ಯಾ ನೀನೇ ಶಿವನ ಮೆಚ್ಚುಗೆಗೆ ಬಂದ ಮಹಾ ಪುಣ್ಯವಂತನು." ಎಂದು ಕೊಂಡಾಡಿ ಮೆಚ್ಚಿಕೆಗೆ ಯೋಗ್ಯನಾಗುವದಕ್ಕೆ ಏನು ವಿಶೇಷ ಪುಣ್ಯ ಮಾಡಿರುವಿಯೆಂದು ಕೇಳಿದನು. ಅದಕ್ಕೆ ಒಕ್ಕಲಿಗನು ತಾನು ಏನೂ ಮಾಡಿಲ್ಲವೆಂದನು. ಸ್ವಾರ್ಥರಹಿತ ಪರೋಪಕಾರ ಮಾಡುವವರಿಗೆ ತಾವು ಮಾಡಿದ ಉಪಕಾರ ಸ್ಮರಣೆ ಹೇಗೆ ಇದ್ದಿತು? (ಹೈ. ಸ್ಕಾ. ೧೯೪೧)

ನೀವು ಈಗ ಓದಿದ ಕಥೆಯ ಮೇಲಿಂದ ಕೆಳಗಿನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಬರೆಯಿರಿ:—

(ಅ) ಕಾಶಿಯ ದೇವಾಲಯದಲ್ಲಿ ಒಂದು ದಿವಸ ಯಾವ ಚಮತ್ಕಾರ ಸಂಭವಿಸಿತು? (ಆ) ಶಿವನ ಮೆಚ್ಚು ಯಾವನಿಗೆ ದೊರಕುವದು ಸಾಧ್ಯವಿತ್ತು? (ಇ) ಕಸಗೂಡಿಸುವವನು ಏಕೆ ನಿರಾಶೆ ಹೊಂದಿದನು? (ಈ) ಕಡೆಗೆ ಆ ಮೆಚ್ಚು ಯಾರಿಗೆ ದೊರೆಯಿತು? ಮತ್ತು ಏಕೆ? (ಉ) ಈ ಕಥೆಯು ಯಾವ ನೀತಿಯ ಪಾಠವನ್ನು ಕಲಿಸುವದು? (ಊ) ದಯೆಯ ಮುಖ್ಯ ಲಕ್ಷಣಗಳು ಯಾವವು?

ಉತ್ತರ:— (ಅ) ರಾಜಾಂಗಣದಲ್ಲಿ ಒಂದು ಸೋಜಿಗದ ಚಿನ್ನದ ತಟ್ಟೆಯನ್ನು ಶಿವನು ಗಣಪತಿಯಿಂದ ಇಡಿಸಿದನು. ಅದರಲ್ಲಿ "ಪುಣ್ಯವಂತನಿಗೆ ಶಿವನ ಮೆಚ್ಚು" ಎಂದು ಬರೆಯಲ್ಪಟ್ಟಿತ್ತು. (ಆ) ಫಲಾಪೇಕ್ಷೆ ಇಲ್ಲದೆ ಉಪಕಾರ ಮಾಡಿದವನಿಗೆ. (ಇ) ಅವನ ಕೈ ತಾಗುತ್ತಲೆ ಅದು

ಕಬ್ಬಿಣವಾಯಿತು (ಈ) ಒಕ್ಕಲಿಗರಿಗೆ; ದಾರಿಯಲ್ಲಿ ತೊಳಲಾಡುತ್ತಿದ್ದ ಕುರುಡ ಭಿಕ್ಷುಕನನ್ನು ಸಂತೈಸಿದಕ್ಕಾಗಿ (ಉ) ಜನರಿಂದ ಮನ್ನಣೆ ಪಡೆಯುವದಕ್ಕಾಗಿ ಪರೋಪಕಾರ ಮಾಡದೆ ಕರ್ತವ್ಯವೆಂದು ತಿಳಿದು ಮಾಡು. (ಊ) ಪರರು ಸಂಕಟಪಡುವದನ್ನು ನೋಡಿ ಮರಗುವದು ಮತ್ತು ಅವರನ್ನು ಸಂತೈಸುವದು.

ಪ್ರ:—(೨) ಜರಿರುಮಾಲು ರಾಮರಾಯರು ಪತ್ನೀಪುತ್ರ ಸಮೇತ ರಾಗಿ ರೈಲಿನಲ್ಲಿ ಬಿಜಯ ಮಾಡಿಸಿದ್ದರು. ಅವರು ಕುಳಿತಿದ್ದ ಗಾಡಿಯ ಬಳಿ ಭಿಕ್ಷುಕನೊಬ್ಬನು ಬಂದು "ದರುಮ ಸೋಮಿ!" ಎಂದ. ರಾಯರು ಪಂಜೆಯ ಜರಿಯನ್ನು ತೀಡುತ್ತ "ಸೂ—ಮಗನೆ! ಧರ್ಮವಂತೆ ಧರ್ಮ! ನಾವು ಧರ್ಮ ಎಂದು ಕೊಡುವದು ಈ ಸೂ-ಮಗಾ ಬೀಡಿ ಹೊಡೆಯು ವದು! ಏನೂ ಇಲ್ಲ ಹೋಗು" ಎಂದು ಗದರಿಸಿದರು.

"ಒಂದು ಕಾಸು ಸೋಮಿ!"

"ಒಂದು ಕಾಸು ಇಲ್ಲ, ಅರೆಕಾಸೂ ಇಲ್ಲ! ತೊಲಗು!"

ಭಿಕ್ಷುಕನು ತೊಲಗಿದನು. ರೈಲೂ ತೊಲಗಿತು.

"ಈ ಸೂ—ಮಕ್ಕಳಿಗೆ ಕೊಡುವದಕ್ಕೇ ನಾವು ಕಷ್ಟಪಟ್ಟು ಸಂಪಾದಿ ದಿಸುವದು!" ಎಂದರು ರಾಯರು.

× × × ×

"ಅಣ್ಣ! ಕಾವೇರಿ ಬಂತು, ಕಾವೇರಿ" ಎಂದು ರಾಯರ ಮಕ್ಕಳೆ ಲ್ಲರೂ ಕೂಗಿದರು.

"ಕಾವೇರಿಗೆ ಹಾಕುವದಕ್ಕೆ ಕಾಸು ಎಲ್ಲ ಇಟ್ಟುಕೊಂಡಿದ್ದೀರೊ ಇಲ್ಲವೋ?" ಎಂದು ರಾಯರು ಕೇಳಿದರು. ಕಾವೇರಿಗೆ ಕಾಸೆಸೆಯು ವದು ಕೈವಲ್ಯಕ್ಕೆ ಕಾಲು ಮಣೆ ಎಂದು ಅವರು ಕಲಿತಿದ್ದರು. ಮಕ್ಕಳಿಗೂ ಕಲಿಸುತ್ತಿದ್ದರು.

"ಅಣ್ಣ! ನನ್ನ ಕಾಸೆಲ್ಲೊ ಕಾಣೆ ಅಣ್ಣ!" ಎಂದು ರಾಯರ ಎರಡನೆಯ ಮಗಳು ಅಳತೊಡಗಿದಳು.

"ಪರವಾ ಇಲ್ಲವ್ಮಾ. ಇನ್ನೊಂದು ಕಾಸು ಕೊಡುತ್ತೇನೆ. ಅಳ ಬೇಡ" ಎಂದು ರಾಯರು ಕಾವೇರಿ ಎಲ್ಲಿ ಕಳೆದು ಹೋಗುತ್ತದೊ ಎಂಬ

ಅವಸರದಿಂದ ಗಣೇಶನ ಹೊಟ್ಟೆಯಂತಿದ್ದ ತಮ್ಮ ಹಣದ ಚೀಲವನ್ನು ಮಡಲಿಗೆ ಬಗ್ಗಿಸಿಕೊಂಡು ಹುಡುಕಿದರು. ಅದರಲ್ಲಿ ಬೆಳ್ಳಿಯ ಎಂಟಾಣೆಗಿಂತ ಚಿಕ್ಕ ನಾಣ್ಯವು ಕಣ್ಣಿಗೆ ಕಾಣಿಸಲಿಲ್ಲ. ರಾಯರು "ತೆಗೊ! ತೆಗೊ! ಅದನ್ನೇ ಹಾಕು!" ಎಂದು ಅವಸರದಲ್ಲಿ ಎಂಟಾಣೆಯ ನಾಣ್ಯವನ್ನೇ ಕಾವೇರಿಗೆ ಬಿಸಾಡಿಸಿ ಬಿಟ್ಟು, ಕಡಿದವರಂತೆ ನಿಟ್ಟುಸಿರಿಟ್ಟರು.

ಆ ಚೀಲಕ್ಕೆ ಪುನಃ ಹಣವನ್ನು ತುಂಬಿಕೊಳ್ಳುವಾಗ ರೂಪಾಯಿಗಳ ಮರೆಯಿಂದ ಒಂದು ಬಿಡಿ ಕಾಸು ಇಣಿಕಿ ನೋಡಿ "ನೋಡಿದಿಯೊ! ಕೊಟ್ಟೆ ನಿನಗೆ ಗಸ್ತು" ಎಂದು ಕಣ್ಣು ಹಾರಿಸಿತು.

ರಾಯರಿದನ್ನು ನೋಡಿದರು, ಬಪ್ಪಾದರು, ಗೋಳೋ ಎಂದು ಅತ್ತರು.

(ಕೈವಲ್ಯ=ಸ್ವರ್ಗ.) (ಜ್ಯೈ. ಸ್ವಾ. [illegible])

೧. ನೀವು ಈಗ ಓದಿದ ಕಥೆಗೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

(ಅ) ಭಿಕ್ಷುಕನಿಗೆ ರಾಮರಾಯರು ಹೇಗೆ ಸನ್ಮಾನವನ್ನು ಸಲ್ಲಿಸಿದರು? (ಆ) ಅವರ ಮನೋವೃತ್ತಿಯಲ್ಲಿ ಬದಲಾವಣೆಯನ್ನುಂಟು ಮಾಡುವ ಯಾವ ಪ್ರಸಂಗವು ಒದಗಿತು? ಅದರ ಪರಿಣಾಮವೇನಾಯಿತು? (ಇ) ಯಾವ ವಿಚಾರವು ಅವರ ಮನಸ್ಸನ್ನು ಅಷ್ಟು ಉದಾರವಾಗುವಂತೆ ಮಾಡಿತು? (ಈ) ಆ ವಿಚಾರದಿಂದ ರಾಯರು ಯಾವ ಸಾಹಸವನ್ನು ಮಾಡಿದರು? ಮತ್ತು ಏಕೆ? (ಉ) ಆ ವಿಚಾರದಿಂದ ರಾಯರು ಯಾವ ಸಾಹಸವನ್ನು ಮಾಡಿದರು? ಮತ್ತು ಏಕೆ? (ಊ) ಈ ಕಥೆಯಿಂದ ನೀವು ಯಾವ ನೀತಿಯ ಪಾಠವನ್ನು ಕಲಿಯುವಿರಿ?

ಉತ್ತರಗಳು: (ಅ) ಭಿಕ್ಷುಕನಿಗೆ ರಾಮರಾಯರು 'ಸೂ-ಮಗನೆ' ಎಂದು ಕಠಿಣೋಕ್ತಿಗಳಿಂದ ಬೈದು ಕಳಿಸುವರು. (ಆ) ಕಾವೇರಿ ನದಿ ಬಂತು. ಕಾವೇರಿಗೆ ಕಾಸೆಸೆಯುವ ಬದಲು ಎಂಟಾಣೆಯನ್ನು ಮನಸ್ಸು ಇಲ್ಲದಲೇ ಮಗಳ ಮೇಲಿನ ಮಮತೆಗಾಗಿಯೂ, ಅಂಧ ಶ್ರದ್ಧೆಗಾಗಿಯೂ ಎಸೆದುಬಿಟ್ಟರು. ಆದರೆ ಮತ್ತೊಮ್ಮೆ ಹಣದ ಚೀಲಕ್ಕೆ ಕೈ ಹಾಕಿದಾಗ ಬಿಲ್ಲಿ ಕಾಣಿಸಿತು. ಆದಕ್ಕಾಗಿ ಗೋಳೋ ಎಂದು ಅತ್ತುಬಿಟ್ಟರು. (ಇ) ಕಾವೇರಿಗೆ

ಕಾಸೆಸೆಯುವದು ಕೈವಲ್ಯಕ್ಕೆ ಕಾಲುಮಣೆ ಎಂಬ ಮಾತು ಅವರ ಮನ ಸ್ಸನ್ನು ಅಷ್ಟು ಉದಾರವಾಗುವಂತೆ ಮಾಡಿತು. (ಈ) ಅದರಿಂದ ಅವರು ದುಡ್ಡು ಕಾಣಿಸದಿದ್ದರೂ, ಎಂಟಾಣೆಯ ನಾಣ್ಯವನ್ನು ಎಸೆದರು. ತಡ ವಾಗಿದ್ದರೆ ನದಿಯು ದಾಟಿ ಹೋಗಿಬಿಡುತ್ತಿತ್ತು. (ಉ) ರಾಯರಿಗೆ ದುಡ್ಡು ಚೀಲದಲ್ಲಿ ಕಾಣಿಸಿದಾಗ ಅವರ ಸಾಹಸವು ವ್ಯರ್ಥವಾಯಿತೆಂದು ಮನವರಿಕೆಯಾಯಿತು. (ಊ) ಮೂಢ ನಂಬಿಕೆಯಿಂದ ಮಾಡಿದ ಕಾರ್ಯವು ಯಾವಾಗಲೂ ವ್ಯರ್ಥವಾದದ್ದು. ಹರಿದು ಹೋಗುವ ನೀರಿಗೆ ರೊಕ್ಕ ಎಸೆಯುವದಕ್ಕಿಂತ ಬಡ ಭಿಕ್ಷುಕನಿಗೆ ರೊಕ್ಕ ಕೊಟ್ಟಿದ್ದರೆ ಸಾವಿರ ಪಾಲಿಗೆ ಒಳಿತಾಗುತ್ತಿತ್ತಲ್ಲವೇ ?

(೩) ಇಂದೂರಿನಲ್ಲೊಬ್ಬ ಹಣ ಸಾಲ ಕೊಡುವ ಸಾವುಕಾರನಿದ್ದ, ಅವನು ಒಂದು ದಿನ ಮಹಾಸಾಧುವೊಬ್ಬನನ್ನು ತನ್ನ ಮನೆಗೆ ಕರೆಯಿಸಿ ಕೊಂಡು ಸಂತರ್ಪಣೆ ನಡೆಸಿದ. ಔತಣವಾದ ಮೇಲೆ ಆ ಸನ್ಯಾಸಿಯು ಮಿದುವಾಸಿನಲ್ಲೊರಗಿಕೊಂಡು ತನ್ನನ್ನು ಅಷ್ಟು ವಿಜೃಂಭಣೆಯಿಂದ ಸತ್ಕರಿ ಸಿದ ಆ ಗೃಹಸ್ಥನ ಔದಾರ್ಯವನ್ನು ಮನದೊಳಗೆ ಕೊಂಡಾಡುತ್ತಿದ್ದ. ಅಷ್ಟರಲ್ಲಿ ಬಡ ಬಡಗಿಯೊಬ್ಬನು ಬಂದು, ಸಾವುಕಾರನನ್ನು ಹೊರಗೆ ಕರೆದು ತನ್ನ ಹೆಂಡತಿಯು ಅಕಸ್ಮಾತ್ತಾಗಿ ಮಡಿದಳೆಂದೂ ಅವಳ ಶವದಹನಾದಿ ಕ್ರಿಯೆಗಳಿಗಾಗಿ ವೆಚ್ಚಕ್ಕೆ ಇಪ್ಪತ್ತೈದು ರೂಪಾಯಿ ಸಾಲಕೊಡಬೇಕೆಂದೂ ಬೇಡಿಕೊಂಡ. ಒತ್ತೆಯಿಡಲಿಕ್ಕೆ ಅವನಲ್ಲಿ ವಸ್ತು ಒಡವೆಗಳೇನೂ ಇದ್ದಿಲ್ಲ.

ಸಾಹುಕಾರ:— ಹಾಗಾದರೆ ನಿನ್ನ ಕೆಲಸದ ಕೈ ಮುಟ್ಟಗಳನ್ನೆಲ್ಲ ಆಡವಾಗಿ ತಂದಿಡಬೇಕು. ಸೇಕಡ ಇಪತ್ತನಾಲ್ಕರಂತೆ ಬಡ್ಡಿ ತೆರಬೇಕು.

ಬಡಗಿ: ' ಅಯ್ಯೋಸ್ವಾಮಿ ! ನನ್ನ ಉದ್ಯೋಗದ ಆಯುಧಗಳ ನ್ನೆಲ್ಲ ನಿಮ್ಮಲ್ಲಿ ಆಡವಿಟ್ಟರೆ ನಾನು ಸಂಪಾದಿಸಿ ನಿಮ್ಮ ಸಾಲವನ್ನೂ ಹೊರ ಲಾರದ ಆ ಬಡ್ಡಿಯನ್ನೂ ಹೇಗೆ ಸಂದಾಯ ಮಾಡಿಯೇನು ? '

ಸಾಹುಕಾರ: ' ಅದೇನೋ ನಾನರಿಯೆ ! ಒಪ್ಪುವಿಯಾದರೆ ಹಾಗೆ; ಇಲ್ಲವಾದರೆ ನಡೆ !

ಒಳಗಿಂದ ಈ ಮಾತುಗಳನ್ನು ಕೇಳಿದ ಸನ್ಯಾಸಿಗೆ ತನ್ನ ಕಿವಿಗಳನ್ನು ನಂಬಲಾಗಲಿಲ್ಲ. ಅವನೆದ್ದು ನೇರವಾಗಿ ಅಲ್ಲಿಗೆ ಹೋಗಿ ಸಾಹುಕಾರನೊಡನೆ 'ತಮ್ಮಾ' ಈ ಬಡವನ ವಿಷಯದಲ್ಲಿ ಇಷ್ಟು ನಿಷ್ಠುರವಾಗಬೇಡಪ್ಪಾ! ಅವನ ಸಂಕಟವನ್ನು ಕೇಳಿ ನೀನು ಅಷ್ಟು ಹಣವನ್ನು ಧರ್ಮಾರ್ಥವಾಗಿಯೇ ಕೊಟ್ಟುಬಿಡುವೆಯೆಂದು ನಾನು ಯೋಚಿಸಿದೆ! ಒತ್ತೆ ಕೇಳದೆ ಸಾಲವಾಗಿಯಾದರೂ ಕೊಟ್ಟುಬಿಡಯ್ಯ!" ಎಂದ.

ಸಾಹುಕಾರ:— ಸ್ವಾಮೀಜೀ, ನನ್ನ ಹಣಕಾಸಿನ ವ್ಯವಹಾರದಲ್ಲಿ ತಾವು ದಯಮಾಡಿ ಪ್ರವೇಶಿಸಲಾಗದು; ತಮಗೆ ಅದರ ವಿಷಯವೇನೂ ಗೊತ್ತಿಲ್ಲ!

ಸನ್ಯಾಸಿ:— "ನನ್ನ ಅತಿಥ್ಯ ಸತ್ಕಾರಗಳಿಗಾಗಿ ಅಷ್ಟು ಔದಾರ್ಯದಿಂದ ಧನವ್ಯಯ ಮಾಡಿದ ನೀನು ಈ ಬಡವನ ವಿಚಾರದಲ್ಲಿ ಇಷ್ಟು ಕಸಿವಿಸಿಮಾಡಲಾರೆ ಎಂದೇ ನಾನು ಬಗೆದಿದ್ದೆನಲ್ಲ!"

ಸಾಹುಕಾರ:— "ನಾನು ವ್ಯವಹಾರದಲ್ಲಿ ಇಷ್ಟು ನಿಷ್ಠುರದ ಕಸಿವಿಸಿ ಇಟ್ಟುಕೊಂಡಿರುವುದರಿಂದಲೇ ತಮ್ಮಂತಹ ಮಹಾತ್ಮರನ್ನು ಸತ್ಕರಿಸಲು ಸಮರ್ಥನಾಗಿದ್ದೇನೆ."

ಸಾಹುಕಾರನ ಈ ಮಾತನ್ನು ಕೇಳಿದೊಡನೆ ಸನ್ಯಾಸಿಗೆ ತಾಳಲಾರದ ವ್ಯಥೆಯಾಯಿತು. "ದೇವರೇ, ಈ ಪಾಪಿಯ ಮನೆಯ ಅನ್ನವನ್ನು ಉಂಡುದಕ್ಕಾಗಿ ನನ್ನನ್ನು ಕ್ಷಮಿಸು!" ಎನ್ನುತ್ತ ಆತನು ಕೂಡಲೆ ಅಲ್ಲಿಂದೆದ್ದು ತನ್ನ ದಂಡವನ್ನು ಹಿಡಿದುಕೊಂಡು ಆ ಬಡಗಿಯೊಡನೆ ಬಡವನ ಕೇರಿಗೆ ಹೋದ. ಬಡಗಿಗೆ ಬಂದೊದಗಿದ ದುರವಸ್ಥೆಯನ್ನು ಆ ಬಡವರೊಡನೆ ಹೇಳಿಕೊಂಡ ತಡವಿಲ್ಲದೆ ಶವಸಂಸ್ಕಾರಕ್ಕೂ ಉತ್ತರಕ್ರಿಯೆಗೂ ಬೇಕಾದಷ್ಟು ಹಣ ಸಂಗ್ರಹವಾಯಿತು. ಅದನ್ನು ಆ ಬಡಗಿಯ ಕೈಯಲ್ಲಿಟ್ಟು ಹೊರಟಾಗ "ಧರ್ಮದೇವತೆಯಿರುವದು ಬಡವರ ಗುಡಿಸಲಲ್ಲಿ; ಸಿರಿವಂತರ ಅರಮನೆಯಲ್ಲಿರುವದು ಆಕೆಯ ಅವಳಿ ಸೋದರಿಯಾದ ನಿಷ್ಠುರ ದೇವತೆ!" ಎಂದು ಅನ್ನಿಸಿತು ಆ ಸನ್ಯಾಸಿಗೆ. (ಹೈ. ಸ್ವಾ. ೧೯೬೭)

ನೀವು ಇದೀಗ ಓದಿದ ಕಥೆಯ ಬಗ್ಗೆ ಕೇಳಿದ ಕೆಳಗಿನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಬರೆಯಿರಿ:

(೧) ಸನ್ಯಾಸಿಯು ಸಾಹುಕಾರನನ್ನು ಮನಸ್ಸಿನಲ್ಲಿ ಏಕೆ ಕೊಂಡಾಡುತ್ತಿದ್ದನು ? (೨) ಸಾವುಕಾರನ ಕರಾರಿಗೆ ಬಡಗಿಯು ಏಕೆ ಒಪ್ಪಲಿಲ್ಲ ? (೩) ಸಾವುಕಾರನ ಯಾವ ಮಾತಿನಿಂದ ಸನ್ಯಾಸಿಗೆ ವ್ಯಥೆಯಾಯಿತು ? ಮತ್ತು ಯಾಕೆ ? (೪) "ದೇವರೇ, ಈ —ಮನೆಯ— — —ನನ್ನನ್ನು ಕ್ಷಮಿಸು!" ಈ ವಾಕ್ಯದಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿ ಆ ವಾಕ್ಯದ ಅರ್ಥವನ್ನು ಸ್ಪಷ್ಟೀಕರಿಸಿರಿ. (೫) ಕಥೆಯಲ್ಲಿ ಹೇಳಿದ ಆವಳ ಸೋದರಿಯಳು ಯಾರು ? ಮತ್ತು ಅವಳು ಇರುವದು ಎಲ್ಲಿ ?

ಉ: (೧) ಸಾಹುಕಾರನು ಸನ್ಯಾಸಿಯನ್ನು ವಿಜೃಂಭಣೆಯಿಂದ ಸತ್ಕರಿಸಿದನು. ಮಿದುವಾದ ಗಾದಿಯ ಮೇಲೆ ಮಲಗಿಸಿದನು. ಅವನ ಔದಾರ್ಯವನ್ನು ಕಂಡು ಸನ್ಯಾಸಿಯು ಸಾಹುಕಾರನನ್ನು ಮನಸ್ಸಿನಲ್ಲಿ ಕೊಂಡಾಡುತ್ತಿದ್ದನು.

(೨) ಬಡಗಿಯು ಸಾಹುಕಾರನ ಕರಾರಿಗೆ ಒಪ್ಪಿಕೊಂಡು ತನ್ನ ಉದ್ಯೋಗದ ಆಯುಧಗಳನ್ನೆಲ್ಲ ಅಡವಿಟ್ಟದ್ದರೆ ಅವನ ಸಂಪಾದನೆಯೇ ನಿಂತು ಬಿಡುತ್ತಿತ್ತು.

(೩) ನಾವು ವ್ಯವಹಾರದಲ್ಲಿ ಇಷ್ಟು ನಿಷ್ಠುರ ಕಸಿವಿಸಿ ಇಟ್ಟುಕೊಂಡಿರುವದರಿಂದಲೇ ತಮ್ಮಂತಹ ಮಹಾತ್ಮರನ್ನು ಸತ್ಕರಿಸಲು ಸಮರ್ಥನಾಗಿದ್ದೇನೆ ಸಾಹುಕಾರನ ಈ ವಾಕ್ಯದಿಂದ ಸನ್ಯಾಸಿಗೆ ವ್ಯಥೆಯಾಯಿತು. ಯಾಕೆಂದರೆ ತನಗಾಗಿ ಈತನು ಪಾಪಕೃತ್ಯ ಮಾಡುತ್ತಿರುವನೆಂಬಂತಾಯಿತು.

(೪) ದೇವರೇ ಈ ಪಾಪಿಯ ಮನೆಯ ಅನ್ನವನ್ನು ಉಂಡುದದಕ್ಕಾಗಿ ನನ್ನನ್ನು ಕ್ಷಮಿಸು ಸಾಹುಕಾರನಲ್ಲಿ ಊಟ ಮಾಡುವದರಿಂದ ಅವನ ಪಾಪದ ಗಳಿಕೆಯಲ್ಲಿ ಪಾಲುಗಾರನಾದಂತಾಯಿತು. ತಿಳಿಯದೆ ಮಾಡಿದ ಅಪರಾಧವನ್ನು ದೇವರೇ ಕ್ಷಮಿಸು.

(೫) ಧರ್ಮದೇವತೆ ಹಾಗೂ ನಿಷ್ಠುರ ದೇವತೆಗಳು ಅವಳಿ ಸೋದರಿಯರು, ಬಡವರ ಮನೆಯಲ್ಲಿ ಧರ್ಮದೇವತೆಯೂ ಸಿರಿವಂತರ ಮನೆಯಲ್ಲಿ ನಿಷ್ಠುರ ದೇವತೆಯೂ ಇರುವರು.

ಪ್ರ:—೪. ಹಿಂದುಸ್ಥಾನವು ಹಳ್ಳಿಗರ ದೇಶವು. ಹಳ್ಳಿಗಳು ತಮ್ಮ ಉತ್ತಮ ಸ್ಥಿತಿಗೆ ಎರವಾದರೆ, ಆ ದೇಶವು ಸ್ವರಾಜ್ಯಕ್ಕೆ ಅಪಾತ್ರವಾಗುವದು. ಇಂಥ ಹಳ್ಳಿಗಳ ಹಿರಿಯರು, ಹಳ್ಳಿಯ ತಮ್ಮ ಆದಾಯವನ್ನು ಕಟ್ಟಿಕೊಂಡು ತಮ್ಮ ವಾಸಸ್ಥಳವನ್ನು ತ್ಯಜಿಸಿ, ಪಟ್ಟಣಗಳ ಸೊಗಸಿಗೆ ಮರುಳಾಗಿ ಅವುಗಳನ್ನು ಸೇರುವರು ಅವರು ವಿಷಯೋಪಭೋಗಕ್ಕೆಳಸಿ ಧರ್ಮಾಚರಣೆಯನ್ನು ಬಿಟ್ಟು ಸ್ವೇಚ್ಛಾಚಾರಿಗಳಾಗುವರು. ಒಬ್ಬರ ಹಂಗು ಒಬ್ಬರಿಗೆ ಉಳಿಯುವದಿಲ್ಲ. ಎಲ್ಲರೂ ಸ್ವತಂತ್ರರೆಂದು ಭಾವಿಸಿ ಸ್ವಹಿತದ ಸಾಧಕರಾಗುವರು. ಪರಸ್ಪರರಲ್ಲಿ ಸ್ನೇಹಭಾವ ಅಳಿದು ಹೋಗುವದು. ಊಟ-ಉಡಿಗೆ ಆಟ-ನೋಟಗಳಲ್ಲಿ ಆಸಕ್ತಿಯುಳ್ಳವರಾಗಿ, ತಮ್ಮ ತಮ್ಮ ಉದ್ಯೋಗಗಳನ್ನು ಮರೆತು ಬಿಡುವರು. ಅವರು ತಮ್ಮ ಸಂಸಾರಕ್ಕೆ ಬೇಕಾಗುವ ಸಾಮಗ್ರಿಗಳನ್ನು ಎಂದಿನಂತೆ ತಾವೇ ಒದಗಿಸಿಕೊಳ್ಳದೆ, ಪರರನ್ನು ಅವಲಂಬಿಸುವರು. ಅವರಿಗೆ ಕೆಲಸ ಬೊಗಸೆಗಳು ಉಳಿಯದಿರಲು ಹಾಳು ಹರಟೆಯನ್ನು ಕೊಚ್ಚುತ್ತ ಮನೆ ಮಾರುಗಳನ್ನು ಹಾಳುಗೆಡವಿ, ಯಾವ ಕೆಲಸವನ್ನೂ ಮಾಡದಾಗುವರು.

ಈ ಮೇರೆಗೆ ಹಳ್ಳಿಯ ಹಿರಿಯರು. ಹಳ್ಳಿಯ ಧನವನ್ನೆತ್ತಿಕೊಂಡು ಪಟ್ಟಣಕ್ಕೆ ಹೋಗಿ ವಿಲಾಸಿಗಳಾಗುವರು. ಇದಲ್ಲದೆ ಹಳ್ಳಿಯ ಬುದ್ಧಿಶಾಲಿಗಳೂ ಕೈಕೆಲಸಗಾರರೂ ಹಳ್ಳಿಯವರಿಗೆ ಉಪಯೋಗ ಉಳ್ಳವರಾಗದೆ ಪಟ್ಟಣವನ್ನು ಸೇರಿ, ತಮ್ಮ ಶ್ರಮದ ಫಲವನ್ನೂ ಕುಶಲತೆಯನ್ನೂ ಪಟ್ಟಣಕ್ಕೆ ಈಡು ಮಾಡುವರು ಆದಕಾರಣ ನಮ್ಮ ದೇಶವು ಹಾಳಾಗಬಾರದೆಂದರೆ ಈ "ಹಳ್ಳಿಗಳಿಗೆ ತಿರುಗಿರಿ" ಎಂಬ ಮಾತನ್ನು ನಾವು ಮನಗಾಣಿಸಬೇಕಲ್ಲವೇ ?

ಮೇಲಿನ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (೧೯೩೯)

೧. ಈ ಪೋರೆಗೆ ಬುದ್ಧಿ ಹೇಳುವವನ ಉದ್ದೇಶಗಳೇನು ? ೨. ಅವನ ಸೂಚನೆಗಳು ನಿಮಗೆ ಸಮ್ಮತವೋ ? ಯಾಕೆ ? ೩. ಪಟ್ಟಣಗಳನ್ನು ಸೇರಿದ ಜನರು ಯಾವ ಅವನತಿಯನ್ನು ಹೊಂದುವರೆಂದು ಹೇಳಿದೆ ? ೪. ಹಳ್ಳಿಗಳು ಯಾಕೆ ಹಾಳಾಗಿವೆ ? ೫. ಕೆಳಗಿನ ಶಬ್ದಗಳ ಅರ್ಥವನ್ನು ಸ್ಪಷ್ಟಮಾಡಿರಿ ಸ್ವೇಚ್ಛಾಚಾರಿ, ಸ್ವಹಿತಸಾಧಕ, ಈಡು ಮಾಡು, ವಿಲಾಸಿ. ೬. ಕೆಳಗಿನ ವಾಕ್ಯಗಳ ಅರ್ಥವನ್ನು ಸ್ಪಷ್ಟ ಮಾಡಿರಿ (ಅ) ಒಬ್ಬರ ಹಂಗು ಒಬ್ಬರಿಗೆ ಉಳಿಯುವದಿಲ್ಲ. (ಬ) ಹಳ್ಳಿಯ ಹಿರಿಯರು ಹಳ್ಳಿಯ ಧನವನ್ನು ಎತ್ತಿಕೊಂಡು ಹೋಗುವರು.

ಉತ್ತರ:— ೧. ಎಲ್ಲರೂ ಹಳ್ಳಿಯ ಸುಧಾರಣೆಗೆ ಪ್ರಯತ್ನಿಸಬೇಕು ಹಳ್ಳಿಗಳು ತುಚ್ಛವೆಂದು ತಿಳಿದು ಪಟ್ಟಣವನ್ನು ಸೇರಬಾರದು. ಹಳ್ಳಿಯ ಹಿರಿಯರು ನಿರುದ್ಯೋಗಿಗಳಾಗದೆ ಹಳ್ಳಿಯ ಉನ್ನತಿಗೆ ಸಹಾಯಕರಾಗಬೇಕು. ಹಳ್ಳಿಯ ದುಡ್ಡನ್ನು ಪಟ್ಟಣಕ್ಕೆ ಒಯ್ಯುವದರ ಬದಲು, ಪಟ್ಟಣದ ಲಾಭವನ್ನು ಹಳ್ಳಿಗೆ ಒದಗಿಸಿ ಕೊಡಬೇಕು. ಹಳ್ಳಿಯ ಸುಧಾರಣೆಗಳೇ ಸ್ವರಾಜ್ಯದ ಗುಟ್ಟು.

೨. ಈಗಿನ ಕಾಲದಲ್ಲಿ ಹಳ್ಳಿಗಳು ಬಹಳ ಕೀಳು ಸ್ಥಿತಿಗೆ ಇಳಿದಿರುವದರಿಂದ ಪ್ರತಿಯೊಬ್ಬರು ಹಳ್ಳಿಯ ಸುಧಾರಣೆಯನ್ನು ಮಾಡುವುದು ಅತ್ಯವಶ್ಯ. ಎಷ್ಟೋ ಜನರು ಪಟ್ಟಣದ ಸೊಗಸಿಗೆ ಮರುಳಾಗಿ ಪಟ್ಟಣವನ್ನು ಸೇರಿದ್ದು ನಿಜ. ಹೀಗೆ ಮಾಡುವುದು ಅಯೋಗ್ಯವು. ಹಿಂದುಸ್ತಾನವು ಹಳ್ಳಿಗಳ ದೇಶ. ಹಳ್ಳಿಗಳು ಹಾಳಾಗಿರುವದರಿಂದ ದೇಶವೇ ಹಾಳಾದಂತೆ ಆಗಿರುವದು. ಪಟ್ಟಣಕ್ಕೆ ಹೋದ ದುಡ್ಡು, ವಿಲಾಸಕ್ಕೆ ನೀರಿನಂತೆ ಖರ್ಚಾಗಿ ಹೋಗುತ್ತದೆ. ಆದರೆ ಪಟ್ಟಣದಿಂದ ಹಳ್ಳಿಗೆ ಖರ್ಚು ಮಾಡಿದ್ದು ಪಟ್ಟಣಕ್ಕೆ ಒಂದು ರೀತಿಯಿಂದ ಸಹಾಯಕವಾಗುವದು. ಹಳ್ಳಿಯ ಸುಧಾರಣೆ ಎಂದರೆ ದೇಶದ ಸುಧಾರಣೆಯು.

೩. (ಅ) ವಿಷಯೋಪಭೋಗಕ್ಕಿಳಿಯುತ್ತಾರೆ. (ಬ) ಧರ್ಮಾಚರಣೆಯನ್ನು ಬಿಡುತ್ತಾರೆ. (ಕ) ಸ್ವೇಚ್ಛಾಚಾರಿಗಳಾಗುತ್ತಾರೆ. (ಡ, ಸ್ವಾರ್ಥಿಗಳಾಗುತ್ತಾರೆ. (ಇ) ಸ್ನೇಹಭಾವವನ್ನು ಬಿಡುತ್ತಾರೆ. (ಪ) ಪರಾವಲಂಬಿ

ಯಾಗಿ ಹರಟಿಕೊಚ್ಚುವದರಲ್ಲಿ ಕಾಲಕಳೆಯುತ್ತಾರೆ. (ಗ) ತಮ್ಮ ಉದ್ಯೋಗವನ್ನು ಮರೆತು, ಮನೆತನಗಳನ್ನು ಹಾಳುಗೆಡವಿಕೊಳ್ಳುತ್ತಾರೆ.

೪. (ಅ) ಹಳ್ಳಿಗಳ ಹಿರಿಯರು ತಮ್ಮ ಆದಾಯವನ್ನು ಕಟ್ಟಿಕೊಂಡು ಪಟ್ಟಣವನ್ನು ಹೋಗಿ ಸೇರಿದರು. (ಬ) ಹಳ್ಳಿಗಳೊಳಗಿನ ಬುದ್ಧಿಶಾಲಿಗಳೂ ಕೆಲಸಗಾರರೂ ಹಳ್ಳಿಗಳನ್ನು ಬಿಟ್ಟು ಪಟ್ಟಣವನ್ನು ಸೇರುತ್ತಾರೆ.

೫. ಸ್ವೇಚ್ಛಾಚಾರಿ=ಮನಬಂದಂತೆ ವರ್ತಿಸುವವ.
ಸ್ವಹಿತಸಾಧಕ=ತನ್ನ ಲಾಭವನ್ನೇ ನೋಡುವವ
ಈಡುಮಾಡು=ಅರ್ಪಿಸು.
ವಿಲಾಸಿ=ಸ್ತ್ರೀಲೋಲುಪ, ವಿಷಯೋಪಭೋಗಿ)

೬. (ಅ ಪಟ್ಟಣಗಳಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಹಳ್ಳಿಗಳಿಂದ ಬಂದವರಾದುದರಿಂದ ಒಬ್ಬರಿಗೊಬ್ಬರಲ್ಲಿ ಯಾವ ಪ್ರಕಾರದ ಸಂಬಂಧವು ಇರುವದಿಲ್ಲ. ಆದ್ದರಿಂದ ಒಬ್ಬರ ಹಂಗು ಒಬ್ಬರಿಗೆ ಉಳಿಯುವುದಿಲ್ಲ. (ಬ) ಹಳ್ಳಿಯಲ್ಲಿದ್ದ ದೊಡ್ಡ ದೊಡ್ಡ ಜಮೀನದಾರರು ಪಟ್ಟಣಕ್ಕೆ ಹೋಗಿ ಇರಹತ್ತುವರು. ತಮ್ಮ ಹೊಲದ ಉತ್ಪನ್ನವನ್ನು ಅಲ್ಲಿಯೇ ತರಿಸಿಕೊಳ್ಳುವರು. ಆದ್ದರಿಂದ ಹಳ್ಳಿಯ ಹಿರಿಯರು ಧನವನ್ನು ಎತ್ತಿಕೊಂಡು ಹೋದಂತಾಯಿತು.

ಪ್ರ: ೫. ಈ ಗದ್ಯಭಾಗವನ್ನು ಓದಿ, ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (೧೯೪೦)

ಉಗಿಯ ಸಾಮರ್ಥ್ಯವನ್ನರಿಯದ ಮಾನವನಿಲ್ಲ. ಇದು ಇಂದು ಎಲ್ಲ ಕ್ಷೇತ್ರಗಳಲ್ಲಿ ತನ್ನ ಶಕ್ತಿಯನ್ನು ತೋರುತ್ತಿದೆ. ಅದರ ಪ್ರಚಂಡ ಸಾಮರ್ಥ್ಯದ ನೆಲೆ ಎಲ್ಲಿ ? ಸಂಗ್ರಹದಲ್ಲಿ ಅಲ್ಲವೇ ? ಸಂಯಮನದಲ್ಲಿ ಅಲ್ಲವೆ ? ಸಂಯಮವೆಂದರೆ ಬಿಗಿಹಿಡಿಯುವದು. ನಮ್ಮ ಇಂದ್ರಿಯಗಳನ್ನು ಮನಸ್ಸಿನಿಂದಲೂ ಮನಸ್ಸನ್ನು ವಿವೇಕದಿಂದಲೂ ಬಿಗಿಹಿಡಿಯುವ ಆತ್ಮ ಸಂಯಮವು. ಧನವನ್ನು ಬಳಿಸದೆ ಗಳಿಸಿಡುವುದೇ ಧನ ಸಂಯಮವು. ಈ ವೇಳೆಗೆ ನಮ್ಮ ಶಕ್ತಿಗಳನ್ನೆಲ್ಲ ಅತ್ತಿತ್ತ ಹರಿಯಗೊಡದೆ, ಹಿಡಿತದಲ್ಲಿಟ್ಟು

ವೆಂದರೆ ಅವುಗಳ ಸಾಮರ್ಥ್ಯವು ಮಿತಿ ಮೀರಿ ಬೆಳೆಯುವುದು. ವಿವೇಕದ ನಿಯಂತ್ರಣವನ್ನು ತಪ್ಪಿಸಿ ಮುಂಗನಂತೆ ಕುಣಿದಾಡುವ ಮನಸ್ಸಿನಲ್ಲಿ, ಯಾವ ಮಾತನ್ನೂ ಅರಿಯುವ ಶಕ್ತಿ ಇರುವದಿಲ್ಲ ಮಿತಿಯನ್ನರಿಯದೆ ಅತಿಯಾಗಿ ವೆಚ್ಚ ಮಾಡುವವನ ಭಾಂಡಾರವು ಕೆಲಕಾಲದಲ್ಲಿಯೇ ಬರಿದಾಗುವದು. ಆತನು ಬಡತನದ ಬಸಣಿಗೆ ಈಡಾಗುವನು

ಯಂತ್ರದಲ್ಲಿ ಸಂಯುತವಾದ ಉಗಿಯು ಪ್ರಚಂಡವಾದ ಹಡಗುಗಳನ್ನು ಎಳೆಯುಬಹುದು ಸುರಂಗದಲ್ಲಿ ಸಂಗ್ರಹಿತವಾದ ಮದ್ದು, ದೊಡ್ಡ ಬೆಟ್ಟಗಳನ್ನು ಒಡೆಯುಬಹುದು. ಅದೇ ಮೇರೆಗೆ ಸೃಷ್ಟಿಯಲ್ಲಿಯ ಮಿಕ್ಕ ಶಕ್ತಿಗಳು ಸಂಯಮನದಿಂದ ತಮ್ಮ ತಮ್ಮ ಬಲಗಳನ್ನು ಬೆಳೆಸಿಕೊಳ್ಳುವವು

ಸೂರ್ಯಕಾಂತಮಣಿಯಲ್ಲಿ ಕೇಂದ್ರೀಕೃತವಾದ ಕಿರಣಗಳಲ್ಲಿ ಎಲ್ಲ ವಸ್ತುಗಳನ್ನು ಸುಡುವ ಸಾಮರ್ಥ್ಯವು ಬರುವಂತೆ, ಸಂಯಮ ಮನಸ್ಸಿನಲ್ಲಿಯೂ ಅಂತಹ ಅದ್ಭುತಶಕ್ತಿಯು ವ್ಯಕ್ತವಾಗುವುದು. ಮನವನ್ನು ಗೆದ್ದವರೇ ಜನರನ್ನೂ ಜಗತ್ತನ್ನೂ ಗೆಲ್ಲುವರೆಂದು ನಮ್ಮ ಹಿರಿಯರಿಯರು ಉಸುರಿರುವರು.

ಆದರೆ ಈ ಸಂಯಮವನ್ನು ಮಾಡುವದೆಂತು? 'ಕಣ್ಣು ನಾಲಿಗೆಗಳ ಸಂಯಮವು, ಮನಸಂಯಮದ ಪೂರ್ವ ಸಿದ್ಧತೆಯೆಂದು ಹಿರಿಯರು ಹೇಳಿರುವರು. ಕಣ್ಣು ಕಂಡದ್ದನ್ನೂ ನಾಲಿಗೆ ಸವಿದದ್ದನ್ನೂ ಮನಸ್ಸು ಬೇಡುವುದು. ಅದಕ್ಕಾಗಿ "ಇಂಥಾ ಆಕರ್ಷಕ" ವಸ್ತುಗಳನ್ನು ದೂರದಲ್ಲಿಟ್ಟು ವಿವೇಕದಿಂದ ಮನಸ್ಸಿನ ಹರಿದಾಟವನ್ನು ತಡೆಯುವ ಅಭ್ಯಾಸವನ್ನು ನಿಧಾನವಾಗಿ ಸಾಗಿಸಿದರೆ, ಮನಃಸಂಯಮವು ಸಾಧ್ಯವಾಗಬಹುದು. ಆದರೆ ದೃಢನಿಶ್ಚಯದಿಂದ ದೀರ್ಘಕಾಲದವರೆಗೆ ಅದಕ್ಕೆ ಕಲಿಸಲು ಬೇಕು; ಕಲಿಸಿದ್ದನ್ನು ಕಲಿಯುವ ಶಕ್ತಿಯು ಮನಸ್ಸಿನಲ್ಲಿದೆ.

ತಾತ್ಪರ್ಯವೆಂದರೆ ಸಂಯಮವಿಲ್ಲದೆ ಸಾಮರ್ಥ್ಯವಿಲ್ಲ. ಅದೇ ಕಸುವಿನ ಕುಲಿಮೆ; ಬಲದ ಸೆಲೆ.

ಪ್ರಶ್ನೆಗಳು:— (೧) ಉಗಿಯ ಸಾಮರ್ಥ್ಯದ ರಹಸ್ಯವೇನು? (೨) ಆತ್ಮಸಂಯಮವೆಂದರೇನು? (೩) ಬೇರೆ ಬೇರೆ ಶಕ್ತಿಗಳ ಸಂಯಮದಿಂದ

ಬಲವು ಹೇಗೆ ಬೆಳೆಯುವದು? ಉದಾಹರಣೆಗಳನ್ನು ಹೇಳಿರಿ. (೪) ಸಂಯಮವು ಹೇಗೆ ಸಾಧ್ಯವಾಗುವದು? (೫) ಸಂಯಮವು ಕಸುವಿನ ಕುಲಿಮೆ; ಬಲದ ಸೆಲೆ ಅಂದರೇನು?

ಉತ್ತರ:— ೧. ಉಗಿಯ ಸಾಮರ್ಥ್ಯವನ್ನು ತಿಳಿಯದ ಮನುಷ್ಯನಿಲ್ಲ. ಎಲ್ಲರೂ ತಿಳಿದವರಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿ ಇದ್ದು ತನ್ನ ಶಕ್ತಿಯನ್ನು ತೋರಿಸುತ್ತಿರುವದು; ಮತ್ತು ದೊಡ್ಡ ದೊಡ್ಡ ಹಡಗುಗಳನ್ನು ಎಳೆಯುವದು. ಅದರಂತೆ ದೊಡ್ಡ ದೊಡ್ಡ ಗುಡ್ಡಗಳನ್ನು ಮದ್ದಿನಿಂದ ಒಡೆಯುವದು.

೨. ನಮ್ಮ ಇಂದ್ರಿಯಗಳನ್ನು ಮನಸ್ಸಿನಿಂದಲೂ ಮನಸ್ಸನ್ನು ವಿವೇಕದಿಂದಲೂ ಬಿಗಿಹಿಡಿಯುವದೇ ಆತ್ಮಸಂಯಮವು.

೩. ಯಂತ್ರದಲ್ಲಿ ಸಂಯಮಿತವಾದ ಉಗಿಯು, ಪ್ರಚಂಡವಾದ ಹಡಗಗಳನ್ನು ಎಳೆಯುವದು. ಮತ್ತು ಮದ್ದಿನಿಂದ ದೊಡ್ಡ ದೊಡ್ಡ ಗುಡ್ಡಗಳನ್ನು ಒಡೆಯುವದು. ಸೂರ್ಯಕಾಂತಿಯ ಕೇಂದ್ರೀಕರಣವಾದ ಕಿರಣಗಳಲ್ಲಿ ಎಲ್ಲ ಪದಾರ್ಥಗಳನ್ನು ಸುಡುವ ಸಾಮರ್ಥ್ಯವು ಇರುತ್ತದೆ. ಮನವನ್ನು ಗೆದ್ದವರು, ಜಗತ್ತನ್ನೇ ಗೆಲ್ಲಬಹುದು; ಎಂದು ಹಿರಿಯರು ಅನ್ನುತ್ತಾರೆ.

೪. ಕಣ್ಣು ಕಂಡದನ್ನೂ ನಾಲಿಗೆ ಸವಿದದ್ದನ್ನೂ ಮನಸ್ಸು ಬೇಡುವದು; ಅದಕ್ಕಾಗಿ ಅದು ಬೇಡುವಂಥ ವಸ್ತುಗಳನ್ನು ದೂರದಲ್ಲಿ ಇರಿಸಿ ಮನಸ್ಸು ಬಿಗಿಹಿಡಿಯಬೇಕು.

೫. ಕಮ್ಮಾರನ ಕುಲಿಮೆಯಲ್ಲಿ ಸಂಯಮವು, ಕಸುವಿನ ಶಿಕ್ಷಣವನ್ನು ಹೊಂದಬೇಕಾಗಿದೆ. ಸಂಯಮದಿಂದ ಸಾಮರ್ಥ್ಯದ ಸೆಲೆಯೇ ನಮಗೆ ದೊರೆತಂತಾಗುವದು

ಪ್ರ:—೬ ಈ ಗದ್ಯವನ್ನು ಚೆನ್ನಾಗಿ ಓದಿಕೊಂಡು, ಕೆಳಗೆ ಕೊಟ್ಟ ಪ್ರಶ್ನಗಳಿಗೆ ಉತ್ತರ ಬರೆಯಿರಿ. (೧೯೪೧)

ಹಳ್ಳಿಗರೊಡನೆ ಬೆರೆತು, ಅವರ ದೈನಿಕ ಜೀವನದಲ್ಲಿ ಭಾಗಿಗಳಾಗಿ ಅವರ ವಿಚಾರ, ತಿಳಿವು, ಇವುಗಳ ಸ್ವರೂಪವನ್ನು ಕಂಡುಹಿಡಿಯಬಹುದು. ಮೊಟ್ಟಮೊದಲು ನಮ್ಮ ಮನಸ್ಸಿಗೆ ಅಂಟುವ ವಿಷಯವಾವುದೆಂದರೆ, ರೈತರಿಗೆ ಇಹಲೋಕ ಕಾರ್ಯಗಳಲ್ಲಿ ಇರುವ ನಿರುತ್ಸಾಹ, ಔದಾಸೀನ್ಯ ಮತ್ತು ಪರಲೋಕ ಕಾರ್ಯಗಳಲ್ಲಿರುವ ಆಸಕ್ತಿ. ವೇದ, ಪುರಾಣಗಳು ಐಹಿಕದ ನಶ್ವರತೆಯನ್ನೂ ಪರಲೋಕದ ಸ್ಥಿರತೆಯನ್ನೂ ಸಾವಿರಾರು ವರ್ಷಗಳಿಂದ ನಮ್ಮವರಿಗೆ ಸಾರುತ್ತ ಬಂದಿವೆ. ಆ ಉಪದೇಶಗಳು ಜನರ ದಿನದ ಜೀವನದಲ್ಲಿ ಮೂಡಿರುವವು. "ಮುಕ್ತಿಯೇ ಶಾಶ್ವತ ಸುಖ, ಅದನ್ನು ಸಂಪಾದಿಸುವದೇ ಮನುಷ್ಯನ ಇತಿಕರ್ತವ್ಯ," ಎನ್ನುವದೇ ಭಾರತೀಯರ ವಿಚಾರ ತಿಳುವಳಿಕೆಯ ತಿರುಳು. "ಬಡತನಕೆ ಕಂಗೆಡದೆ ಧನವ ಗಳಿಸದೆ ಮಡದಿ ಮನೆವಾರ್ತೆ ಮಕ್ಕಳ ಮಮತೆಯಲಿ ಮನವಿಡುವೆ ದೃಢವಿರಕ್ತಿಯಲಿರಲು ಮಾನವನು ದೇವನ ಸಮನವನು" ಎಂಬುದೇ ನಮ್ಮವರ ನಂಬುಗೆ ಈ ನಂಬುಗೆಯೊಡನೆ ಇನ್ನೊಂದು ನಂಬುಗೆಯೂ ನಮ್ಮವರಲ್ಲಿ ನಡೆದು ಬಂದಿದೆ. ಅದಾವುದೆಂದರೆ ನಮ್ಮ ಪುನರ್ಜನ್ಮದ ವಿಚಾರ. ಈ ಜನ್ಮದ ಪಾಪ ಕರ್ಮಗಳ ಫಲಭೋಗಕ್ಕಾಗಿ, ನಾವು ಮರಳಿ ಹುಟ್ಟುವೆವೆಂಬ ವಿಚಾರವು ನಮ್ಮನ್ನು ಸನ್ಮಾರ್ಗಕ್ಕೆ ತೊಡಗಿಸುವದೆಂಬುದು. ಪುನರ್ಜನ್ಮ ವಿಚಾರದಲ್ಲಿ ಒಳ್ಳೆಯ ತತ್ವವಿದ್ದರೂ ಈ ಜನ್ಮದಲ್ಲಿ ನಾವು ಪಡುತ್ತಿರುವ ಕಷ್ಟಕ್ಕೆ ನಮ್ಮ ಪುನರ್ಜನ್ಮದ ಪಾಪವೇ ಕಾರಣವೆಂಬ ತತ್ವವೂ ಅದರೊಡನೆ ಬರುವದರಿಂದ ಇಂದಿನ ಕಷ್ಟವನ್ನು ನಿವಾರಿಸಿಕೊಳ್ಳಲು, ನಾವು ಪ್ರಯತ್ನಿಸುವದು ವ್ಯರ್ಥವೆಂಬ ನಂಬುಗೆಯೂ ಬಾರದಿರದು. ರೈತರೊಡನೆ ಅವರಿಗೊದಗಿದ ಕಷ್ಟಗಳ ವಿಚಾರವನ್ನು ಮಾಡಹೋದರೆ, ಅವರಲ್ಲಿ ನೆಲೆಸಿರುವ ಈ ನಂಬುಗೆಯು ನಮಗೆ ಕಾಣಬರುವದು. ಒಂದು ವರ್ಷ ಪೈರು ನಷ್ಟವಾದರೆ, ಅದು ಏಕೆ ನಷ್ಟವಾಯಿತು; ಅದರ ಕಾರಣವು ಪರಿಹರಿಸಲು ಬರುವಂಥದೆ ಅಥವಾ ಬಾರದಂಥದೇ ಎಂಬುದನ್ನು ಪರೀಕ್ಷಿಸದೆ, ಅದು ದೈವ ಲೀಲೆ, ಪೂರ್ವ ಜನ್ಮದ ಕರ್ಮದ ಫಲವೆಂದು ಹೇಳುವ ರೈತರೇ ಬಹಳ. ಆದ್ದರಿಂದ ಬಹು ಜನ ಹಳ್ಳಿಗರು ತಮ್ಮ ಸುತ್ತಲಿನ ಪರಿಸ್ಥಿತಿಯನ್ನು ಉತ್ತಮ ಮಾಡಿಕೊಳ್ಳಲು ಪ್ರಯತ್ನಿಸದೆ ಇರುವರು.

ಪ್ರಶ್ನೆಗಳು: (೧) ಹಳ್ಳಿಗ [illegible]ಚಾರವನ್ನು ಪರೀಕ್ಷಿಸಿದರೆ, ಯಾವ ಮುಖ್ಯ ಸಂಗತಿಗಳು ನಿಮಗೆ ಒಡೆದು [illegible]ಣುವವು? (೨) ವೇದ, ಪುರಾಣಗಳು ನಮ್ಮ [illegible]ಜನರಿಗೆ ಯಾವ ತತ್ವಗಳನ್ನು ಹೇಳಿವೆಯಂತೆ? ಅದರಿಂದಾದ ಹಾನಿ ಯಾವುದು? (೩) ಭಾರತೀಯರ ವಿಚಾರಗಳ ತಿರುಳನ್ನು ನಿಮ್ಮ ಮಾತಿನಲ್ಲಿ ಸ್ಪಷ್ಟ ಮಾಡಿರಿ. (೪) ಪೂರ್ವಜನ್ಮ ವಿಚಾರದಲ್ಲಿ ಯಾವ ತತ್ವವು ಒಳ್ಳೆಯದು, ಯಾವದು ಒಳ್ಳೇಯದಲ್ಲ? ಏಕೆ? (೫) ರೈತರು ತಮಗೆ ಒದಗುವ ಕಷ್ಟಗಳನ್ನು ನಿವಾರಿಸಿಕೊಳ್ಳದಿರುವದಕ್ಕೆ, ಅವರ ಯಾವ ವಿಚಾರವು-ಅಡ್ಡಿಯಾಗಿದೆ? ( ) ಮೇಲಿನ ಗದ್ಯದಲ್ಲಿ ಗೆರೆ ಹಾಕಿದ ವಾಕ್ಯದ ಅರ್ಥವನ್ನು ಸ್ಪಷ್ಟ ಮಾಡಿರಿ.

ಉ: — (೧) ಈ ಲೋಕದ ವಿಷಯವಾಗಿ ನಿರುತ್ಸಾಹ, ಔದಾಸೀನ್ಯ, ಪರಲೋಕ ಕಾರ್ಯಗಳಲ್ಲಿ ಇರುವ ಆಸಕ್ತಿ.

(೨) ಈ ಲೋಕದಲ್ಲಿ ನಶ್ವರತೆ ಮತ್ತು ಪರಲೋಕ ಸ್ಥಿರತೆ, ಮುಕ್ತಿಯೇ ಶಾಶ್ವತ ಸುಖ, ಅದನ್ನು ಸಂಪಾದಿಸುವದೇ ಇತಿ ಕರ್ತವ್ಯ. ಈ ತತ್ವಗಳಿಂದ ಧರ್ಮಕರ್ಮಗಳಲ್ಲಿ ಹೆಚ್ಚು ಆಸಕ್ತರಾಗಿ, ಅದರಲ್ಲಿಯೇ ಆಯುಷ್ಯವನ್ನು ಕಳೆಯುತ್ತಾರೆ. ಅದರಿಂದ ಜನರು ನಿರುದ್ಯೋಗಿಗಳೂ ನಿರುತ್ಸಾಹಿಗಳೂ ಆಗುತ್ತಾರೆ.

(೩) ಜಗತ್ತಿನಲ್ಲಿ ಎಲ್ಲ ಸುಖಗಳೂ ಕ್ಷಣಿಕವಾದವು, ಮುಕ್ತನಾಗುವದೇ ಶಾಶ್ವತ ಸುಖವು; ಆದುದರಿಂದ [illegible]ದನ್ನು ಸಂಪಾದಿಸುವದೇ ಮುಖ್ಯ ಕರ್ತವ್ಯ.

(೪) "ನಾವು ಮರಳಿ ಹುಟ್ಟು[illegible]ವೆಂಬ ವಿಚಾರವು ನಮನ್ನು ಸನ್ಮಾರ್ಗಕ್ಕೆ ತೊಡಗಿಸುವದೆಂಬುದು" ಪೂ[illegible]ರ್ಜನ್ಮ ವಿಚಾರದಲ್ಲಿ ಒಳ್ಳೆ ತತ್ವವು. "ನಾವು ಕಷ್ಟವನ್ನು ಅನುಭೋಗಿಸುವದಕ್ಕೆ ಹಿಂದಿನ ಜನ್ಮದ ಪಾಪವೇ ಕಾರಣ. ಅದರಿಂದ ಇಂದಿನ ಕಷ್ಟವನ್ನು ನಿವಾರಿಸುವದು ವ್ಯರ್ಥವೆಂಬ ತಿಳುವಳಿಕೆಯುಂಟಾ[illegible]ವದು" ಇದು [illegible]ಳ್ಳೆಯದಲ್ಲ.

(೫) ಒಂದು ವರ್ಷ ಪ್ಕೆರ[illegible]ಷ್ಟವಾದರೆ ಅದರ ಕಾರಣವನ್ನು ವಿಚಾರಿಸದೆ ದೈವವನ್ನು ಅವಲಂ[illegible]ವರು

೬ ಬಡತನಕ್ಕೆ ಅಂಜಕೂಡದು, ಧನ ಗಳಿಸುವುದು ಅನವಶ್ಯ, ಹೆಂಡರು ಮಕ್ಕಳಲ್ಲಿ ಮಮತೆಯನ್ನು ಇಡದೆ ವಿರಕ್ತನಾದರೆ, ಆ ಮನುಷ್ಯನು ದೇವತ್ವವನ್ನು ಹೊಂದುವನು.

ಪ್ರ ೬. ಒಂದಾನೊಂದು ಕಾಲದಲ್ಲಿ ಅಪಾರವಾದ ಸಂಪತ್ತಿನ ಬೀಡು ಎನಿಸಿ ಮೆರೆದ ಭರತಭೂಮಿಯ ಆ ಸಂಪತ್ತು ಈಗ ಎತ್ತ ಮಾಯವಾಯಿತು? ನಮ್ಮ ನಾಡು ಈಗ ಜಗತ್ತಿನ ಬಡನಾಡುಗಳಲ್ಲಿ ಎಣಿಕೆಯಾಗುತ್ತದೆಯಲ್ಲ? ಭಾರತೀಯನ ತಿಂಗಳ ಸರಾಸರಿ ಹುಟ್ಟುವಳಿ ೧೦ ರೂಪಾಯಿ ಗಿಂತ ಕಡಿಮೆ; ಆತನ ಸರಾಸರಿ ಆಯುಷ್ಯ ೩೦ಕ್ಕಿಂತ ಕಡಿಮೆ; ಮನೆಗೊಂದು ರೇಡಿಯೋ, ತಲೆಗೊಂದು ಮೋಟಾರು ಈ ನಾಡಿಗೆ ಕನಸೇ ಸರಿ; ಎಂದು ಮೊದಲಾಗಿ ನಮ್ಮ ನಾಡಿನ ಬಡತನವನ್ನು ವಿದ್ವಾಂಸರು ಪರಿಪರಿಯಿಂದ ತೋರಿಸುತ್ತಿರುವರಲ್ಲ!

ಹೀಗಿದ್ದರೂ ನಾನು ಮಾತ್ರ ಭಾರತವು ಇನ್ನೂ ಸಂಪತ್ತಿನದೆಂದೇ ಹೇಳುತ್ತೇನೆ. ಹಾಗಾದರೆ ಈ ನಾಡಿನ ಸಂಪತ್ತು ಯಾವದು? ಸರಕಾರದ ಬೊಕ್ಕಸದೊಳಗಿನ ನೋಟಿನ ಪುಡಿಕೆಗಳೋ? ಸಂಸ್ಥಾನಿಕರ ಅರಮನೆಯೊಳಗಿನ ಮುತ್ತು ರತ್ನಗಳೋ ಬ್ಯಾಂಕುಗಳಲ್ಲಿಯ ಶ್ರೀಮಂತರ ಲಕ್ಷಾವಧಿ ರೂಪಾಯಿಗಳ ಇಡುಗಂಟುಗಳೋ? ಅಲ್ಲ. ಇದಾವುದೂ ಸಂಪತ್ತೆಂದು ನಾನು ಗಣಿಸಲಾರೆನು. ವನಸ್ಪತಿಗಳ, ಪೈರುಗಳ ಬೆಳವಣಿಗೆಗೆ ಹದವಾದ ಸೆಕೆಯನ್ನೊದಗಿಸುತ್ತ ನಮ್ಮ ನಾಡಿನ ಮೇಲೆ ಬೆಳಗುವ ಸೂರ್ಯನೂ ನಮ್ಮ ನಾಡಿನ ಫಲದ್ರೂಪವಾದ ಭೂಮಿಯೂ ಭೂಮಿಗೆ ನೀರುಣಿಸುವ ಹೊಳೆಗಳೂ ಖನಿಜಗಳನ್ನೊಳಗೊಂಡ ಬೆಟ್ಟಗಳೂ ನೈತಿಕ ಬಲದಿಂದ ಕಂಗೊಳಿಸುವ ಕೋಟಿ ಕೋಟಿ ಜನರೂ ಇದಕ್ಕೂ ಹೆಚ್ಚಾಗಿ ನಮ್ಮ ನಾಡಿನಲ್ಲಿ ಜನ್ಮವೆತ್ತ, ಬೋಸ, ರಾಮನ್, ರಾಮಾನುಜ, ಠಾಕೂರ, ವಿಶ್ವೇಶ್ವರಯ್ಯ ಮೊದಲಾದ ಮೇಧಾವಿಗಳೂ ಈ ನಾಡಿನ ಸಂಪತ್ತೆಂದು ನಾನು ಹೇಳುವೆ.

ಮೇಲಿನ ವಾಕ್ಯಗಳನ್ನು ಓದಿ, ಕೆಳಗೆ ಬರೆದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ? (೧೯೪೩)

(೧) ನಮ್ಮ ನಾಡಿನ ಬಡತನವು ಯಾವ ಯಾವ ಮಾತುಗಳಿಂದ ಸೂಚಿತವಾಗಿದೆ? (೨) ನಮ್ಮ ಜನರ ಆಯುರ್ಮರ್ಯಾದೆಯು ಬಡತನ ವನ್ನು ಹೇಗೆ ಸೂಚಿಸುತ್ತದೆ? (೩) ಸಾಮಾನ್ಯ ಜನರು ಸಂಪತ್ತೆಂದು ಏತಕ್ಕೆ ಕರೆಯುವರು? (೪) ನಮ್ಮ ನಿಜವಾದ ಸಂಪತ್ತು ಯಾವದು?

(೫) 'ನೈತಿಕ ಬಲದಿಂದ ಕಂಗೊಳಿಸುವ ಜನರು' ಹೀಗೆಂದರೇನು? (೬) ಈ ವಾಕ್ಯವೃಂದಗಳಿಗೆ ತಕ್ಕ ತಲೆಬರಹವನ್ನು ಕೊಡಿರಿ.

ಉತ್ತರಃ—೧. ಭಾರತೀಯನ ತಿಂಗಳ ಆದಾಯ ೯೦ ರೂಪಾಯಿ ಗಿಂತ ಕಡಿಮೆ ಮತ್ತು ಅವನ ಆಯುಷ್ಯ ೩೦ ಕ್ಕಿಂತ ಕಡಿಮೆ. ಪರದೇಶ ದಲ್ಲಿರುವಂತೆ ಮನೆಗೊಂದು ರೇಡಿಯೋ, ಒಂದು ಮೋಟಾರು, ಇವನ್ನು ಭಾರತೀಯನು ನೋಡುವದು ಕನಸಿನಲ್ಲಿಯೋ ಸರಿ.

೨. ಭಾರತೀಯನಿಗೆ ಪೌಷ್ಟಿಕ ಆಹಾರವು ಬಡತನದ ಮೂಲಕ ದೊರೆಯದ್ದರಿಂದ ಅವನ ಆಯುರ್ಮರ್ಯಾದೆ ಕಡಿಮೆಯಾಗಿದೆ, ಆದ್ದ ರಿಂದ ಅದು ಬಡತನವನ್ನು ಸೂಚಿಸುತ್ತದೆ.

೩. ಸರಕಾರದ ಖಜಾನೆಯಲ್ಲಿದ್ದ ನೋಟಿನ ಪುಡಿಕೆಗಳು, ಮತ್ತು ಬ್ಯಾಂಕಿನಲ್ಲಿಯ ಇಡುಗಂಟುಗಳು, ಸಂಸ್ಥಾನಗಳಲ್ಲಿಯ ಮುತ್ತು ರತ್ನಗಳ ದೇಶದ ಸಂಪತ್ತು ಎಂದು ಸಾಮಾನ್ಯ ಜನರು ಹೇಳುತ್ತಾರೆ.

೪. ವನಸ್ಪತಿಗಳಿಗೆ ಮತ್ತು ಬೆಳೆಗಳಿಗೆ ಹದವಾದ ಉಷ್ಣತೆಯನ್ನು ಕೊಡುತ್ತಿರುವ ಸೂರ್ಯನು, ಮತ್ತು ಫಲವತ್ತಾದ ಭೂಮಿ, ನೀರುಣಿ ಸುವ ಹೊಳೆಗಳು. ಮತ್ತು ಭರತ ಭೂಮಿಯಲ್ಲಿಯ ಮಹಾವಿದ್ವಾಂಸರು ಇಲ್ಲಿಯ ಜನರು, ಬೆಟ್ಟಗಳೇ ಮೊದಲಾದವುಗಳು. ನಮ್ಮ ದೇಶದ ಸಂಪತ್ತುಗಳು.

೫. ನೀತಿಯಿಂದ ನಡೆಯುವದರಿಂದ ಸತ್ಯದ ಬಲವು ಬಂದು, ಆದ ರಿಂದ ಶೋಭಿಸುವ ಜನರು ನಮ್ಮ ದೇಶದಲ್ಲಿ ಇದ್ದಾರೆ.

೬. ಭಾರತದ ಸಂಪತ್ತು

ಪ್ರ. ೮. ಕೆಳಗಿನ ವಾಕ್ಯಾವಳಿಯನ್ನು ಓದಿ, ಅರ್ಥ ತಿಳಿದುಕೊಂಡು ಮುಂದೆ ಕೊಟ್ಟ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ. (೧೯೪೫)

ನಮ್ಮಲ್ಲಿ ರೂಢಮೂಲವಾದ ದೈವವಾದವನ್ನು ಕಿತ್ತೊಗೆದು, ಪ್ರಯತ್ನ ವಾದವನ್ನು ನಾವು ಅವಲಂಬಿಸಬೇಕು. ಆತ್ಮವಿಶ್ವಾಸಪೂರ್ಣದವೂ ಎಂದೂ ನಿರಾಶ ಹೊಂದದ ಪ್ರಯತ್ನವಾದವು. ನಮ್ಮ ದೇಶದ ಎಲ್ಲ ಸ್ತ್ರೀ-ಪುರುಷರಲ್ಲಿಯೂ ಆಬಾಲವೃದ್ಧರಲ್ಲಿಯೂ ರೂಢಮೂಲವಾದ ಹೊರತು, ನಮ್ಮ ಸಮಾಜದ, ರಾಷ್ಟ್ರದ ಉನ್ನತಿಯು ದೂರತೋಪಾಸ್ತವೇ ಸರಿ. ಇಂಥ ಪ್ರಯತ್ನವಾದದ ಗಾಳಿಯು, ಸದ್ಯಕ್ಕೆ ಪಶ್ಚಿಮದಿಂದ ನಮ್ಮ ದೇಶದ ಕಡೆಗೆ ಬೀಸುತ್ತಿದ್ದರೂ ನಮ್ಮ ಅಗಾಧವಾದ ಧರ್ಮವಿಚಾರಸಾಗರಕ್ಕೆ ಇದೇನೂ ಹೊಸದಲ್ಲ. ಪ್ರತಿಯೊಬ್ಬನು ಯುಕ್ತವಾದ ಕರ್ಮಗಳನ್ನು ಮಾಡುತ್ತ, ನೂರುವರ್ಷ ಬಾಳಲಿಕ್ಕೆ ಇಚ್ಛಿಸಬೇಕೆಂದು ಉಪನಿಷತ್ತು ಹೇಳಿ, ಮನುಷ್ಯ ಪ್ರಯತ್ನಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದೆ. ನಮ್ಮಧರ್ಮಶಾಸ್ತ್ರಗಳೂ "ಹೀಗೆ ಮಾಡು, ಹಾಗೆ ಮಾಡು" ಎಂದು ಅನೇಕ ವಿಧಿನಿಷೇಧಗಳನ್ನು ಹೇಳಿ ಸ್ವಪ್ರಯತ್ನದಿಂದಲೇ ಆತ್ಮೋದ್ಧಾರವು ಮತ್ತು ಸಮಾಜದ ಸುಸ್ಥಿತಿಯು ಎಂದು ಘಂಟಾಘೋಷವಾಗಿ ಸಾರುತ್ತಿದೆ ಸಾಧುಸಂತರನೇಕರು ಪೌರುಷದ ಪುರಸ್ಕಾರವನ್ನು ಮಾಡಿ ಅನೇಕ ರೀತಿಯಿಂದ ಅದರ ಗುಣಗಾನವನ್ನು ಮಾಡಿದ್ದಾರೆ. ಆದುದರಿಂದ ಇನ್ನಾದರೂ ನಾವು ಆಲಸ್ಯಕ್ಕೂ ನೈರಾಶ್ಯಕ್ಕೂ ಅವಕಾಶವನ್ನು ಕೊಡದೆ, ಆತ್ಮವಿಶ್ವಾಸದಿಂದಲೂ ದೃಢನಿಶ್ಚಯದಿಂದಲೂ ನಮ್ಮ ಊರು, ನಮ್ಮ ಪ್ರಾಂತ, ನಮ್ಮ ಭಾಷೆ, ನಮ್ಮ ದೇಶ ಇವುಗಳ ಉನ್ನತಿಗಾಗಿ ಪ್ರಯತ್ನವನ್ನು ಮಾಡಲಿಕ್ಕೆ ಬೇಕು ವಿಚಾರಪೂರ್ವಕವಾಗಿ ಪದ್ಧತಿ ಹಿಡಿದು ಮಾಡಿದ ಪ್ರಯತ್ನದಲ್ಲಿಯೇ ಈಶ್ವರನ ಅಧಿಷ್ಠಾನವಿದೆ. ಎಂಬುದನ್ನು ನಾವು ಕೃತಿಯಿಂದ ತೋರಿಸಲಿಕ್ಕೆ ಬೇಕು.

ಪ್ರಶ್ನೆಗಳು: (೧) ದೈವವಾದವೆಂದರೇನು? (೨) ಪ್ರಯತ್ನವು ಯಶಸ್ವಿಯಾಗಲಿಕ್ಕೆ ಅವಶ್ಯಕ ಸಂಗತಿಗಗಳು ಯಾವವು? (೩) "ಪಶ್ಚಿಮದಿಂದ ಗಾಳಿ ಬೀಸುತ್ತಿದೆ" "ಪ್ರಯತ್ನದಲ್ಲಿ ಈಶ್ವರನ ಅಧಿಷ್ಠಾನವಿದೆ" ಇವುಗಳಲ್ಲೊಂದರ ಅರ್ಥವನ್ನು ಸ್ಪಷ್ಟೀಕರಿಸಿರಿ. (೪) ದೈವವಾದ ಮತ್ತು ಪ್ರಯತ್ನವಾದ ಇವುಗಳಲ್ಲಿ ಯಾವದು ನಿಮ್ಮ ಮನಸ್ಸಿಗೆ ಬರು

ತ್ತದೆ? ಯಾಕೆ? (೫) ನಮ್ಮ ಧರ್ಮಗ್ರಂಥಗಳು ಯಾವದಕ್ಕೆ ಬೆಂಬಲ ಕೊಟ್ಟವೆ? ಯಾವ ರೀತಿಯಿಂದ?

ಉತ್ತರಃ—(೧) ದೈವದಲ್ಲಿ ಇದ್ದದ್ದು ಆಗಲೆಂದು ಪ್ರಯತ್ನ ಮಾಡದೆ ಕೂಡ್ರುವದು.

(೨) ಆಲಸ್ಯಕ್ಕೂ ನೈರಾಶ್ಯಕ್ಕೂ ಅವಕಾಶ ಕೊಡದಿರುವದು; ಆತ್ಮ ವಿಶ್ವಾಸ, ಉತ್ಸಾಹ, ದೃಢನಿಶ್ಚಯ, ಸ್ವದೇಶಾಭಿಮಾನಿಗಳು ಆವಶ್ಯಕ ಸಂಗತಿಗಳು.

(೩) (i) ಪಶ್ಚಿಮದಿಕ್ಕಿನಲ್ಲಿರುವ ಯುರೋಪದ ಜನರಿಂದ ನಮಗೆ ಅರಿವು ಉಂಟಾಗಹತ್ತಿದೆ. (ii) ಪ್ರಯತ್ನದಿಂದ ದೇವರು ಸಂತುಷ್ಟನಾಗಿ ಕಾರ್ಯ ಸಿದ್ಧಿಯಾಗುತ್ತದೆ.

(೪) ಪ್ರಯತ್ನವಾದ, ಯಾಕಂದರೆ, ಸ್ವಪ್ರಯತ್ನದಿಂದಲೇ ಆತ್ಮೋದ್ಧಾರವು ಮತ್ತು ಸಮಾಜದ ಸುಸ್ಥಿತಿಯುಂಟಾಗುತ್ತದೆ.

(೫) ಪ್ರಯತ್ನವಾದಕ್ಕೆ ಉಪನಿಷತ್ತು ಕರ್ಮಮಾಡುತ್ತ ನೂರು ವರ್ಷ ಬಾಳಲು ಇಚ್ಛಿಸಬೇಕೆಂದೂ ಧರ್ಮಶಾಸ್ತ್ರಗಳಂತೂ ಸ್ವಪ್ರಯತ್ನದಿಂದಲೇ ಆತ್ಮೋದ್ಧಾರವೆಂದೂ ಹೇಳಿವೆ.

ಪ್ರಃ - ೯. "ವಿವೇಕಾನಂದರು ಧರ್ಮ ಮಹಾಸಭೆಯ ನಚ್ಚಿನ ಕಣ್ಣು. ಅವರ ಭದ್ರಾಕಾರವೂ ಅವರಾಡುವ ತತ್ವಗಳ ವೈಭವವೂ ಸರ್ವರನ್ನೂ ಸೂರೆಗೊಂಡಿವೆ. ಅವರು ವೇದಿಕೆಯ ಮೇಲೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದರೆ ಸಾಕು, ಕೈ ಚಪ್ಪಾಳೆಗಳಿಂದ ಮಂದಿರವು ಕಂಪಿಸುವದು. ಆದರೆ ಅವರು ಮಾತ್ರ ಅಷ್ಟೊಂದು ಜನರ ಹೊಗಳಿಕೆಯನ್ನು ಬಾಲಕರಂತೆ ಸ್ವೀಕರಿಸುತ್ತಾರೆ. ಅಹಂಕಾರದ ಸುಳಿವು ಕೂಡ ಅವರಲ್ಲಿಲ್ಲ; ಧರ್ಮಸಭೆಯಲ್ಲಿ ವಿವೇಕಾನಂದರನ್ನು ಕಟ್ಟ ಕಡೆಯ ಉಪನ್ಯಾಸಕರನ್ನಾಗಿ ಮಾಡುತ್ತಾರೆ; ಏಕೆಂದರೆ ಸಭೆಯು ಮುಕ್ತಾಯವಾಗುವವರೆಗೆ ಜನರನ್ನು ಹಿಡಿದು ನಿಲ್ಲಿಸುವದಕ್ಕೆ. ಬಿಸಿಲ ಬೇಗೆಯು ಹೆಚ್ಚಾದ ದಿನಗಳಲ್ಲಿ ಯಾರಾದರೂ ನೀರಸವಾಗಿ ಬಹಳ ಹೊತ್ತು ಮಾಡಿದರೆ, ಜನರು ತಂಡ ತಂಡವಾಗಿ ಮನೆಗೆ ಹೋಗಲು ಉಪಕ್ರಮಿಸುತ್ತಿದ್ದರು. ಅದನ್ನು

ತಿಳಿದ ಕೂಡಲೆ ಅಧ್ಯಕ್ಷರು ಎದ್ದು ನಿಂತು, ವಿವೇಕಾನಂದರು ಕಡೆಯಲ್ಲಿ ಒಂದು ಸಣ್ಣ ಭಾಷಣವನ್ನು ಮಾಡುವರೆಂದು ಹೇಳುತ್ತಿದ್ದರು. ಕೂಡಲೆ ಜನರು ಶಾಂತವಾಗಿ ಕುಳಿತುಬಿಡುತ್ತಿದ್ದರು. ಸಾವಿರಾರು ಜನರು ಬೀಸಣಿಕೆಗಳಿಂದ ಬೀಸಿಕೊಳ್ಳುತ್ತ, ವಿವೇಕಾನಂದರ ಹದಿನೈದೇ ನಿಮಿಷಗಳ ಭಾಷಣವನ್ನು ಕೇಳಲೆಂದು ಎರಡು ಮೂರು ಗಂಟೆಗಳ ಪರ್ಯಂತ ಇತರ ನೀರಸ ಭಾಷಣಗಳನ್ನು ಕೇಳುತ್ತ ತಾಳ್ಮೆಯಿಂದ ನಿರೀಕ್ಷಿಸುತ್ತಿದ್ದರು. ಎಲ್ಲ ಮುಗಿದ ಮೇಲೆ ಬೆಲ್ಲವಿರಬೇಕೆಂಬ ನೀತಿಯನ್ನು ಅಧ್ಯಕ್ಷರು ಚನ್ನಾಗಿ ಅರಿತಿದ್ದರು.

ಈ ಅವತರಣವನ್ನು ಓದಿ, ಅರ್ಥ ತಿಳಿದುಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:— (೧೯೪೬)

(ಅ) ಈ ವಾಕ್ಯಾವಳಿಯ ಕೊನೆಯಲ್ಲಿ ಹೇಳಿದ ನೀತಿಯ ತಾತ್ಪರ್ಯವೇನು? (ಆ) "ಹೊಗಳಿಕೆಯನ್ನು ಬಾಲಕರಂತೆ ಸ್ವೀಕರಿಸುತ್ತಾರೆ," ಈ ಮಾತಿನ ಅರ್ಥವನ್ನು ಸ್ಪಷ್ಟೀಕರಿಸಿರಿ. (ಇ) ವಿವೇಕಾನಂದ, ಛದ್ರಾಕಾರ, ವೇದಿಕೆ, ನೀರಸ, ಅಧ್ಯಕ್ಷ ಈ ಶಬ್ದಗಳ ಅರ್ಥಗಳನ್ನು ಬರೆಯಿರಿ. (ಈ) ಬೇಗೆ, ತಾಳ್ಮೆ, ಸುಳುವು ಈ ಪದಗಳ ರೂಪಸಿದ್ಧಿಯನ್ನೂ ನೀರಸದಲ್ಲಿರುವ ಸಂಧಿಯನ್ನೂ ಹೇಳಿರಿ. (ಉ) ಜನರು ವಿವೇಕಾನಂದರ ಭಾಷಣವನ್ನು ಕೇಳಲು, ಆತುರರಾಗಿರುತ್ತಿದ್ದರೆಂಬುದು ಯಾತರಿಂದ ತಿಳಿದು ಬರುತ್ತದೆ?

ಉ:—(ಅ) ಸಾಮಾನ್ಯವಾಗಿ ಉಪನ್ಯಾಸಗಳಿಂದ ಅಥವಾ ವ್ಯಾಖ್ಯಾನಗಳಿಂದ ಸ್ವಲ್ಪ ಬೇಸರಗೊಂಡ ಜನತೆಯನ್ನು ಹರ್ಷಿಸಲು, ಕೊನೆಯ ಕಾರ್ಯಕ್ರಮದಲ್ಲಿ ರಾಷ್ಟ್ರಗೀತೆಯನ್ನಾಗಲಿ, ಅಥವಾ ಮಂಜುಳವಾದ ಹಾಡುಗಳನ್ನಾಗಲಿ ಅನ್ನುವ ಪದ್ಧತಿ, ಈ ಹರ್ಷಿಸುವ ಕಾರ್ಯವನ್ನು ಗ್ರಂಥಕರ್ತರು ಎಲ್ಲ ಮುಗಿದ ಮೇಲೆ ಬೆಲ್ಲವೆಂದು ಅಂದಿದ್ದಾರೆ.

(ಆ) ಚಿಕ್ಕಮಕ್ಕಳು ಜೊಗಳಿಕೆ, ತೆಗಳಿಕೆಗಳನ್ನೂ ಸಮಾನವೆಂದು ತಿಳಿಯುವಂತೆ ವಿವೇಕಾನಂದರು ಜನರ ಹೊಗಳಿಕೆಯನ್ನು ಸ್ವೀಕರಿಸುತ್ತಿದ್ದರು. ಅವರು ಸುಖದುಃಖ ಸಮನ್ವಯ ಬುದ್ಧಿಯುಳ್ಳವರಾಗಿದ್ದರು.

(ಇ) 'ವಿವೇಕಾನಂದ' ವಿವೇಕ ಅಂದರೆ ಸಾರಾಂಶ ವಿಚಾರವುಳ್ಳ ವಿವೇಕಾನಂದ ಅಂದರೆ ವಿಚಾರಪೂರಿತವಾದ ಆನಂದವನ್ನು ಕೊಡುವವರು. ಭದ್ರಾಕಾರ-ಭದ್ರವಾದ ದೇಹವುಳ್ಳ, ವೇದಿಕೆ-ಜಗುಲಿ ನೀರಸ-ಉಲ್ಲಾಸವಿಲ್ಲದ ಅಂದರೆ ನಿಸ್ತೇಜ. ಅಧ್ಯಕ್ಷ-ಸಭಾಪತಿ.

(ಈ) ಬೆಯ್ಯು [ಧಾತು] ಸುಡು; ತಾಳು, [ಧಾತು] ತಡೆದುಕೊಳ್ಳು; ಸುಳಿ, [ಧಾತು] ತಿರುಗು; ನಿರ್+ರಸ. ಬೇ. ಎಂಬುದು ಧಾತುವೇ ಇಲ್ಲವೆಂದು ಇತ್ತೀಚಿನ ಸಂಶೋಧನದಿಂದ ಕಂಡುಬಂದಿದೆ.

(ಉ) ಬಿಸಿಲಿನ ಬೇಗೆಯಿಂದ ನೊಂದು, ಸಭೆಯಿಂದ ಮನೆಗೆ ಹೋಗಲು ಸಿದ್ಧರಾದ ಜನರು, ವಿವೇಕಾನಂದರ ಭಾಷಣದ ಸುದ್ದಿಯನ್ನು ಅರಿತಕೂಡಲೇ ಪುನಃ ತಮ್ಮ ಸ್ಥಾನವನ್ನು ಆಕ್ರಮಿಸುತ್ತಿದ್ದರು. ವಿವೇಕಾನಂದರ ಭಾಷಣದ ಸುದ್ದಿಯನ್ನರಿತ ಜನರು ಬೇರೆ ಜನರ ನೀರಸವಾದ ಭಾಷಣವನ್ನು ಹೇಗೋ ಉದಾಸದಿಂದ ಮನಸ್ಸಿಲ್ಲದೆ ಕೇಳಬೇಕಾಗುತ್ತಿತ್ತು. ಇವುಗಳಿಂದ ವಿವೇಕಾನಂದರ ಭಾಷಣದ ಮಹತ್ವವು ತಿಳಿಯುತ್ತದೆ.

ಪ್ರ:—೧೦. ಕೆಳಗೆ ಕೊಟ್ಟ ಅವತರಣವನ್ನು ಚೆನ್ನಾಗಿ ಓದಿಕೊಂಡು ಕೊನೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. (೧೯೪೭)

ನಮ್ಮ ಎಲ್ಲ ಚಳವಳಿಗಳನ್ನು ಆವರಿಸಿಕೊಂಡ ಔದಾಸೀನ್ಯಕ್ಕೆ ಮೂಲಕಾರಣವೆಂದರೆ, ನಮ್ಮ ಇದು ವರೆಗಿನ ಮುಖ್ಯ ಚಟುವಟಿಕೆಗಳನ್ನೆಲ್ಲ ಸುಖಾಸೀನ ವೃತ್ತಿಯಲ್ಲಿ ಸಾಗಿಸಲಾಗಿದೆ. ಸಾಮಾನ್ಯವಾಗಿ ನಮ್ಮ ಸಾರ್ವಜನಿಕ ಕಾರ್ಯಗಳನ್ನು ಬಿಡುವಿನ ವೇಳೆಯ ಒಲವಿನ ವಿಷಯಗಳೆಂಬಂತೆ ನಡೆಯಿಸಲಾಗಿದೆ. ಇತರ ಕಾರ್ಯಕ್ಷೇತ್ರಗಳನ್ನು ಮುಖ್ಯವಾಗಿಟ್ಟುಕೊಂಡ ಮುಂದಾಳುಗಳ ಉಪವ್ಯವಸಾಯವಾಗಿ ಕನ್ನಡ ಸಂಘಟನೆಯ ಕೆಲಸ ನಡೆದಿದೆ. ಗೌರವಕಾರ್ಯದರ್ಶಿಗಳೂ ಗೌರವ ಕಾರ್ಯಕರ್ತರೂ ಕಾರ್ಯವನ್ನು ಕೆಡಿಸಿ ಗೌರವವನ್ನು ಕಳೆದುಕೊಂಡು ಸಂಸ್ಥೆಯ ಕೇಡಿಗೆ ಕಾರಣರಾಗಿರುವರು. ಇದು ಅವರು ಬೇಕೆಂದು ಮಾಡುವ ಅಪರಾಧವಲ್ಲ. ಅವರ ಜೀವನ ಸಂದರ್ಭದಲ್ಲಿ ಇಂತಹ ಅನವಸ್ಥೆ ಅನಿವಾರ್ಯ, ಅವರು ಮಾಡಿದಷ್ಟು ಸೇವೆಯೇ ಮಹಾ ಪುಣ್ಯವೆಂದು ನಾವು

ಸುಮ್ಮನೆ ಕೂಡ್ರಬೇಕಾಗಿದೆ. ಕನ್ನಡದ ಚಟುವಟಿಕೆಗಳನ್ನೇ ಮುಖ್ಯ ವ್ಯವಸಾಯವನ್ನಾಗಿ ಇಟ್ಟುಕೊಂಡ ವ್ಯಕ್ತಿಗಳು ನಮ್ಮಲ್ಲಿಲ್ಲ. ಅಧ್ಯಾಪಕರು, ಪ್ರಾಧ್ಯಾಪಕರು, ವಕೀಲರು, ಡಾಕ್ಟರರು—ಹೀಗೆ ಇತರ ಉಪಾಧಿಯುಳ್ಳ ಜನರೇ ಆಗೊಮ್ಮೆ ಈಗೊಮ್ಮೆ, ಕನ್ನಡದ ಕಾರ್ಯವನ್ನು ಕೈಗೊಟ್ಟು ನಡೆಯಿಸುತ್ತಾರೆ. ಇದರಿಂದಲೇ ಯಾವ ಕೆಲಸವೂ ಕೈಗೂಡುವದಿಲ್ಲ. ಕೂಲಿಕಾರರ ಸಂಘಗಳಲ್ಲಿ, ಕಿಸಾನ ಸಭೆಗಳಲ್ಲಿ, ಖಾಕಸಾರರ ಸಂಘಟನೆಯಲ್ಲಿ ಕಾರ್ಯಕರ್ತರು ನಿರ್ದಿಷ್ಟರಿರುತ್ತಾರೆ. ಅವರಿಗೊಂದು ಶಿಸ್ತು, ಒಂದು ಶಾಸನ, ಶುಲ್ಕ ನಿಯುಕ್ತವಾಗಿರುತ್ತದೆ. ಹೀಗೆ ಗಂಭೀರ ರೀತಿಯಲ್ಲಿ ಕಾರ್ಯಭಾರವನ್ನು ಹೊತ್ತವಿನಾ ಯಾವ ಪ್ರಗತಿಯೂ ಸಾಧ್ಯವಿಲ್ಲವೆಂಬದನ್ನು ನಾವು ಮರೆಯಲಾಗದು.

ಪ್ರ:–[ಕ] ಈಗ ಕನ್ನಡದ ಚಳವಳಿಯನ್ನು ಸಾಗಿಸಿದವರು ಯಾರು ಯಾರು? [ಙ] ಆ ಚಳವಳಿಯು ಯಾಕೆ ಸರಿಯಾಗಿ ಸಾಗಿಲ್ಲ? [ಗ] ಪ್ರಗತಿಯು ಸಾಧ್ಯವಾಗಬೇಕಾದರೆ ಕನ್ನಡಿಗರು ಯಾರನ್ನು ಅನುಸರಿಸಬೇಕು? ಯಾಕೆ? [ಘ] ಸುಖಾಸೀನವೃತ್ತಿ, ಗೌರವಕಾರ್ಯದರ್ಶಿ, "ಬಿಡುವಿನವೇಳೆಯ ಒಲುವಿನ ವಿಷಯ" ಈ ಮಾತುಗಳ ಅರ್ಥವನ್ನು ಸ್ಪಷ್ಟಪಡಿಸಿರಿ.

ಉ:–[ಕ] ಈಗ ಕನ್ನಡದ ಚಳವಳಿಯನ್ನು ಸಾಗಿಸಿದವರು. ಅಧ್ಯಾಪಕರು, ಪ್ರಾಧ್ಯಾಪಕರು, ವಕೀಲರು, ಡಾಕ್ಟರರು ಇತ್ಯಾದಿ.

[ಖ] ಅವರು ಇತರ ಉಪಾಧಿಯುಳ್ಳವರಿದ್ದು ಆಗೊಮ್ಮೆ ಈಗೊಮ್ಮೆ ಕನ್ನಡದ ಕಾರ್ಯವನ್ನು ಕೈಗೊಟ್ಟು ನಡೆಯಿಸುವರು. ಅವರು ತಮ್ಮ ಬಿಡುವಿನ ವೇಳೆಯಲ್ಲಿ ಕೆಲಸ ಮಾಡುವರು. ಅವರಲ್ಲಿ ಶಿಸ್ತು ಸಂಘಟನೆ ಕಡಿಮೆ. ಕಾರಣ ಚಳುವಳಿಯು ಸರಿಯಾಗಿ ಸಾಗಿಲ್ಲ.

[ಗ] ಕೂಲಿಕಾರರ ಸಂಘ, ಕಿಸಾನ ಸಭೆ, ಖಾಕಸರರು ಇವುಗಳಲ್ಲಿಯ ಕಾರ್ಯಕರ್ತರು ನಿರ್ದಿಷ್ಟರಿರುತ್ತಾರೆ. ಅವರಿಗೊಂದು ಶಿಸ್ತು ಒಂದು ಶಾಸನ, ಒಂದು ಶುಲ್ಕ ನಿಯುಕ್ತವಿರುತ್ತದೆ. ನಾವು ಅವರನ್ನು ಅನುಸರಿಸಬೇಕು.

[ಘ] [i] ಆನಂದದಾಯಕ ವಾತಾವರಣದಲ್ಲಿ ಕೆಲಸ ಮಾಡುವದು.

[ii] ಸಂಬಳವಿಲ್ಲದೆ ಕೆಲಸ ಮಾಡುವ ಮಂತ್ರಿ

[iii] ವೇಳೆ ದೊರೆತಾಗ ಮಾಡುವ ಐಚ್ಛಿಕ ವಿಷಯ

ಪ್ರ:— ೧೧ ಕೆಳಗೆ ಕೊಟ್ಟ ಅವತರಣವನ್ನು ಚನ್ನಾಗಿ ಓದಿಕೊಂಡು ಕೊನೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ:—

[ಅಕ್ಟೋಬರ ೧೯೪೭]

ವಸ್ತ್ರೋತ್ಪಾದನವು ಧನೋತ್ಪಾದನದ ಮುಖ್ಯ ಸಾಧನವು. ಆದ್ದರಿಂದ ಧೋರಣೆಗಳೂ ಜಾಣರೂ ದೇಶಾಭಿಮಾನಿಗಳೂ ಆದವರು ತಮ್ಮ ತಮ್ಮ ಸಂಪದಭಿವೃದ್ಧಿಗಾಗಿ, ಯಂತ್ರಗಳಿಂದ ಹೆಚ್ಚಾಗಿ ವಸ್ತ್ರಗಳನ್ನು ಹುಟ್ಟಿಸಿ, ತಮ್ಮ ನಾಡಿನೊಳಗಿಷ್ಟೇ ಅಲ್ಲ, ಪರದೇಶಗಳಿಗೆ ಸಹ ಮಾರಲಿಕ್ಕೆ ಕಳಿಸಿ, ತಮ್ಮ ವ್ಯಾಪಾರವನ್ನು ಬೆಳೆಯಿಸಿ, ತಮ್ಮ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಂಡು ನಾಗರಿಕರಾಗಹತ್ತುವರು. ಇಂಗ್ಲಂಡ, ಜರ್ಮನಿ, ಜಪಾನ, ಅಮೇರಿಕಾದಿ ರಾಷ್ಟ್ರಗಳು ಜಗತ್ತಿನ ಬಹಳ ಭಾಗದ ಜನರಿಗೆ ಸಾಕಷ್ಟು ಅರಿವೆಯನ್ನು ಪೂರೈಸುತ್ತವೆ ಅವು ಈ ಉದ್ಯೋಗವೇ ಅವರ ದೇಶದ ಆರ್ಥಿಕ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ. ಆದರೆ ಪೂರ್ವದಲ್ಲಿ ವಸ್ತ್ರಗಳನ್ನು ಪ್ರೀತಿಸಿ, ಹುಟ್ಟಿಸಿ, ಧರಿಸಿ, ಸಾಂಪತ್ತಿಕ ನಾಡೆಂದು ಕೀರ್ತಿಯನ್ನು ಪಡೆದಿದ್ದ ಹಿಂದುಸ್ತಾನವು, ಈ ವಿಷಯದಲ್ಲಿ ಈಗ ಹಿಂದು ಬಿದ್ದಿದೆ. ಹತ್ತಿ, ಉಣ್ಣೆ ಮೊದಲಾದ ಕಚ್ಚಾಮಾಲು ಈ ದೇಶದಲ್ಲಿ ಸಾಕಷ್ಟು ದೊರೆಯುತ್ತಿದ್ದರೂ ನಿರುದ್ಯೋಗ, ಆಲಸ್ಯ, ಪರಾವಲಂಬನಗಳಿಗೆ ವಶ್ಯರಾಗಿದ್ದ ಇವರು ಹಸ್ತವ್ಯವಸಾಯದಿಂದ ಸಾಕಷ್ಟು ವಸ್ತ್ರಗಳನ್ನು ಹುಟ್ಟಿಸಿಕೊಳ್ಳದೇ, ಪರದೇಶದ ಪ್ರಾವರಣಗಳ ಹೊದಿಕೆಯಿಂದ ಮೆರೆಯಹತ್ತಿ, ಭಾರತೀಯ ಭಾಗ್ಯಕ್ಕೆ ಸವಳು ಬಡಿಯ ಹತ್ತಿದ್ದಾರೆ. ಪ್ರತಿಯೊಂದು ದೇಶವು ವ್ಯಾಪಾರ ಹಾಗೂ ಧನೋತ್ಪಾದನದ ಒಡವೆಗಳ ಉತ್ಪತ್ತಿಗಳಿಂದ ತಕ್ಕ ನಾಗರಿಕತನವನ್ನು ಹೆಚ್ಚಿಸಿಕೊಳ್ಳುತ್ತಿರುವದು. ಆದ್ದರಿಂದಲೇ ದೇಶದ ಸಂಪತ್ತಿನ ಏಳ್ಗೆಗಾಗಿ ಹೆಣಗಾಡುವ ಮಹಾತ್ಮರು ಖಾದಿ ಪ್ರಸಾರವನ್ನೂ ದೇಶೀಯ ಒಡವೆಗಳ ಉತ್ಪಾದನೆಯನ್ನೂ ಹೆಚ್ಚಾಗಿ ಮಾಡಿರೆಂದೂ ಬೋಧಿಸುತ್ತಿರುವರು

ಪ್ರಶ್ನೆಗಳು :– [೧] ಮುಂದುವರಿದ ದೇಶಗಳು ತಮ್ಮ ಆರ್ಥಿಕ ಸಂಪತ್ತನ್ನು ಹೇಗೆ ಹೆಚ್ಚಿಸಿಕೊಂಡಿರುತ್ತವೆ ? [೨] ಈ ವಿಷಯದಲ್ಲಿ ಹಿಂದುಸ್ಥಾನವು ಈಗ ಹಿಂದು ಬೀಳಲು ಕಾರಣವೇನು ? [೩] ದೇಶದ ಸಂಪತ್ತಿಯ ಏಳಿಗೆಗಾಗಿ ಮಹಾತ್ಮರು ಮಾಡುತ್ತಿರುವ ಉಪದೇಶಯಾವದು ? [೪] ಪ್ರತಿಯೊಂದು ದೇಶವು ನಾಗರಿಕತನವನ್ನು ಹೇಗೆ ಹೆಚ್ಚಿಸಿಕೊಳ್ಳುತ್ತಿರುವದು. [೫] ವಸ್ತ್ರೋತ್ಪಾದನವು ಧನೋತ್ಪಾದನದ ಮುಖ್ಯ ಸಾಧನವು. ಈ ವಾಕ್ಯಗಳಲ್ಲಿಯ ಅಡಕವಾದ ಅರ್ಥವನ್ನು ವಿವರಿಸಿ ಬರೆಯಿರಿ ?

ಉ : [೧] ಮುಂದುವರಿದ ದೇಶಗಳು ಯಂತ್ರಗಳಿಂದ ಹೆಚ್ಚಾಗಿ ವಸ್ತ್ರಗಳನ್ನು ಹುಟ್ಟಿಸಿ, ಪರದೇಶಗಳಿಗೆ ಸಹ ಮಾರಲಿಕ್ಕೆ ಕಳಿಸಿ, ತಮ್ಮ ವ್ಯಾಪಾರವನ್ನು ಬೆಳೆಯಿಸಿ ತಮ್ಮ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಂಡಿರುವರು.

[೨] ಹಿಂದುಸ್ಥಾನವು ನಿರುದ್ಯೋಗ, ಆಲಸ್ಯ, ಪರಾವಲಂಬನಗಳಿಗೆ ಮೈಯೊಡ್ಡಿ, ಹಸ್ತ ವ್ಯವಸಾಯದಿಂದ ಸಾಕಷ್ಟು ವಸ್ತ್ರಗಳನ್ನು ಹುಟ್ಟಿಸಿ ಕೊಳ್ಳದಾಗಿದೆ ಹೀಗಾಗಿ ಪರದೇಶದ ವಸ್ತ್ರಗಳಿಂದ ಮೆರೆಯಹತ್ತಿದ ಹಿಂದುಸ್ಥಾನವು ಹಿಂದೆ ಬಿದ್ದಿದೆ.

[೩] ದೇಶದ ಸಂಪತ್ತಿನ ಏಳಿಗೆಗಾಗಿ ಖಾದೀಪ್ರಸಾರ, ದೇಶೀಯ ಒಡವೆಗಳ ಉತ್ಪಾದನೆಯನ್ನು ಹೆಚ್ಚಾಗಿ ಮಾಡಿರೆಂಬುದು ಮಹಾತ್ಮರು ಉಪದೇಶ ಮಾಡಿದರು.

[೪] ಪ್ರತಿಯೊಂದು ದೇಶವು ಯಂತ್ರಗಳಿಂದ ಬಟ್ಟೆ ತಯಾರಿಸಿ ಅವನ್ನು ಪರದೇಶಗಳಲ್ಲಿ ಮಾರಿ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಂಡು ನಾಗರಿಕತನವನ್ನು ಹೆಚ್ಚಿಸಿಕೊಳ್ಳುತ್ತಿರುವದು.

[೫] ವಸ್ತ್ರದ ಉತ್ಪಾದನೆಯಿಂದ ವ್ಯಾಪಾರ ಹೆಚ್ಚುವದು. ನಿರುದ್ಯೋಗತನ ಕಡಿಮೆಯಾಗುವದು. [illegible]ದರಿಂದ ಜನರು ಶ್ರೀಮಂತರಾಗುವರು. ಧನೋತ್ಪಾದನವನ್ನು [illegible]ಮಾಡಿದಂತಾಗುವದು. ಪರದೇಶಕ್ಕೆ ದುಡ್ಡು ಕೊಟ್ಟು ಅರಿವೆ ತರುವ ಪ್ರಸಂಗ ತಪ್ಪಿ ಆ ದುಡ್ಡು ನಮ್ಮ ದೇಶದಲ್ಲಿ ಉಳಿಯುವದು.

ಪ್ರ:— ೧೨ ಕೆಳಗಿನ ಅವತರಣಿಕೆಯನ್ನು ಓದಿ ತಿಳಿದುಕೊಂಡು ಅದರ ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಬರೆಯಿರಿ. (೧೯ಳಲ)

ಸ್ತ್ರೀಯರು ಅತ್ತೆಯ ಮನೆಗೆ ಹೋದಬಳಿಕ, ಮೂರು ಬಗೆಯ ರೂಪಾಂತರಗಳನ್ನು ಹೊಂದುವರು ಅವರು ಮೊದಲು ಸೊಸೆಯಾಗಿ ಬಾಗಿ ನಡೆಯಬೇಕು. ಮುಂದೆ ಕೆಲವು ದಿವಸ ತಾಯಿಯಾಗಿ ಮಕ್ಕಳ ಲಾಲನೆ-ಪಾಲನೆಗಳನ್ನು ಮಾಡಬೇಕು ತರುವಾಯ ತಾನೇ ಅತ್ತೆಯಾಗಿ ಕುಟುಂಬದೊಡತಿಯಾಗಬೇಕು ಹೀಗೆ ಮೂರು ತೆರನಾಗಿ ಪ್ರಪಂಚ ಮಾಡಿಕೊಂಡು ಜನದಲ್ಲಿಹೌದೆನಿಸಿಕೊಳ್ಳುವಂತೆ ನಡೆಯುವದು ಬಲು ಬಿಗಿಯಾದುದು. ಆದಕಾರಣ ಸ್ತ್ರೀಯರಿಗೆ ಸ್ವಂತ ಕರ್ತವ್ಯದ ಮಹತ್ವವು ಗೊತ್ತಿರಬೇಕು. ಬಂಗಾರದ ಪರೀಕ್ಷೆಯು ಒರೆಗಲ್ಲಿನಿಂದ ಆಗುವಂತೆ ಸ್ತ್ರೀಯರ ಪರೀಕ್ಷೆಯು ಅತ್ತೆಯಮನೆಯಿಂದ ಆಗುವದು. ಅತ್ತೆಯ ಮನೆಯನ್ನು ನಂಬಿಕೊಂಡು ಕೊಂಕು ಕೊರತೆಗಳಿಲ್ಲದೇ ಬಾಳುವೆಯನ್ನು ಮಾಡುವ ಹೆಂಗಸಿನ ಮರ್ಯಾದೆಯು ಹೆಚ್ಚುತ್ತ ಹೋಗುವದು. ಮುತ್ತು-ರತ್ನಗಳು ಸಮುದ್ರದಲ್ಲಿ ಹುಟ್ಟುವವು. ಅವು ಅಲ್ಲೇ ಸಾವಿರಾರು ವರ್ಷವಿದ್ದರೂ ಅವುಗಳ ಬೆಲೆಯು ಯಾರಿಗೆ ಗೊತ್ತಾಗುವದು ? ಅದೇ ಅವು ಸಮುದ್ರದಿಂದ ಹೊರಗೆ ಬಂದು ಚಿನಿವಾಲನ ಕೈಸೇರಿದವೆಂದರೆ, ಅವುಗಳ ಬೆಲೆ ತಿಳಿದು ಬರುವದು ಅದರಂತೆ ಸ್ತ್ರೀರತ್ನಗಳು ಹುಟ್ಟಿದ ಮನೆಯಲ್ಲಿ ಎಷ್ಟು ದಿವಸವಿದ್ದರೂ ಅಷ್ಟೇ. ತವರುಮನೆಯಲ್ಲಿ ಇರುವ ಸ್ತ್ರೀಯರ ಜೀವನವು ನಿರರ್ಥಕವು. ಅಂಥ ಸ್ತ್ರೀಯರನ್ನು ಯಾರೂ ಸನ್ಮಾನಿಸರು. ಅವರು ಅತ್ತೆಯ ಮನೆಗೆ ಬಂದು ಜನರು " ಸೈ ಸೈ " ಅನ್ನುವಂತೆ ಬಾಳುವೆ ಮಾಡತೊಡಗಿದರೆ ಅವರ ಮರ್ಯಾದೆಯು ಕ್ರಮೇಣ ಹೆಚ್ಚುವದು. ಶಿಷ್ಯನ ಕುಶಲತೆ ಹೆಚ್ಚಾದಂತೆ ಗುರುವಿನ ಸಂತೋಷವು ಅಧಿಕವಾಗುವದಿಲ್ಲವೇ ? ಹಾಗೆಯೇ ಸೊಸೆಯ ಸಂಸಾರ ಕುಶಲತೆಯು ಹೆಚ್ಚಾದಂತೆ, ಅತ್ತೆಮಾವಂದಿರ ಆನಂದವು ಹೆಚ್ಚಾಗುವದು ಒಂದು ವೇಳೆ ಅತ್ತೆಯು ಕಿಟಕಿಟ ಮಾಡಿದರೆ ಸೊಸೆಯು ಮನಸ್ಸಿಗೆ ಹಚ್ಚಿಕೊಳ್ಳದೆ, ಸಮಾಧಾನದಿಂದ ಸೈರಿಸಿಕೊಳ್ಳಬೇಕು. ಸೊಸೆಯ ಸೈರಣೆಯು ಹೆಚ್ಚಾದಂತೆ, ಅತ್ತೆಯ ಕೋಪಾಗ್ನಿಯು ನಂದುತ್ತ ಹೋಗುವದು; ಕಡೆಗೆ ಅದು ನಿರ್ಮೂಲವಾಗದಿರದು.

ಪ್ರಃ— (೧) ಸ್ತ್ರೀಗೆ ಒದಗುವ ಮೂರು ಅವಸ್ಥೆಗಳು ಯಾವವು? ಅವುಗಳಲ್ಲಿ ಯಾವದು ಕಠಿಣವಾದುದು? (೨) ಸ್ತ್ರೀಯರ ಪರೀಕ್ಷೆಯಾಗುವದು ಎಲ್ಲಿ? ಅದನ್ನು ಏತಕ್ಕೆ ಹೋಲಿಸಲಾಗಿದೆ? (೩) ಹೆಂಗಸಿನ ಮರ್ಯಾದೆಯು ಏತರಿಂದ ಹೆಚ್ಚಾಗುವದು? ಯಾಕೆ? (೪) ಸ್ತ್ರೀಗೂ ಹಾಗೂ ಮುತ್ತು ರತ್ನಗಳಿಗೂ ಇರುವ ಹೋಲಿಕೆಯನ್ನು ಸ್ಪಷ್ಟವಾಗಿ ತಿಳಿಸಿರಿ. (೫) ಅತ್ತೆಯ ಸಿಟ್ಟನ್ನು ಇಳಿಸುವ ನಿಜವಾದ ಉಪಾಯವು ಯಾವದು?

ಉಃ— ೧. ಸ್ತ್ರೀಯ ಮೊದಲನೆಯ ಅವಸ್ಥೆಯು ಸೊಸೆಯಾಗಿ ಬಾಗಿ ನಡೆಯುವದು. ಎರಡನೇ ಅವಸ್ಥೆಯು ತಾಯಿಗಾಗಿ ಮಕ್ಕಳ ಲಾಲನೆ ಪಾಲನೆ ಮಾಡುವದು. ಮೂರನೇ ಅವಸ್ಥೆಯು ತಾನೇ ಅತ್ತೆಯಾಗಿ ಕುಟುಂಬದ ಒಡತಿಯಾಗುವದು. ಇವುಗಳಲ್ಲಿ ಮೊದಲನೇ ಅವಸ್ಥೆಯು ಹೆಚ್ಚು ಕಠಿಣವಾದುದು. ಯಾಕಂದರೆ ಅತ್ತೆಯ ಕಿಟಕಿಟಯನ್ನು ಸಹಿಸಬೇಕಾಗುತ್ತದೆ.

೨. ಸ್ತ್ರೀಯರ ಪರೀಕ್ಷೆಯಾಗುವದು ಅತ್ತೆಯ ಮನೆಯಲ್ಲಿ ಅದನ್ನು ಬಂಗಾರಕ್ಕೆ ಹೋಲಿಸಿದೆ. ಬಂಗಾರದ ಪರೀಕ್ಷೆ ಒರೆಗಲ್ಲಿನಿಂದ ಆಗುವಂತೆ ಸ್ತ್ರೀಯರ ಪರೀಕ್ಷೆಯು ಅತ್ತೆಯ ಮನೆಯಿಂದ ಆಗುವದು.

೩. ಅತ್ತೆಯ ಮನೆಯನ್ನು ನಂಬಿಕೊಂಡು ಕೊಂಕು-ಕೊರತೆಗಳಿಲ್ಲದೆ ಬಾಳುವೆಯನ್ನು ಮಾಡುವ ಹೆಂಗಸಿನ ಮರ್ಯಾದೆಯು ಹೆಚ್ಚುತ್ತ ಹೋಗುವದು. ಯಾಕಂದರೆ ಅತ್ತೆಯ ಮನೆಯಲ್ಲಿ ಹೊಸ ಜನರ ಸಂಪರ್ಕ ಬರುತ್ತದೆ.

೪. ಮುತ್ತು-ರತ್ನಗಳು ಸಮುದ್ರದಲ್ಲಿರುವ ವರೆಗೆ, ಅವುಗಳಿಗೆ ಬೆಲೆಯಿರುವದಿಲ್ಲ. ಅದರಂತೆ ಸ್ತ್ರೀಗೆ ತವರು ಮನೆಯಲ್ಲಿ ಬೆಲೆ ಇಲ್ಲ.

೫. ಸೊಸೆಯ ಸೈರಣೆಯು ಹೆಚ್ಚಾದಂತೆ ಅತ್ತೆಯ ಸಿಟ್ಟು ಶಾಂತವಾಗುವದು. ಶಾಂತಿಯೇ ಸಿಟ್ಟಿಗೆ ಮದ್ದು. ಸಿಟ್ಟು ಇಳಿದಾಗ ಅತ್ತೆಯಲ್ಲಿ ವಿವೇಕೋದಯವು ಆಗುವುದು ಆಗ ಸೊಸೆಯ ಬಗ್ಗೆ ಕನಿಕರವು ಉಂಟಾಗುವದು.

ಪ್ರ:— (೧೩) ಕೆಳಗಿನ ಅವತರಣಿಕೆಯನ್ನು ಓದಿ ತಿಳಿದುಕೊಂಡು ಆದರ ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳನ್ನು ಬರೆಯಿರಿ:— (೧೯೪೯)

“ಮಾನವ ಶರೀರವು ಸೃಷ್ಟಿಕರ್ತನ ಅಸಾಧಾರಣವಾದ ಬುದ್ಧಿ ಮತ್ತು ಕೌಶಲ್ಯವನ್ನು ವ್ಯಕ್ತಪಡಿಸುವಂಥ, ಸ್ವಯಂ ಚಲನೆಯುಳ್ಳಂಥ, ತಾನೇ ತನ್ನ ಸವಕಳಿಯನ್ನು ಪೂರೈಸಿಕೊಳ್ಳುವಂಥ, ಕೆಲವೊಂದು ದೀರ್ಘ ಅವಧಿಯ ವರೆಗೆ ಬೆಳವಣಿಗೆಯನ್ನೂ ತಾಳಿಕೆಯನ್ನೂ ಹೊಂದುವಂಥ ಒಂದು ಅಗತ್ಯಗಾಧವಾದ ಯಂತ್ರವಾಗಿರುವದು. ಕೆಲವರು ಈ ಯಂತ್ರವನ್ನು ಉಗಿಬಂಡಿಯ ಎಂಜನಿಗೆ ಹೋಲಿಸುವದುಂಟು. ಇದು ಎಂಜನಿನಂತೆ ಆಹಾರವನ್ನು ತಿಂದು, ಅದರಿಂದುಂಟಾಗುವ ಶಕ್ತಿಯಿಂದ ಬೇರೆ ಬೇರೆ ಕಾರ್ಯಗಳನ್ನು ಜರುಗಿಸುವದು; ಉಳಿಯುವ ನಿರುಪಯುಕ್ತ ಪದಾರ್ಥವನ್ನು ಮಲದ ರೂಪದಿಂದ ಬಿಟ್ಟುಬಿಡುವದು. ಇವಲ್ಲದೆ ಬೇರೆ ಕೆಲವು ಸಂಗತಿಗಳಲ್ಲಿಯೂ ಈ ಎರಡು ಯಂತ್ರಗಳ ಹೋಲಿಕೆಯುಂಟು. ಇವೆರಡೂ ನಿರ್ಮಲವಾಗಿಂಬೇಕು ಇವೆರಡನ್ನೂ ಉಪಯೋಗಿಸದೆ ಬಿಟ್ಟರೆ ಕೆಟ್ಟು ಹೋಗುವವು. ಇವೆರಡರಲ್ಲಿಯೂ ಒಂದು ಭಾಗವು—ಮತ್ತೊಂದು ಭಾಗದ ಸುರಕ್ಷಿತತೆಯನ್ನು ಅವಲಂಬಿಸಿರುವದು. ಇವೆರಡರಲ್ಲಿಯೂ ಒಂದು ಭಾಗವು ಕೆಟ್ಟುಹೋದರೆ, ಬಹುಶಃ ಇಡೀ ಯಂತ್ರವು ನಿರುಪಯುಕ್ತವಾಗಿ ಹೋಗುವದು. ಇಲ್ಲವೇ ತೀರ ಅಶಕ್ತವಾಗುವದು.

ಹೀಗಿದ್ದರೂ ಕೆಲವು ಮಹತ್ವದ ಸಂಗತಿಗಳಲ್ಲಿ ಉಗಿಬಂಡಿಯ ಎಂಜಿನು ಮಾನವ ಶರೀರ ಯಂತ್ರವನ್ನು ಸರಿಗಟ್ಟಲಾರದು. ಕ್ಷುದ್ರ ಮಾನವನ ಕೃತಿಯಲ್ಲ !! ಅಪಾರ ಮಹಿಮೆಯುಳ್ಳ ಸರ್ವೇಶ್ವರನ ರಚನೆಯು ಮಾನವ ಶರೀರದಲ್ಲಿದ್ದ, ಅದರ ಜೀವನಕ್ಕೆ ಕಾರಣವಾದ ಜೀವನರಸವು, ಉಗಿಬಂಡಿಯ ಎಂಜಿನಿನಲ್ಲಿಲ್ಲ ಮಾನವ ಶರೀರವು ತಾನು ತಿಂದ ಆಹಾರದಿಂದ ಮಜ್ಜಾಮಾಂಸಾದಿಗಳನ್ನು ನಿರ್ಮಿಸಿಕೊಂಡು, ತನ್ನ ಸವಕಳಿಯನ್ನು ಪೂರೈಸಿಕೊಳ್ಳುವದು ಬೆಳವಣಿಗೆಯನ್ನು ಹೊಂದುವದು. ಈ ಶಕ್ತಿಯು ಉಗಿಬಂಡಿಯ ಯಂತ್ರದಲ್ಲಿಲ್ಲ ಮಾನವ ಶರೀರವು ಸ್ವಯಂ

ಚಲಿತವು. ಎಂಜಿನು ಪರಾಧೀನವು. ಮಾನವ ಶರೀರವು ಏಳೇಳು ವರ್ಷಕ್ಕೊಮ್ಮೆ ತನ್ನೊಳಗಿನ ಯಾವತ್ತೂ ಯಂತ್ರ ಸಾಮಗ್ರಿಗಳನ್ನು ಹೊಸತಾಗಿ ನಿರ್ಮಿಸಿಕೊಳ್ಳುವದೆಂದು ಶಾಸ್ತ್ರಜ್ಞರ ಅಭಿಪ್ರಾಯವಿರುವದು. ಈ ಶಕ್ತಿಯು ಮಾನವೀಯ ಕೃತಿಯಲ್ಲಿ ಎಲ್ಲಿದೆ?

(ಅ) ಮಾನವ ಶರೀರಕ್ಕೂ ಎಂಜಿನಿಗೂ ಇರುವ ಸಾಮ್ಯವನ್ನು ಹೇಳಿರಿ.

[ಆ] "ಮಾನವ ಶರೀರವು ಸ್ವಯಂಚಲಿತವು; ಎಂಜಿನು ಪರಾಧೀನವು" ಎಂಬ ಮಾತನ್ನು ಸ್ಪಷ್ಟೀಕರಿಸಿರಿ.

[ಇ] ಎಂಜಿನು ಮಾನವ ಶರೀರದಿಂದ ಹೇಗೆ ಭಿನ್ನವಾಗಿರುವದು?

[ಈ] ಮಾನವ ಶರೀರ ಮತ್ತು ಎಂಜಿನು ಇವುಗಳಲ್ಲಿ ಯಾವದು ಹೆಚ್ಚಿನ ಯೋಗ್ಯತೆಯುಳ್ಳದ್ದು ಮತ್ತು ಏಕೆ?

ಉ:— (ಅ) ಮಾನವ ಶರೀರವು ಎಂಜಿನಿನಂತೆ ಆಹಾರವನ್ನು ತಿಂದು ಅದರಿಂದುಂಟಾಗುವ ಶಕ್ತಿಯಿಂದ ಬೇರೆ ಬೇರೆ ಕಾರ್ಯಮಾಡುವದು. ಎರಡೂ ಮಲವನ್ನು ಹೊರಗೆ ಹಾಕುವವು. ಎರಡನ್ನೂ ಉಪಯೋಗಿಸದೆ ಬಿಟ್ಟರೆ ಕೆಟ್ಟು ಹೋಗುವವು. ಎರಡರಲ್ಲಿಯೂ ಒಂದು ಭಾಗದ ಸುರಕ್ಷಿತತೆಯು ಇನ್ನೊಂದು ಭಾಗವನ್ನು ಅವಲಂಬಿಸಿರುವದು.

(ಆ) ಮಾನವ ಶರೀರವು ತನ್ನಷ್ಟಕ್ಕೆ ತಾನೇ ತಾನು ತಿಂದ ಆಹಾರದಿಂದ ಮಜ್ಜಾ ಮಾಂಸಾದಿಗಳನ್ನು ಪೂರೈಸಿಕೊಂಡು, ಬೆಳವಣಿಗೆಯನ್ನು ಹೊಂದುವದು. ಆದರೆ ಎಂಜಿನವನ್ನು ನಡೆಸಲು ಬೇರೊಬ್ಬ ಡ್ರಾಯವ್ಹರನ ಆವಶ್ಯಕತೆಯುಂಟು ಎಂಜಿನು ನಿಂತು ನಿಂತು ಕೆಲಸ ಮಾಡುವದು. ಒಮ್ಮೆ ಕೆಟ್ಟದ್ದು ದುರಸ್ತಿಯಾಗುವದು. ಆದರೆ ಮಾನವನ ಶರೀರವು ಒಮ್ಮೆ ನಿಂತರೆ ತೀರಿತು.

[ಇ] ಮಾನವ ಶರೀರವು ಏಳೇಳು ವರ್ಷಕ್ಕೊಮ್ಮೆ ತನ್ನೊಳಗಿನ ಯಾವತ್ತೂ ಯಂತ್ರಸಾಮಗ್ರಿಗಳನ್ನು ಹೊಸತಾಗಿ ನಿರ್ಮಿಸಿಕೊಳ್ಳುವದು. ಎಂಜಿನು ಮಾನವೀ ಕೃತಿ ಮಾನವ ಶರೀರ ಪರಮೇಶ್ವರನ

ಕೃತಿ. ಎಂಜಿನದಲ್ಲಿ ಜೀವನ ಶಕ್ತಿಯಿದೆ. ಎಂಜಿನಕ್ಕೆ ವಿಚಾರಶಕ್ತಿ ಇಲ್ಲ.

(ಈ) ಮಾನವ ಶರೀರವು ಹೆಚ್ಚಿನ ಯೋಗ್ಯತೆ ಉಳ್ಳದ್ದಿರುತ್ತದೆ. ಯಾಕಂದರೆ ಮಾನವ ಶರೀರವು ಸ್ವಯಂಚಲನೆಯುಳ್ಳ, ತನ್ನ ಸವಕಳಿಯನ್ನು ತಾನೇ ಪೂರೈಸಿಕೊಳ್ಳುವಂಥ, ದೀರ್ಘ ಅವಧಿಯವರೆಗೆ ಬೆಳವಣಿಗೆಯನ್ನೂ ತಾಳಿಕೆಯನ್ನೂ ಹೊಂದುವ, ವಿಚಾರಶಕ್ತಿಯಿಂದ ಕಾರ್ಯ ಮಾಡುವ ಯಂತ್ರವಾಗಿದೆ.

— ಪದ್ಯಗಳು —

ಪ್ರ: -- (೧) ಕೆಳಗೆ ಕೊಟ್ಟ ಪದ್ಯಗಳನ್ನು ಲಕ್ಷ್ಯಗೊಟ್ಟು ಓದಿ, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:— (ಹಾ. ಸ್ಕೂ. ೧೯೪೦)

ಕ್ಷೀರ ವಾರಿಧಿಶಯನ ಬಂದನು |
ವಾರಿಜೋದರ ಕೃಷ್ಣ ಬಂದನು |
ಧಾರಿಣಿಯ ಹೊರೆ ಇಳಿಸಲೋಸುಗ ಮನುಜವೇಷದಲಿ ||
ಭೂರಿದನುಜರನೊರೆಸಿ, ಕೌರವ- |
ವಾರಿಧಿಯ ಮುಕ್ಕಳಿಸಲೋಸುಗ |
ಘೋರಸೈತರುತಿರ್ದನಂದು ನೃಪಾಲನರಮನೆಗೆ ||೧||

ಸಮರ ಸರ್ವಜ್ಞರುಗಳಂಘ್ರಿಗೆ |
ನಮಿಸಿದರು; ಬಹಳೋಲಗದ ಸಂ- |
ಭ್ರಮದ ಸಿರಿ ತಲೆಬಾಗುತಿದ್ದುದು ನೊಸಲ ಕೈಗಳಲಿ ||
ಕಮಲನಯನದ ದೇವನೇ ? ಸಾ- |
ಕೆಮಗೆ ಮಾಡುವದೇನೆನುತ ತ |
ತ್ಕುಮತಿ ಕೌರವನಿಳಿಯದಿದ್ದನು ಸಿಂಹವಿಷ್ಟರವಾ ||೨||

ಸೆಣಸು ಸೇರದ ದೇವನಿದಿರಲಿ |
ಮಣಿಯದಾತನ ಕಾಣುತಲಿ ಧಾ |

ರುಣಿಯನೊತ್ತಿದನಂಗುಟದ ತುದಿಯಿಂದ ನಸುನಗುತ ||
ಮಣಿಖಚಿತ ಕಾಂಚನದ ಪೀಠದ
ಗೊಣಸು ಮುರಿದುದು; ಮೇಲೆ ಸುರಸಂ— |
ದಣಿಗಳಾಯೆನೆ ಕವಿದು ಬಿದ್ದನು ಹರಿಯ ಚರಣದಲಿ ! ||೩||

ಪ್ರ: - (ಅ) ಶ್ರೀಕೃಷ್ಣನು ಮನುಜ ವೇಷದಲ್ಲಿ ಎಲ್ಲಿಗೆ ಬಂದನು ? ಮತ್ತು ಏಕೆ ? (ಆ) ಸಭಿಕರು ಅವನನ್ನು ಹೇಗೆ ಮನ್ನಿಸಿದರು ? (ಇ) ಕೌರವನು ಕೃಷ್ಣನನ್ನು ಹೇಗೆ ಅವಮಾನಗೊಳಿಸಿದನು. (ಈ) ಕೃಷ್ಣನು ತನಗಾದ ಅವಮಾನವನ್ನು ಹೋಗಲಾಡಿಸಲು ಯಾವ ಉಪಾಯವನ್ನು ಕೈಕೊಂಡನು ? (ಉ) ಈ ಉಪಾಯದ ಪರಿಣಾಮವೇನಾಯಿತು ? (ಊ) ಶ್ರೀಕೃಷ್ಣನೆಂದು ಸೂಚಿಸುವ ಎಲ್ಲ ಪದಗಳನ್ನು ಆಯ್ದು ಬರೆಯಿರಿ. (ಎ) 'ಸಿಂಹ ವಿಷ್ಟರವ' 'ಧಾರಿಣಿ,' 'ದನುಜ,' 'ಕುಮತಿ,' ಇವುಗಳ ಅರ್ಥವನ್ನು ಕೊಡಿರಿ.

ಉ:—(ಅ) ಶ್ರೀಕೃಷ್ಣನು ಭೂಮಿಯ ಭಾರವನ್ನು ಇಳಿಸಲಿಕ್ಕೆ ಮನುಜರೂಪದಿಂದ ಕೌರವರ ಸಭೆಗೆ ಬಂದನು.

(ಆ) ಸಭಿಕರು ತಮ್ಮ ಕೈಗಳಲ್ಲಿ ಹಣೆಯನ್ನು ಇಟ್ಟು ಅಂದರೆ ಬಾಗಿ ನಮಿಸುತ್ತಿದ್ದರು.

(ಇ) ದುರ್ಯೋಧನನು ತಾನು ಕುಳಿತ ಸಿಂಹಾಸನವನ್ನು ಬಿಟ್ಟು ಇಳಿಯಲಿಲ್ಲ.

(ಈ) ಶ್ರೀಕೃಷ್ಣನು ನಗುತ್ತ, ತನ್ನ ಉಂಗುಟದಿಂದ ಭೂಮಿಯನ್ನು ಒತ್ತಿದನು.

(ಉ) ಇದರಿಂದ ಮಣಿಖಚಿತ ಸಿಂಹಾಸನದ ಕಾಲುಗಳು ಮುರಿದು, ಅದು ಉರುಳಿ ದುರ್ಯೋಧನನು ಶ್ರೀಕೃಷ್ಣನ ಪಾದದ ಮೇಲೆ ಬಿದ್ದನು.

(ಊ) ಕ್ಷೀರವಾರಿಧಿಶಯನ, ಕೃಷ್ಣ, ಕಮಲನಯನದ ದೇವ, ಹರಿ,

(ಎ) ಸಿಂಹವಿಷ್ಟರ= ಸಿಂಹಾಸನ, ಧಾರಿಣಿ=ಭೂಮಿ. ದನುಜ= ರಾಕ್ಷಸ, ಕುಮತಿ= ದುರ್ಯೋಧನ ಕೆಟ್ಟ ವಿಚಾರದವ.

ಪ್ರ:—(೨) ಕೆಳಗೆ ಕೊಟ್ಟ ಪದ್ಯವನ್ನು ಲಕ್ಷ್ಯಗೊಟ್ಟು ಓದಿ, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಹಾ ಸಾ. ೧೯೪೨)

ತುಂಡುತುಂಡಾಗಿಹುದು ಎಮ್ಮ ಕನ್ನಡನಾಡು
ನಮಗಿಲ್ಲದಿದೆ ಒಂದೆ ಆಡಳಿತವೀವ ಸುಖ
ಹೆರರ ಭಾಷೆಗಳಲ್ಲಿ ಮಾಡಿಕೊಂಡಿವೆ ಬೀಡು
ಸೊರಗಿಹುದು ಬಡವಾಗಿ ನಮ್ಮ ತಾಯ್ನುಡಿಯ ಮುಖ
ಅನ್ಯರಾಷ್ಟ್ರಗಳುಬ್ಬಿ, ಸಾಮ್ರಾಜ್ಯಗಳ ಕಟ್ಟಿ
ಮೆರೆಯುತಿರೆ, ಸೋತು ದಾಸ್ಯದೊಳಿಹೆವು ಹಿಮ್ಮೆಟ್ಟಿ.
ನಮ್ಮನಾವರಿಸಿಹುದು ಯಾವದೋ ಜಡತನವು,
ನಮ್ಮ ಬಾಳನು ತಿನ್ನುತಿದೆ ಘೋರ ಬಡತನವು.
ಮೊದಲ ನೆಲೆ ಸಾಹಿತ್ಯವೆಮಗಿಲ್ಲ, ನಮಗಿಲ್ಲ
ಬೆಳೆಯುತಿಹ ವಿವಿಧ ದರ್ಶನಮಾಲೆ, ವಿಜ್ಞಾನ
ವಾಹಿನಿಯು ಬತ್ತಿಹೋಗಿದೆ ಹರಡಿದ ಜ್ಞಾನ
ಮರುಭೂಮಿಯಲ್ಲಿ ಬರಿ ಹೆಮ್ಮೆ ನಮಗಿಹುದಿಲ್ಲ.
ಸಾಜನುಡಿಗಳ ದೀನದೆಸೆ ನೋಡಿ ಮರುಗುವೆನು
ತುಂಬು ಬೆಳಕಿರುಳನಳಿಸುವವರೆಗು ಕೊರಗುವೆನು.

ಪ್ರ:—೧. ಕನ್ನಡಿಗರ ಹೀನದೆಸೆಯ ಮುಖ್ಯ ಕಾರಣಗಳು ಯಾವವು? ೨. ಕನ್ನಡನಾಡಿನ ಮುಖವು ಏಕೆ ಸೊರಗಿರುವದು? ಯಾವ ಯಾವ ಭಾಷೆಗಳ ಆಕ್ರಮಣದಿಂದ ಕನ್ನಡನುಡಿಯು ಏಳ್ಗೆ ಹೊಂದದು? ೩. ಕನ್ನಡಿಗರು ದಾಸ್ಯದೊಳಿಹ ಕಾರಣಗಳು ಯಾವವು? ೪. ಕನ್ನಡಿಗರ ಮುಖ್ಯ ದೋಷವು ಯಾವದು? ೫. ಕವಿಯ ಕೊರಗು ಏನಾಗುವದರಿಂದ ಇಲ್ಲದಂತಾಗುವದು? ೬. ಕರ್ನಾಟಕದ ಸರ್ವತೋಮುಖವಾದ ಅಭಿವೃದ್ಧಿಯು ಯಾವ ಯೋಜನೆಯಿಂದ ಸಾಧ್ಯವಿದೆ?

ಉ:—೧. ಕನ್ನಡನಾಡು ತುಂಡುತುಂಡಾಗಿರುವದು; ಒಂದು ಆಡಳಿತ ಇಲ್ಲದೆ ಇರುವದು, ಇವು ನಮ್ಮ ಹೀನದೆಸೆಯ ಮುಖ್ಯ ಕಾರಣಗಳು.

೨. ಸೋತು ದಾಸ್ಯದೊಳಗಿರುವದರಿಂದ ಕನ್ನಡನಾಡಿನ ಮುಖವು ಸೊರಗಿರುವದು ಮರಾಠಿ, ತೆಲಗು, ಇಂಗ್ರೇಜಿ ಭಾಷೆಗಳ ಆಕ್ರಮಣದಿಂದ ಕನ್ನಡನುಡಿಯು ಏಳ್ಗೆ ಹೊಂದದು.

೩. ಬಡತನ, ಜಡತನಗಳು ದಾಸ್ಯದೊಳಗಿರಲು ಮೂಲ ಕಾರಣ ಗಳು.

೪. ಕನ್ನಡಿಗರಿಗೆ ಬರಿ ಹೆಮ್ಮೆ ಮಾತ್ರವಿರುವದರಿಂದ ಹೀಗಾಗಿದೆ.

೫. ಕನ್ನಡಿಗರು ಎಚ್ಚತ್ತು ತಮ್ಮ ಸ್ಥಿತಿಯನ್ನು ಸುಧಾರಿಸಲು ಯತ್ನಿಸುವ ವರೆಗೂ ಕವಿಯು ಕೊರಗುವನು.

೬. ಕರ್ನಾಟಕ ಏಕೀಕರಣದಿಂದ ಕರ್ನಾಟಕದ ಸರ್ವತೋಮುಖ ವಾದ ಅಭಿವೃದ್ಧಿಯಾಗುವದು.

ಪ್ರ:— (೩) ನೋಡೆನಿತು ಕೀಳಾಗಿ ಕಾಣುತಿಹುದೀ ಮಂದಿ

ನಮ್ಮ ಹರಿಜನ ಬಂಧುಗಳನಿಂದು, ಹೇ ಮಿತ್ರ.
ಈ ಜನರಿಗಂತ್ಯಜರು ಹೊಲಸಿನೊಳಗಿನ ಹಂದಿ,
ನರನ ಮುಟ್ಟದರೆಂಬ ಮಾತಿದೇನು ವಿಚಿತ್ರ !
ಸೋದರರು ದೇವದರ್ಶನಕೆಂದು ದೇಗುಲಕೆ
ಬರಲೇಂ ? ಕಳಂಕ ಬಹುದಂತೆ ಮಂದಿಯ ಕುಲಕೆ !
ನಮ್ಮ ಮತವಿಂದು ನಾರುವ ಕೆಸರ ಕೆರೆಯಾಯ್ತು !
ಜನವೆಲ್ಲ ಒಂದೆಂಬ ತತ್ತ್ವವೇಂ ಮರೆಯಾಯ್ತು !
ತಿಳಿದು ನೋಡಲು ಗೆಳೆಯ ಏನಿಹುದು ಜಾತಿಯಲಿ ?
ಸಕಲವೂ ನಿಂತಿಹುದು ಮಾನವನ ನೀತಿಯಲಿ.
ಕೋಗಿಲೆಯನಾದರಿಪುದದರ ಸವಿ ಸರಕಾಗಿ,
ಗುಣವ ಗಣಿಸದೆ ಹುಟ್ಟನಿಂದಳೆಯುವುದು ನೀಗಿ
ಇನ್ನಾದರೂ ಮಂಕು ಜನ ಪಡೆವುದೇ ಖೇದ ?
ಸಮತೆ ಭಾವವು ಬರಲಿ. ಸಾಕು ನಮಗೀ ಭೇದ.

ಮೇಲಿನ ಕವಿತೆಯನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಹಾ ಸ್ಕಾ. ೧೯೪೪)

(೧) ಯಾವ ಮಾತಿನಿಂದ ಕವಿಗೆ ಆಶ್ಚರ್ಯವಾಗಿದೆ? (೨) "ನಮ್ಮ ಮತವು ನಾರುವ ಕೆಸರ ಕೆರೆಯಾಯ್ತು ?" ಎಂದು ಕವಿಯು ಅನ್ನಲು ಕಾರಣವೇನು ? (೩) ಕವಿಯ ದೃಷ್ಟಿಯಿಂದ ಯಾವ ತತ್ವವು ಮುಖ್ಯವಾ

ದುದು ? (೪) ಮನುಷ್ಯನ ಯೋಗ್ಯತೆಯು ನಿಜವಾಗಿ ಏನು ಅವಲಂಬಿಸಿರುತ್ತದೆ ? (೫) ಕೋಗಿಲೆಯ ಉದಾಹರಣೆಯಿಂದ ನಾವು ಕಲಿಯತಕ್ಕ ಪಾಠವೇನು ? (೬) ಕವಿಯ ಆಶೆ ಏನಿರುವದೆಂಬುದನ್ನು ನಿಮ್ಮ ಮಾತುಗಳಲ್ಲಿ ಹೇಳಿರಿ.

ಉ:— [೧] ಅಂತ್ಯಜರು ಹೊಲಸಿನೊಳಗಿನ ಹಂದಿ, ಕಾರಣ ಅವರನ್ನು ಮುಟ್ಟಬೇಡಿರೆಂಬ ಮಾತು ಆಶ್ಚರ್ಯಕರವಾದುದು.

[೨] ಹರಿಜನರು ದೇವರ ಗುಡಿಗೆ ದೇವದರ್ಶನಕ್ಕೆ ಬಂದರೆ ಕುಲವು ಕಲಂಕ ಹೊಂದುವದೆಂಬ ಮಾತಿನಿಂದ 'ನಮ್ಮ ಮತವು ನಾರುವ ಕೆಸರ ಕೆರೆಯಾಯ್ತು' ಎಂದು ಕವಿಯು ಅಂದಿರುವನು.

[೩] ನಮಗೆ ಭೇದವು ಬೇಡ. ಸಮತಾ ಭಾವವು ಬೇಕು.

[೪] ಮನುಷ್ಯನ ಯೋಗ್ಯತೆಯು ಮಾನವತ ನೀತಿಯನ್ನು ಅವಲಂಬಿಸಿರುತ್ತದೆ

[೫] ಕೋಗಿಲೆಯು ಬಣ್ಣದ ಮೇಲಿಂದ ಜನನ್ನು ಪ್ರೀತಿಸುವದಿಲ್ಲ. ಆದರೆ ಅದರ ಸವಿಯಾದ ಧ್ವನಿಯಿಂದ ಅದು ಲೋಕಪ್ರಿಯವಾಗಿದೆ

[೬] ಕವಿಯ ಆಶೆಯು ಹರಿಜನರನ್ನು ನಮ್ಮ ಬಂಧುಗಳೆಂದು ತಿಳಿದು ಅವರನ್ನು ಸಮಭಾವದಿಂದ ಕಾಣಬೇಕೆಂಬುದಿದೆ. ಹಾಗೂ ದೇವರು ಎಲ್ಲರಿಗೂ ಸರಿಸಮಾನಸ್ವರೂಪದವನಿಂದ ದೇವರ ಗುಡಿಯಲ್ಲಿ ಹರಿಜನರಿಗೆ ಪ್ರವೇಶಕೊಡಬೇಕು ಎಂಬುದು ಇದೆ

ಪ್ರ:— (೪) ನೇಗಿಲ ಹಿಡಿದಾ ಹೊಲದೊಳು ಹಾಡುತ

ಉಳುವಾ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು.
ಕಷ್ಟದೊಳನ್ನಕೆ ದುಡಿವನೆ ತ್ಯಾಗಿ
ಸೃಷ್ಟಿಯ ನಿಯಮದೊಳವನೇ ಭೋಗಿ. ॥ ೧ ॥
ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ;
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ

ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವದೆ ಇಲ್ಲ ||೨||
ಯಾರೂ ಅರಿಯುವ ನೇಗಿಲಯೋಗಿಯೆ
ಲೋಕಕೆ ಅನ್ನವನೀಯುವನು,
ಹೆಸರನು ಬಯಸದೆ ಅತಿ ಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲ ಕುಳದೊಳಗಡಗಿದೆ ಕರ್ಮ,
ನೇಗಿಲ ಮೇಲೆಯೆ ನಿಂತಿದೆ ಧರ್ಮ (೩)

ಮೇಲೆ ಕೊಟ್ಟ ಪದ್ಯಗಳನ್ನು ಚನ್ನಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ — (ಹಾ. ಸ್ಕಾ. ೧೯೬೬)

೧. ಕವಿಯು ಯಾರನ್ನು ಯೋಗಿಯೆಂದು ಭಾವಿಸಿರುವನು ಯಾಕೆ?
೨. ಅವನು ಮಾಡುವ ಪೂಜೆಯು ಯಾವದು ? ಮತ್ತು ಎಂತಹದು ?
೩. ಲೋಕದಲ್ಲಿ ಯಾವದೇ ಘಟನೆಗಳು ಸಂಭವಿಸುತ್ತಿದ್ದರೂ ಅವನು ತಾನು ಕೈಕೊಂಡ ಕೆಲಸವನ್ನು ಬಿಡುವದಿಲ್ಲ' ಎಂಬುದನ್ನು ಕವಿಯು ಯಾವ ಯಾವ ಮಾತುಗಳಲ್ಲಿ ಹೇಳಿರುವನು ? ೪- "ಯಾರೂ ಅರಿಯದ ನೇಗಿಲ ಯೋಗಿಯು" ಎಂದು ಅವನಿಗೆ ಕವಿಯು ಏಕೆ ಅಂದಿರುವನು ?
೫. ನೇಗಿಲ ಮೇಲೆ ಧರ್ಮವು ಹೇಗೆ ನಿಂತಿರುವದು ?

ಉ:— ೧. ಕವಿಯು ಹೊಲದಲ್ಲಿ ನೇಗಿಲ ಹೊಡೆಯುವ ಒಕ್ಕಲಿಗನನ್ನು ನೇಗಿಲ ಯೋಗಿ ಎಂದು ಕರೆದಿರುವನು. ಯಾಕೆಂದರೆ ಅವನು ಯಾರೂ ಅರಿಯದಂತೆ ಲೋಕಕ್ಕೆ ಅನ್ನವನ್ನು ಕೊಡುವನು.

೨. ಅವನು ಸೇವೆಯೇ ಪೂಜೆಯೆಂದು ತಿಳಿದಿರುವನು, ಕಷ್ಟದಲ್ಲಿ ಅನ್ನವನ್ನು ದುಡಿಯುವ ತ್ಯಾಗಿಯಾತನು

೩. ಹೊಸರಾಜ್ಯ ಉದಯವಾಗಲಿ, ಅಥವಾ ಹಳೆಯರಾಜ್ಯ ಹಾಳಾಗಲಿ, ಸೈನಿಕರು ಬಂದು ಮುತ್ತಿಗೆ ಹಾಕಲಿ, ಅರಸರು ಬದಲಾಗಲಿ, ಈ

ಯಾವ ಘಟನೆ ಸಂಭವಿಸಿದರೂ ಅವನು ತಾನು ಕೈಕೊಂಡ ಕೆಲಸವನ್ನು ಬಿಡುವದಿಲ್ಲ.

೪. ಯಾಕೆಂದರೆ ಅವನು ಹೊಲದಲ್ಲಿ ಒಬ್ಬನೇ ಯಾವಾಗಲೂ ದುಡಿಯುತ್ತ ಇರುವನು. ಅದರಿಂದ ಅವನನ್ನು ವಿಶೇಷವಾಗಿ ಯಾರೂ ಅರಿಯರು.

೫. ಅವನು ದುಡಿದು ಬೆಳೆಯುವ ಧಾನ್ಯದಿಂದ ಎಲ್ಲರಿಂದ ಜೀವನ ಸಾಗುವದು. ಕಾರಣ ನೇಗಿಲ ಮೇಲೆಯೇ ಎಲ್ಲ ಧರ್ಮ, ಎಲ್ಲ ಕರ್ಮ.

ಪ್ರ. (೧) ಹೋಗುತಿದೆ ಹಳೆಯ ಕಾಲ, ಹೊಸಕಾಲ ಬರುತಲಿದೆ
ಬರುತಲಿದೆ ಹೊಸದೃಷ್ಟಿ, ಹೊಸ ಬಯಕೆಗಳಲಿ,
ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ,
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ,
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ !
ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ,
ಉದುರುತಿವೆ ಮುದುಕಡ್ಡಿ ತರಗು ಹಣ್ಣೆಲೆಗಳೆಲ್ಲ
ನಲಿಯುತಿವೆ ನಳನಳಿಸಿ ಹೊಸಚಿಗುರು ಮೂಡಿ
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ನೋಡಿ !
ಗರ್ಜಿಸಲು ತೊಡಗಿಹುದು ಕೇಸರಂಗಳ ಕೆದರಿ
ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಎಷ್ಯಾ
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ !
ಹಳೆಮತದ ಕೊಳೆಯೆಲ್ಲ ಹೊಸಮತೀಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ ಬರಲಿ ವಿಜ್ಞಾನಬುದ್ಧಿ.
ವೇದಪ್ರಮಾಣತೆಯು ಮರುಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ.
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಬಾಳಿ
ಹೊಸಬಾಳ ಗೀತವನು ದಿಕ್ಕುದೆಸೆ ಬಿರಿವಂತೆ
ಕೊರಳೆತ್ತಿ ಕೈಯೆತ್ತಿ ದನಿಯೆತ್ತಿ ಹಾಡಿ

ಸೇರಿ ನಡೆದರೆ ನಿಮ್ಮ ತಡೆಯುವವರಾರಿಲ್ಲ!
ಜಗವೆ ಹಿಂಜರಿಯುವದು ನಿಡುದಾರಿ ನೀಡಿ
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಮೂಡಿ!

ಮೇಲೆ ಕೊಟ್ಟ ಪದ್ಯಗಳನ್ನು ಚನ್ನಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:-- (ಹಾ. ಸ್ವಾ. ೧೯೪೭)

೧. ಕವಿಯು ಸೂಚಿಸಿರುವ ಹೊಸಕಾಲದ ಬರುವಿಕೆಯ ರೀತಿಯು ಯಾವದು? ೨. ಪಶ್ಚಿಮದ ಹೊಸಗಾಳಿ ಮಾಡುವ ಕಾರ್ಯಗಳು ಯಾವವು? ೩. ಎಷ್ಯಾದ ಬಗ್ಗೆ ಕವಿಯ ಭಾವನೆಗಳು ಯಾವವು? ೪. ಸ್ವಾತಂತ್ರ್ಯಸಿದ್ಧಿ ಕೆಡದಿರಲು, ಯಾವ ಯಾವ ಕಾರ್ಯಗಳ ಅವಶ್ಯಕತೆ ಇರುವದು? ೫. ಹೊಸ ಬಾಳಿನ ಗೀತೆಯನ್ನು ಯಾವ ರೀತಿಯಲ್ಲಿ ಹಾಡಹೇಳಿರುವನು? ಯಾಕೆ? ೬. ಸೇರಿ ನಡೆಯುವದರಿಂದಾಗುವ ಲಾಭಗಳು ಯಾವವು?

ಉ:— ೧. ಹಣ್ಣು ಎಲೆಗಳು ಉದುರಿಬಿದ್ದು, ಶೋಭಿಸುವ ಹೊಸ ಚಿಗುರು ಮೂಡುವಂತೆ ಹೊಸಕಾಲ ಬಂದಿತು.

೨. ಪಶ್ಚಿಮದ ಹೊಸಗಾಳಿ ಭಾರತದ ಒಣಗಿದ ಗಿಡವನ್ನು ಅಲುಗಾಡಿಸಿ ಹಣ್ಣಾದ ಎಲೆಗಳನ್ನು ಉದುರಿಸುವದು ನಂತರ ಹೊಸ ಎಲೆಗಳು ತಾವೇ ಚಿಗಿಯುವವು.

೩. ಏಶಿಯಾವು ಮಲಗಿ ನಿದ್ರಿಸುತ್ತಿದೆ.

೪. ಹೊಸ ಬುದ್ಧಿ ಎಂಬ ನದಿಯಲ್ಲಿ ಹಳೆ ಮತದ ಕೊಳೆಯೆಲ್ಲ ಕೊಚ್ಚಿಹೋಗಲಿ, ವೇದಗಳ ಮರುಭೂಮಿಯಲ್ಲಿ ಮೃಗಜಲದ ನೀರು ಹುಡಿಕಿ ಸ್ವಾತಂತ್ರ್ಯ ಸಿದ್ಧಿ ಕೆಡದಿರಲಿ.

೫. ಎಲ್ಲ ದಿಕ್ಕುಗಳು ಬಿರಿಯುವಂತೆಯೂ ಕೈಯೆತ್ತಿ, ಕೊರಳೆತ್ತಿ, ದನಿಯೆತ್ತಿ ಹೊಸಬಾಳಿನ ಗೀತೆಯನ್ನು ಕವಿಯು ಹಾಡಿ ಹೇಳಿರುವನು.

೬. ಸೇರಿ ನಡೆದರೆ ನಿಮ್ಮನ್ನು ತಡೆಯುವವರು ಯಾರೂ ಇಲ್ಲ.

ಪ್ರ (೬) ಎನ್ನೆದೆಯ ಬಾಗಿಲನು ಮುಚ್ಚಿ ನಿದ್ರಿಸುತಿರ್ದೆ
ಜೀವನದಿ ತಿರುಳಿಲ್ಲವೆಂಬ ಭ್ರಮೆಯೊಳಗೆ!

ದೇವ ನೀನೈತಂದು ಬಾಗಿಲನು ಬಡಿಯೆ ನಾಂ
ಹಿಡುಕಿನಿಂದಲೇ ಕೇಳ್ದೆ 'ಆರು ಅದು'? ಎಂದು ||೧||
ಮೌನದಲಿ ಮತ್ತೊಮ್ಮೆ ಶಬ್ದಮಾಡಲು ನೀನು
ನಾನೆದ್ದೆ ಕೋಪದಲಿ ಕೆಂಡದಂತಾಗಿ
ಆರಿವನು ನಿದ್ರೆಯಲಿ ಭಂಗ ತಂದಿಹ ಧೂರ್ತ ?
ಎಂದು ಚಿಂತಿಸಿ ಬಂದು ಬಾಗಿಲನು ತೆರದೆ ||೨||

ನಿನ್ನ ನೋಡುತಲೆನ್ನ ಕೋಪ ಕಣ್ಣೀರಾಯ್ತು
ನಿನ್ನ ಮುಗುಳ್ನಗೆ ಮಿಂಚಿ ಎನ್ನ ಮನಸೆಳೆಯೆ
ಮೌನದಲಿ ಹೃದಯದಲಿ ತಳಮಳದಿ ತಪಿಸಿದೆನು,
ನೀನೊಳಗೆ ಬರಬೇಕು ಎಂಬುದೆನ್ನಿಚ್ಛೆ ||೩||

ನಸುನಕ್ಕು ಚಣಕಾಲ ಒಳಗೆ ದಿಟ್ಟಿಸಿ ನೋಡಿ
ಮುಂದಕ್ಕೆ ಹೊರಟೆ ನೀಂ ದೇವದೇವ.
ನಿನ್ನ ಪುನರಾಗಮನಕಾಗಿ ಕಾಯುತಲಿರುವೆ
ಎದೆಯ ಬಾಗಿಲ ತೆರೆದು ಹೊಸ್ತಿಲಲಿ ನಿಂದು ||೪||

ಮೇಲಿನ ಪದ್ಯವನ್ನು ಲಕ್ಷ್ಯಪೂರ್ವಕವಾಗಿ ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:— (೧೯೪೪)

[೧] ಮೊದಲನೆಯ ಪದ್ಯವು ಎಂಥ ಜನರನ್ನು ಕುರಿತು ಅದೆ ? [೨] ದೇವರ ಅರಿವಿಲ್ಲದವರು ಏತಕ್ಕೆ ಮಹತ್ವವನ್ನು ಕೊಡುವರು ? [೩] ದೇವರ ದರ್ಶನವಾದ ಬಳಿಕ ಯಾವ ಬಗೆಯ ಬದಲಾವಣೆಯಾಗುವದು? [೪] ದೇವರು ಮನುಷ್ಯನಿಗೆ ಕ್ಷಣಮಾತ್ರ ದರ್ಶನ ಕೊಟ್ಟು ಏಕೆ ಮಾಯವಾಗುವನು ?

ಉ:— [೧] ಭಾವಿಕರು, ಭಗವದ್ಭಕ್ತರು, ಅಥವಾ ಮುಮುಕ್ಷುಗಳು. [೨] ಬಾಹ್ಯಾಡಂಬರಕ್ಕೆ [೩] ಬಾಹ್ಯಜಗದ ಸ್ಮೃತಿಯೇ ಉಳಿಯುವದಿಲ್ಲ. [೪] ದೇವರ ಸ್ಮರಣೆಯನ್ನು ಅಖಂಡವಾಗಿ ಮಾಡಲೆಂಬುದು ಅವನ ಉದ್ದೇಶ.

ಪ್ರ:—[೭] ನಗು ನಗು ಮಗುವೇ । ಬಗೆಬಗೆಯಿಂದಲಿ ।
ಮಿಗೆ ಸೊಗಸನು ಬೀರುತ ಮನಕೆ ॥
ಮುಗಿಲೊಳು ನಗುತಲಿ । ಸೊಗಯಿಪ ಚಂದ್ರನ ।
ಮೊಗವನು ನೋಡುತ ಕುಲು ಕುಲು ನೀ ॥೧॥

ಹಣಿಕಿಡುತಲಿ ಏ । ನ್ನಣಕಿಪುದೇತಕೆ । ಗುಣ
ಹೀನನವೋಲ್ ಚಂದ್ರಮನೇ ॥
ಕೆಣಕಲು ನಿಂಗೆ ಗಡ । ಸೆಣಸುತ ನಿನ್ನನ್ನು । ಕುಣಿ
ಸದೆ ಬಿಡುವೆನೆ ನೋಡೆಂದ ॥೨॥

ತರಣಿಯ ಸಿರಿಯಿದು । ಇರಲಿಕೆ ನಿನ್ನೊಳು । ಗರು
ವಿಕೆಎಂತೋ । ಅರಿಯೆನು ನಾ
ಗರುವದ ಪರಿಯಿದು । ಸರಿಯಾಗದು ಹಿಮ । ಕರನೇ
ಕರ ಪಿಡಿದಾಡೆಂದು ॥೩॥

ಎಳೆನಗೆ ಬೆಳದಿಂ । ಗಳದಿಂ ವದನ । ಕಮಲ
ವೆನ್ನದು ಫಲಿದಲರುವದು ॥
ಇಳೆಯೊಳಗಿದಿರಾ । ಬಲು ಸೋಜಿಗವನು । ತಿಳಿ
ಯೆನು ತರಳನೆ ನಗು ನಗು ನೀ ॥೪॥

ಕುಲುಕುಲು ನಗುವಹ । ಸುಳನ ಮೊಗವ ನೋ ।
ಡಲು ಪೂರ್ವದ ಪುಣ್ಯವೆ ಬೇಕು. ॥೫॥

ಮೇಲಿನ ಕವಿತೆಯನ್ನು ಓದಿ ಅರ್ಥ ತಿಳಿದುಕೊಂಡು, ಈ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ. [೧೯೬೫]

ಪ್ರ:—[೧] ಈ ಕವಿತೆಯನ್ನು ಯಾರು ಅಂದಿರಬಹುದು ? ಇದಕ್ಕೆ ಯಾವ ಹೆಸರನ್ನು ಕೊಡಬಹುದು ? [೨] ಎರಡನೆಯ ಪದ್ಯದ ತಾತ್ಪರ್ಯವೇನು ? [೩] ಮೂರನೆಯ ಪದ್ಯದಲ್ಲಿ ಬಂದ ಬುದ್ಧಿಯ ಮಾತಾವುದು ? [೪] ನಾಲ್ಕನೆಯ ಪದ್ಯದಲ್ಲಿಯ ಸೋಜಿಗವನ್ನು ಸ್ಪಷ್ಟಪಡಿಸಿರಿ. [೫] ಕೊನೆಯ ಪದ್ಯದಲ್ಲಿ ಸೂಚಿಸಿದ ಅಭಿಪ್ರಾಯವನ್ನು ವಿವರಿಸಿ ಬರೆಯಿರಿ.

[೧]ಉ: ರಾತ್ರಿಕಮಲ; ಚಂದ್ರನಮುದ. [೨] ಎಲೈ ಚಂದ್ರಮನೇ ನೀನು ಗುಣಹೀನನಂತೆ ಅಣಕವಾಡುವದು ಏಕೆ ? ಕೆಣಕಿದರೆ ನೀನು ಸಿಟ್ಟಿಗೇಳುತ್ತ ನಿನ್ನನ್ನು ಕುಣಿಸದೆ ಬಿಡುವೆನೆ ನೋಡು ? [೩] ಸೂರ್ಯನ ಬೆಳಕು ಚಂದ್ರನಲ್ಲಿ ಕಡವಾಗಿ ಉಳಿದಿರಲಾಗಿ ಗರ್ವಕ್ಕೆ ಆಸ್ಪದವೆಲ್ಲಿದೆ ? ಪರರ ಸೊತ್ತಿನಿಂದ ಹೆರವರು ಮೆರೆಯುವದು ಒಳಿತಲ್ಲ [೪] ಎಳೆನಗೆ ಬೆಳದಿಂಗಳದಿಂದ ನನ್ನ ಮುಖಕಮಲ ಆನಂದದಿಂದ ಅರಳುವದು. [೫] ಕುಲು ಕುಲು ನಗುವ ಮಗುವಿನ ಮುಖವನ್ನು ನೋಡಲಿಕ್ಕೆ ಪೂರ್ವದ ಪುಣ್ಯಬೇಕು ಅದರಂತೆ ಚಂದವಾದ ಕಾವ್ಯವನ್ನು ಇಂಪಾಗಿ ಹಾಡಲು ಪರಮಾತ್ಮನ ಕೃಪೆಬೇಕು. (ಮಧುರ ಕಂಠವಿರಬೇಕು.)

ಪ್ರ:- [೮] ಭರತಮಾತೆಯ ಪುಣ್ಯಗರ್ಭದೊಳು ಪುಟ್ಟಿ ನಾ
ನಿರದೆ ಕರುನಾಡೆಂಬ ದೇಶದೊಳು ಬೆಳೆದು ||
ಸರಳಋಜು ಕೋಮಲದ ಗುಣಕೆ ಕನ್ನಡಿಯಂತೆ |
ಮೆರೆವೆನ್ನ ಕಂಡು 'ಕನ್ನಡ' ವೆಂದರಾಗ ||
ಅಲ್ಲದೆ ನೋಡಿದರೆಲ್ಲಿಯು ಈಗ |
ಸಲ್ಲುವುದೆನಗಗ್ಗಳ ಮನ್ನಣೆಯು |
ಭಾಷಾವತ್ಸಲರೆಲ್ಲರು ಸೇರಿ |
ತೋಷದೆ ನಿರ್ಮಿಸಿ ಪರಿಷತ್ತುಗಳ |
ಭೂಷಿಸಿ ಎನ್ನನು ಪರಿಪರಿ ವಿಧದಿಂ |
ಪಾಲಿಸಿ ಲಾಲಿಸಿ ಮೆರೆವರು ಎನ್ನ |
ಪೊರೆವರು ಎನ್ನ |
ಮೂಡುವ ಹರುಷದೆ ಬಾಲರು ಎನಗೆ |
ತೊಡಿಸುತೆ ತರತರ ತೊಡವುಗಳ |
ಉಡಿಸುತೆ ಒಪ್ಪುವ ವಸ್ತ್ರಗಳ |
ಮುಡಿಸುತೆ ಕಂಪಿನ ಕುಸುಮಗಳ |
ಉಲಿವರು ನಲಿವರು ಒಲಿಸುವರು |
ಬಿಡದೆನ್ನನು ಹರಸುವರು |
ಮೆರೆಸುವರು |

ಈ ಕವಿತೆಯೊಳಗಿಂದ ಹುಡುಕಿ ತೆಗೆದು, ಮುಂದಿನ ಪ್ರಶ್ನೆಗಳ ಉತ್ತರಗಳನ್ನು ಬರೆಯಿರಿ. [೧೯೪೬]

[ಅ] ಈ ಕವಿತೆಯನ್ನು ಯಾರು ಅಂದಿರಬಹುದು ? 'ಕನ್ನಡ' ವೆಂಬ ಹೆಸರು ಹೇಗೆ ಬಂತು ? [ಆ] ತರತರದ ತೊಡವು, ಒಪ್ಪುವ ವಸ್ತ್ರ, ಕಂಪಿನ ಕುಸುಮ ಎಂದರೇನು ? [ಇ] ಕನ್ನಡ ನುಡಿಗೆ ಮನ್ನಣೆಯು ಈಗ ಹೇಗೆ ಹೇಗೆ ಸಿಗುತ್ತಿದೆ ? [ಈ] 'ಭಾಷಾವತ್ಸಲರು' ಎಂದರೇನು ? ನಿಮಗೆ ಗೊತ್ತಿದ್ದ ಮೂವರು ಭಾಷಾವತ್ಸಲರು ಹೆಸರು ಬರೆಯಿರಿ.

ಉ: - [ಅ] ಕನ್ನಡಾಂಬೆಯು ಈ ಪದ್ಯವನ್ನು ಅಂದಿರುವಳು. ಕಪ್ಪು ದೇಶದಲ್ಲಿ ಬೆಳೆದುದರಿಂದಲೂ ಸರಳ ಮತ್ತು ಕೋಮಲವಾದ ಗುಣ ಗಳ ಉತ್ಕರ್ಷದಿಂದಲೂ ಕನ್ನಡವೆಂಬ ಹೆಸರು ಬಂದಿತು.

[ಆ] ಬಗೆಬಗೆಯ ಆಭರಣ, ಶೋಭಿಸುವ ಅರಿವೆ, ಸುವಾಸನೆಯ ಹೂವೆಂದರೆ ಶಬ್ದಾಲಂಕಾರ ಅರಿವೆಗಳು-ಗ್ರಂಥಗಳು.

(ಇ) ಈಗ ಕನ್ನಡ ನುಡಿಯ ಅಭಿಮಾನಿಗಳು, ಸಾಹಿತ್ಯ ಪರಿಷತ್ತು ಗಳನ್ನು ನೆರೆಯಿಸಿ, ಅಲ್ಲಿ ಕನ್ನಡ ನುಡಿಯನ್ನು ಎಷ್ಟೋ ರೀತಿಯಿಂದ ಅಂದರೆ ಗದ್ಯ, ಪದ್ಯ, ನಾಟಕ ಮೊದಲಾದವುಗಳ ರೂಪವಾಗಿ ಸೇವಿಸಿ, ಕನ್ನಡ ನುಡಿಯೆಂಬ ಮಾತೆಯನ್ನು ರಕ್ಷಿಸುವರು.

ಚಿಕ್ಕ ಚಿಕ್ಕ ಬಾಲಕರು ಆನಂದದಿಂದ ಕನ್ನಡ ನುಡಿಯೆಂಬ ಮಾತೆ ಯನ್ನು ಎಷ್ಟೋ ಬಗೆಯ ಅಲಂಕಾರಗಳಿಂದಲೂ ಒಪ್ಪುವ ವಸ್ತ್ರಗಳಿಂದಲೂ ಸುವಾಸನೆಯ ಹೂಗಳಿಂದಲೂ ಅಲಂಕರಿಸುವರು. ಅದರಿಂದ ನನ್ನನ್ನು ಆಕರ್ಷಿಸುವರು. [ಸಣ್ಣ ಬಾಲಕರು ತಮ್ಮ ಮಧುರವಾದ ಮತ್ತು ಮಂಜುಳವಾದ ಧ್ವನಿಯಿಂದ ಕನ್ನಡ ಭಾಷೆಯ ಪದ್ಯಗಳನ್ನು ಪಠಿಸುವರು. ಗದ್ಯ ಮತ್ತು ಪದ್ಯ ನಾಟಕಗಳನ್ನು ಕಟ್ಟುವರು. ಈ ರೀತಿಯಿಂದ ನನ್ನ ಮಹಿಮೆಯನ್ನು ಎಲ್ಲೆಡೆಯಲ್ಲಿ ತೋರಿಗಹತ್ತಿರುವರು.]

(ಈ) ಭಾಷೆಯ ಮೇಲೆ ಪ್ರೀತಿಯುಳ್ಳವರು; ಕುಮಾರ ವ್ಯಾಸ, ಪಂಪ, ಹೊನ್ನ, ಅಂಡಯ್ಯ.

ಪ್ರ:-(೧೯) ಗಿರಿಗಳನ್ನು ಕೊರೆಯುವೆನು ದಾರಿಯನು ತೆರೆಯುವೆನು.
ಸರ್ವ ಕಷ್ಟಗಳನ್ನು ಸಹಿಸಿ, ಸಹಿಸಿ;

ಸಿರಿಸೂರೆಗೊಂಡಿರುವ ಅರಮನೆಯ ರಚಿಸುವೆನು
ಪರಿಪರಿಯ ಕಾಯಶ್ರಮ ವಹಿಸಿ. ವಹಿಸಿ.

ಆದರೇನಿಹುದೆನಗೆ ? ನಾಲ್ಕು ಆಣೆಯ ಕೂಲಿ
ದಿನದಿನದ ದುಡಿತಕ್ಕೆ ಸಿಗುವ ಫಲವು.
ಇನಿತು ಚೆದರಿನ ಕೈಗೆ ಇನಿತು ಬಲದೀ ಭುಜಕೆ
ತನ್ನ ಹೊಟ್ಟೆಯ ಗಳಿಪತ್ರಾಣವಿಲ್ಲ-ಅರೆಹೊಟ್ಟೆಬಾಳುವದು ತಪ್ಪಲಿಲ್ಲ

ಮುರುಕು ಗುಡಿಸಲಿನೊಳಗೆ ಹರಕು ಚಾಪೆಯ ಮೇಲೆ
ಒರಗಿಕೊಳ್ಳುವದೆನ್ನ ಹಣೆಯ ಬರಹ;
ನಾ ಕಟ್ಟಿದಂತಸ್ತುಗಳ ಮಂಚಗಳ ಮೇಲೆ
ಒರಗಿ ಸುಖಿಸುವ ಭಾಗ್ಯ ಮತ್ತೊಬ್ಬಗೆ

ದುಡಿದು ರಕ್ತದ ಬೆವರನಿಡುವ ಹೊಟ್ಟೆಯ ಮೇಲೆ
ಹಾಸು ಬಂಡೆಯನೆಳೆವರಾಶೆಯೇನು ?
ದುಡಿತಕ್ಕೆ ಬಡತನವು ಆಲಸಕೆ ಸಿರಿತನವು
ಇದುವೆ ಮಾನವ ಕುಲದ ರೀತಿಯೇನು ?

ಮೇಲಿನ ಕವಿತೆಯನ್ನು ಓದಿ, ತಿಳಿದುಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. [೧೯೪೭]

[೧] ಕೂಲಿಯವನು ಯಾವ ಕಾರ್ಯಗಳಿಗಾಗಿ ಶ್ರಮವಹಿಸುವನು? [೨] ಆದರೂ ಅವನು ಬಾಳು ದುಃಖಮಯವಾದುದೆಂದು ಯಾವ ಮಾತುಗಳಿಂದ ಗೊತ್ತಾಗುವದು ? [೩] ಜಗತ್ತಿನಲ್ಲಿ ಸುಖವನ್ನು ಭೋಗಿಸುವವರು ಯಾರು ? ಮತ್ತು ಅವರು ಭೋಗಿಸುವ ಸೌಖ್ಯವು ಯಾವದು ? [೪] "ರಕ್ತದ ಬೆವರನಿಡುವ ಹೊಟ್ಟೆಯ ಮೇಲೆ ಹಾಸುಬಂಡೆಯನೆಳೆ" ಎಂಬುದನ್ನು ಸ್ಪಷ್ಟೀಕರಿಸಿರಿ. [೫] ಮಾನವ ಕುಲದ ರೀತಿಯಲ್ಲಿ ಕಂಡು ಬರುವ ದೋಷವೇನು ?

ಉಃ – (೧) ಕೂಲಿಯವನು ಗಿರಿಗಳನ್ನು ಕೊರೆದು, ಅರಮನೆಗಳನ್ನು ರಚಿಸುವನು.

[೨] ಆದರೂ ಅವನಿಗೆ ದಿನಕ್ಕೆ ನಾಲ್ಕು ಆಣೆ ಮಾತ್ರ ಕೂಲಿ ದೊರೆಯುತ್ತದೆ. ಆದರಿಂದ ಅರಹೊಟ್ಟೆ ಬಾಳುವದು ತಪ್ಪುವದಿಲ್ಲ. ಮುರುಕು ಗುಡಿಸಲಿನೊಳಗೆ ಹರಕು ಚಾಪೆಯ ಮೇಲೆ ಮಲಗುವದು ಹೋಗಲಿಲ್ಲ.

[೩] ಜಗತ್ತಿನಲ್ಲಿ ಸಿರಿವಂತರು ಸೌಖ್ಯವನ್ನು ಅನುಭೋಗಿಸುವರು. ಕೂಲಿಯವನು ಕಟ್ಟಿದ ಮೇಲುಪ್ಪರಿಗೆಯ ಮನೆಯಲ್ಲಿ ಮಂಚಗಳ ಮೇಲೆ ಮಲಗಿ ಸುಖಿಸುವರು

[೪] ಕೂಲಿಯವನು ಹೊಟ್ಟೆ ತುಂಬಿಕೊಳ್ಳುವದಕ್ಕಾಗಿ ಮೈಯಿಂದ ಬೆವರು ಹರಿಯುವ ಹಾಗೆ ದುಡಿಯುವನು, ಆದರೆ ಅವನ ಹೊಟ್ಟೆ ತುಂಬುವಂತೆ ಕೂಲಿ ಯೇನೂ ದೊರೆಯುವದಿಲ್ಲ ಆದರಿಂದ ಹೊಟ್ಟೆಯ ಮೇಲೆ ಹಾಸು ಬಂಡೆಯನ್ನು ಎಳೆದಂತೆ ಆಗುವದು

[೫] ರಕ್ತ ಸುರಿಸಿ ಕಷ್ಟಪಟ್ಟು ಮನೆ ಕಟ್ಟುವವರು ಒಬ್ಬರು. ದುಡಿಯದೆ ಅದರ ಸುಖವನ್ನು ಅನುಭೋಗಿಸುವವರು ಇನ್ನೊಬ್ಬರು.

ಪ್ರ: -- [೧೦] ಜೀವನವೆಂದರೆ ಮುಳ್ಳಿನ ಹಾಸಿಗೆ,
ಕಳ್ಳಿಯ ಹಾಲಿನ ಘನರಸ ತಂಗಿ |
ಕುಡಿಯಲಾರದೆ ಕುಡಿದು ಕಂಠದಿ ಧರಿಸುತ
ನೀಲ ಕಂಠರೆಲ್ಲ ನಿಂತಾರ ತಂಗಿ |
ಹುಟ್ಟಿ ಬಂದ ಮೇಲೆ ಕಟ್ಟಿದ ಬುತ್ತಿಯ
ಗಂಟುಬಿಚ್ಚಿ ಉಣಬೇಕವ್ವ ತಂಗಿ |
ಎಡಹುತ ಮುಗ್ಗುತ ಬೀಳುತ ಏಳುತ
ಊರಿನ ದಾರಿಯ ಹಿಡಿಯಬೇಕ ತಂಗಿ |
ಸುತ್ತಲಿದ್ದವರನ್ನು ಮತ್ತು ರಾಗದಿ ನೋಡಿ
ಎತ್ತ ಹೋದರೂ ಪ್ರೀತಿಯಿಂದಿರಬೇಕ ತಂಗಿ |
ದೇವನ ಪಾದದ ಭಜನೆಯ ಮಾಡುತ
ಆವನ ನಾಮವೇ ನಂಬಿರಬೇಕು ತಂಗಿ |
ಹೆಚ್ಚೇನು ಹೇಳಲಿ ? ನಿನ್ನ ಜೀವನ ಮಾಡು
ಆವನಿಗೇರಿಸಿದಂಥ ಹೂವಾಗಿ ತಂಗಿ |

ಆದರ ಚೆಂದವ ಹೊಂದಿ ಆನಂದವ ಹೊಂದಿ
ಬಾಳೆಂದು ಹರಿಸ್ಯಾನ ನಿನ್ನಣ್ಣ ತಂಗಿ!

ಮೇಲಿನ ಕವಿತೆಯನ್ನು ಓದಿ, ತಿಳಿದುಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. [೧೯೪೭ ಅಕ್ಟೋಬರ]

(೧) ಕವಿಯು ಜೀವನವನ್ನು ಯಾವ ಯಾವ ವಸ್ತುಗಳಿಗೆ ಹೋಲಿಸಿರುತ್ತಾನೆ. ಯಾಕೆ? (೨) ಎಡವುತ, ಮುಗ್ಗುತ, ಬೀಳುತ, ಏಳುತ, ಊರಿನ ದಾರಿಯ ಹಿಡಿಯಬೇಕ ತಂಗಿ! ಈ ಸಾಲುಗಳ ಅರ್ಥವನ್ನು ವಿವರಿಸಿರಿ. (೩) ನಮ್ಮ ಜೀವನವು ಸರಿಯಾಗಿ ಸಾಗಬೇಕಾದರೆ, ನಮ್ಮಲ್ಲಿ ಯಾವ ಯಾವ ಗುಣಗಳು ಇರತಕ್ಕದ್ದು? (೪) ಕೊನೆಯ ಪದ್ಯದಲ್ಲಿ ಅಣ್ಣನು ತಂಗಿಗೆ ಏನೆಂದು ಹರಿಸಿರುವನು? (೫) ಈ ಕವಿತೆಗೆ ಯೋಗ್ಯವಾದ ತಲೆಬರಹವನ್ನು ಕೊಡಿರಿ.

ಉ:—೧. ಕವಿಯು ಜೀವನವನ್ನು ಮುಳ್ಳಿನ ಹಾಸಿಗೆ, ಕಳ್ಳಿಯ ಹಾಲಿನ ಘನರಸಗಳಿಗೆ ಹೋಲಿಸಿದ್ದಾನೆ. ಮುಳ್ಳಿನ ಹಾಸಿಗೆಯು ಸುಖ ನಿದ್ರೆಯನ್ನು ಕೊಡುವದಿಲ್ಲ. ಚುಚ್ಚಿ ಗಾಸಿಗೊಳಿಸುವುದು. ಕಳ್ಳಿಯ ಹಾಲು ನೋಟಕ್ಕೆ ಶುಭ್ರವಾಗಿ ಚಂದಕಂಡರೂ ಅದರ ವಿಷವು ಬಾಧಿಸುತ್ತದೆ. ಹಾಗೇ ಜೀವನವು ಸುಖಮಯವಾಗಿ ಕಂಡರೂ, ತುಂಬ ದುಃಖಗಳಿಂದ ಕೂಡಿರುತ್ತದೆ. ೨. ಜೀವನವೂ ಒಂದೇಸವನೆ ಇರುವದಿಲ್ಲ. ಅದರಲ್ಲಿ ಏರಿಳಿತಗಳಿದ್ದೇ ಇರುತ್ತವೆ. ಎಡುವು, ಮುಗ್ಗು, ಬೀಳು ಇವು ಜೀವನದಲ್ಲಿ ಬರುವ ಕಷ್ಟಗಳನ್ನು ಸೂಚಿಸುತ್ತವೆ. ಏಳುತ ಇದು ಅದರೊಳಗಿಂದ ಮುಕ್ತವಾಗುವದನ್ನು ಹೇಳುವದು. ೩. ಎಲ್ಲರ ಕೂಡ ಪ್ರೀತಿಯಿಂದಿರಬೇಕು. ದೇವನ ಪಾದದ ಭಜನೆಯ ಮಾಡುತ್ತಿರಬೇಕು. ಅವರನ್ನು ನಂಬಿ ಜೀವಿಸಬೇಕು. ಸೊಕ್ಕಿಗೇಳಬಾರದು. ೪. ನಿನ್ನ ಜೀವನವು ದೇವರಿಗೆ ಏರಿಸಿದ ಹೂವಾಗಲಿ, ಅದರ ಚೆಂದ ನಿನಗೆ ಬರಲಿ. ಅದರಿಂದ ಆನಂದಹೊಂದಿ ಬಾಳಲಿ. ೫. ಜೀವನಸಾರ.

ಪ್ರ: (೧೦) ಸಂಹಾರ ಲೀಲೆಯಲ್ಲಿ ತೊಡಗಿಹನು ಉರಿಗಣ್ಣ
ಕಡಲಾಚೆ ಪಾಶ್ಚಾತ್ಯರಾಷ್ಟ್ರಗಳ ನೋಡಣ್ಣ;

ಪ್ರಲಯವೇ ರುದ್ರಾವತಾರದಲಿ ಕುಣಿಯುತಿದೆ
ನರಮೇಧ ಸಾಗುತಿದೆ, ರಕ್ತನದಿಹರಿಯುತಿದೆ,
ಗೋಹತ್ಯೆ, ಸ್ತ್ರೀಹತ್ಯೆ, ಶಿಶುಹತ್ಯೆ ನಡೆಯುತಿದೆ
ರುದ್ರಭೀಕರನಾಗಿ ಭೂವ್ಯೋಮ ನಡುಗುತಿದೆ ||೧||
ಗಣನೀಯ ರಾಷ್ಟ್ರಗಳ ವಿಶ್ರಾಂತಿ ಘನತೆಗಳು
ಬಿದ್ದೆದ್ದು ಮುಗ್ಗರಿಸಿ ತತ್ತರಿಸುತಿಹವಿಂದು,
ಚಂದ್ರಿಕೆಯು ಹಾರೈಸಿನಿಂದ ನೈದಿಲೆಯಂತೆ.
ನೆಲಜಲಾಕಾಶಗಳು ಬೇಡುತಿವೆ ಶಾಂತಿಯನು,
ಸಾಕುಮಾಡೈ ದೇವ, ಸಂಹಾರ ಲೀಲೆಯನು !
ಬೆಂದ ವಿಶ್ವವ ಶಾಂತಿಜಲಸೇಚನದಿ ||೨||

ಮೇಲಿನ ಕವಿತೆಯನ್ನೋದಿ ತಿಳಿದುಕೊಂಡು, ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಮಾತಿನಲ್ಲಿ ಸರಿಯಾದ ಉತ್ತರಗಳನ್ನು ಬರೆಯಿರಿ. (೧೯೪೮)

೧. ಉರಿಗಣ್ಣನು ಯಾರು ? ಅವನು ಈಗ ಯಾವ ಕೆಲಸದಲ್ಲಿ ತೊಡಗಿರುವನು ? ೨. ಅದರಿಂದ ಕಂಡುಬರುವ ಭಯಂಕರ ಪರಿಣಾಮಗಳು ಯಾವವು ? ೩. ನರಮೇಧ, ನೈದಿಲೆ, ವಿಶ್ರಾಂತಿ ಈ ಶಬ್ದದ ಅರ್ಥ ಬರೆಯಿರಿ. ೪. ಈ ಕವಿತೆಯ ಯಾವ ಸಾಲುಗಳು ನಿಮ್ಮ ದೃಷ್ಟಿಯಲ್ಲಿ ಅತಿ ಸುಂದರವಾಗಿವೆ. ಯಾಕೆ ? ೫. ಕವಿಯು ಬೇಡಿಕೆ ಏನಿದೆ ? ೬. ಈ ಕವಿತೆಗೆ ಯೋಗ್ಯವಾದ ತಲೆಬರಹವನ್ನು ಕೊಡಿರಿ

ಉ:— ೧. ಉರಿಗಣ್ಣನು ಶಿವ, ಅವನು ಈಗ ಸಂಹಾರಲೀಲೆಯಲಿ ತೊಡಗಿರುವನು. ಅವನು ತನ್ನ ಮೂರನೇ ಕಣ್ಣನ್ನು ತೆಗೆದು ರುದ್ರ ರೂಪದಿಂದ ಸಂಹಾರಕಾರ್ಯದಲ್ಲಿ ತೊಡಗಿರುವನು.

೨. ಜನರ ಸಂಹಾರವಾಗುತ್ತಿದೆ. ಗೋಹತ್ಯೆ, ಶಿಶುಹತ್ಯೆ, ಸ್ತ್ರೀಹತ್ಯೆಗಳು ನಡೆಯುತ್ತಿವೆ. ಭೂಮಿ, ಆಕಾಶಗಳು ನಡುಗುತ್ತಿವೆ. ರಕ್ತ ಕಾಲುವೆಯೇ ಹರಿಯುತ್ತಿವೆ

೩. ನರಮೇಧ — ಮನುಷ್ಯಸಂಹಾರ; ನೈದಿಲೆ— ಕಮಲ
ವಿಶ್ರಾಂತಿ ಪರಾಕ್ರಮ

೪. ೨ನೇ ನುಡಿಯ ಕೊನೆಯ ಎರಡು ಸಾಲುಗಳು ಅತಿ ಸುಂದರವಾಗಿವೆ. ಯಾಕಂದರೆ ಅವುಗಳಲ್ಲಿ ದೇವರ ಮನವು ಕರಗುವಂತೆ ಭಾವವು ಅಡಕವಾಗಿದೆ. ಈಗಾಗಲೇ ಬೆಂದ ವಿಶ್ವವನ್ನು ಶಾಂತಿ ಎಂಬ ಜಲವನ್ನು ಉಗ್ಗಿ ಶಾಂತಮಾಡೆಂದು ಕವಿಯ ಬೇಡಿಕೆಯು ಅದೆ.

೫. ಎಲ್ಲಕಡೆಯಲ್ಲಿಯೂ ಶಾಂತಿಯು ಬೇಕಾಗಿದೆ. ಅದಕಾರಣ ದೇವರೇ ಸಂಹಾರಲೀಲೆಯನ್ನು ಸಾಕು ಮಾಡು. ಹಾಗೂ ಬೆಂದಂಥ ಜಗತ್ತಿಗೆ ಶಾಂತಿಯನ್ನು ಕೊಡು. ಎಂಬದು ಕವಿಯಬೇಡಿಕೆ ಇದೆ.

೬. ಸಂಹಾರಲೀಲೆ.

ಪ್ರಶ್ನೆ ೩:— (೩) ಅಕ್ಷತಂಗೆಂಡಿರಿಗೆ ವಿದ್ಯೆಯನು ಕಲಿಸಿ
ಚಿಕ್ಕಮಕ್ಕಳ ಬುದ್ಧಿ ಮುದ್ದಾಡಿ ಬಲಿಸಿ
ನಕ್ಕು ನಲಿದಾಡಿ ಹಿರಿಕಿರಿಯರನು ಒಲಿಸಿ
ಅಡಿಗಡಿಗೆ ಹೋಗೋಣ ಸೀಮೆಯನು ದಾಟಿ ||೧||
ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳತನದ ಸಿಂಗಾರವಾಯ್ತು
ಹಿಂದಿರುವ ಹಗೆಯೀಗ ಅಂಗಾರವಾಯ್ತು
ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು
ಹೋಗೋಣ ಬಾ ಇನ್ನು ಸೀಮೆಯನು ದಾಟಿ ||೨||
ಹೋಗಲಾಡಿಸಿಕೊಂಡು ಕಿರುಕತನವನ್ನು
ನೀಗಲಾಡಿಸುತ ಮನೆಮುರುಕತನವನ್ನು
ಬೇಗದಿಂ ಕುರುನಾಡ ಹರುಕತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ ||೩||

ಮೇಲಿನ ಕವಿತೆಯನ್ನೋದಿ ತಿಳಿದುಕೊಂಡು, ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ, ಸರಿಯಾದ ಉತ್ತರಗಳನ್ನು ಕೊಡಿರಿ (೧೪೪)

(೧) “ ಸೀಮೆಯನು ದಾಟುವದು ” ಅಂದರೇನು ?

(೨) ಸೀಮೆಯನ್ನು ದಾಟುವ ಮುಂಚೆ ನಾವು ಮಾಡತಕ್ಕ ಕಾರ್ಯಗಳಾವವು ?

(೩) “ ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು ” ಈ ಮಾತನ್ನು ಸ್ಪಷ್ಟೀಕರಿಸಿರಿ.

(೪) ಕವಿಯ ಅಭಿಪ್ರಾಯದ ಮೇರೆಗೆ ಕರುನಾಡಿನ ಹರುಕತನದ ಕಾರಣಗಳಾವವು ?

(೫) ಈ ಕವಿತೆಯಲ್ಲಿಯ ಯಾವ ಸಾಲುಗಳು ನಿಮ್ಮ ಮನಸ್ಸಿಗೆ ಬರುತ್ತವೆ. ಯಾಕೆ ?

(೬) ಈ ಕವಿತೆಗೆ ಯೋಗ್ಯ ತಲೆಬರಹವನ್ನು ಕೊಡಿರಿ.

ಉ:— (೧) ಸೀಮೆಯನ್ನು ದಾಟುವದೆಂದರೆ ಪ್ರಗತಿಯನ್ನು ಹೊಂದುವದು ಎಂಬರ್ಥ. ಇಂದು ಶಿಕ್ಷಣದಲ್ಲಿ ಪ್ರಗತಿಯಾಗಬೇಕಾಗಿದೆ ದರಿದ್ರತನ ಹೋಗಬೇಕಾಗಿದೆ. ಇವುಗಳನ್ನು ಇಲ್ಲದಂತೆ ಮಾಡುವ ಮತ್ತು ಗಡಿ ಮಾಡುವದೇ ಇಲ್ಲಿ ಸೀಮೆಯನ್ನು ದಾಟುವದೆಂಬುದರ ಭಾವವು.

(೨) ಅಕ್ಕ ತಂಗಿಯರಿಗೆ, ವಿದ್ಯೆ ಕಲಿಸಬೇಕು ಚಿಕ್ಕಮಕ್ಕಳನ್ನು ಪ್ರೀತಿಯಿಂದ ಕಾಣಬೇಕು. ತಿರುಕತನವನ್ನು ಹೋಗಲಾಡಿಸಿಕೊಳ್ಳಬೇಕು. ಮನೆ ಮುರುಕತನವನ್ನು ನೀಗಲಾಡಿಸಿಕೊಳ್ಳಬೇಕು. ಕರ್ನಾಟಕದಲ್ಲಿರುವ ಹರಕುತನವು ಇಲ್ಲದಂತಾಗಬೇಕು. ಇವು ನಾವು ಸೀಮೆಯನ್ನು ದಾಟುವದಕ್ಕಿಂತ ಮೊದಲು ಮಾಡಬೇಕಾದ ಕೆಲಸಗಳು.

(೩) ಹಗೆತನವಿಲ್ಲ. ಗೆಳೆಯರೆಲ್ಲರೂ ನಮ್ಮ ಕೂಡ ಪ್ರೀತಿಯಿಂದ ನಡೆಯುತ್ತಿರುವರು. ಆದ್ದರಿಂದ ಈ ಹೊತ್ತು ಒಳ್ಳೇ ಕಾಲವು ನಮಗೆ ಬಂದಿರುವದು. ನಾವು ಯಾವ ಕೆಲಸವನ್ನು ಸುರುವು ಮಾಡಿದರೂ ಅದು ಯಶಸ್ವಿಯಾಗುವದು. ಆದ್ದರಿಂದ ನಾವು ಮುಟ್ಟಿದ ಪತ್ರಿ, ಬಂಗಾರವಾಗುವದು; ಅಂದರೆ ನಾವು ಹಿಡಿದ ಕೆಲಸವು ಪೂರ್ಣವಾಗುವದು.

(೪) ನಮ್ಮಲ್ಲಿ ಒಳಜಗಳಗಳು ಬಹಳ. ಮತ್ತೊಬ್ಬನ ಏಳ್ಗೆಯಾಗುವದು ನಮಗೆ ಸಹನವಾಗುವದಿಲ್ಲ. ನಮ್ಮಲ್ಲಿ ಒಕ್ಕಟ್ಟಿಲ್ಲ.

(೫) 'ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆ ಮುರುಕತನವನ್ನು
ಬೇಗದಿಂದ ಕರುನಾಡ ಹರುಕತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ'

ಈ ಸಾಲುಗಳು ನನ್ನ ಮನಸ್ಸಿಗೆ ಬರುತ್ತವೆ ಈ ಸಾಲುಗಳಲ್ಲಿ ಕವಿಯು ಕರ್ನಾಟಕದಲ್ಲಿ ಕಂಡು ಬರುವ ಅಸೂಯೆ, ಮತ್ಸರಗಳನ್ನು

ಕಂಡು ಕಳವಳಗೊಂಡಿದ್ದಾನೆ. ಈ ಗುಣಗಳು ಇಲ್ಲದಂತಾಗಲೆಂದು ಅವನು ಹಾರೈಸುವನು. ನಮ್ಮನಾಡಿನ ಉನ್ನತಿಯನ್ನು ಕುರಿತು, ಈ ಸಾಲುಗಳಲ್ಲಿ ಕವಿಯು ಹಾಡಿದ್ದಾನೆ. ಇವು ಕವಿಯ ದೇಶ ಪ್ರೇಮದ ಹಾಡುಗಳು ಇಲ್ಲಿರುವ ಉದಾತ್ತವಾದ ಭಾವವು, ನನಗೆ ಸಂತೋಷ ವನ್ನುಂಟು ಮಾಡುವದು. ಉಳಿದ ಸಾಲುಗಳಿಗಿಂತ ಇಲ್ಲಿ ಹೆಚ್ಚು ಉದಾತ್ತವಾದ ಕಲ್ಪನೆಯಿದೆ. ಆದ್ದರಿಂದ ಈ ಸಾಲುಗಳು ನನಗೆ ಸೇರು ತ್ತವೆ.

(೬) ಸೀಮೋಲ್ಲಂಘನ

ಪ್ರ:—(೧೩) ಇಲ್ಲೊಂದು ಸಣ್ಣ ಕವಿತೆಯಿದೆ. ಅದರ ಬುಡದಲ್ಲಿ ನಾಲ್ಕು ಪ್ರಶ್ನೆಗಳಿವೆ. ಕವಿತೆಯನ್ನು ಮನದಟ್ಟು ಮಾಡಿಕೊಂಡು ಆ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಬರೆಯಿರಿ (೧೯೫೦)

ಕನ್ನಡಿಗನಿಗೆ ತಾಯ ಬನ್ನವ ಕಳೆಯೆನೆಂಬೆನ್ನದಿರೆಚ್ಚರಿಕೆ
ಚೆನ್ನಾಗಿಯವಳನ್ನು ಮನ್ನಿಸುತ್ತಲಿ ಸಂಪನ್ನನಾಗೆಚ್ಚರಿಕೆ ॥೧॥
ದಿಕ್ಕಿಲ್ಲದವರಿಗೆ ತಕ್ಕ ಸಹಾಯವನಿಕ್ಕುವಡೆಚ್ಚರಿಕೆ
ಸೊಕ್ಕು ಮಾಡಲು ಜೇಡ ಮಕ್ಕಳ ಹಾಸುಹೊಕ್ಕನು ಕಳ್ಳವದೆಚ್ಚರಿಕೆ ॥೨॥
ಪರಭಾಷೆಗಳಸುತ ಸರಸಕರ್ನಾಟವ ತೊರೆಯದಿರೆಚ್ಚರಿಕೆ
ಎರವಿನಾ ಅಕ್ಕಿ ತಾನೆಸರಿಗೆ ಬಪ್ಪದೆ ಅರಿತುನೋಡೆಚ್ಚರಿಕೆ ॥೩॥
ಅರಿಯದೆ ಶಿರಳನ್ನರಿಕವರಂತದೆ ಬರೆಯದಿರೆಚ್ಚರಿಕೆ
ಕೆರೆಯೊಳಗಿಲ್ಲದ ನೀರು ಕಾಲುವೆಯಲ್ಲಿ ಹರಿವುದೆಂತೆಚ್ಚರಿಕೆ ॥೪॥
ಸೂಸುವ ಪ್ರೇಮದೆ ಭಾಷಾ ಜನನಿಯನ್ನು ಪೋಷಿಪುದೆಚ್ಚರಿಕೆ
ಬೇಸರಗೊಳ್ಳದೆ ವಾಸುದೇವ ಪಾದದಾಸನಾಗೆಚ್ಚರಿಕೆ ॥೫॥

೧. ಈ ಕವಿತೆಯನ್ನು ಅನ್ನುವಾಗ ಹಾಡುವಾಗ ನಿಮ್ಮ ಮನಸ್ಸಿನಲ್ಲಿ ಯಾವ ವಿಶೇಷ ಭಾವವು ಮೂಡುವದು? ಅದರ ಯುಕ್ತಾಯುಕ್ತತೆಯನ್ನು ಚರ್ಚಿಸಿರಿ

೨. ಒಂದನೆಯ ಪದ್ಯದ ಅರ್ಥವು ಐದನೆಯ ಪದ್ಯದಲ್ಲಿ ಪುನರುಕ್ತವಾಗಿದೆಯೇ? ಸಕಾರಣವಾದ ಉತ್ತರವನ್ನು ಬರೆಯಿರಿ.

೩. ಈ ಕವಿತೆಯಲ್ಲಿ ಬಂದಿರುವ ಗಾಡಿಯ ಮಾತುಗಳಂತಹ ವಾಕ್ಯಗಳನ್ನು ಆಯ್ದು ಪ್ರತಿಯೊಂದರ ಅರ್ಥವನ್ನು ಸ್ಪಷ್ಟವಾಗಿ ಹೇಳಿರಿ.

೪. ಈ ಕವಿತೆಯಲ್ಲಿ ಕನ್ನಡಿಗನಿಗೆ ಹೇಳಿದ ಒಟ್ಟು ಎಚ್ಚರಿಕೆಗಳು ಎಷ್ಟು ? ಒಂದೊಂದನ್ನು ಕ್ರಮದಿಂದ ಹೇಳಿರಿ.

ಉ: (೧) 'ಕರ್ನಾಟಕ ಮಾತೆಯನ್ನು ಮರೆಯ ಬಾರದು. ಪ್ರೇಮ ಪೂರ್ವಕವಾಗಿ ಅವಳನ್ನು ಪೋಷಿಸಬೇಕು' ಎಂಬ ಭಾವವು ಈ ಕವಿತೆಯನ್ನು ಓದಿದ ಕೂಡಲೇ ನಮ್ಮ ಮನಸ್ಸಿನಲ್ಲಿ ಮೂಡುವದು. ಪರಭಾಷೆಗಳ ಮೋಹದಿಂದ ಕನ್ನಡ ಭಾಷಾ ಮಾತೆಯನ್ನು ಬಿಡಬಾರದು. ಕಡತಂದ ಅಕ್ಕಿಯು ನೆಟ್ಟಗೆ ಮನೆಯ ಅನ್ನದ ಎಸರಿಗೆ ಹಾಕಲು ಬರುವದಿಲ್ಲ. ಅದರಂತೆ ಪರಭಾಷೆಗಳು ನಮಗೆ ಪರಿಪೂರ್ಣವಾಗಿ ಉಪಯೋಗ ಬೀಳುವದಿಲ್ಲ.

(೨) ಒಂದನೆಯ ಪದ್ಯದಲ್ಲಿ 'ಕನ್ನಡಿಗನೆ, ಕನ್ನಡಮಾತೆಯ ಕಷ್ಟವನ್ನು ಕಳೆಯುವದಿಲ್ಲ ಎಂದು ಅನ್ನಬೇಡ. ಅವಳನ್ನು ಚನ್ನಾಗಿ ಮನ್ನಣೆ ಮಾಡಿದರೆ ನೀನು ಭಾಗ್ಯವಂತನಾಗುವಿ' ಎಂಬ ಅರ್ಥವದೆ. ಆದರೆ ಐದನೆಯ ಪದ್ಯದಲ್ಲಿ 'ಪ್ರೇಮ ಪೂರ್ವಕವಾಗಿ ಮಾತ್ರ ಭಾಷಾ ದೇವಿಯನ್ನು ರಕ್ಷಿಸು; ಬೇಸರಿಕೆಮಾಡದೆ ದೇವರಪಾದವನ್ನು ಸೇವಿಸು. ಎಂದಿದೆ ಇದರಿಂದ ಒಂದನೆಯ ಪದ್ಯದ ಅರ್ಥವು ಐದನೆಯ ಪದ್ಯದಲ್ಲಿ ಪುನರುಕ್ತವಾಗಿಲ್ಲವೆಂದು ಹೇಳಬಹುದು

(೩.) 'ಉಕ್ಕಿದ ಹಾಲು ಮುಕ್ಕಿಕ್ಕುವದು' ಹಾಲು ಉಕ್ಕಿ ನೆಲಕ್ಕೆ ಬೀಳುವದು. ಅದು ವ್ಯರ್ಥವಾಗುವದು ಅದರಂತೆ ಸೊಕ್ಕು ನಾಶವನ್ನು ಹೊಂದುವದು.

'ಎರವಿನಾ ಅಕ್ಕಿ ತಾನೆಸರಿಗೆ ಬಪ್ಪುದೇ' – ಕಡತಂದ ಅಕ್ಕಿಯನ್ನು ಕುದಿಯುವ ಎಸರಿಗೆ ಹಾಕಲು ಬರುವದಿಲ್ಲ. ಅದರಲ್ಲಿಯ ಹಳ್ಳುಕಲ್ಲುಗಳನ್ನು ಆರಿಸಬೇಕಾಗುತ್ತದೆ. ಅದರಂತೆ ಪರಭಾಷೆಯು ನೋಟಕ್ಕೆ ಚಂದಕಂಡರೂ ಅದನ್ನು ಸ್ವೀಕರಿಸಬಾರದು. ಎಷ್ಟಾದರೂ ಅದು ಕಡ

ತಂದದ್ದು 'ಅರಿಯದೆ ತಿರುಳಕ್ನರಿತವರಂದರೆ ಬರೆಯದಿರು'— ತನಗೆ ತಿಳಿಯದಿದ್ದರೂ ತಾನು ಎಲ್ಲ ಬಲ್ಲವನಂತೆ ಬರೆಯಲು ಹೋದರೆ ತಪ್ಪಿ ತನ್ನ ಮೂರ್ಖತನವೇ ಹೊರಬೀಳುವುದು.

'ಕೆರೆಯೊಳಗಿಲ್ಲದ ನೀರು ಕಾಲುವೆಯಲ್ಲಿ ಹರಿವುದೆಂತು' ಕೆರೆಯ ನೀರು ಕಾಲುವೆಯಲ್ಲಿ ಹರಿಯುವುದು. ಕೆರೆಯಲ್ಲಿಯೇ ನೀರು ಇಲ್ಲದಿದ್ದರೆ ಕಾಲುವೆಯಲ್ಲಿ ನೀರು ಎಲ್ಲಿಂದ ಬರುವದು.

(೪) ಕನ್ನಡಿಗನಿಗೆ ಎಚ್ಚರಿಕೆಗಳುಃ—(ಅ) ತಾಯಿಯ ಕಷ್ಟವನ್ನು ಕಳೆಯುವದಿಲ್ಲ ವೆನ್ನಬೇಡ. (ಆ) ಅವಳನ್ನು ಚನ್ನಾಗಿ ಮನ್ನಿಸು (ಇ) ಪರಭಾಷೆಗಳ ಮೋಹದಿಂದ ಕನ್ನಡವನ್ನು ಮರೆಯಬೇಡ (ಈ) ತಿಳಿಯದ್ದನ್ನು ಬರುತ್ತದೆಂದು ಬರೆಯಲಿಕ್ಕೆ ಹೋಗಬೇಡ. (ಉ) ಪ್ರೇಮಪೂರ್ವಕವಾಗಿ ಭಾಷಾ ಜನನಿಯನ್ನು ಪೋಷಿಸು.

ಪ್ರಶ್ನೋತ್ತರ ಭಾಷಾಭ್ಯಾಸ

ಭಾಗ ೨

೧ ವ್ಯಾಕರಣಸಾರ

ಅರ್ಥವುಳ್ಳ ಅಕ್ಷರಗಳ ಗುಂಪು, ಶಬ್ದವೆನಿಸುವದು. ಉದಾ:-ಗಿಡ, ಮನೆ, ಆಡು, ಹಣ್ಣು, ಓದು, ಉಣ್ಣು, ಮಲಗು, ಮುಂ.

ವಿಶೇಷ ಅರ್ಥವನ್ನು ವಿವರಿಸುವದಕ್ಕಾಗಿ, ಶಬ್ದಗಳ ಕೊನೆಗೆ ಸೇರುವ ವರ್ಣಗಳಿಗೆ ಪ್ರತ್ಯಯಗಳೆಂಬ ಹೆಸರು. ಉ:—ಉ, ಅನ್ನು, ಇಂದ, ಗೆ, ಇಗೆ, ಕೆ, ಅಕ್ಕೆ ಮುಂ

ಶಬ್ದಕ್ಕೆ ವಿಭಕ್ತಿ ಪ್ರತ್ಯಯ ಹಚ್ಚಲು ಪದವಾಗುತ್ತದೆ.

ಪದಗಳಲ್ಲಿ (೧) ನಾಮಪದ (೨) ಕ್ರಿಯಾಪದ (೩) ಅವ್ಯಯ ಪದಗಳೆಂಬ ಮೂರು ವಿಧಗಳು

ಶಬ್ದಗಳಿಗೆ ಪ್ರತ್ಯಯಗಳು ಸೇರುವಾಗ, ಪ್ರಕೃತಿ ಎಂಬ ಹೆಸರು ಬರುವದು. ಪ್ರಕೃತಿಗಳಲ್ಲಿ ವಸ್ತುಗಳನ್ನು ಹೇಳುವ ಪ್ರಕೃತಿಗಳು, ಪ್ರಾತಿಪದಿಕಗಳು ಕೆಲಸವನ್ನು ಹೇಳುವ ಪ್ರಕೃತಿಗಳು ಧಾತುಗಳು.

೧. **ನಾಮಪದ:**— ಒಡವೆಯ ಹೆಸರುಗಳು ಮತ್ತು ಅವುಗಳ ಗುಣ ಕ್ರಿಯೆಗಳು. ಉದಾ:-ಗಿಡ, ಕಟ್ಟಿಗೆ, ಪುಸ್ತಕ, ರಾಮ; ನಾಮಗಳ ಪ್ರಕಾರಗಳು-[ಅ] **ರೂಢನಾಮ**. ರೂಢಿಯಿಂದ ಬಂದವು ಉದಾ ಹೊಲ, ಮನೆ, ಮುಂ. [ಆ] **ಅಂಕಿತನಾಮ** ಇಟ್ಟ ಹೆಸರು. ಉದಾ: ರಂಗ, ಧಾರವಾಡ, ಮು [ಇ] **ಅನ್ವರ್ಥಕನಾಮ**. ಉದ್ಯೋಗದ ಮೇಲಿಂದ ಬಂದವು. ಉದಾ:—ಕುಂಬಾರ, ಬಡಿಗ ಮುಂ.

ಸರ್ವನಾಮ:-ನಾಮಗಳ ಬದಲಾಗಿ ಬಂದ ಶಬ್ದ. ಪ್ರಕಾರಗಳು:- [ಅ] ಉತ್ತಮಪುರುಷಸರ್ವನಾಮ: ಉದಾ:-ನಾನು ನಾವು. [ಆ]ಮಧ್ಯಮ ಪುರುಷ ಸರ್ವನಾಮ ಉ:-ನೀನು ನೀವು [ಇ] ಪ್ರಥಮ ಪುರುಷಸರ್ವನಾಮ ಉ:-ಅವನು, ಅವಳು ಅವರು, ಅದು, ಇದು, ಆಕೆ, ಈಕೆ,

೨. ನಾಮಗಳಿಗಾಗಿಯೂ ಧಾತುಗಳಿಗಾಗಿಯೂ ಇರುವ ಶಬ್ದಗಳು.

ಕೆಳಗಿನ ಶಬ್ದಗಳನ್ನು ನಾಮಗಳಂತೆಯೂ ಧಾತುಗಳಂತೆಯೂ ಉಪಯೋಗಿಸಿ ವಾಕ್ಯ ಬರೆಯಿರಿ.

೧. ಬೆಳೆ— (ಅ) ಬೆಳೆ ಚೆನ್ನಾಗಿ ಬರಲಿಲ್ಲ. (ಆ) ಗಿಡಗಳು ಚೆನ್ನಾಗಿ ಬೆಳೆಯಲಿಲ್ಲ.

೨. ಹೊಳೆ— (ಅ) ಆಕಾಶವು ಥಳಥಳ ಹೊಳೆಯುತ್ತದೆ. (ಆ) ಹೊಳೆಯ ಪ್ರವಾಹವು ಮಂದವಾಗಿದೆ.

೩. ನಾರು—(ಅ) ರಾಮನ ಕಾಲಿಗೆ ನಾರು ಆಗಿದೆ. (ಆ) ಜಳಕ ಮಾಡದವನು ಹೊಲಸು ನಾರುತ್ತಾನೆ.

೪. ಮಾರು—(ಅ) ಬಾಗವಾನನು ಹಣ್ಣುಗಳನ್ನು ಮಾರುತ್ತಾನೆ. (ಆ) ಹಗ್ಗವು ಐದು ಮಾರು ಇರುತ್ತದೆ.

೫. ಕೆರೆ (ಅ) ಕರ್ನಾಟಕದಲ್ಲಿ ಕೆರೆಗಳು ಕಡಿಮೆ. (ಆ) ನಾಲ್ಕು ಜನರೊಳಗೆ ಕುಳಿತಾಗ ಪರಪರ ಕೆರೆಯಬಾರದು.

೬. ಒಡ್ಡು—(ಅ) ನದಿಗಳಿಗೆ ಒಡ್ಡು ಹಾಕಿ ಕಾಲುವೆ ತೆಗೆದುಕೊಳ್ಳುತ್ತಾರೆ. (ಆ) ಬಲೆಗಾರರು ನದಿಯಲ್ಲಿ ಬಲೆಯನ್ನು ಒಡ್ಡುತ್ತಾರೆ.

೭. ಆಳು— (ಅ) ನಮ್ಮ ಆಳು ಬಲು ಸೋಮಾರಿಯು. (ಆ) ರಾಮನು ಬಹುಕಾಲ ಸತ್ಯರೀತಿಯಿಂದ ರಾಜ್ಯವನ್ನು ಆಳಿದನು.

೮. ಕೊಳೆ—(ಅ) ಮನದ ಕೊಳೆಯನ್ನು ಬಿಡು (ಆ) ಹಣ್ಣುಗಳನ್ನು ಬಹುದಿವಸ ಇಟ್ಟರೆ ಕೊಳೆಯುತ್ತವೆ.

೯. ಕುಡಿ—(ಅ) ಕುಡಿಯುವದಕ್ಕೆ ಹಾಲು ಉತ್ತಮ ಪೇಯವು (ಆ) ಉಂಡು ತುಸು ನೀರು ಕುಡಿ. (ಇ) ಕುಡಿ ಚಿವುಟದಿರು

೧೦. ಹುಟ್ಟು (ಅ) ಜೇನು ಹುಳಗಳು ಹುಟ್ಟಿನಲ್ಲಿ ತುಪ್ಪವನ್ನು ಸಂಗ್ರಹಿಸುತ್ತವೆ. (ಆ) ಶಂಕರಾಚಾರ್ಯರು ಹಿಂದೂ ಧರ್ಮದ ಉದ್ಧಾರಕ್ಕಾಗಿ ಹುಟ್ಟಿದರು.

೧೧. ಅರಿ- (ಅ) ರಾಮನ ಅರಿಯಾದ ರಾವಣನು, ಸೀತೆಯನ್ನು ಮೋಸತನದಿಂದ ಕದ್ದೊಯ್ದನು. (ಆ) ನಾನು ನಿನ್ನ ಗುಣವನ್ನು ಅರಿತೆನು.

೧೨. ಸೇರು-(ಅ) ಬಸಪ್ಪನು ಒಂದು ಸೇರು ತುಪ್ಪವನ್ನು ಕುಡಿಯುತ್ತಾನೆ. (ಆ) ಕೃಷ್ಣನು ಗೋಕುಲದಲ್ಲಿ ಸೇರಿದನು

೧೩. ಹರಿ--(ಅ) ಪ್ರಲ್ಹಾದನು ಹರಿಯ ಪೂಜೆಯನ್ನು ಮಾಡಿ ಮುಕ್ತಿ ಹೊಂದಿದನು. (ಆ) ನದಿಯು ಜುಳು ಜುಳು ಹರಿಯುತ್ತದೆ.

೧೪. ಸಾಕು - (ಅ) ಈ ಸಂಸಾರವು ಸಾಕು. (ಆ) ಇವತ್ತಿನ ದಿವಸ ಸಾಕಾಗುವ ಹಾಗೆ ಊಟ ಮಾಡಿದೆನು. (ಇ) ಶ್ರೀಮಂತರು ನಾಯಿಯನ್ನು ಸಾಕುತ್ತಾರೆ.

೧೫. ಕೀಳು (ಅ) ಇವನು ಕೀಳು ಜಾತಿಯವನು, ಅವನು ಉಚ್ಚ ಜಾತಿಯವನು ಹೀಗೆ ತಿಳಿಯುವದರಿಂದ ಹಿಂದುಸ್ಥಾನವು ಅಧೋಗತಿಗೆ ಇಳಿದಿದೆ. (ಆ) ಬಿರುಗಾಳಿಯ ಹೊಡೆತಕ್ಕೆ, ಉನ್ನತವಾದ ಮರಗಳುಸಹ ಬೇರುಸಹಿತ ಕೀಳುವವು.

೧೬. ಮರೆ (ಅ) ಸುದರ್ಶನದ ಮರೆಯಲ್ಲಿದ್ದ ಸೂರ್ಯನು ತೋರಿದನು. (ಆ) ದ್ರೌಪದಿಯು ಶ್ರೀಕೃಷ್ಣನನ್ನು ಮರೆಯಳು.

೧೭. ಏಳು ಏಳುಕಂದಾ ! ಏಳು ಹೊಡೆಯಿತು.

೧೮. ಬೀಳು-ಭೂಮಿಯಲ್ಲಿ ಬೆಳೆದ ಬೆಳೆಯು, ಗಾಳಿಯ ಹೊಡೆತಕ್ಕೆ ಬೇಗ ಕೆಳಗೆ ಬೀಳುವದು.

೧೯. ಊರು ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯದ ಬೀಜವು ಊರೂರಿಗೆ ಊರಲ್ಪಟ್ಟಿದೆ.

೨೦. ಎತ್ತು— ಮನುಷ್ಯನಿಗೆ ಎತ್ತಲಿಕ್ಕೆ ಬಾರದ್ದನ್ನು, ಎತ್ತು ಎತ್ತುತ್ತದೆ.

೨೧. ಕಾಡು— ವಿಶ್ವಾಮಿತ್ರನು ಕಾಡಿನಲ್ಲಿ ಹರಿಶ್ಚಂದ್ರನನ್ನು ಬಹಳ ಕಾಡಿದನು

೨೨. ಗುದ್ದು— ಹಾವಿನ ಗುದ್ದಿನ ಮೇಲೆ ಗುದ್ದಿದರೆ, ಒಳಗಿನ ಹಾವು ಸಾಯುವದೆ ?

೨೩. ಮುತ್ತು— ದಶರಥನ ಮರಣದ ವಾರ್ತೆಯನ್ನು ಕೇಳಿ, ರಾಮನ ಕಣ್ಣಿನಿಂದ ಮುತ್ತಿನಂತೆ ಕಣ್ಣೀರು ಬಳಬಳ ಸುರಿದವು.

ಶಬ್ದ	ನಾಮಪದ ಅರ್ಥ	ಕ್ರಿಯಾಪದ ಅರ್ಥ
ಅಂಟು	ಗಿಡದ ರಸ	ಹತ್ತಿಕೊಳ್ಳು
ಅರಸು	ರಾಜ	ಹುಡುಕು
ಅರಳು	ಹುರಿದ ಕಾಳು	ವಿಕಸಿಸು
ಆಡು	ಒಂದು ಪ್ರಾಣಿ	[illegible]
ಈಸು	ಒಕ್ಕಲಿಗನ ಸಾಮಾನು	[illegible] ಈಸುವದು
ಉಳಿ	ಕಲ್ಲಿಗೆ ಕೆತ್ತುವ ಸಾಧನ	ಉಳಿದುಕೊಳ್ಳು
ಓದು	ಅಭ್ಯಾಸ	[illegible]ಮಾಡು
ಕಮರು	ಕರಿದ ವಾಸನೆ	ಬಾಡು
ಕಾಸು	ಪೈ	ಬಿಸಿಮಾಡು
ಕೋರು	ಅರ್ಧ ಪಾಲು	ಬಯಸು
ಜಡಿ	ಜಡಿಮಳೆ	ಹೊಡೆ
ಜಿಗಿ	ಜಿಗಟು	ಹಾರು
ತಗಲು	ದೋಷ	ತಾಕು
ತಟ್ಟು	ಗೋಡೆತಟ್ಟು	ಚಪ್ಪರಿಸು
ತಿಳಿ	ಸ್ವಚ್ಛ	ತಿಳಿದುಕೊಳ್ಳು
ತುಂಬು	ದೇಟು	ಕೊರವಿದ್ದುದನ್ನು ಪೂರ್ಣಮಾಡು
ತೊಡಕು	ತೊಂದರೆ	ಸಿಕ್ಕಿಕೊಳ್ಳು
ದೊರೆ	ಅರಸ	ಸಿಗು
ನಡು	ಟೊಂಕ	ಊರು

ನುಡಿ	ಮಾತು	ಮಾತಾಡು
ನೂಲು	ಎಳೆ	ನೂಲುತೆಗೆ
ನೆರಳು	ಛಾಯೆ	ಬೇನೆಯಲ್ಲಿ ಬಳಲು
ನೆರೆ	ಪಕ್ಕದ	ಕೂಡು
ಪಡೆ	ದಂಡು	ಹೊಂದು
ಸಾರು	ಊಟದ ಪದಾರ್ಥ	ಡಂಗುರ ಹೊಡೆ
ಪಾಡು	ಹಣ್ಣಿಗೆ ಬಂದುದು	ಹಾಡು
ಪಿಡಿ	ಹೆಣ್ಣಾನೆ	ಹಿಡಿ
ಪೊಡೆ	ಹೊಟ್ಟೆ	ಹೊಡೆ
ಬಳೆ	ಹೆಂಗಸರ ಕೈಯಲ್ಲಿಡುವದು	ಬೆಳವಣಿಗೆ ಹೊಂದು
ಮಡಿ	ಒಗೆದ ಬಟ್ಟೆ	ಸಾಯು
ಮಿಂಚು	ಹೊಳಪು	ಹೊಳೆ
ಮುಡಿ	ಹೆರಳು	ಧರಿಸು
ಮುತ್ತು	ಮುದ್ದು	ಮುಸುಕು
ಸವಿ	ಸಿಹಿ	ತಿನ್ನು
ಹಂಚು	ಮಣ್ಣಿನ ಪಾತ್ರೆ	ಪಾಲುಮಾಡು
ಹತ್ತು	ಒಂದು ಅಂಕೆ	ಮೇಲಕ್ಕೇರು
ಹಳಿ	ಕಬ್ಬಿಣಪಟ್ಟಿ	ನಿಂದಿಸು
ಹಿಂಡು	ಗುಂಪು	ಹಾಲುಹಿಂಡು

೩. ಅನೇಕ ಅರ್ಥದ ಶಬ್ದಗಳು

ಒಂದೊಂದು ಶಬ್ದಕ್ಕೆ ಅನೇಕ ಶಬ್ದಗಳಿರುತ್ತವೆ. ಇಲ್ಲಿ ಕೆಲವನ್ನು ಕೊಡಲಾಗಿದೆ.

ಅಕ್ರೂರ - ೧. ಶಾಂತ, ಕ್ರೂರತೆಯಿಲ್ಲದ, ೨. ಯಾದವ ವಂಶಕ್ಕೆ ಸೇರಿದ ಶ್ವಫಲ್ಕನ ಮಗ

ಅಕ್ಷಯ ೧. ನಾಶವಿಲ್ಲದ, ೨. ಒಂದು ಸಂವತ್ಸರ.

ಅಕ್ಷರ— ೧. ಚಲಿಸದ, ೨. ಪರಬ್ರಹ್ಮ, ೩. ಬರಹದ ಒಂದು ಸಂಕೇತ.

ಅಂಬರ— ೧. ಬಟ್ಟೆ, ೨. ಮುಗಿಲು.
ಅಂಚೆ – ೧. ಟಪಾಲು, ೨. ಹಂಸ
ಕುಶ— ೧. ದರ್ಭೆ ೨. ನೀರು, ೩. ರಾಮಚಂದ್ರನ ಮಗ.
ನವ— ೧. ಒಂಬತ್ತು, ೨. ಹೊಸ,
ನಂದನ— ೧. ಮಗ, ೨. ಇಂದ್ರನ ತೋಟ, ೩. ಒಂದು ಸಂವತ್ಸರ.

ಎಲರು— ೧. ಗಾಳಿ, ಹೂವು,
ಕಲಿ— ೧. ಶೂರ. ೨. ನಾಲ್ಕನೆಯ ಯುಗ. ವಿದ್ಯೆಕಲಿ
ವನ— ೧. ನೀರು. ೨. ಅರಣ್ಯ.
ಪೊಡೆ – ೧. ಹೊಡೆ, ಹೊಟ್ಟೆ.
ಕುಲ— ೧. ಜಾತಿ, ೨. ಸಂತತಿ, ೩. ಸಮೂಹ.
ಬೀಡು – ೧. ಸ್ಥಾನ, ೨, ಬಿರುಕು, ೩, ವಸತಿ.
ಕೆಲ— ೧. ಹಲವು, ೨, ಬದಿ.
ಕೋಶ— ೧. ಚಿಲ, ೨, ಬೊಕ್ಕಸ. ೩, ನಿಘಂಟು, ೪, ಮನೆ.
ವರ – ೧ ಶ್ರೇಷ್ಠ, ೨ ಲಗ್ನಕ್ಕೆ ಸಿದ್ಧನಾದವ. ೩. ಬಯಕೆ
ಗುರು— ೧. ಒಂದುಗ್ರಹ. ೨. ದೊಡ್ಡ. ೩. ತಂದೆ ೪. ವಿದ್ಯೆ ಹೇಳಿದವನು.

ಘನ— ೧. ಮೇಘ. ೨. ದೊಡ್ಡ.
ಸರ— ೧. ಮಾಲೆ, ೨. ಧ್ವನಿ. ೩, ಸರೋವರ.
ಚಕ್ರ— ೧, ಚಕ್ರಾಯುಧ. ೨. ಗಾಲಿ ೩. ಒಂದು ಪಕ್ಷಿ,
ಮಡಿ – ೧. ಸಾಯು, ೨, ಒಗೆದ ವಸ್ತ್ರ. ೩, ಭೂಮಿಯ ತುಣುಕು.
ದ್ವಿಜ— ೧ ಪಕ್ಷಿ, ೨, ಹಲ್ಲು, ೩, ಬ್ರಾಹ್ಮಣ, ೪, ಚಿಕ್ಕೆ,

೪. ಧ್ವನಿಸಾಮ್ಯವುಳ್ಳ ಶಬ್ದಗಳು

ಕೆಲವು ಶಬ್ದಗಳನ್ನು ಉಚ್ಚರಿಸಲು, ಅವು ಒಂದೇ ತೆರನಾಗಿ ತೋರುವವು, ಆದರೆ ಅವುಗಳ ಅರ್ಥದಲ್ಲಿ ಬಹಳ ಭೇದವಿರುತ್ತದೆ, ಅಂಥವುಗಳನ್ನು ಮಾದರಿಗಾಗಿ ಇಲ್ಲಿ ಕಾಣಬಹುದು.

ಉದಾ—

೧. ಅರ, ಕರ, ಗರ, ಚರ, ತರ, ದರ, ನರ, ಬರ, ಭರ.

೨. ಅವ, ಕವ, ಜವ, ತವ, ಧವ, ನವ, ಭವ, ಯವ, ರವ, ಲವ, ಶವ.

೩. ಅನುಜ, ತನುಜ, ದನುಜ, ಮನುಜ.

೪ ಆವ, ಕಾವ, ಜಾವ, ದಾವ, ಭಾವ, ಮಾವ, ಯಾವ.

೫. ಆಳಿ, ಕಾಳಿ, ಗಾಳಿ, ತಾಳಿ, ದಾಳಿ, ಪಾಳಿ, ಮಾಳಿ, ಬಾಳಿ, ಹಾಳಿ,

೬. ಅಂಜನ, ಭಂಜನ, ರಂಜನ, ನಂಜನ.

೭. ಕರಣ, ಚರಣ, ತರಣ, ಮರಣ, ಶರಣ, ಹರಣ

೮. ಕಾರಿ, ದಾರಿ, ಧಾರಿ, ನಾರಿ, ಭಾರಿ, ಮಾರಿ, ವಾರಿ, ಸಾರಿ, ಹಾರಿ,

೯. ಕಾರಣ, ಚಾರಣ, ಜಾರಣ, ತಾರಣ, ಧಾರಣ, ಮಾರಣ, ವಾರಣ.

೧೦. ಗತಿ, ತತಿ, ಪತಿ, ಮತಿ, ಯತಿ, ರತಿ, ಸತಿ, ಹತಿ

೧೧ ತಮ, ದಮ, ಯಮ, ಶಮ, ಸಮ.

೧೨ ಸಜ್ಜನ, ನಿರ್ಜನ, ಮಜ್ಜನ, ದುರ್ಜನ.

ಪ್ರ:— ಕೋಗಿಲೆ, ಕುದುರೆ, ನಾಯಿ ಮತ್ತು ಆನೆ ಈ ಪ್ರಾಣಿಗಳ ಧ್ವನಿಗಳನ್ನು ಸೂಚಿಸುವ ಕನ್ನಡ ಧಾತುಗಳ ರೂಪಗಳನ್ನು ಉಪಯೋಗಿಸಿ ವಾಕ್ಯರಚನೆ ಮಾಡಿರಿ. (೧೯೫೦)

ಉ:— ಕೋಗಿಲೆಯು ಕುಕಿಲುವದು ಕುದುರೆಯು ಹೇಂಕರಿಸುವದು. ನಾಯಿಯು ಬೊಗಳುವುದು. ಆನೆಯು ಘೀಳಿಡುವದು

ಪ್ರಾಣಿಗಳ ಒದರುವಿಕೆಗೆ ಅನುಗುಣವಾದ ಧ್ವನಿಗಳು

ಸಿಂಹ .... ಗರ್ಜನೆ
ತುಂಬಿ .... ಝೇಂಕಾರ
ನವಿಲಿನ .... ಕೇಕೆ
ಕೋಳಿ .... ಕೂಗು
ಕಾಗೆ .... ಕಾಕಾ
ಗುಬ್ಬಿ .... ಚಿಂಚಿಂ
ಕತ್ತೆ .... ಅರಚು
ಹುಲಿಯು.... .... ಗುಡುಗು
ಗಿಳಿ .... ಚಕ್ಕ್ರರಣೆ

೫. ತತ್ಸಮ-ತದ್ಭವಗಳು

ತತ್ಸಮವೆಂದರೆ ಸಂಸ್ಕೃತ ಶಬ್ದಗಳು. ತದ್ಭವವೆಂದರೆ ರೂಪಾಂತರ ಹೊಂದಿದ ಕನ್ನಡ ಶಬ್ದಗಳು.

ತತ್ಸಮ	ತದ್ಭವ	ತತ್ಸಮ	ತದ್ಭವ
ಅಂಗುಷ್ಠ	ಉಂಗುಟ	ಅಭ್ರಕ	ಅಬರಂಗ
ಅರ್ಘ	ಅಗ್ಗ	ಆಶ್ಚರ್ಯ	ಅಚ್ಚರಿ
ಅಟವಿ	ಅಡವಿ	ಆಜ್ಞಾ	ಆಣೆ
ಅರ್ಗಲ	ಅಗಳಿ	ಆಮಂತ್ರಣ	ಓತಣ
ಅಕ್ಷರ	ಅಕ್ಕರ	ಆಶ್ರಯ	ಆಸರ
ಅಕ್ಷ	ಅಚ್ಚು	ಆಮ್ಲ	ಅಂಬಲಿ
ಅತಸೀ	ಅಗಸೆ	ಆರ್ಯ	ಅಜ್ಜ
ಅಮೃತ	ಅಮರ್ದು	ಆಶಾ	ಆಸೆ
ಅಮಾವಾಸ್ಯಾ	ಅಮಾಸೆ	ಆಜ್ಞಪ್ತಿ	ಆಣತಿ
ಅವಸ್ಥಾ	ಅವತೆ	ಆಕಾಶ	ಆಗಸ
ಅಪ್ಸರಸಿ	ಅಚ್ಚಂಸಿ	ಆಯಾಸ	ಆಯಸ

ತತ್ಸಮ	ತದ್ಭವ	ತತ್ಸಮ	ತದ್ಭವ
ಆಯುಷ್ಯ	ಆಯುಸ	ಕರ್ಣಪೂರ	ಕನ್ನವುರ
ಉಷ್ಟ್ರ	ಒಂಟೆ	ಕಾಷ್ಠ	ಕಡ್ಡಿ
ಉದ್ಯೋಗ	ಉಜ್ಜುಗ	ಕಾಷ್ಠಿಕಾ	ಕಟ್ಟಿಗೆ
ಉತ್ಕಟ	ಉಗ್ಗಡ	ಕಾಂಚನ	ಕಾಂಚಾಣ
ಉತ್ಸವ	ಉಚ್ಚವ	ಕಾಂಸ್ಯ	ಕಂಚು
ಉನ್ಮತ್ತ	ಉಮ್ಮತ್ತ	ಕಾವ್ಯ	ಕಬ್ಬ
ಉದ್ಗಮ	ಉಗಮ	ಕಾರ್ಯ	ಕಜ್ಜ
ಊರ್ಣ	ಉಣ್ಣೆ	ಕಾಮ	ಕಾವ
ಊರ್ಧ್ವ	ಉದ್ದ	ಕುಠಾರ	ಕೊಡ್ಲಿ
ಋಷಿ	ರಿಸಿ	ಗೋಣೀ	ಗೋಣಿ
ಋಣ	ರಿಣ	ಕುಸ್ತುಂಬುರು	ಕೋತಂಬರಿ
ಏಕ	ಎಕ್ಕ	ಕುದ್ದಾಲ	ಗುದ್ದಲಿ
ಕಸ್ತೂರಿ	ಕಸ್ತುರಿ	ಕುಕ್ಕುಟ	ಕೋಳಿ
ಕರ್ಪೂರ	ಕಪ್ಪುರ	ಕುಸುಂಭ	ಕುಸುಬೆ
ಕಥಾ	ಕತೆ	ಕುಂತಲ	ಕೂದಲ
ಕ್ರಮುಕ	ಕಂಗು	ಖಂಡ	ಕಂಡ
ಕಂಬಲ	ಕಂಬಳಿ	ಖರ್ಜು	ಕಜ್ಜಿ
ಕ್ರಕಚ	ಕರಗಸ	ಖನಿ	ಕಣಿ
ಕಟಕ	ಕಡಗ	ಖಾತಕ	ಕಂದಕ
ಕಹಳಾ	ಕಾಳೆ	ಗ್ರಂಥಿ	ಗಂಟು
ಕಳವ್ರ	ಕಳ[illegible]	ಗಡು	ಗಡಿ
ಕಪಟ	[illegible]	ಗಾಢಂ	ಗಾಡೆ
ಕರ್ಣಾಟಕ	ಕನ್ನಡ	ಗ್ರಾಮೀಣ	ಗಾವಿಲ
ಕಪರ್ದಿಕಾ	ಕವಡೆ	ಗಾಯನ	ಗಾನ
ಕರಂಡಕ	ಕರಡಿಗೆ	ಗ್ರಾಹಕ	ಗಿರಾಕಿ

ತತ್ಸಮ	ತದ್ಭವ	ತತ್ಸಮ	ತದ್ಭವ
ಗುರ್ಜರರಾಷ್ಟ್ರ	ಗುಜರಾಥ	ಗೋಧೂಮ	ಗೋದಿ
ಗೋಪಾಲ	ಗೋವಳ	ಘಟಿಕಾ	ಗಳಿಗೆ
ಘರ್ಮ	ಗಮ್ಮ	ಘಂಟಾ	ಗಂಟೆ
ಘನ	ಗನ್ನ	ಘಟಾ	ಗಡಿಗೆ
ಘಟಕಾ	ಗಡಿಗೆ	ಚಂದ್ರ	ಚಂದಿರ
ಘೂಕ	ಗೂಗೆ	ಚಂಪಕ	ಸಂಪಿಗೆ
ಚತ್ವರ	ಚದುರ	ಚಕ್ರಪಕ್ಷಿನ್	ಚಕ್ಕವಕ್ಕಿ
ಚತುಷ್ಪದಿ	ಚೌಪದಿ		
ಚತುರ್ಥಿ	ಚೌತಿ	ಚತುಷ್ಕೋನ	ಚೌಕೋನ
ಚಾಮರ	ಚವರಿ	ಚೂರ್ಣ	ಸುಣ್ಣ
ಚರ್ಮಕಾರ	ಸಮಗಾರ		
ಚಿಹ್ನ	ಚಿನ್ನ	ಛುರಿಕಾ	ಚೂರಿ
ಛಲ	ಚಲ	ಜಟಾ	ಜಡೆ
ಛತ್ರಿಕಾ	ಸತ್ತಿಗೆ		
ಜ್ವರ	ಜರ	ಜೋತ್ಸ್ನಾ	ಜೊನ್ನ
ಜ್ಯೋತಿಷಿಕ	ಜೋಯಿಸ	ಝುಂಕಾ	ಜಿಂಕೆ
ಝುಷ	ಜಸ	ತೃಣ	ತಿಣ
ತೃತೀಯಾ	ತದಿಗೆ	ತ್ಯಾಗ	ಚಾಗ
ತಾಂಬೂಲ	ತಂಬುಲ	ತಾತ	ತಂದೆ
ತಿಥಿ	ತಿತಿ	ದೃಷ್ಟಿ	ದಿಟ್ಟಿ
ದಂಷ್ಟ್ರ	ದಾಡೆ	ದಶಹರ	ದಸರೆ
ದಂತ	ಜಂತ	ದಾಡಿಮ	ದಾಳಿಂಬ
ದ್ವಿತೀಯಾ	ಬಿದಿಗೆ		
ದರ್ಪ	ದಪ್ಪ	ಭಿಕ್ಷಾ	ಬಿಕ್ಕೆ
ದೀಪಿಕಾ	ದೀವಿಗೆ	ಬ್ರಹ್ಮ	ಬೊಮ್ಮ
ದುಕೂಲ	ದುಗುಲ	ಮಲ್ಲಿಕಾ	ಮಲ್ಲಿಗೆ
ಧೂಳಿ	ದೂಳಿ	ಮಹಾದೇವ	ಮಾದೇವ

ತತ್ಸಮ	ತದ್ಭವ	ತತ್ಸಮ	ತದ್ಭವ
ದಿಶಾ	ದೆಸೆ	ಮುಕ್ತಿ	ಮುಕುತಿ
ನಿದ್ರಾ	ನಿದ್ದೆ	ಹರ್ಷ	ಹರುಷ
ನಿಯಮ	ನೇಮ	ಮುಖ	ಮೊಗ
ನೂಪುರ	ನೇವುರ	ಮುಕುಲ	ಮುಗುಳು
ಪಕ್ಷಿ	ಪಕ್ಕಿ, ಹಕ್ಕಿ	ಮಹಿಮಾ	ಮೈಮೆ
		ಯಾತ್ರಾ	ಜಾತ್ರೆ
ಪದ್ಮ	ಪದುಮ	ಯುಕ್ತಿ	ಯುಕುತಿ
ಪ್ರಯಾಣ	ಪಯಣ	ರಾಕ್ಷಸ	ರಕ್ಕಸ
ಪ್ರಾಣ	ಹರಣ	ರತ್ನ	ರನ್ನ
ಪ್ರವಾಳ	ಹವಳ	ರಾಜ	ರಾಯ
ಪೃಥ್ವಿ	ಪೊಡವಿ	ವಿಷ	ಬಿಸ
ಪೂರ್ಣಿಮಾ	ಹುಣ್ಣಿವೆ	ವೇಗ	ಬೇಗ
ಫಲಕಾ	ಹಲಗೆ	ವಿನಾಯಕ	ಬೆನಕ
ಭಕ್ತಿ	ಬಕುತಿ	ವೀಥಿ	ಬೀದಿ
ಬಹುಲ	ಬಹಳ	ವೀಣಾ	ಬೀಣೆ
ಭಾಷಾ	ಬಾಸೆ	ವಿಜ್ಞಾಪನ	ಬಿನ್ನಣ
ವಿದ್ಯಾ	ಬಿಜ್ಜೆ	ವಾಲ	ಬಾಲ
ವಾಪಿ	ಬಾವಿ	ವಲ್ಲರಿ	ಬಳ್ಳಿ
ಶೃಂಗಾರ	ಸಿಂಗಾರ	ಶರ್ಕರಾ	ಸಕ್ಕರೆ
ಶ್ರೀ	ಸಿರಿ	ಸ್ವರ್ಗ	ಸಗ್ಗ
ಸಂಜ್ಞಾ	ಸನ್ನೆ	ಸ್ವರ	ಸರ
ಸರಸ್ವತಿ	ಸರಸತಿ	ಸ್ಮಶಾನ	ಮಸಣ
ಸಿಂಹ	ಸಿಂಗ	ಸಿಂಧೂರ	ಸಿಂಧುರ
ಸುರಾ	ಸೆರೆ	ಸುಖ	ಸೊಗ, ಸುಕ
ಸ್ಫಟಿಕಾ	ಪಟಿಕ (ಹಳಕು)	ಸ್ತಂಭ	ಕಂಬ
ಸಂತೋಷ	ಸಂತಸ		

೬. ವಿರುದ್ಧಾರ್ಥದ ಶಬ್ದಗಳು (ಮೂರುನುಡಿ)

ಶಬ್ದ	ವಿರುದ್ಧಾರ್ಥ ಶಬ್ದ	ಶಬ್ದ	ವಿರುದ್ಧಾರ್ಥ ಶಬ್ದ
ಮೂಢಧರ್ಮ	ತಾತ್ವಿಕಧರ್ಮ	ಭಿಕ್ಷಾಪತಿ	ಲಕ್ಷಾಪತಿ
ಆಜ್ಞಾಭಂಗ	ಆಜ್ಞಾಪಾಲನೆ	ಕೀರ್ತಿ	ಅಪಕೀರ್ತಿ
ಇರುಕಳಿ	ಸಾಧುತನ	ಪ್ರಾಚೀನ	ಅರ್ವಾಚೀನ
ದತ್ತಕಪುತ್ರ	ಔರಸಪುತ್ರ	ಗೃಹಸ್ಥ	ಸನ್ಯಾಸಿ
ಹಗಲು	ರಾತ್ರಿ	ಜಡ	ಹಗುರು
ಶ್ರೇಷ್ಠ	ಕನಿಷ್ಠ	ಮಿತ್ರ	ಶತ್ರು
ದೇವ	ದೈತ್ಯ	ಜಯ	ಅಪಜಯ
ತೆಂಕಣ	ಬಡಗಣ	ಸುಖ	ದುಃಖ
ನಿಂದೆ	ಸ್ತುತಿ	ಶ್ರೀಮಂತ	ಬಡವ
ಸಜ್ಜನ	ದುರ್ಜನ	ಶೂರ	ಹೇಡಿ
ಸುಗಮ	ದುರ್ಗಮ	ಎಡ	ಬಲ
ಚಂಚಲ	ಸ್ಥಿರ	ಸುಲಭ	ಕಠಿಣ
ಹಿರಿಯ	ಕಿರಿಯ	ಸದ್ಗುಣ	ದುರ್ಗುಣ
ಮೇಲೆ	ಕೆಳಗೆ	ಮೂಡಣ	ಪಡುವಣ
ಇಹ	ಪರ	ಗೌರವ	ತಿರಸ್ಕಾರ
ಸಜೀವ	ನಿರ್ಜೀವ	ಸ್ವರ್ಗ	ನರಕ
ಜಾಣ	ಮೂರ್ಖ	ಕಳೆಯೇರು	ಕಳೆಗುಂದು
ಸ್ತ್ರೀ	ಪುರುಷ	ಹಣ್ಣೆಲೆ	ಹಸರೆಲೆ
ಉನ್ನತಿ	ಅವನತಿ	ಮೂಡು	ಮುಳುಗು
ಮಾನ	ಅಪಮಾನ	ಹಿಗ್ಗು	ತಗ್ಗು
ಉತ್ಕರ್ಷ	ಅಪಕರ್ಷ	ಅಭಿಮಾನ	ನಿರಭಿಮಾನ
ಪ್ರೀತಿ	ಅಪ್ರೀತಿ	ಧೈರ್ಯ	ಅಧೈರ್ಯ
ಯೌವನ	ಮುಪ್ಪು	ಶುದ್ಧ	ಅಶುದ್ಧ
ಕಪ್ಪಗೆ	ಬೆಳ್ಳಗೆ	ಶೀತ	ಉಷ್ಣ

ಶಬ್ದ	ವಿರುದ್ಧಾರ್ಥದ ಶಬ್ದ	ಶಬ್ದ	ವಿರುದ್ಧಾರ್ಥದ ಶಬ್ದ
ಉಪ್ಪು	ಖಾರ	ಸೂರ್ಯ	ಚಂದ್ರ
ಗ್ರಹ	ನಕ್ಷತ್ರ	ಬೆಲ್ಲ	ಬೇವು
ಸಾವುಕಾರ	ಸಾಲಗಾರ	ದಂಡನೆ	ಕ್ಷಮೆ
ಆಸೆ	ನಿರಾಶೆ	ಗೆಲವು	ಸೋಲು
ಅಜ್ಜ	ಮೊಮ್ಮಗ	ಸಂಪಾದಿಸು	ಕಳೆದುಕೊಳ್ಳು
ಉದ್ಯೋಗ	ನಿರುದ್ಯೋಗ	ವಿಶ್ವಾಸ	ಅವಿಶ್ವಾಸ
ಲಾಭ	ಹಾನಿ	ಗಲಾಟೆ	ಸ್ತಬ್ಧತೆ
ಆರೋಗ್ಯ	ಅನಾರೋಗ್ಯ	ವಿದ್ವಾಂಸ	ಮೂರ್ಖ
ವಿಶ್ರಾಂತಿ	ಅವಿಶ್ರಾಂತಿ	ಜ್ಞಾನಿ	ಅಜ್ಞಾನಿ
ಮಿತವ್ಯಯ	ಅಪವ್ಯಯ	ಕೃಪಣ	ದುಂದುಗಾರ
ಶಾಶ್ವತ	ನಶ್ವರ	ಭಿಡೆ	ನಿರ್ಭಿಡೆ
ಸಂದೇಹ	ನಿಃಸಂದೇಹ	ಆದರ	ಅನಾದರ
ಸುರ	ಅಸುರ	ಮಲ	ನಿರ್ಮಲ
ಸಣ್ಣ	ದೊಡ್ಡ	ಗಿಡ್ಡ	ಉದ್ದ
ಹಳಬ	ಹೊಸಬ	ಸಿಹಿ	ಕಹಿ
ಏರು	ಇಳಿ	ಸಂಕುಚಿತ	ವಿಸ್ತೃತ
ಸ್ವಪ್ರಕಾಶ	ಪರಪ್ರಕಾಶ	ನಗು	ಅಳು
ಬಿಸಿ	ತಂಪು	ಅಂದು	ಇಂದು
ತುಸು	ಬಹಳ	ಅಧಃ	ಊರ್ಧ್ವ
ಗುರು	ಶಿಷ್ಯ	ಹೆಚ್ಚು	ಕಡಿಮೆ
ಒಣ	ಹಸಿ	ತಿಪ್ಪೆ	ಉಪ್ಪರಿಗೆ
ತಪ್ಪು	ಒಪ್ಪು	ಸರಳ	ವಕ್ರ
ತೇಜ	ತಿಮಿರ	ಗಳಿಕೆ	ಬಳಿಕೆ
ಹುಣ್ಣಿವೆ	ಅಮಾವಾಸ್ಯೆ	ಸೂಕ್ಷ್ಮ	ಸ್ಥೂಲ
ಅತಿವೃಷ್ಟಿ	ಅನಾವೃಷ್ಟಿ	ಜನನ	ಮರಣ
ಮಿತ್ರ	ಶತ್ರು	ಸಾಧಕ	ಬಾಧಕ

೭. ಉಪಮಾನ-ಉಪಮೇಯಗಳು

ಹೋಲಿಕೆ ಕೊಡುವದು ಉಪಮಾನ. ಹೋಲಿಸಿಕೊಳ್ಳುವದು ಉಪಮೇಯವು.

ಸ್ತ್ರೀ ವರ್ಣನೆಯಲ್ಲಿ ಬರುವಂತಹವು
ಕಣ್ಣು—ಕಮಲದ ಎಸಳು
ನೋಟ ಓರೆ ನೋಟ
ತುಟಿ ತೊಂಡೆ ಹಣ್ಣು
ಹಲ್ಲು ದಾಳಿಂಬರ ಬೀಜ, ಮುತ್ತು
ಮುಖ—ಕಮಲ
ಧ್ವನಿ ಕೋಗಿಲೆ
ಮೈಬಣ್ಣ ಕೇದಗಿಯ ಬಣ್ಣ, ಲಿಂಬಿಯ ಹಣ್ಣಿನ ಬಣ್ಣ, ಬಂಗಾರದ ಬಣ್ಣ
ನಡಿಗೆ - ನವಿಲಿನ ನಡಿಗೆ,
ಚಲುವಿಕೆ—ರತಿ, ಗೌರಿ
ಜಾಣ್ಮೆ ಸರಸ್ವತಿ
ಪತಿವ್ರತೆ—ಅಹಿಲ್ಯಾ, ಸೀತಾ, ತಾರಾ, ದ್ರೌಪತಿ, ಮಂಡೋದರಿ.

ಪ:— ಕೆಳಗಿನ ಹೋಲಿಕೆಗಳನ್ನು ಯೋಗ್ಯ ಶಬ್ದಗಳಿಂದ ಪೂರ್ಣ ಮಾಡಿರಿ. ಉದಾ:—ಬಂಗಾರದಂತೆ ಬೆಲೆಯುಳ್ಳದ್ದು.

೧. ಉಕ್ಕಿನಂತೆ....
೨. ಸೂರ್ಯನಂತೆ....
೩. ನಕ್ಷತ್ರದಂತೆ....
೪. ಮುಳ್ಳಿನಂತೆ....
೫. ಹಿಮದಂತೆ....
೬. ಸಮುದ್ರದಂತೆ....
೭. ಮುತ್ತಿನಂತೆ....
೮. ಕಾಮನಂತೆ....
೯. ಬೆಂಕಿಯಂತೆ....
೧೦. ಕೋಗಿಲೆಯಂತೆ....
೧೧. ಬೇವಿನಂತೆ....
೧೨. ಸಿಂಹನಂತೆ....
೧೩. ಕತ್ತೆಯಂತೆ....
೧೪. ಜೇನಿನಂತೆ....
೧೫. ನರಿಯಂತೆ....
೧೬. ಮಂಗನಂತೆ....

೧೭. ಚಂದ್ರನಂತೆ.... ೨೧. ಚಂಡಿನಂತೆ....
೧೮. ಹಿಮಾಲಯದಂತೆ.... ೨೨. ಆಕಾಶದಂತೆ....
೧೯. ಕಾಗೆಯಂತೆ.... ೨೩. ಸಕ್ಕರೆಯಂತೆ....
೨೦. ಬೆಣ್ಣೆಯಂತೆ.... ೨೪. ಖಾರದಂತೆ....

ಉತ್ತರಗಳು:— (೧) ಕಠಿಣತ್ವ, (೨) ಪ್ರಕಾಶವುಳ್ಳದ್ದು, (೩) ಮಿನುಗುವುದು, (೪) ಚುಚ್ಚು, (೫) ಘಟ್ಟಿ, (೬) ಘೋರ್ಗರೆ, (೭) ಹೊಳಪು, (೮) ಸುಂದರ, (೯) ಉಗ್ರ, (೧೦) ಸುಸ್ವರ, (೧೧) ಕಹಿ, (೧೨) ಗರ್ಜನೆ, (೧೩) ಮಂದ, (೧೪) ಸತತೋದ್ಯೋಗ, (೧೫) ಕಪಟತನ, (೧೬) ಚಂಚಲ, (೧೭) ತಂಪು, (೧೮) ಎತ್ತರ, (೧೯) ಕಪ್ಪು, (೨೦) ಮೃದು, (೨೧) ದುಂಡಗೆ, (೨೨) ವಿಶಾಲ, (೨೩) ಸವಿ, (೨೪) ಉರುಪು.

ಪ್ರ:—ಕೆಳಗೆ ಕೊಟ್ಟವುಗಳನ್ನು ವರ್ಣಿಸುವಾಗ ಯಾವ ಪೌರಾಣಿಕ ವ್ಯಕ್ತಿಯ ಹೋಲಿಕೆಯನ್ನು ಕೊಡುವರು. [೧೯೪೯]

ಬ್ರಹ್ಮಚರ್ಯ, ಗುರುಭಕ್ತಿ, ಬಂಧುಪ್ರೇಮ, ಸ್ವಾಮಿನಿಷ್ಠೆ, ದೀರ್ಘನಿದ್ರೆ.

ಉ: — ಬ್ರಹ್ಮಚರ್ಯ-ಹನುಮಂತ, ಗುರುಭಕ್ತಿ-ಉತ್ತಂಕ; ಬಂಧುಪ್ರೇಮ-ಭರತ; ಸ್ವಾಮಿನಿಷ್ಠೆ-ಕರ್ಣ; ದೀರ್ಘನಿದ್ರೆ-ಕುಂಭಕರ್ಣ.

[೧೯೪೭ ಅಕ್ಟೋಬರ]

ಪ್ರ: ಸತ್ಯ, ಪಾತಿವ್ರತ್ಯ, ಧರ್ಮಿಷ್ಠತನ, ಪಿತೃಭಕ್ತಿ. ಪ್ರತಿಜ್ಞೆ.

ಉ:—ಸತ್ಯ=ಧರ್ಮರಾಜ; ಪಾತಿವ್ರತ್ಯ=ಸೀತಾ; ಧರ್ಮಿಷ್ಠತನ= ಹರಿಶ್ಚಂದ್ರ; ಪಿತೃಭಕ್ತಿ=ರಾಮ; ಪ್ರತಿಜ್ಞೆ=ಭೀಷ್ಮ.

[೧೯೪೭ ಎಪ್ರಿಲ]

ಪ್ರ:-ಐಶ್ವರ್ಯ, ಚೆಲುವಿಕೆ, ಸಿಟ್ಟು, ಪ್ರಯತ್ನ, ದಾನಮಾಡುವದು

ಉ: ಐಶ್ವರ್ಯ=ಕುಬೇರ; ಚೆಲುವಿಕೆ=ಕಾಮ, ಸಿಟ್ಟು—ವಿಶ್ವಾಮಿತ್ರ, ಪ್ರಯತ್ನ—ಭಗೀರಥ, ದಾನಮಾಡುವದು – ಕರ್ಣ.

೮. ಇಡಿನುಡಿ

ರೂಢಿಯಲ್ಲಿ ವಿಶಿಷ್ಟಾರ್ಥದಲ್ಲಿ ಬಳಿಕೆಯಲ್ಲಿರುವ ಮಾತುಗಳು, ಇಡಿನುಡಿಗಳು.

ಹೊಟ್ಟೆಯ ಮೇಲೆ ಹೊಡೆ, ಮೂಗಿನ ಮೇಲೆ ಬೆರಳಿಡು, ಬೇರಿಗೆ ಬಿಸ್ನೀರ ಹೊಯ್ಯು ಮತ್ತು ಸೂರ್ಯನಿಗೆ ಸೊಡರಿಡು ಇವುಗಳ ವ್ಯವಹಾರೋಪಯುಕ್ತವಾದ ಅರ್ಥವು [ಬರಿಯ ಪದಗಳ ಅರ್ಥವಲ್ಲ] ಸುಸ್ಪಷ್ಟವಾಗುವಂತೆ ವಾಕ್ಯಗಳನ್ನು ರಚಿಸಿ ಬರೆಯಿರಿ [೧೪೩೦]

ಉ:— ಸಾಲಗಾರನ ಹೊಟ್ಟೆಯಮೇಲೆ ಹೊಡೆದು ಗಳಿಸಿದ ದುಡ್ಡು ಎಷ್ಟುದಿನ ತಾನೇ ಉಳಿದೀತು.

ಬಗೆಹರಿಯದ ಪ್ರಶ್ನೆ ಬಂದಾಗ ಮೂಗಿನಮೇಲೆ ಬೆರಳಿಟ್ಟು ವಿಚಾರ ಮಾಡುವದುಂಟು.

ಚಾಣಕ್ಯನು ನಂದವಂಶದ ಬೇರಿಗೆ ಬಿಸ್ನೀರು ಹೊಯ್ಯಲು ಸಕಲ ಪ್ರಯತ್ನಗಳನ್ನು ಮಾಡಿದನು.

ಸೂರ್ಯನಿಗೆ ಸೊಡರಿಡು [ದೀಪ ಹಿಡಿ] ವದೆಂದರೆ ಸಮುದ್ರಕ್ಕೆ ನೀರು ಸುರುವಿದಂತೆ.

ಕೆಳಗೆ ಕೊಟ್ಟವುಗಳ ಅರ್ಥ ಬರೆದು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿರಿ. [೧೪-೯]

[೧] ಕಾಲುಕೆದರು [೨] ಕೈತೋರಿಸು [೩] ಬಾಯಿಬಿಡು [೪] ಮನಸ್ಸಿನಲ್ಲಿ ಮಂಡಿಗೆ ಮಾಡು [೫] ಮೂಗು ಮುರಿ [೬] ತಲೆ ಹಾಕು. [೭] ಕಣ್ಣಿಡು.

ಉ:—ಕಾಲಕೆದರು .... ಸುಮ್ಮನೆ ಜಗಳಾ ತೆಗೆ
ಕೈತೋರಿಸು .... ಸೇಡು ತೀರಿಸಿಕೊಳ್ಳು
ಬಾಯಿ ಬಿಡು .... ಒದರಾಡು
ಮನಸ್ಸಿನಲ್ಲಿ ಮಂಡಿಗೆ ಮಾಡು .... ಅಸಾಧ್ಯ ಸಂಗತಿಗಳನ್ನು ಕುರಿತು ವ್ಯರ್ಥವಾಗಿ ವಿಚಾರಿಸು

ಮೂಗು ಮುರಿ .... ಹೀಯಾಳಿಸು
ತಲೆಹಾಕು .... ತಿಳಿಯದೆ ಒಪ್ಪು
ಕಣ್ಣಿಡು .... ದೂಷಿತ ದೃಷ್ಟಿಯಿಂದ ನೋಡು

(೧) ಕಾಲುಕೆದರಿ ಜಗಳ ತೆಗೆಯಬಾರದು.

(೨) ಕೃಷ್ಣನು ಕೌರವರಿಗೆ ಚೆನ್ನಾಗಿ ಕೈ ತೋರಿಸಿದನು.

(೩) ಸುಮ್ಮನಿರುವವರ ಮೇಲೆ ಬಾಯಿ ಬಿಡಬಾರದು.

(೪) ಗುರುಗಳು ಬಾಲಕರ ಮನಸ್ಸಿನ ವಿರುದ್ಧವಾದ ಕೆಲಸ ಮಾಡಲಿಕ್ಕೆ ಹೇಳಲು ಅವರು ಮಾಡುವದಕ್ಕೆ ಮೂಗು ಮುರಿಯುವರು.

(೫) ಶೇಖಮಹಮ್ಮದನ ಮನಸ್ಸಿನ ಮಂಡಿಗೆಗಳು ಮಾಯವಾದವು.

(೬) ಅರಸನ ಮಾತಿಗೆ ಸೇವಕರು ತಲೆ ಹಾಕುವರು.

(೭) ಪರರ ವಸ್ತುಗಳ ಮೇಲೆ ಕಣ್ಣಿಡುವದು ಮಹಾಪರಾಧವು.

ಕೆಳಗೆ ಕೊಟ್ಟವುಗಳ ಅರ್ಥವನ್ನು ಬರೆದು ಅವುಗಳನ್ನು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿರಿ.

[೧೬೮ ರ ಪ್ರಶ್ನೆಗಳು]

ಮೈ ಉಳಿಸಿಕೊಳ್ಳು, ನಾಲಿಗೆ ಬಿಗಿಹಿಡಿ, ನೀರಿನಲ್ಲಿ ಹೋಮಮಾಡು, ಕಿವಿಯ ಮೇಲೆ ಕೈ ಇಟ್ಟುಕೋ, ಗೆದ್ದೆತ್ತಿನ ಬಾಲಾ ಹಿಡಿ, ಕರುವಿನ ಮೇಲೆ ಬೊಕ್ಕೆ ಏಳು, ಕಾಲಿಗೆ ಬುದ್ಧೀ ಹೇಳು.

ಉಃ— ಮೈ ಉಳಿಸಿಕೊಳ್ಳು-ಕೆಲಸ ತಪ್ಪಿಸು, ಕೂಲಿಯವರ ಮೇಲ್ವಿಚಾರಣೆ ಮಾತಾಡಿದ್ದರೆ, ಅವರು ಮೈ ಉಳಿಸಿಕೊಳ್ಳುವರು.

ನಾಲಿಗೆ ಬಿಗಿಹಿಡಿಃ—ಮಾತು ತಡೆಹಿಡಿ, ಸಿಟ್ಟಿನ ಭರದಲ್ಲಿ ಮನ ಬಂದಂತೆ ಮಾತಾಡದೆ, ನಾಲಿಗೆ ಬಿಗಿಹಿಡಿಯಬೇಕು.

ನೀರಿನಲ್ಲಿ ಹೋಮಮಾಡುಃ—ವ್ಯರ್ಥವಾಗು; ಮೂರ್ಖನಿಗೆ ಬುದ್ಧೀ ಹೇಳುವದೆಂದರೆ, ನೀರಿನಲ್ಲಿ ಹೋಮಮಾಡಿದಂತೆಯೇ ಸರಿ.

ಕಿವಿಯ ಮೇಲೆ ಕೈ ಇಟ್ಟುಕೋಃ - ಗೊತ್ತಿಲ್ಲದಂತೆ ನಟಿಸು. ನಿಜಾಮರು ಹಿಂದೂಜನರಿಗಾಗುವ ಅನ್ಯಾಯಗಳನ್ನು ಕೇಳಿಯೂ ಕಿವಿಯ ಮೇಲೆ ಕೈ ಇಟ್ಟುಕೊಳ್ಳುತ್ತಿದ್ದರು.

ಗೆದ್ದೆತ್ತಿನ ಬಾಲಾ ಹಿಡಿ:— ಜಯಶಾಲಿಯ ಬೆನ್ನುಕಟ್ಟು; ಬ್ರಿಟಿಶರು ಹಿಂದುಸ್ಥಾನದಲ್ಲಿ ಕಾಲಿಕ್ಕಿದಾಗ, ಗೆದ್ದೆತ್ತಿನ ಬಾಲಾ ಹಿಡಿಯುತ್ತ ರಾಜ್ಯಕಟ್ಟಿದರು

ಕರುವಿನ ಮೇಲೆ ಬೊಕ್ಕೆ ಏಳು:—ಹುಣ್ಣಿನ ಮೇಲೆ ಬರೆಕೊಟ್ಟಂತೆ; ಮನುಷ್ಯನಿಗೆ ಆಪತ್ತುಗಳು ಬರಹತ್ತಿದವೆಂದರೆ, ಅವು ಕರುವಿನ ಮೇಲೆ ಬೊಕ್ಕೆ ಎದ್ದಂತೆ, ಒಂದರ ಹಿಂದೊಂದು ಬರುತ್ತವೆ.

ಕಾಲಿಗೆ ಬುದ್ಧೀಹೇಳು:— ಓಡಿ ಹೋಗು. ರಾಮರಾಜನು ರಕ್ಕಸ ತಂಗಡಿಯ ಕಾಳಗದಲ್ಲಿ ಮಡಿಯಲು, ಉಳಿದ ಸೈನಿಕರು ಕಾಲಿಗೆ ಬುದ್ಧೀ ಹೇಳಿದರು.

೧೯೪೭ ರ ಅಕ್ಟೋಬರ ಪ್ರಶ್ನೆಗಳು

ಅಡ್ಡಹಾದೀ ಹಿಡಿ, ಉದ್ದನೀರಿಗೆ ಹೋಗು, ಕೈ ಬೆಚ್ಚಗೆ ಮಾಡು. ಕಾಲಮೇಲೆ ಕಲ್ಲು ಹಾಕಿಕೋ, ಹೊಟ್ಟೆಯ ಮೇಲೆ ಹೊಡೆ, ಮೂಗು ಮುರಿ ಉಸುಬಿನ ಮೇಲೆ ಮನೆ ಕಟ್ಟು.

ಉ:— ಅಡ್ಡಹಾದಿ ಹಿಡಿ-ಕೆಟ್ಟ ನಡತೆಯಿಂದ ನಡೆ; ರಾವಣನು ಅಡ್ಡಹಾದೀ ಹಿಡಿದು, ಅಡವೀ ಬಿದ್ದು ನಾಶಹೊಂದಿದನು.

ಉದ್ದ ನೀರಿಗೆ ಹೋಗು:— ತಂತ್ರಗಾರನಾಗು; ಸಂಭಾವಿತನು ಎಂದೂ ಉದ್ದ ನೀರಿಗೆ ಹೋಗುವದಿಲ್ಲ.

ಕೈ ಬೆಚ್ಚಗೆ ಮಾಡು:— ಲಂಚಕೊಡು; ಸರ್ ಥಾಮಸರೋನು ಕಂಪೆನಿಯವರಿಗೆ ವ್ಯಾಪಾರದ ಅಪ್ಪಣೆ ಚೀಟಿ ಪಡೆಯಬೇಕಾದರೆ, ಕೈ ಬೆಚ್ಚಗೆ ಮಾಡಬೇಕಾಯಿತು.

ಕಾಲಮೇಲೆ ಕಾಲು ಹಾಕಿಕೊಳ್ಳು:— ವ್ಯರ್ಥವೇಳೆ ಕಳೆ; ಆಲಸಿಗಳು ಕಾಲಮೇಲೆ ಕಾಲು ಹಾಕಿಕೊಂಡು, ಸ್ವಸ್ಥವಾಗಿ ಕೂಡ್ರುವರು.

ಹೊಟ್ಟೆಯಮೇಲೆ ಹೊಡೆ:— ಕೂಳುಗೇಡು ಮಾಡು; ಸಾಲಗಾರನು ಸಾವುಕಾರನಿಗೆ ಹೊಟ್ಟೆಯ ಮೇಲೆ ಹೊಡೆಯಬೇಡಿರೆಂದು ಬೇಡಿ ಕೊಳ್ಳುವನು.

ಮೂಗು ಮುರಿ:— ಅಲ್ಲಗಳೆ; ಹಿಂದುಸ್ತಾನ ಸರಕಾರದವರು, ನಿಜಾಮನಿಗೆ ಹಿಂದುಸ್ತಾನದಲ್ಲಿ ಸೇರಲು ಬಿನ್ನವಿಸಲು, ಆತನು ಮೂಗು ಮುರಿದನು.

ಉಸುಬಿನ ಮೇಲ ಮನೆಕಟ್ಟು:— ವ್ಯರ್ಥ ಕೆಲಸ, ಗುಡ್ಡಕ್ಕೆ ಕಲ್ಲು ಹೊರು; ಪಾಕಿಸ್ತಾನದ ಮಂತ್ರಿಗಳು ಕಾಶ್ಮಿರವನ್ನು ತಮ್ಮ ರಾಜ್ಯದಲ್ಲಿ ಸೇರಿಸಬೇಕೆಂಬ ಇಚ್ಛೆಯಿಂದ, ಉಸುಬಿನ ಮೇಲೆ ಮನೆ ಕಟ್ಟುತ್ತಿರುವರು.

ಪ್ರ:— ಕೆಳಗೆ ಕೊಟ್ಟವುಗಳ ಅರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (೧೯೪೭)

(೧) ಹೊಟ್ಟೆಯೊಳಗೆ ಹಾಕಿಕೊಳ್ಳು-ಕ್ಷಮಿಸು.
(೨) ಮುಖಕ್ಕೆ ಮಸಿಬಳಿ-ಅಪಮಾನ ಮಾಡು.
(೩) ತಲೆಕೆದರಿಕೊಳ್ಳು-ವಿಚಾರಮಾಡು
(೪) ಗಾಳಿಗೋಪುರವಾಗು-ಮನೋರಾಜ್ಯಮಾಡು
(೫) ಕಾಲಿಗೆ ಬುದ್ಧಿಹೇಳು-ಓಡಿಹೋಗು.
(೬) ಉಂಡಮನೆಗೆರಡು ಬಗೆ-ಕೃತಘ್ನನಾಗು.
(೭) ನೂರು ವರುಷ ತುಂಬು-ಆಯುಷ್ಯ ತೀರು.

ಪ್ರ:— ಕೆಳಗೆ ಕೊಟ್ಟವುಗಳ ಅರ್ಥ ಸ್ಪಷ್ಟವಾಗುವಂತೆ ಒಂದೊಂದು ವಾಕ್ಯ ರಚಿಸಿರಿ. (೧೯೪೭)

೧. ನಡಕಟ್ಟಿನಿಲ್ಲು- ಟೊಂಕಕಟ್ಟಿನಿಲ್ಲು, ಕಾಂಗ್ರೆಸ್ಸು ಪರಕೀಯರ ಆಳಿಕೆಯನ್ನು ಒದ್ದೋಡಿಸಲು, ನಡುಕಟ್ಟಿನಿಂತಾಗ ಸ್ವಾತಂತ್ರ್ಯ ಸೂರ್ಯನು ಉದಯಿಸಿದನು.

೨. ಕೈತೊಳೆದುಕೊಂಡು ಬೆನ್ನು ಹತ್ತು:-ಯಾವಾಗಲೂ ತೊಂದರೆಕೊಡು; ಶಿವಾಜಿ ಮಹಾರಾಜನು ಮೊಗಲ ಸಾಮ್ರಾಜ್ಯವನ್ನು ಮಣ್ಣುಪಾಲುಮಾಡಲು ತಮ್ಮ ಸಂಗಡಿಗರೊಡಗೂಡಿ, ಒಳ್ಳೇ ಆವೇಶದಿಂದ ಕೈತೊಳೆದುಕೊಂಡು ಬೆನ್ನು ಹತ್ತಿದನು.

೩. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡು:— ಸೂಕ್ಷ್ಮದೃಷ್ಟಿಯಿಂದ ನೋಡು. ಔರಂಗಜೇಬನ ಸೈನಿಕರು, ಶಿವಾಜಿಯನ್ನು ಕಣ್ಣಲ್ಲಿ

ಎಷ್ಟೆ ಹಾಕಿಕೊಂಡು ಕಾಯುತ್ತಿದ್ದರೂ ಶಿವಾಜಿಯು ಅವರಿಗೆ ಕೈ ಕೊಟ್ಟು ಪಾರಾದನು.

೪. ಒಂದು ತುಟಿ ಎರಡು ಮಾಡು:—ಮಾತಾಡು ದುರ್ಜನರು ಎಷ್ಟು ನಿಂದಿಸಿದರೂ ಸಜ್ಜನರು ಒಂದು ತುಟಿ ಎರಡು ಮಾಡುವದಿಲ್ಲ.

೫. ಕಾಲಕಸ ಬೆಲೆ ಇಲ್ಲದ್ದು ನಿಜವಾದ ವಿಜ್ಞಾನಿಯು ಯಾವ ವಸ್ತುವನ್ನೂ ಕಾಲಕಸವೆಂದು ಬಗೆಯನು.

೬. ಕತ್ತೆಯ ಬಿಟ್ಟಿ:—ಲಾಭವಿಲ್ಲದ ಕೆಲಸ ಇಂದಿನ ಯುಗದಲ್ಲಿ ಎಷ್ಟು ಕತ್ತೆಯ ಬಿಟ್ಟಿ ಮಾಡಿದರೂ ಫಲ ಪ್ರಾಪ್ತಿಯಾಗುವದು ಬಹು ಕಠಿಣ.

೭. ಗುಡ್ಡಕ್ಕೆ ಕಲ್ಲುಹೊರು ನಿರರ್ಥಕ ಪರಿಶ್ರಮ.

ಪ್ರ:— ಕೆಳಗಿನ ಬಳಕೆಯ ಮಾತುಗಳನ್ನು ನಿಮ್ಮ ಸ್ವಂತದ ವಾಕ್ಯಗಳಲ್ಲಿ ಉಪಯೋಗಿಸಿ, ಒಂದೊಂದು ವಾಕ್ಯವನ್ನು ಬರೆಯಿರಿ. (೧೯೪೫)

೧. ನುಚ್ಚು ನೂರಾಗು ೨. ಒಡ್ಡುಮುರಿ. ೩. ನುಂಗಿ ನೀರು ಕುಡಿ. ೪. ನಿವಾಳಿಸಿ ಒಗೆ ೫. ಅಟ್ಟಕ್ಕೇರು

ಉ:—೧. ರಾಮನು ಕೊಡವನ್ನು ನುಚ್ಚುನೂರಾಗುವಂತೆ ಒಡೆದನು. ೨. ನಾವು ಮುಂಜಾನೆ ಎದ್ದೊಡನೆ ಒಡ್ಡು ಮುರಿಯುತ್ತೇವೆ. ೩. ಚನ್ನಪ್ಪನು ರಾಮನ ಹಣವನ್ನು ನುಂಗಿ ನೀರುಕುಡಿದನು. ೪. ಭೂತ ಬಾಧೆಯಾಗಿ ಹುಡುಗರು ಅಳಹತ್ತಿದರೆ ಹಣ್ಣನ್ನು ನಿವಾಳಿಸಿ ಒಗೆಯುತ್ತಾರೆ. ೫. ರಾಮನು ಸಾಲ್ಕನೆಯ ವರ್ಗ ಪಾಸಾದ್ದರಿಂದ ಅಟ್ಟಕ್ಕೇರಿದ್ದಾನೆ.

ಬೇರೆ ಕೆಲವು ನುಡಿಗಳು

ಕಣ್ಣು ಮುಚ್ಚಿಕೊಂಡು ಕೂಡ್ರು—ವಿಚಾರಮಾಡದೆ ಇರು.
ಕೈಯಲ್ಲಿ ಕಡ್ಡಿಕೊಟ್ಟುಹೇಳು—ಅನೇಕರೀತಿಯಿಂದ ಹೇಳು
ತಲೆಯಮೇಲೆ ಕುಳ್ಳಿರಿಸಿಕೊಳ್ಳು—ಹೆಚ್ಚು ಸಲಿಗೆಕೊಡು.

ಬಾಯಿಗೆ ಬಾಯಿ ಹತ್ತು ಜಗಳಾಡು.
ಬೆನ್ನು ಬೀಳು— ಮರೆಹೋಗು.
ಬೆನ್ನು ತಟ್ಟು ಹುರುಪುಗೊಡು.
ಬೆನ್ನು ತೋರಿಸು— ಓಡಿಹೋಗು

೯. ಕಿರುನುಡಿ

ಕಿರಿದಾದ ನುಡಿ ಕಿರುನುಡಿ

ಕತಕತ ಕುದಿ	ಗಟಗಟ ಕುಡಿ
ಕಿಡಿ ಕಿಡಿ ಆಗು	ಗಳಗಳ ಅಳು
ಗುಣುಗುಣು ಮಾತಾಡು	ಜುಳಜುಳು ಹರಿ
ತಳತಳ ಹೊಳೆ	ಫಡಾಫಡಾ ಹೊಡೆ
ಧಗಧಗ ಉರಿ	ಮಿರಿಮಿರಿ ಮಿಂಚು
ದರದರ ಎಳೆ	ದುರುದುರು ನೋಡು
ಲಟಪಟ ಒದ್ದಾಡು	ಢಣಢಣ ಬಾರಿಸು
ವಟವಟ ಅನ್ನು	ಗಿಮಿಗಿಮಿ ತಿರುಗು
ಬಳಬಳ ಉದುರು	ಕರಕರ ಕಡಿ
ಟುಣುಟುಣು ಹಾರು	ಹಿರಿಹಿರಿ ಹಿಗ್ಗು

ಟುಣುಟುಣು, ಭಗಭಗ, ಢಣಢಣ, ಕಿಲಿಕಿಲಿ, ಗಳಗಳ, ಗಿಮಿಗಿಮಿ, ಇವುಗಳಗನ್ನು ಅರ್ಥ ಪೂರ್ಣವಾಗುವಂತೆ ಒಂದೊಂದು ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ (೧೪೯)

ಉ: [೧] ಸಿಣ್ಣ ಮಕ್ಕಳು ಪ್ರೀತಿಯ ವಸ್ತುಗಳನ್ನು ನೋಡಿ ಟುಣುಟುಣು ಜಿಗಿಯುತ್ತ ಬರುವರು [೨] ಮೈಮೇಲೆ ಕಾದ ಎಣ್ಣೆಯು ಬೀಳಲು ಅದು ಭಗಭಗ ಉರಿಯುವದು. [೩] ಗಡಿಯಾರವು ಢಣಢಣ ಗಂಟೆ ಬಾರಿಸುತ್ತದೆ. [೪] ಮುಂಜಾನೆ ಪಕ್ಷಿಗಳು ಕಿಲಿಕಿಲಿ ಧ್ವನಿ ಮಾಡುತ್ತವೆ [೫] ಗುರುಗಳು ಹೊಡೆಯಲು ಶಿಷ್ಯನು ಗಳಗಳ ಅತ್ತನು. [೬] ಸೂಟಿಯಾದಕೂಡಲೆ ವಿದ್ಯಾರ್ಥಿಗಳು ಗಿಮಿಗಿಮಿ ತಿರುಗುವರು.

ಕೆಳಗೆ ಕೊಟ್ಟವುಗಳನ್ನು ಅರ್ಥ ಪೂರ್ಣವಾಗುವಂತೆ, ಒಂದೊಂದು ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ. [೧೯೪೮]

ಪ್ರ: ಪಕಪಕ, ಧಪಧಪ, ಪಿಳಿಪಿಳಿ, ಗಪಗಪ, ಲಕಲಕ,

ಉ:— ೧. ದೀಪವು **ಪಕಪಕನೆ** ಹೋಯಿತು.

೨. ಆಕಳು ಕರುವಿಗೆ ಮೊಲೆಯುಣಿಸಿದ ಮೂಲಕ ಮಲ್ಲನು **ಧಪಧಪನೆ** ಹೊಡೆದನು.

೩. ಶಿವನು ಹಸಿದು ಪಿಳಿಪಿಳಿ ಕಣ್ಣು ಬಿಡುತ್ತಾ ಗಿಡದ ನೆರಳಿಗೆ ಕುಳಿತನು.

೪. ಹನುಮಂತನು ಅಶೋಕವನದೊಳಗಿನ ಗಿಡಗಳನ್ನು ಕಿತ್ತಿ ನೆಲಕ್ಕೆ ಬಡಿದು ಹಣ್ಣುಗಳನ್ನು ಗಪಗಪನೆ ತಿಂದನು.

೫. ಶಾಂತೆಯ ಕಿವಿಯಲ್ಲಿ ಮುತ್ತು ಲಕಲಕನೆ ಹೊಳೆಯಿತು.

೧೯೪೭ ಅಕ್ಟೋಬರ

ಪ್ರ: ತಕತಕ, ಥರಥರ, ರಪರಪ, ಕುಲುಕುಲು, ಟರಟರ, ಮಿಕಿ ಮಿಕಿ, ಪಿರಿಪಿರಿ.

ಉ:—೧. ಶ್ರೀನಿವಾಸನು **ತಕತಕ** ಕುಣಿದನು.

೨. ರಂಗನು ಹುಲಿಯನ್ನು ನೋಡಿ **ಥರಥರ** ನಡುಗಿದನು

೩. ಮಳೆಯು **ರಪರಪ** ಬಿದ್ದಿತು.

೪. ಕೃಷ್ಣರಾಜನು ತೆನ್ನಾಲರಾಮಕೃಷ್ಣನನ್ನು ನೋಡಿ ,ಕುಲುಕುಲು ನಕ್ಕನು.

೫. ಗುರುಗಳು ರಂಗನ ಕೇಡಿಗೇಡಿತನಕ್ಕೆ ಅವನ ಮೇಲೆ **ಟರಟರ** ಒದರಾಡಿದರು.

೬. ಬಹುವಚನ ಹೊಸಬರನ್ನು ನೋಡಿ ಮಲ್ಲನು **ಮಿಕಿ ಮಿಕಿ** ಮುಖ ನೋಡಿದನು.

೭. ಹುಡುಗರು ಬಿಸಲಲ್ಲಿ ಪಿರಿಪಿರಿ ತಿರುಗುವರು.

೧೯೪೭ ಎಪ್ರಿಲ

ಪ್ರ: — ಜಕಜಕ, ಕತಕತ, ಗಪಗಪ, ಪಟಪಟ, ಮಿಣಿಮಿಣಿ, ಹಿರಿಹಿರಿ, ದಬದಬ.

ಉ: ೧. ಗಂಗೆಯು ಗಂಡನನ್ನು ನೋಡಿ ಚಕಚಕ ಹೆದರಿದಳು.

೨. ಅನ್ನವು ಕತಕತ ಕುದಿಯುತ್ತದೆ.

೩. ಗಪಗಪ ತಿನ್ನುವದರಿಂದ ಆಹಾರವು ಪಚನವಾಗುವದಿಲ್ಲ

೪. ಹುಡುಗರು ದಯವಿಲ್ಲದೆ ನೊಣಗಳನ್ನು **ಪಟಪಟನೆ** ಬಡಿಯುವರು.

೫. ಗಾಣದ ಎಣ್ಣೆಯ ದೀಪವು **ಮಿಣಿಮಿಣಿ** ಮಿಣುಕುವದು.

೬. ಹಿಂದುಸ್ತಾನಕ್ಕೆ ಸ್ವರಾಜ್ಯ ಸಿಕ್ಕಿದ್ದನ್ನು ನೋಡಿ, ಎಲ್ಲರೂ **ಹಿರಿಹಿರಿ** ಹಿಗ್ಗಿದರು.

೭. ಗೆರಸಪ್ಪೆಯ ನೀರು **ದಬದಬ** ಬೀಳುವದು.

೧೦. ಜೋಡುನುಡಿ

ಜೋಡಿ (ಜೊತೆ, ಎರಡು) ಯಾಗಿರುವ ನುಡಿಗಳು ಜೋಡುನುಡಿಗಳು.

ಜೋಡುನುಡಿ		ಮಾರುನುಡಿ
ಅಚ್ಚು-ಮೆಚ್ಚು	ತಿಂಡಿ-ತೀರ್ಥ	ತಪ್ಪು-ಒಪ್ಪು
ಅಡ್ಡ-ತಿಡ್ಡ	ದನ-ಕರು	ಪೆದ್ದ-ಪಂಡಿತ
ಅರವು-ಮರವು	ನಡೆ-ನುಡಿ	ಜಾಣ-ಕೋಣ
ಅಲ್ಪ-ಸ್ವಲ್ಪ	ನಯ-ಭಯ	ಇಲಿ-ಹುಲಿ
ಆಟ-ನೋಟ	ನೀರು-ನಿಡಿ	ಕಾಗೆ-ಕೋಗಿಲ
ಉಡಿಗೆ-ತೊಡಿಗೆ	ನುಚ್ಚು-ನುರಿ	ಕಾಯು-ಕೊಲ್ಲು
ಎಣ್ಣೆ-ಬೆಣ್ಣೆ	ನೆರೆ-ಹೊರೆ	ಸಾವು-ಉಳಿವು(ಬದಕು)
ಕಪ್ಪು-ಕಾಣಿಕೆ	ಬಂಧು-ಬಳಗ	ನಗೆ-ಹೊಗೆ
ಕಾಳು-ಕಡಿ	ಬಡವರು-ಬಗ್ಗರು	ಕೊನರು-ಕಮರು
ಕೆಲಸ-ಬೊಗಸೆ	ಮಳೆ-ಬೆಳೆ	ಹಿಗ್ಗು-ತಗ್ಗು-ಕುಗ್ಗು
ಕೈ-ಬಾಯಿ	ಮುಚ್ಚು-ಮರಿ	ಹೊಗಳು-ತೆಗಳು
ಗುಡಿ-ಗುಂಡಾರ	ಯಂತ್ರ-ಮಂತ್ರ	
ಗೊತ್ತು-ಗುರಿ	ಹೋಳಿಗೆ-ತುಪ್ಪ	ತಿಪ್ಪೆ-ಉಪ್ಪರಿಗೆ

ಹಳ್ಳ-ಕೊಳ್ಳ	ತಪ್ಪು-ತಡೆ	ನಾಡು-ಕಾಡು
ಹಬ್ಬ-ಹುಣ್ಣಿವೆ	ಬೇನೆ-ಬೇಸರಿಕೆ	ಕೊಡು-ಕೊಳ್ಳು
ಕಥೆ-ಕಾದಂಬರಿ	ಕೂಲಿ-ಕುಂಬಳಿ	ಊಟ-ಊಡಿಗೆ
ಕಸ-ಕಡ್ಡಿ	ಗಡಿಗೆ-ಮಡಿಕೆ	ಗಡ್ಡೆ-ಗೆಣಸು
ತಾಳ-ಮೇಳ	ಬೆಳ್ಳಿ-ಬಂಗಾರ	ಹಾಸು-ಹೊಕ್ಕು
ನಾಯಿ-ನರಿ	ಹಣ್ಣು-ಹಂಪಲ	ಹಾಲು-ಮೊಸರು
ಜಪ-ತಪ	ಕೋಟೆ-ಪಟ್ಟೆ	ಸಂತೆ ಪೇಟೆ
ಹುಳು-ಹುಪ್ಪಡಿ	ಗಿಡ-ಕಂಟಿ	

ಮಾರುನುಡಿ

ಅಗ್ಗ-ತುಟ್ಟಿ	ಅಳಿ-ಉಳಿ	ಉಗಾದಿ-ಹೋಳಿಹುಣ್ಣಿವೆ
ಎಣ್ಣೆ-ಸೀಗೆ	ಜಡ-ಹಗುರು	ತಂಪು-ಕಾವು
ತಿರುಳು-ತೊಗಟೆ	ತೇಲು-ಮುಳುಗು	ಬಡವ ಬಲ್ಲಿದ
ಬೆಳಕು-ಕತ್ತಲೆ	ಬೇವು-ಬೆಲ್ಲ	ಮೂಡು-ಮುಣುಗು
ಮೇಲು-ಕೀಳು	ಸಿಹಿ-ಕಹಿ	ಸೋಲು-ಗೆಲವು
ಹಸಿ-ಬಿಸಿ	ಹಾವು-ಮುಂಗಲಿ	ಹುಣ್ಣಿವೆ-ಅಮಾವಾಸ್ಯೆ

೧೧. ಕೂಡುನುಡಿ (ಸಮಾಸಗಳು)

ಎರಡು ಇಲ್ಲವೆ ಕೆಲವು ನುಡಿಗಳು ಕೂಡಿ, ಒಂದರ್ಥ ಹೇಳುವ ಒಂದೇ ನುಡಿಯಾದಲ್ಲಿ ಅದು ಕೂಡುನುಡಿ ಅಥವಾ ಸಮಸ್ತಪದ ಅಥವಾ ಸಮಾಸವೆನಿಸುವದು

ತತ್ಪುರುಷ :— ಎರಡೂ ಪದಗಳು ನಾಮಗಳು, ಉತ್ತರ ಪದ ಮುಖ್ಯ ಮರವನ್ನು+ಕಡಿದನು=ಮರಗಡಿದವನು; ಅಂಬುವಿನ+ರಾಶಿ= ಅಂಬುರಾಶಿ; ಅರಿಸಿನ+ಮನೆ=ಅರಮನೆ. ಹುಲಿಯಿಂದ+ಅಂಜಿಕೆ=ಹುಲಿಯಂಜಿಕೆ; ಹದವನ್ನು+ಕೆಡಿಸಿದವ=ಹದಗೆಡಿಸಿದವ; ಕೈಯಿಂದ+ಕೆಲಸ= ಕೈಗೆಲಸ; ಮೈಗೆ+ಮುಸುಕು=ಮೈಮುಸುಕು; ಚೋರರಿಂದ+ಭಯ = ಚೋರಭಯ; ಅರಸನ+ಮಗ=ಅರಸುಮಗ; ರಣದಲ್ಲಿ+ಧೀರ=ರಣಧೀರ, ಮಾವಿನ+ಮರ=ಮಾಮರ; ಪುಲ್ಲ+ಪೊದರು=ಪುಲ್ವೊದರು.

ಕರ್ಮಧಾರಯ:— ವಿಶೇಷ್ಯ, ವಿಶೇಷಣಗಳು ಅಥವಾ ಎರಡು ವಿಶೇಷಣಗಳು ಕೂಡಿ ಆಗುವ ಸಮಾಸ. ಉತ್ತಮನಾದ+ಪುರುಷ= ಪುರುಷೋತ್ತಮ; ಕಮಲದಂಥ+ಮುಖ= ಕಮಲಮುಖ, ಮುಖವೆಂಬ + ಚಂದ್ರ = ಮುಖಚಂದ್ರ; ಹಿರಿದೂ + ಕಿರಿದೂ=ಹಿರಿಕಿರಿದು; ಪರಮವಾದ+ ತಪಸ್ಸು=ಪರಮತಪಸ್ಸು; ಎರಡು+ತಂಡ= ಇತ್ತಂಡ; ನಲ್ಲನಾದ + ಪ್ರಾಣೇಶ= ನಲ್ಲಪ್ರಾಣೇಶ; ಎರಡು+ಕೆಲಸ= ಇಗ್ಗೆಲಸ; ಬಿಳಿದಾದ + ತಾವರೆ=ಬೆಳ್ದಾವರೆ; ಕೆಂಪಾದ+ತಾವರೆ=ಕೆಂದಾವರೆ; ತಂಪಾದ+ಗಾಳಿ= ತಂಗಾಳಿ; ಮೂರು+ ಲೋಕ = ಮೂಲೋಕ; ಕರಿದು + ಮೋಡ = ಕಾರ್ಮೋಡ; ತಾವರೆಯಂತೆ+ಮೊಗ=ಮೊಗದಾವರೆ.

ದ್ವಿಗು ಪೂರ್ವಪದ ಸಂಖ್ಯಾವಾಚಕ; ಉತ್ತರಪದ ಮುಖ್ಯ.

ಚತುರ್+ಬಲಂ=ಚತುರಬಲಂ
ನೂರು+ಎಲೆ= ನೂರೆಲೆ
ಪಂಚ+ಇಂದ್ರಿಯ=ಪಂಚೇಂದ್ರಿಯ } ಇಮ್ಮಡಿ, ತ್ರಿಕರಣ, ಷಡ್ಗುಣ ಮೂಲೋಕ, ಮುಂತಾದವುಗಳು ಇದರಂತೆಯೆ

ಬಹುವ್ರೀಹಿ—ಎರಡೂ ಪದಗಳು ಅಮುಖ್ಯ, ಹೊರಗಿನ ಪದದ ಸೂಚನೆ ಉದಾ-ನಿಡಿದು+ಮೂಗು ಯಾವನಿಗೆ ಉಂಟೋ ಅವನು=ನಿಡುಮೂಗ; ಎಳೆಯದು ಕಂದ ಉಳ್ಳದ್ದು=ಎಳಗಂದಿ; ಕರಿದಾದ ಕೊರಲುಳ್ಳವನು=ಕರಿಗೊರಲನು; ಮಹತ್ತಾದ ಬಾಹುವುಳ್ಳವನು= ಮಹಾಬಾಹು; ಉತ್ಕಟವಾದ ಪ್ರೇಮವು ಯಾವನಿಗೋ ಅವನು=ಉತ್ಕಟ ಪ್ರೇಮನು, ಉದಾತ್ತ ವೇದದ ಮತಿ ಯಾವನಿಗೋ ಅವನು=ಉದಾತ್ತ ವೇದಮತಿ; ಮೂರು ಕಣ್ಣುಳ್ಳವ (ಶಿವ) = ಮುಕ್ಕಣ್ಣ; ಪಾಣಿಯಲ್ಲಿ+ಚಕ್ರವುಳ್ಳವ (ಕೃಷ್ಣ)=ಚಕ್ರಪಾಣಿ; ದಶಮುಖವುಳ್ಳವನು ಯಾವನೋ ಅವನು (ರಾವಣನು) ದಶಮುಖ; ಹಣೆಯಲ್ಲಿ ಕಣ್ಣುಳ್ಳವನು ಯಾವನೋ ಅವನು (ಶಿವ) ಹಣೆಗಣ್ಣ; ಕಬ್ಬು ಬಿಲ್ಲು ಯಾವನಿಗೋ ಅವನು=ಕಬ್ಬುವಿಲ್ಲಂ (ಕಾಮ)

ದ್ವಂದ್ವ— ಎರಡೂ ಪದಗಳು ಮುಖ್ಯ. ನಾಮಗಳು ಹೆಚ್ಚು ಪದಗಳು ಉದಾ:— ಗಜಗಳೂ+ ಅಶ್ವಗಳೂ+ರಥಗಳೂ= ಗಜಾಶ್ವರಥಗಳು; ಹಣ್ಣೂ + ಹಂಪಲವೂ= ಹಣ್ಣುಹಂಪಲು; ಹತ್ತೂ+ ಒಂದೂ= ಹನ್ನೊಂದು; ತರುವೂ+ಲತೆಯೂ= ತರುಲತೆ; ಹತ್ತೂ + ಎರಡೂ=ಹನ್ನೆ

ರಹು; ರಾಮನೂ+ಕೃಷ್ಣನೂ=ರಾಮಕೃಷ್ಣರು; ಪಕ್ಕಿಗಳ್+ಮಿಗಂಗಳ್= ಪಕ್ಕಿಮಿಗಂಗಳ್.

ಗಮಕ- ಕರ್ಮಧಾರಯದ ಪ್ರಭೇದ, ಪೂರ್ವಪದವು ಕನ್ನಡ ಶಬ್ದವಾಗುವದು. ಹಿರಿದಾದ+ಕೆಲಸ=ಹಿರಿಗೆಲಸ; ಮೂಕೆಯಾದ+ಹುಡಿಗೆ= ಮೂಕಹುಡುಗಿ; ನಗುವನಾದ+ನಂದ= ನಗುನಂದ; ದೊಡ್ಡಿತ್ತಾದ + ಮನೆ= ದೊಡ್ಡಮನೆ; ಯಾವದು+ಮಾತು= ಯಾವಮಾತು; ಕಡೆಯುವದಾದ + ಕೋಲು = ಕಡಗೋಲು; ಇದು+ನೋಟ = ಈನೋಟ; ಸುಡುವ+ಕಾಡು=ಸುಡುಗಾಡು.

ಕ್ರಿಯಾಸಮಾಸ — ಕಾರಕವು ಕ್ರಿಯೆಯೊಡನೆ ಕೂಡುವದು. ಸುಖವನ್ನು + ಪಡು=ಸುಖಪಡು; ಮನಸ್ಸಿನಿಂದ+ಕಾಣು= ಮನಗಾಣು; ಎದೆಯಿಂದ+ಕುಂದು=ಎದೆಗುಂದು; ದುಃಖವನ್ನು + ಪಡು=ದುಃಖಪಡು; ಬಲೆಯಲ್ಲಿ+ಬೀಳು=ಬಲೆಬೀಳು; ಹಿಂದು+ಸರಿ=ಹಿಂಜರಿ; ಗತಿಯಿಂದ+ಕೆಟ್ಟವನು=ಗತಿಗೆಟ್ಟವನು.

ಅಂಶ — ಪೂರ್ವಪದ ಮುಖ್ಯ ಉತ್ತರಪದವು ಅದರ ಅಂಶ-ಭಾಗ ಕೈಯ+ಅಡಿ=ಅಂಗೈ; ಬೆರಳ+ತುದಿ= ತುದಿಬೆರಳು; ಕಾಲಿನ+ ತುದಿ= ತುದಿಗಾಲು; ಕೈಯ + ಮುಂದು= ಮುಂಗೈ; ನಾಲಿಗೆಯ + ತುದಿ= ತುದಿನಾಲಿಗೆ.

ಅರಿಸಮಾಸಃ— ಸಂಸ್ಕೃತ ಹಾಗೂ ಕನ್ನಡ ಹೀಗೆ ಭಿನ್ನ ಭಾಷೆಗಳ ಪದಗಳು ಕೂಡಿ ಸಮಾಸವಾದರೆ ಅದಕ್ಕೆ ಅರಿಸಮಾಸವೆನ್ನುವರು. ಉದಾಃ- ಇದು ಗೃಹವು=ಈ ಗೃಹವು.

ಸಂಸ್ಕೃತ ಕನ್ನಡ ಪದಗಳು ಸಮಾಸ ದೋಷವು. ಉದಾಃ-ಅರಸುಕುಮಾರ, ಮಳೆಗಾಲ.

೧೨. ಮೇಳುನುಡಿ

ಮೇಳುನುಡಿಗಳೆಂದರೆ ಒಂದೇ ಅರ್ಥವನ್ನು ಹೇಳುವ ಅನೇಕ ಶಬ್ದಗಳ.

ಸೂರ್ಯ— ಗಗನಮಣಿ, ರವಿ, ದಿನಕರ, ಕಮಲಮಿತ್ರ, ಇನ, ನೇಸರ, ಭಾಸ್ಕರ, ಬಿಸಂಹಪ್ರಿಯ, ಜಲಜಮಿತ್ರ, ಪ್ರಭಾಕರ, ತರಣಿ,

ದ್ಯುಮಣಿ, ಅರ್ಕ, ಆದಿತ್ಯ, ಉಷ್ಣರಶ್ಮಿ, ದಿನಪ, ಭಾನು, ಮಿತ್ರ, ವಿಭಾಕರ, ಸಪ್ತಾಶ್ವ, ಪಗಲೊಡೆಯ, ಬಿಸಿಗದಿರ, ಸವಿತೃ.

ಆನೆ:— ಗಜ, ಕರಿ, ಕುಂಜರ, ದ್ವಿರದ, ದ್ವಿಪ, ಇಭ, ವಾರಣ, ಸಾಮಜ, ದಂತಿ, ನಾಗ.

ಕಣ್ಣು:—ಅಕ್ಷಿ, ನಯನ, ದೃಗು, ಅಂಬಕ, ಚಕ್ಷು, ನೇತ್ರ

ನೀರು:—ಪಾನೀಯ, ವನ, ಶರ, ಉದಕ, ಜಲ, ವಾರಿ, ಅಂಬು, ಜಡ, ಸಲಿಲ, ಅಪ್, ಅಂಭಸ್, ಜೀವನ, ಉದ, ಕ

ಕಮಲ:—ಅಬ್ಜ, ಅರವಿಂದ, ಪಂಕಜ. ಜಲಜ, ಅಂಬುಜ, ಸರಸಿಜ, ಕುಮುದ, ಕುವಲಯ, ವನಜ, ನಳಿನ, ಅಂಬುರುಹ, ರಾಜೀವ, ಜಡಜ, ಜಲರುಹ, ಶತಪತ್ರ, ಅಂಭೋಜ, ನೈದಿಲೆ, ತಾವರೆ, ವನರುಹ, ಸರೋಜ, ಕಂಜ, ನೈದಿಲ.

ಮರ: ಕುಜ, ಭೂರುಹ, ಮಹೀರುಹ, ವೃಕ್ಷ, ತರು, ಕುಜಾತ, ಪಾದಪ, ಭೂಜ, ಗಿಡ, ವಿಟಪಿ.

ಮನೆ:—ಗೃಹ, ಬೀಡು, ನಿಕೇತನ, ಆಲಯ, ಶಾಲೆ, ಗೇಹ, ಮಂದಿರ, ನಿಲಯ, ಭವನ.

ಕಿರಾತ:—ಶಬರ, ಬೇಡ, ವ್ಯಾಧ, ಲುಬ್ಧಕ, ಭಿಲ್ಲ, ಪುಳಿಂದ.

ಸಮೂಹ:—ಆಕರ, ಆಳಿ, ಒಡ್ಡು, ಓಳಿ, ಕುಲ, ಗುಂಪು, ಚಯ, ತತಿ, ನಿಕರ, ರಾಜಿ, ವೃಂದ, ವ್ರಾತ, ಸಂಕುಲ, ಸಂಚಯ, ಸಂದೋಹ, ವೊತ್ತ, ಸ್ತೋಮ, ನಿಕಾಯ, ರಾಶಿ, ಸಂದಣಿ

ಕೂಸು:—ಅರ್ಭಕ, ಮಗು, ಶಿಶು, ಕಂದ, ಹಸುಳೆ, ವತ್ಸ.

ಅರಸ:—ರಾಜ, ಪಾರ್ಥಿವ, ಅವನಿಪ, ಜನೇಶ್ವರ, ಧರಣೀಶ, ಧರಾವರ, ನೃಪ, ನರಪತಿ, ಭೂಪಾಲ, ಭೂಭುಜ, ಮನುಜೇಂದ್ರ, ಇಳೆಯಾಣ್ಮ ನೆಲದೊಡೆಯ, ನೆಲದೆರೆಯ, ರಾಯ, ಮಹೀಪತಿ, ಭೂಪತಿ, ನರೇಂದ್ರ, ಇಳಾಧೀಶ, ಭೂಮೀಶ, ಧರಿತ್ರೀಪಾಲ, ಜನಪ, ನರನಾಥ, ಜನನಾಥ, ಭೂಕಾಂತ, ಪೃಥ್ವೀಶ, ಧರಿತ್ರೀಶ್ವರ.

ಆಕಾಶಃ— ಆಗಸ, ನಭ್, ನಭ, ಅಂಬರ, ಅಂತರಿಕ್ಷ, ಗಗನ, ಬಯಲು, ಬಾನ್, ವಿಯತ್, ಮುಗಿಲು,

ಕತ್ತಲೆಃ ಅಂಧಕಾರ, ಕಿಳ್, ತಮಸ್, ತಿಮಿರ, ಮಬ್ಬು,

ಕಲ್ಲು— ಅರೆ, ಪಾಷಾಣ, ಶಿಲೆ, ಬಂಡೆ.

ಕಿರಣಃ— ಅಂಶು, ಕರ, ಕದಿರ್, ಮರೀಚಿ, ರಶ್ಮಿ, ರುಚಿ, ರೋಚಿ.

ಕುದುರೆಃ ಅಶ್ವ, ತುರಗ, ತುರಂಗ, ಹಯ, ವಾಜಿ, ಹರಿ, ತೇಜ.

ಕೃಷ್ಣಃ – ಅಸುರಾರಿ; ಮುರಾರಿ; ಹರಿ; ದನುಜರಿಪು; ಮುಕುಂದ; ಗೋವಿಂದ, ಜನಾರ್ದನ, ಮುರಹರ, ಪಕ್ಷಿವಾಹನ, ಮಾರನ, ಪಿತ, ಶ್ರೀಧರ, ತ್ರಿವಿಕ್ರಮ, ಗೋವರ್ಧನ, ಅಂಭುರುಹನಾಭ, ಅಚ್ಯುತ, ಮಧುಸೂಧನ, ದಾನವಾಂತಕ, ದಾಮೋದರ, ನಗಧರ, ವಾಸುದೇವ, ಚಕ್ರಪಾಣಿ, ಗೋಪಾಲ, ಕೇಶವ, ಅಸುರಾಂತಕ, ಕೌಸ್ತುಭಧಾರಿ, ಶೌರಿ, ಕಮಲಾಕ್ಷ, ಕಂಜನಾಭ.

ಕೋಗಿಲೆಃ— ಕಲಕಂಠ, ಕೋಕಿಲ, ಪಿಕ.

ಗಣಪತಿಃ— ಆನೆಮೊಗ, ಗಜಾನನ, ಬೆನಕ, ವಿನಾಯಕ, ವಿಘ್ನೇಶ್ವರ, ಲಂಬೋದರ.

ಗಾಳಿ—ಎಲರ್, ವಾಯು, ಪವನ, ಮಾರುತ, ಪವಮಾನ, ಅನಿಲ, ಮಾತರಿಶ್ವ, ವಾತ, ಸದಾಗತಿ, ಮರುತ್.

ಗಿಳಿ ಕನ್ನಡವಕ್ಕಿ, ಪಂಡಿತವಕ್ಕಿ, ಕೀರ, ಶುಕ.

ಚಂದ್ರ—ಇಂದು, ಇಂಗದಿರ, ಶಶಿ, ಉಡುರಾಜ, ರಜನೀಪತಿ, ತಣದಿರ, ಸೋಮ, ಹಿಮಕರ, ಅಮೃತಕರ, ಕಡಲಣುಗ, ಸುಧಾಕರ, ಕಲಾನಿಧಿ, ಕುಮುದಬಂಧು, ತಿಂಗಳ, ಮೃಗಧರ, ರಾಜ, ಶಶಾಂಕ, ಪರಪ್ರಕಾಶಕ.

ಬಾಣ—ಅಂಬು, ಕಣೆ, ಕೋಲ್, ಶರ, ಸರಳು, ಶರಲ, ನಾರಾಚ, ಪತ್ರಿ, ಪುಣಂಬು, ವಿಶಿಖ, ಮಾರ್ಗಣ, ಕಳಂಬ, ಕೈದು

ಭೂಮಿ—ಅವನಿ, ಇಳಾ, ಉರ್ವಿ, ಕ್ಷಿತಿ, ಕ್ಷೋಣಿ, ನೆಲ, ಪೊಡವಿ, ವಸುಧಾ, ಧರಣಿ, ಧರಾ, ಧಾರುಣಿ, ಪೃಥ್ವಿ, ಭೂಮಂಡಲ, ಮಹಿ, ಭೂ, ಧಾತ್ರಿ, ಕು, ಧರಿತ್ರಿ, ಮೇದಿನಿ, ಭುವನ.

ಭ್ರಮರ—ಅಳಿ, ಅಲರ್ವಕ್ಕಿ, ಆರಡಿ, ತುಂಬಿ, ದ್ವಿರೇಫ, ಭೃಂಗ, ಮಧುಕರ, ಮಧುಪ, ಮಧುವ್ರತ, ಗುಂಗೀಹುಳ.

ಲಕ್ಷ್ಮೀ—ಇಂದಿರಾ, ಕಡಲಣುಗಿ, ಕಮಲಾ, ರಮಾ, ಲೋಕ ಮಾತಾ, ಶ್ರೀ, ಸಿರಿ, ಪದ್ಮಾ.

ಸರಸ್ವತಿ— ನುಡಿವೆಣ್, ಬ್ರಹ್ಮಾಣಿ, ಭಾರತಿ, ವಾಣಿ, ಶಾರದೆ, ಸರಸತಿ, ವಿದ್ಯಾಧಿದೇವತೆ.

ಸರೋವರ – ಕೊಳ, ತಡಾಗ, ನೀರೇರುಹಾಕರ, ಸರ, ಸರಸಿ, ಹೆಗ್ಗೆರೆ.

ಸಮುದ್ರ—ಅಂಬುಧಿ, ಅಬ್ಧಿ, ಕಡಲು, ಜಲಧಿ, ಮುನ್ನೀರು, ವನಧಿ, ವಾರಿಧಿ, ವಾರಿನಿಧಿ, ಉದಧಿ, ಶರಧಿ, ಸಾಗರ, ಅಂಭೋಧಿ.

ಹೂ—ಅರಲ್, ಅಲರ್, ಕುಸುಮ, ಪುಷ್ಪ, ಮಲರ್, ಲತಾಂತ, ಸುಮ, ಸುಮನ.

ಬೆಂಕಿ ಅಗ್ನಿ, ಅನಲ, ಕೃಶಾನು, ಚಿತ್ರಭಾನು, ಪಾವಕ, ಮರಗೂಳ, ವಹ್ನಿ, ಹುತಾಶನ, ಚಿತೆ, ವೈಶ್ವಾನರ.

ಬ್ರಾಹ್ಮಣ - ವಿಪ್ರ, ದ್ವಿಜ, ಭೂಸುರ, ಪಾರ್ವ, ಧರೆಯುಮ್ವಂಡಾರಕ, ಇಳೆಯಪಿರಿಯರ್

ಸೀತೆ - ಭೂಮಿಜೆ, ಅವನಿಜೆ, ಜಾನಕಿ, ಕ್ಷಿತಿಜೆ, ವೈದೇಹಿ, ನೆಲ ವೆಣ್ಣ ಮಗಳು

೨೩. ನಾಣ್ಣುಡಿ

ನಾಣ್ಣುಡಿಗಳು ನಾಡಿನ ನುಡಿಗಳು. ಹಿಂದಿನವರ ಅನುಭವದ ಮಾತುಗಳು. ಮನೆಮನೆಗೆ ಮಾತುಮಾತಿಗೆ ಇವುಗಳ ಬಳಿಕೆ ಆದೆ. ಇವೇ ಗಾದೆಯ ಮಾತುಗಳು

ಗಾದೆಗಳು

ಉಂಡಮನೆಯ ಗಳ ಎಣಿಸಬೇಡ.
ಅಗ್ಗದಾಸೆಗೆ ಮುಗ್ಗುಜೋಳ.
ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈ ಯೊಡ್ಡಿದಂತೆ.
ದುಡ್ಡೇ ದೊಡ್ಡಪ್ಪ, ರೊಕ್ಕವೇ ಚಿಕ್ಕಪ್ಪ.
ನಾಯಿಯ ಹೊಡೆಯಲಿಕ್ಕೆ ಬಣ್ಣದ ಕೋಲೇಕೆ ?
ಸತ್ತ ಎಮ್ಮೆಗೆ ಹತ್ತು ಸೇರು ಹಾಲು.
ರಾವಣನ ಹೊಟ್ಟೆಗೆ ಕಾಸಿನ ಶುಂಠಿ.
ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ !
ಭಾವೀ ತೋಡಲು ಬೇತಾಳ ಹೊರಟಿತು.
ವನ ಹಣ್ಣಾಯಿತು ಗಿಣಿಯ ಬಾಯಿಗೆ ಹುಣ್ಣಾಯಿತು.
ಬೇರನ್ನು ಬಲ್ಲವನಿಗೆ ಎಲೆಯನ್ನು ಹೇಳುವದೇಕೆ ?
ಆಕಾಶ ಹರಿದು ಬೀಳುವಾಗ ಅಂಗೈ ಒಡ್ಡಿದರೆ ನಿಂತೀತೇ !
ಹಿಗ್ಗಿದವನು ಮುಗ್ಯಾನು ತಗ್ಗಿದವನು ಜಯಿಸ್ಯಾನು.
ಜಾಣನಿಗೆ ಮಾತಿನಪೆಟ್ಟು, ಕತ್ತೆಗೆ ಲತ್ತೆಯಪೆಟ್ಟು !
ನಂಬಿದವರಿಗೆ ಇಂಬು, ನಂಬದವನಿಗೆ ಅಂಬು.
ಆಳಾಗಬಲ್ಲವ ಅರಸಾಗಬಲ್ಲ.
ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯವಿಲ್ಲ.
ಹಂಪೆಗಿಂತ ಕೊಂಪೆಯೇ ಲೇಸು.
ಕತ್ತೆಯೇನು ಬಲ್ಲದು ಕಸ್ತೂರಿಯ ಪರಿಮಳ.
ಜಾಣನ ಗೋಣಿ ಬರಿದು.
ಆಜ್ಜಿ ನೂತದ್ದೆಲ್ಲ ಮೊಮ್ಮಗನ ಉಡದಾರಕ್ಕೆ.
ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ.
ಆದರಿಲ್ಲದ ಅಮೃತಾನ್ನವೇಕೆ !
ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ.
ಕಿಚ್ಚು ನುಂಗುವವನು ನುಚ್ಚು ಬಿಟ್ಟಾನೆ ?
ನೆಲುವಿಗೆ ಹಾರದ ಬೆಕ್ಕು ಮುಗಿಲಿಗೆ ಹಾರಿತು.

ಸಾವಿರ ಕುದುರೆಯ ಸರದಾರ, ಮನೆ ಹೆಂಡತಿಗೆ ಪಿಂಜಾರ.

ಮನಸ್ಸಿನಲ್ಲಿ ಮಂಡಿಗೆ ಮಾಡಿದರೆ, ಗೋದಿಲೆಕ್ಕ ಕೊಡುವವರಾರು?

ಇದ್ದ ಮೂವರಲ್ಲಿ ಕದ್ದವರಾರು ?

ಉದ್ಯೋಗವೇ ಬಂಧು, ಆಲಸ್ಯವೇ ಶತ್ರು.

ಒಡಕೇ ಕೆಡಕಿನಮೂಲ.

ಅಂಗಾಲಿಗೆ ಹೇಸಿಕೆಯಿಲ್ಲ, ಕರುಳಿಗೆ ನಾಚಿಕೆಯಿಲ್ಲ.

ಕರಡಿಗಂಜದವನು ಕರಿಯ ಕಂಬಳಿಗಂಜುವನೇ ?

ಕಾಸಿಗೆ ಪಂಚೇರಾದರೂ ಹೇರಿಗೆ ಬರ ತಪ್ಪದು.

ಕೋಣ ಬೆಳೆದರೆ ಆನೆಯಾದೀತೇ ?

ಭವಿಷ್ಯವು ಅಂಗೈಯಲ್ಲಿಲ್ಲ, ಮುಂಗೈಬಲದಲ್ಲಿರುವುದು.

ತನ್ನ ಬಿಟ್ಟು ದೇವರಿಲ್ಲ; ಮಣ್ಣು ಬಿಟ್ಟು ಮಡಿಕೆಯಿಲ್ಲ.

ಮೂಗು ಹಿಡಿದರೆ, ಬಾಯಿ ತಾನೇ ತೆರೆಯುವದು.

ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು.

ವಿದ್ಯೆವಿಲ್ಲದವ ಹದ್ದಿಗಿಂತಕಡೆ !

ಒಂದೇ ಕೈಯಿಂದ ಚಪ್ಪಾಳೆಯಾಗುವದಿಲ್ಲ.

ಹಣವೆಂದರೆ ಹೆಣವು ಬಾಯಿ ತೆರೆಯಿತಂತೆ !

ಹುತ್ತು ಬಡಿದರೆ ಹಾವು ಸಾಯುವುದೇ ?

ಹೆತ್ತವರಿಗೆ ಹೆಗ್ಗಣವೇ ಮುದ್ದು.

ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ.

ಹನಿ ಹನಿ ಕೂಡಿ ಹಳ್ಳ, ತೆನೆ ತೆನೆ ಕೂಡಿ ರಾಶಿ.

ಬಡವನ ಸಿಟ್ಟು ದವಡೆಗೆ ಮೂಲ,

ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ.

ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಿಸಿತು.

ಕೋಣನಿಗೆ ತಂಬೂರಿಯ ನಾದ ತಿಳಿದೀತೇ ?

ನಡೆಯುವವನು ಎಡವುವನಲ್ಲದೆ ಕುಳಿತವನು ಎಡವುವನೇ ?

೧೪. ಜಾಣ್ಣುಡಿ

ಹಿಂದಿನ, ಇಂದಿನ ಹಿರಿಯರ ಜಾಣ್ಣುಡಿ, ಮುನ್ನುಡಿಗಳಿವು. ಇವು ಮಹಾತ್ಮರ ಮಹತ್ವದ ಮನವರಿಯುವ, ಅನುಭವದ ಮಮತೆಯ ಮಾತುಗಳು ಓದು ಬೆಳೆದಂತೆ ಇವುಗಳ ಸಂಗ್ರಹ ಹೆಚ್ಚಿಸಲು ಅನುಕೂಲ.

ಬುಕರನ ಜಾಣ್ಣುಡಿಗಳು

(೧) ಪ್ರತಿಯೊಬ್ಬರು ತಮ್ಮ ಯಶಸ್ಸಿನ ಬೆಲೆಯನ್ನು ತಾವು ತೊಂದರೆಗಳಿಗೆ ಎದೆಗೊಟ್ಟು ಎಷ್ಟು ಕಾದಿದೆವು ಎಂಬುದರ ಮೇಲಿಂದ ನಿಶ್ಚಯಿಸಬೇಕು.

(೨) ಯೋಗ್ಯತೆಯು ಅಥವಾ ಶ್ರೇಷ್ಠತೆಯು ಯಾವದೇ ಬಣ್ಣದ ಮನುಷ್ಯರಲ್ಲಿರಲಿ, ಕಡೆಗೆ ಅದು ಪ್ರಕಟವಾಗುವದು ಹಾಗೂ ವಿಜಯಿಯಾಗುವದು.

(೩) ಎರಡನೆಯವರ ಏಳ್ಗೆಗೆ ತಾನು ಎಷ್ಟು ಸಹಾಯ ಮಾಡುವನೋ ಅಷ್ಟೇ ತನ್ನ ಏಳ್ಗೆಯಾಗುವದು

(೪) ದುಡಿಯೋಣವು ಲಜ್ಜಾಸ್ಪದವಾದ ಸಂಗತಿಯಲ್ಲ. ತಿರುಗಿ ಸ್ವಂತಶ್ರಮದಿಂದ ಸ್ವಂತದ ಉನ್ನತಿಯನ್ನು ಮಾಡಿಕೊಳ್ಳುವದು, ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯಾಗಿದೆ.

(೫) "ಜನರೆದುರಿಗೆ ನಿರುಪಯೋಗಿಯಾದ ವ್ಯಾಖ್ಯಾನವನ್ನು ಕೊಡುವಷ್ಟು ಅಸಮಾಧಾನಕಾರಕ ವಿಷಯವು ನಿಜವಾಗಿಯೂ ಬೇರೊಂದಿಲ್ಲ."

(೬) ಸ್ವಾರ್ಥತ್ಯಾಗದಲ್ಲಿ ನಿಜವಾದ ಸುಖವಿರುತ್ತದೆ.

ಸ್ವಾಮೀ ರಾಮತೀರ್ಥರ ಜಾಣ್ಣುಡಿಗಳು

(೭) "ಯಾರು ಬಹುಕಾಲ ಜೀವಿಸಬೇಕೆನ್ನುವರೋ ಅವರು ತೀವ್ರ ಮರಣಕ್ಕೆ ಸಿದ್ಧರಾಗಬೇಕು "

(೮) “ ನಿಸ್ವಾರ್ಥಬುದ್ಧಿಯಿಂದ ಕೆಲಸ ಮಾಡುವ ಮನುಷ್ಯನ ಭಾರವು ಪರಮೇಶ್ವರನ ಮೇಲೆ ಬೀಳುವದು. ಹಾಗೂ ಪರಮೇಶ್ವರನು ಅದನ್ನು ವಹಿಸಿದ ಹೊರತು ಎಂದೂ ಸುಮ್ಮನಿರುವದಿಲ್ಲ.”

ವಾಶಿಂಗ್ಟನ್ನನ ಜಾಣ್ನುಡಿ

(೯) “ಮನುಷ್ಯನ ಯೋಗ್ಯತೆಯನ್ನು ಅವನು ಮಾಡಿದ ಕಾರ್ಯದ ಮೇಲಿಂದ ನಿರ್ಣಯಿಸುವಾಗ, ಅವನು ಆ ಕಾರ್ಯಕ್ಕೆ ಬಂದ ಎಡರುಗಳೊಡನೆ ಎಷ್ಟರಮಟ್ಟಿಗೆ ಹೆಣಗಾಡಿದನೆಂಬುದನ್ನು ಲಕ್ಷ್ಯಕ್ಕೆ ತರಬೇಕು ”

ಬೆಂಜಮಿನ್ ಫ್ರಾಂಕಲಿನ್ ಇವನ ಜಾಣ್ನುಡಿಗಳು

(೧೦) ಆರ್ಜಿತ ದ್ರವ್ಯವನ್ನು ನಿನಗಾಗಲಿ, ಹೆರರಿಗಾಗಲಿ ಸೌಖ್ಯವಾಗುವ ರೀತಿಯಲ್ಲಿ ವಿನಿಯೋಗಿಸು; ತಿಲಾಂಶದಷ್ಟು ನಷ್ಟಮಾಡಬೇಡ.

(೧೧) ಕಾಲವನ್ನು ಸುಮ್ಮನೆ ಕಳೆಯಬೇಡ. ಯಾವದಾದರೂ ಉಪಯೋಗವಾಗುವ ಕೆಲಸವನ್ನು ಮಾಡುತ್ತಿರು; ನಿರರ್ಥಕವಾದ ವಿಷಯವನ್ನು ತೊರೆ.

(೧೨) ಜನಗಳಿಗೆ ಕೇಡನ್ನು ಬಗೆದಾಗಲಿ ಅಥವಾ ಮಾಡಬೇಕಾದ ಸಹಾಯವನ್ನು ಮಾಡದೆಯಾಗಲಿ ಅಪರಾಧಿಯೆನ್ನಿಸಬೇಡ.

(೧೩) ಶರೀರದಲ್ಲಾಗಲಿ,ಉಡುಪಿನಲ್ಲಿಯಾಗಲಿ, ಮನೆಯಲ್ಲಾಗಲಿ, ಯಾವ ವಿಧವಾದ ಕೊಳೆಯನ್ನು ಇರಗೊಡಿಸಬೇಡ.

ಜವಾಹರಲಾಲ ನೆಹರು ಇವರ ಜಾಣ್ನುಡಿ

(೧೪) ಯಶಸ್ಸು ಸ್ವಾಭಾವಿಕವಾಗಿ ಧೈರ್ಯವುಳ್ಳವರಿಗೂ ದುಡಿಯುವವರಿಗೂ ದೊರೆಯುತ್ತದೆ. ಅದು ಕ್ವಚಿತ್ತಾಗಿ ಹೇಡಿಗೆ ಲಭಿಸುತ್ತದೆ.

ಮಹಾತ್ಮಾ ಗಾಂಧಿಯವರ ಜಾಣ್ನುಡಿ

(೧೫) ಜಾಣನೆನಿಸಿಕೊಳ್ಳುವದು ಸುಲಭ; ಸತ್ಯವಂತನೆನಿಸಿಕೊಳ್ಳುವದು ದುರ್ಲಭ, ಸತ್ತರೂ ಸತ್ಯ ಬಿಡಲಾರೆ. ಅದೇ ಧರ್ಮ,ಅದೇ ಕರ್ಮ, ಅದೇ ತಾಯಿ ತಂದೆ. ಸತ್ಯಾಗ್ರಹಕ್ಕೆ ಹೆಚ್ಚಿನ ಕಸುವು ಬೇಡ, ಕಲಿತನವು ಬೇಡ. ಕಂದ ಪ್ರಹ್ಲಾದನಲ್ಲಿ ಏನಿತ್ತು ? ನಿಶ್ಚಯ ಒಂದೇ.

ಬಸವಣ್ಣನವರ ವಚನಗಳು

(೧) ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ.

(೨) ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮಾನವ ಸಂತೈಸಿಕೊಳ್ಳಿ ನೆರೆಮನೆಯವರ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವ.

(೩) ದಯವಿಲ್ಲದ ಧರ್ಮವದಾವುದಯ್ಯ ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ದಯವೇ ಧರ್ಮದ ಮೂಲವಯ್ಯ ! ಕೂಡಲ ಸಂಗಯ್ಯ ನಂತಲ್ಲದೊಲ್ಲನಯ್ಯ.

(೪) ನೀರ ಕಂಡಲ್ಲಿ ಮುಳುಗುವರಯ್ಯ. ಮರನ ಕಂಡಲ್ಲಿ ಸುತ್ತುವರಯ್ಯ ! ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು. ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ.

(೫) ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಗ್ಯ ತೀರಿದಲ್ಲದೆ ದಾರಿದ್ರ್ಯವಿಲ್ಲ, ಅಂಜಲೇಕೋ ಲೋಕವಿಗರ್ಭಣೆಗೆ ? ಅಳುಕಲೇಕೋ ಕೂಡಲಸಂಗಮದೇವ ? ನಿಮ್ಮಾಳಾಗಿ ?

೧೫. ಅಲಂಕಾರಗಳು

ಸ್ತ್ರೀಯರಿಗೆ ಆಭರಣಗಳು ಅಲಂಕಾರವಾಗಿರುವಂತೆ, ಭಾಷೆಗೆ ಶಬ್ದಾರ್ಥಗಳಿಂದ ಅಲಂಕಾರ ಉಂಟಾಗುವದು; ಸೌಂದರ್ಯದ ಸವಿಯು ಶಬ್ದಗಳಿಂದ ಪ್ರಕಟವಾಗಿದ್ದರೆ ಅದಕ್ಕೆ ಶಬ್ದಾಲಂಕಾರವೆಂದೂ ಭಾವಗಳಿಂದ ಬೈಲಿಗೆ ಬಂದಿದ್ದರೆ, ಅದಕ್ಕೆ ಅರ್ಥಾಲಂಕಾರವೆಂದೂ ಅನ್ನುವರು.

ಶಬ್ದಾಲಂಕಾರ: ಶಬ್ದಗಳಿಂದ ಇಂಪು, ಕಂಪು ಉಂಟಾಗಿ ಅವು ನಾದಮಾಧುರ್ಯದ ಸವಿಯನ್ನು ಸವಿಯು ಹೆಚ್ಚುತ್ತವೆ

ಉದಾ: -(೧) ನಮ್ಮ ನುಡಿಯು ಜಗತ್ತಿನ ತಿರುಳನ್ನೂ ಜಗದೀಶನ ಹುರುಳನ್ನೂ ತೋರಿಸುವ ಕನ್ನಡಿಯಾಗಬೇಕು ಜಗತ್ತಿನ ಸೊಬಗನ್ನೂ

ಜಗದೀಶನ ಸೊಗಸನ್ನೂ ಸವಿಸವಿದು ನಲಿಯುವ ನಾಲಿಗೆಯಾಗಬೇಕು. (ಇದರಲ್ಲಿ ತಿರುಳು ಹುರುಳು, ಸೊಬಗು ಸೊಗಸು, ನಲಿಯುವ ನಾಲಿಗೆ ಇತ್ಯಾದಿಗಳು ಅಲಂಕಾರಂಗಳು; ವಾಕ್ಯಗಳನ್ನು ಓದುವಾಗ ಇವು ಕಿವಿಗೆ ಕಂಪನ್ನೂ ಪೆಂಪನ್ನೂ ಇಂಪನ್ನೂ ತಂಪನ್ನೂ ಸೊಂಪನ್ನೂ ಕೊಟ್ಟು ಕುಣಿಸುವವು.)

ತಪ್ಪ ತಪ್ಪಲೊಳಲ್ಲಿಗಲ್ಲಿ ಮಂಜುಗಳೆಸೆ ।
ಕಪ್ಪ ಕಪ್ಪನೆಯ ಗಿರಿಗಳ ಪರ್ಬುಗೆಗಳಂತೆ ।
ಬಪ್ಪ ಬಪ್ಪೆಳೆ ನಾಯ್ಗಳಂ ಹಾಸೊಳತಿಂತು ಬಂದದು ಶಬರಸೇನೆ
ಬಳಿಕ ॥
ಸೊಪ್ಪು ಸೊಪ್ಪುಗಳ ಮೆಳೆ ಮೆಳೆಗಳಂ ಸೋವುತ್ತ ।
ತಪ್ಪ ತಪ್ಪದೆಶರ ಶರಂಗಳಿಂ ತಗಪಚ್ಚು ।
ತೊಪ್ಪ ತೊಪ್ಪನೆ ವ್ಯಾಘ್ರಂಗಳಂ ಕೆಡಹಿದರ್ಕಾನನದೊಳೇ
ಪೇಳ್ವೆನು ॥೨॥

ಮೇಲಿನ ಪದ್ಯದಲ್ಲಿ ಗೆರೆಹಾಕಿದ ಶಬ್ದಗಳು ಒಂದೇ ಪ್ರಕಾರದ ಧ್ವನಿಯನ್ನು ಉಂಟುಮಾಡುವಂಥವು ಇರುತ್ತವೆ. ಇಲ್ಲಿ ಕವಿಯ ಶಬ್ದ ಮಾಧುರ್ಯ, ಶಬ್ದ ಸಂಗ್ರಹಗಳನ್ನು ನಿರೀಕ್ಷಿಸಬಹುದು.

ಅರ್ಥಾಲಂಕಾರ: ಇವುಗಳಲ್ಲಿ (೧) ಉಪಮೆ, (೨) ರೂಪಕ, (೩) ಉತ್ಪ್ರೇಕ್ಷೆ, (೪) ಶ್ಲೇಷ ಎಂಬವು ಮುಖ್ಯವಾದವುಗಳು. ಅವುಗಳ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ. ಅರ್ಥಾಲಂಕಾರಗಳು ಅರ್ಥ ಚಮತ್ಕೃತಿಯನ್ನೂ ಭಾವಗಳ ಭ್ರಮಣವನ್ನೂ ತೋರಿಸುವವು.

(೧) ಉಪಮೆ:— ಎರಡು ವಸ್ತುಗಳಿಗೆ ಪರಸ್ಪರರಾಗಿ ಇರುವ ಸಾದೃಶ್ಯ [ಹೋಲಿಕೆ] ಹೇಳುವದು ಉಪಮಾಲಂಕಾರ. ಹೋಲಿಕೆಯನ್ನು ಕೊಡುವ ವಸ್ತುವು ಉಪಮಾನ. ಹೋಲಿಸಿಕೊಳ್ಳುವ ವಸ್ತುವು ಉಪಮೇಯವು.

ಉ:— ಮನವು—ಉಪಮೇಯ, ಮರ್ಕಟ ಉಪಮಾನ. ಅಂತೆ ಅಂತಿರೆ, ಅಂತೆವೊಲ್, ವೊಲ್, ತೆರದಿಂ ಪಾಂಗೆ ಎಂಬ ಶಬ್ದಗಳು ಉಪಮಾನ ವಾಚಕಗಳ ಮುಂದೆ ಬರುವವು.

ಉದಾ:— (೧) ಮನವು ಮರ್ಕಟದಂತೆ ಇರುವದು. (೨) ವರ ವಾಮನ ತ್ರಿವಿಕ್ರಮನಾದ ಪೋಲ್ ಹನುಮನು ಬೆಳೆದನು. (೩) ಮೂಡಲು ಬಾಲಸೂರ್ಯನನ್ನು ಹೆರುವಂತೆ ನೀನು ಸುಪುತ್ರನನ್ನು ಹೆರು. (೪) ಬಂಗಾರಕ್ಕೆ ಸುಗಂಧ ಕೂಡಿಸಿದಂತಾಗುವದು (೫) ಮುಖವು ಕಮಲ ದಂತೆ ಸುಂದರವು.

(೨) ರೂಪಕ:— ಉಪಮಾನ ಉಪಮೇಯ ವಸ್ತುಗಳನ್ನು ಒಂದ ರಂತೆ ಮತ್ತೊಂದು ಇದೆ ಎಂದು ಅವುಗಳ ಹೋಲಿಕೆ ಕಾಣುವಂತೆ ವರ್ಣಿ ಸದೆ ಒಂದು ಮತ್ತೊಂದೆಯೇ ಎಂದು ವರ್ಣಿಸುವದು ರೂಪಲಂಕಾರ ವೆನಿಸುತ್ತದೆ.

ಉ:—(೧) ಮನವು ಮರ್ಕಟ (೨) ಅಂಘ್ರಿಕಮಲ (೩) ಮುಖ ಚಂದ್ರ. (೪) ಕಮಲ ಮುಖಿ.

[೩] ಉತ್ಪ್ರೇಕ್ಷೆ:—ಒಂದಾನೊಂದು ಪದಾರ್ಥವನ್ನು ಮತ್ತೊಂದು ಪದಾರ್ಥವನ್ನಾಗಿ ಸಂಭಾವನೆ ಮಾಡುವದೇ ಉತ್ಪ್ರೇಕ್ಷೆಯೆನಿಸಿಕೊಳ್ಳು ವದು. ಹಾಗೆ ಹೇಳುವಾಗ ಮತ್ತೊಂದರ ಧರ್ಮವು ಒಂದಾನೊಂದು ಪದಾರ್ಥವೆಂದು ಹೇಳಬೇಕು ವರ್ಣ್ಯದಲ್ಲಿ ಇದ್ದೇ ಇರಬೇಕು. ಇದರಲ್ಲಿ ಉಪಮಾನವಾಚಕ ಪದಗಳ ಮುಂದೆ ಓ, ಎನೆ, ಏನೋ, ಎಂಬಂತೆ ಎಂಬ ಶಬ್ದಗಳು ಸೇರುವವು.

ಉದಾ:— [೧] ಮಣಿಕಮಂಡಲವು ಕೇಸರ ಫಲವೆಂಬಂತೆ ಒಪ್ಪಿ ದುದು. [೨] ಘರ್ಮಬಿಂದು ಚಯವು ಮುತ್ತುಗಳೋ ಏನೋ, ಎಂಬಂತೆ ಉದುರಿದವು. [೩] ಬಿದಿಗೆಯ ಚಂದಿರನೆನೆ ಕುಮಾರನು ಬೆಳೆಯು ತ್ತಿದ್ದನು.

[೪] ಶ್ಲೇಷ: ಒಂದೇ ಮಾತಿಗೆ ಅನೇಕ ಅರ್ಥಗಳಿದ್ದು, ಅವುಗ ಳನ್ನು ಬೇರೆ ಬೇರೆ ಸಂದರ್ಭಗಳಿಗೆ ಹಚ್ಚುವದು ಶ್ಲೇಷಾಲಂಕಾರವು.

ಉದಾ: [೧] ಫಲಗುಣಂ ಪಾಲಿಪಂ ನಾಲ್ಕಡಿಯುದೊಂದು ಹರಿಯುಂ ನಿನಗದರ ಚಿಂತೆಬೇಡ ಪಾರ್ಥನಂ ರಕ್ಷಿಸುವ ಹರಿಯುನೆ ಹಿಡಿವ

ಬುದ್ಧಿಯನ್ನೆ ಮಾಡು. [೨] ಕನ್ಯಾವಿಕ್ರಯಂಗೈದು ಜೀವಿಸುವ ಮಾನವನ ಪಿತೃಗಳಂತೆ, ದೊರೆಗಳು ಸಮರದೊಳ್ ಪತಿತರಾದರು.

[೧] ಅರ್ಜುನನು ರಕ್ಷಿಸುವ ನಾಲ್ಕು ಕಾಲಿನ ಹರಿಯ (ಕುದುರೆಯ) ಚಿಂತೆಬೇಡ. ಆದರೆ ಅರ್ಜುನನನ್ನು ರಕ್ಷಿಸುವ ಹರಿಯನ್ನು (ಕೃಷ್ಣನನ್ನು) ಹಿಡಿಯುವ ಬುದ್ಧಿಯನ್ನು ಮಾಡು. ಇಲ್ಲಿ ಹರಿ ಶಬ್ದವನ್ನು ಎರಡು ಅರ್ಥಗಳಲ್ಲಿ ಉಪಯೋಗಿಸಿದ್ದಾರೆ.

[೨] ಕನ್ಯಾವಿಕ್ರಯ ಮಾಡಿಕೊಂಡು ಜೀವಿಸುವವರು ಹೇಗೆ ನರಕದಲ್ಲಿ ಬೀಳುವರೋ, ಹಾಗೆಯೇ ಯುದ್ಧದಲ್ಲಿ ದೊರೆಗಳು ನೆಲಕ್ಕೆ ಬಿದ್ದರು ಇಲ್ಲಿ ಪತಿತರಾದರು. ಎಂಬದಕ್ಕೆ ಎರಡು ಅರ್ಥಗಳುಂಟು.

ಪ್ರ:—ಕೆಳಗಿನ ಮಾತಿನಲ್ಲಿರುವ ಅಲಂಕಾರಗಳನ್ನು ಹೇಳಿರಿ.

“ಭೀಮಸೇನನು ಕೌರವ ಸೇನೆಗೆ ಯಮನಂತೆ ಭಯಂಕರನಾಗಿ ತೋರಿದನು.” ಇದೇ ವಾಕ್ಯವನ್ನು ರೂಪಕಾಲಂಕಾರದಲ್ಲಿಯೂ ಉತ್ಪ್ರೇಕ್ಷಾಲಂಕಾರದಲ್ಲಿಯೂ ಹೇಳಿರಿ. [೧೯೪೮]

ಉ:—ಇದು ಉಪಮಾನಾಲಂಕಾರವು.

ರೂಪಕ: ಭೀಮಸೇನನು ಕೌರವ ಸೇನೆಗೆ ಯಮನು.

ಉತ್ಪ್ರೇಕ್ಷೆ:- ಭೀಮಸೇನನು ಕೌರವಸೇನೆಗೆ ಯಮನೋ ಎಂಬಂತೆ ಭಯಂಕರವಾಗಿ ತೋರಿದನು.

ಪ್ರ: ಎಳೆನಗೆ ಬೆಳದಿಂ। ಗಳದಿಂ ವದನಕ। ಮಲವೆನ್ನದು ನಲಿದಲಿರುವದು॥ ಇಳೆಯೊಳಗಿದರಾ। ಬಲುಸೋಜಿಗವನು। ತಿಳಿಯೆನು ತರುಳನೆ ನಗುನಗು ನೀ॥ ೧॥

ಈ ನುಡಿಯಲ್ಲಿರುವ ಅಲಂಕಾರಗಳನ್ನು ವಿಶದಪಡಿಸಿರಿ. [೧೯೪೫]

ಉ: ವದನ ಕಮಲ–ರೂಪಕ, ಎಳೆನಗೆ ಬೆಳದಿಂಗಳದಿಂ ಉಪಮೆ

ಪ್ರ:— ಉಪಮೆ, ಹಾಗೂ ಶ್ಲೇಷಾಲಂಕಾರಗಳಿಗೆ ಒಂದೊಂದು ಉದಾಹರಣೆ ಕೊಡಿರಿ.

ಉ:— ಉಪಮೆ: ಕಮಲದಂತೆ ವದನ; ಉತ್ಪ್ರೇಕ್ಷೆ:—ವದನವು ಕಮಲವೋ ಏನೋ ಎಂಬಂತೆ ತೋರಿತು.

ಪ್ರ:—ಕೆಳಗಿನ ವಾಕ್ಯಗಳಲ್ಲಿದ್ದ ಅಲಂಕಾರಗಳು ಯಾವವು? ಅವುಗಳ ಲಕ್ಷಣಗಳೇನು? [೧೯೪೭]

ಆಕೆಯು ದುಃಖಾಗ್ನಿಯಲ್ಲಿ ಬೆಂದು ಅಳುತ್ತಿರಲು, ದಿಗಂಗನೆಯರು ಅಳುತ್ತಾರೋ ಏನೋ ಅನ್ನುವಂತೆ ಎಲ್ಲ ದಿಕ್ಕುಗಳಿಂದಲೂ ಪ್ರತಿಧ್ವನಿಯಾಯಿತು

ಉ:— ದುಃಖಾಗ್ನಿ-ರೂಪಕ ಲಕ್ಷಣ, ಹೋಲಿಕೆಗಳಲ್ಲಿ ಭೇದವಿರುವದಿಲ್ಲ.

ದಿಗಂಗನೆಯರು ರೂಪಕ.

ದಿಗಂಗನೆಯರು ಅಳುತ್ತಾರೋ ಏನೋ ಅನ್ನುವಂತೆ—ಉತ್ಪ್ರೇಕ್ಷೆ ಉಪಮೇಯವು ಉಪಮಾನವೋ ಏನೋ ಎಂಬುವಂತೆ ಬಣ್ಣಿಸಿದಲ್ಲಿ ಈ ಅಲಂಕಾರವಾಗುವದು.

ಪ್ರ: - ಸಂಹಾರ ಲೀಲೆಯಲಿ ತೊಡಗಿಹನು....ಉರಿಗಣ್ಣ....ಎಂಬ ಪದ್ಯದಲ್ಲಿ ನಿಮಗೆ ಕಂಡುಬರುವ ಅಲಂಕಾರಗಳು ಯಾವವು? ಅವುಗಳ ಲಕ್ಷಣಗಳನ್ನು ಹೇಳಿರಿ. [೧೯೪೮]

ಉ: [ಗುಣವಿವೇಚನೆ ಪ್ರಕರಣದಲ್ಲಿ ಪದ್ಯವನ್ನು ನೋಡಿರಿ] ಸಂಹಾರ ಲೀಲೆ, ಪ್ರಲಯವೇ ರುದ್ರಾವತಾರ, ರಕ್ತ ನದಿ, ಶಾಂತಿ ಜಲ, ಇವು ರೂಪಕಾಲಂಕಾರಗಳು.

ಪ್ರ:—'ವರುಣ ದೇವತೆ ಮುತ್ತುಗಳನಿತ್ತು ಭೂದೇವಿ........'ಎಂಬ ಪದ್ಯವನ್ನು ಓದಿಕೊಂಡು ಅದರಲ್ಲಿ ನಿಮಗೆ ಕಂಡು ಬರುವ ಅಲಂಕಾರಗಳನ್ನು ಹೇಳಿರಿ. ಲಕ್ಷಣ ಬರೆಯಿರಿ. [illegible]

[ಸರಳಾನುವಾದ ಪ್ರಕರಣದಲ್ಲಿ ಪದ್ಯವನ್ನು ನೋಡಿರಿ]

ಉ: - 'ಪೂಮಳೆ' ಇದು ರೂಪಕಾಲಂಕಾರ. 'ವರುಣ ದೇವತೆ' ಇದು ರೂಪಕಾಲಂಕಾರ.

೧೬. ಪದಸಮೂಹಕ್ಕೆ ಒಂದೇ ಶಬ್ದ

ಚಂದ್ರನ ತಂಪಾದ ಕಿರಣ= ಬೆಳದಿಂಗಳು (ಚಂದ್ರಿಕೆ)
ಔಷಧಕ್ಕೆ ಉಪಯೋಗವಾಗುವ ಗಿಡಬಳ್ಳಿಗಳು=ವನಸ್ಪತಿ (ಓಷಧಿ)
ಗುರುಹಿರಿಯರು ಹೇಳಿದಂತೆ ಕೇಳುವವ= ಆಜ್ಞಾಧಾರಕ.
ಮಾಡಿದ ಉಪಕಾರ ಸ್ಮರಿಸುವವ=ಕೃತಜ್ಞ
ಬಹಳ ಎತ್ತರವಾದದ್ದು = ಅತ್ಯುನ್ನತ.
ಒಂದೇಸವನೆ ದುಡಿಯುವವ=ಸತತೋದ್ಯೋಗಿ.
ಒಳ್ಳೇ ಉದ್ದವೂ ಅಗಲವೂ ಇದದ್ದು = ವಿಶಾಲ

ಪರರಿಗೆ ಆಗುವ ಸುಖದುಃಖಗಳು ತನಗೆ ಆಗುತ್ತವೆಂದು ತಿಳಿಯುವ ಗುಣ=ಸಹಾನುಭೂತಿ.

ಹಿಡಿದ ಕೆಲಸವನ್ನು ದಕ್ಷತೆಯಿಂದ ಮಾಡುವ ಗುಣ=ಕರ್ತವ್ಯದಕ್ಷತೆ

ಹೊಟ್ಟೆಗೆ ಸಹಾ ಪೂರಾ ತಿನ್ನದೆ ಪೈಗೆ ಪೈ ಕೂಡಿಸುವವ=ಕೃಪಣ
ಇದ್ದುದನ್ನು ಮುಚ್ಚಿ ಇಲ್ಲದುದನ್ನು ಬಿಚ್ಚಿ ಹೇಳುವವ=ಠಕ್ಕ.
ಮನೆಮಾಡಿಕೊಂಡು ಇರುವವ=ಗೃಹಸ್ಥ
ರಥವನ್ನು ಹೊಡೆಯುವವ= ಸಾರಥಿ.
ವಿರೋಧಿಯನ್ನು ಕಂಡಕೂಡಲೆ ಓಡಿಹೋಗುವವ=ಹೇಡಿ
ಮಾತುಮಾತಿಗೂ ಕಲಹ ಮಾಡುವವ=ಜಗಳಗಂಟ.

ಒಂದು ಅರಸೊತ್ತಿಗೆ ಹೋಗಿ ಇನ್ನೊಂದು ಬರುವದು=ರಾಜ್ಯಕ್ರಾಂತಿ
ದುಡ್ಡಿಗೂ ಜೀವಕ್ಕೂ ಗಂಟು ಎನ್ನುವ ಗುಣ=ಜಿಪುಣತನ.
ಯುದ್ಧಕ್ಕೆ ಅಂಜಿ ಓಡಿ ಹೋದವನು=ಉತ್ತರಕುಮಾರ
ಬದುಕಿದ್ದರೂ ಸತ್ತಂತಿದ್ದವ= ಜೀವನ್ಮೃತ
ಗುರುವಿನಲ್ಲಿ ಪೂಜ್ಯ [illegible] ವುಳ್ಳವ=ಗುರುಭಕ್ತ.
ತನ್ನ ಕೆಲಸವನ್ನು ತಾನೇ ಮಾಡುವವ= ಸ್ವಾವಲಂಬಿ
ಪ್ರಪಂಚದಲ್ಲಿ ವೈರಾಗ್ಯವನ್ನು ತಳೆದವ= ಬೈರಾಗಿ

ಎಲ್ಲವನ್ನು ತಿಳಿದವ= ಸರ್ವಜ್ಞ.

ಮನೆಗಳನ್ನು ಕಟ್ಟುವವ=ಉಪ್ಪಾರ.

ದಿನಕ್ಕೊಮ್ಮೆ ಹೊರಡುವ ವೃತ್ತಪತ್ರಿಕೆ= ಪಾಕ್ಷಿಕ.

ಹಾಯಸ್ಕೂಲುಗಳಲ್ಲಿ ಕೊಡುವ ಶಿಕ್ಷಣ= ಮಾಧ್ಯಮಿಕ ಶಿಕ್ಷಣ.

ದೇಶಕ್ಕೆ ಹಿತವನ್ನೆಣಿಸುವವ=ದೇಶಹಿತಚಿಂತಕ. (ದೇಶಹಿತೈಷಿ)

ಗಂಡಾಂತರದಲ್ಲಿ ತಕ್ಕ ಉಪಾಯಕ್ಕೆಕೊಳ್ಳುವ ಜಾಣ್ಮೆ= ಪ್ರಸಂಗಾವಧಾನ.

ನಮ್ಮ ದೈವದಲ್ಲಿ ಇದ್ದದ್ದು = ಹಣೆಬರಹ. (ನಸೀಬ)

ತನಗೆ ಗೊತ್ತಿದ್ದ ಎಲ್ಲ ಸಂಗತಿಗಳನ್ನು ಎಲ್ಲರಿಗೂ ಹೇಳುತ್ತ ಹೋಗುವವ= ಬಾಯಿಬಡಕ.

ತಿಳಿದುಕೊಳ್ಳಬೇಕೆನ್ನುವವನಿಗೆ (ವಿವೇಕಿಗೆ) ಅರ್ಥವು ತಾನಾಗಿ ಹೊಳೆಯುತ್ತದೆ.

ಸೀತೆ ರಾಮನೊಬ್ಬನನ್ನೇ ನಂಬಿದಳು= ಸೀತೆ ಸಾಧ್ವಿ.

ಬೆಂಕಿಯ ಗೆಳೆಯನ ಮಗನು=ಹನುಮಂತನು.

ದಾರಿಕಾರರಿಗೆ ಕುಡಿಯಲಿಕ್ಕೆ ನೀರು ಹಣಿಸುವ ಗುಡಿಸಲುಗಳನ್ನು (ಅರವಟ್ಟಿಗೆಗಳನ್ನು) ಬೇಸಿಗೆಯಲ್ಲಿ ಇಡುವರು.

ಸಂತೋಷಕ್ಕಾಗಿ ಕೊಟ್ಟ ವಸ್ತು= ಪಾರಿತೋಷಕ.

ಬೇಕೆಂತ ಜಗಳ ತೆಗೆಯುವವ= ಜಗಳಗಂಟಿ.

ಕನ್ನಡ ನಾಡಿನಲ್ಲಿಹುಟ್ಟಿ ಕನ್ನಡ ಭಾಷೆಯನ್ನುಆಡುವವ=ಕನ್ನಡಿಗ

ತಂದೆಯ ತಂಗಿ =ಸೋದರತ್ತೆ

ಸೈನ್ಯಗಳು ಹೋರಾಡುವ ಸ್ಥಳ= ರಣಭೂಮಿ.

ಪ್ರ:— ಗೆರೆ ಹೊಡೆದ ಭಾಗದ ಬದಲು ಒಂದೇ ಪದವನ್ನು ಉಪಯೋಗಿಸಿ ಕೆಳಗಿನ ವಾಕ್ಯಗಳನ್ನು ಬರೆಯಿರಿ.

ಪರರನ್ನು ಬೇಡುವವರು ಬದುಕಿದ್ದರೂ ಸತ್ತವರಿಗೆ ಸಮಾನರು.

ಅರಸನಿಗೆ ಅಂಕಿತನಾಗಿ ನಡೆಯುವವನು ಅತನಿಗೆ ಕೇಡು ಬಗೆಯುವವರ ನೆರಳಿಗೆ ಸಹ ಹೋಗಬಾರದು.

ಉ: ತಿರುಕರು ಒದುಕಿದ್ದರೂ ಜೀವನ್ಮೃತರು; ರಾಜನಿಷ್ಠನು ರಾಜದ್ರೋಹಿಗಳಿಂದ ದೂರಿರಬೇಕು.

ಶಬ್ದಗಳಿಂದ ಹೃದಯಭಾವಗಳನ್ನು ನಿರೂಪಿಸಬಲ್ಲವನಿಗೆ=ಬರೆಹಗಾರ ಅನ್ನುವರು.

ವರ್ಣರೇಖಾ ವಿನ್ಯಾಸಗಳಿಂದ ಭಾವಗಳನ್ನು ಹುಟ್ಟಿಸಬಲ್ಲವನಿಗೆ= ಚಿತ್ರಗಾರ ಅನ್ನುವರು.

ಕಲ್ಲು, ಕಟ್ಟಿಗೆ, ಮಣ್ಣುಗಳಲ್ಲಿ ಕಲ್ಪನೆಯ ಸೃಷ್ಟಿಯನ್ನು ನಿರ್ಮಿಸಬಲ್ಲವನಿಗೆ=ಶಿಲ್ಪಿಗ ಅನ್ನುವರು.

ಸ್ವರಗಳ ಮೇಳದಿಂದ ಎದೆಯನ್ನು ಕರಗಿಸಬಲ್ಲವನಿಗೆ=ಸಂಗೀತಗಾರ (ಗಾಯಕ) ನೆನ್ನುವರು.

ಹಸ್ತ ಪಾದಗಳ ವಿನ್ಯಾಸದಿಂದ ಭಾವಗಳನ್ನು ನಿರೂಪಿಸಬಲ್ಲವನಿಗೆ= ನರ್ತನಗಾರ (ನರ್ತಕಿ) ಎನ್ನುವರು.

ಮೊದಲೇ ಸಿಟ್ಟಿಗೇಳುವವ=ಮುಂಗೋಪಿ

ಊರ ಹೊರಗೆ ಆಕಳುಗಳೆಲ್ಲವೂ ಕೂಡುವ ಸ್ಥಳ=ತುರುಮಂದೆ

ಬಂಗಾರದ ಕಣಗಳಿಗಾಗಿ ಹರಿಯು ನೀರನ್ನು ಸೋಸಿ ನೋಡುವವ= ಜಾಲಗಾರ

ಕೋಟಿ ಸಂಖ್ಯೆಯಿಂದ ಎಣಿಸುವಷ್ಟು ಪರಿಮಿತಿ=ಕೋಟಿಗಟ್ಲೆ.

ಹೆದರದಿರು ಎಂದು ಸಂತೈಸುವ ಮಾತು=ಧೈರ್ಯಕೊಡು.

ಹೃದಯದ ಭಾವಗಳನ್ನು ಕೆರಳಿಸುವ ಹಾಡು=ಭಾವಗೀತೆ

ಪ್ರ:—ಕಂಸಗಳಲ್ಲಿ ಕೊಟ್ಟ ಶಬ್ದಗಳಲ್ಲಿ ತಕ್ಕದ್ದನ್ನು ಹಾಕಿ ಕೆಳಗಿನ ವಾಕ್ಯಗಳನ್ನು ಬರೆಯಿರಿ. (೧೫೪)

೧. ಯಾವಾಗಲೂ ನಿಜವನ್ನಾಡುವವನನ್ನು — ಹೊಗಳುವರು. (ಪ್ರಾಮಾಣಿಕನೆಂದು, ವಿಶ್ವಾಸಿಕನೆಂದು, ಸತ್ಯನಿಷ್ಠನೆಂದು; ಧಾರ್ಮಿಕನೆಂದು)

೨. ೧೫ದಿನಕ್ಕೊಮ್ಮೆ ಹೊರಡುವ ವೃತ್ತಪತ್ರಕ್ಕೆ ಎಂಬ ಹೆಸರು. (ಸಾಪ್ತಾಹಿಕ, ದೈನಿಕ, ಪಾಕ್ಷಿಕ, ತ್ರೈಮಾಸಿಕ)

೩. ದೇಶಕ್ಕೆ ಹಿತಗಣಿಸುವವನನ್ನು — ಎಂದು ಕರೆಯುವರು. (ದೇಶಾಭಿಮಾನಿ, ದೇವಭಕ್ತ, ದೇಶಹಿತಚಿಂತಕ, ದೇಶಬಂಧು)

೪. ಕಾಲೇಜಿನಲ್ಲಿ ಕೊಡುವ ಶಿಕ್ಷಣವನ್ನು ——— ಎನ್ನುವರು.
(ಪ್ರಾಥಮಿಕ, ಉಚ್ಚ, ಮಾಧ್ಯಮಿಕ, ಪ್ರೌಢ)

ಉ: - (೧) ಸತ್ಯನಿಷ್ಠನೆಂಬು (೨) ಪಾಕ್ಷಿಕ (೩) ದೇಶದ ಹಿತ ಚಿಂತಕ, (೪) ಪ್ರೌಢ.

ಪ್ರ: ಕೆಳಗಿನ ಮಾತುಗಳ ಅರ್ಥವನ್ನು ಹೇಳುವ ಒಂದೊಂದೇ ಶಬ್ದವನ್ನು ಬರೆಯಿರಿ.

(೧) ಜೊತ್ತಿಗೆ ಸರಿಯಾಗಿ ನಡೆಯುವಿಕೆ. (೨) ದೇಶಕ್ಕೆ ಕೇಡನ್ನು ಬಗೆಯುವವ (೩) ಮನೆತನವನ್ನು ಚನ್ನಾಗಿ ಸಾಗಿಸುವವಳು. (೪) ಮರ್ಯಾದೆಗಾಗಿ ಕೊಡುವ ವಸ್ತ್ರ (೫) ಲಂಚವನ್ನು ತೆಗೆದುಕೊಳ್ಳುವ ಚಟವುಳ್ಳವರು.

ಉ:— (೧) ಸಮಯನಿಷ್ಠತೆ. (೨) ದೇಶದ್ರೋಹಿ. (೩) ಗೃಹಿಣಿ. (೪) ಅಹೇರು. (೫) ಲಂಚಗುಳಿ.

೧೩. ಒಗಟಿಗಳು

ಒಗಟಿಗಳು ವಸ್ತುಗಳ ವ್ಯಾಖ್ಯೆಗಳಿದ್ದಂತೆ. ವಸ್ತುಗಳನ್ನು ವಿಶಿಷ್ಟ ರೀತಿಯಲ್ಲಿ ವರ್ಣಿಸುತ್ತವೆ. ಇಲ್ಲಿ ಕೆಲವನ್ನು ಉದಾಹರಣೆಗಾಗಿ ಕೊಟ್ಟಿದೆ.

೧. ಗಗನದಲ್ಲಿ ಗೋಲಾಕಾರವಾಗಿ ಸಂಚರಿಸುವವನು, ಸ್ವಪ್ರಕಾಶ ಮಯನು, ಬೆಂಕೆಯುನ್ನು ಕಾರುವವನು, ಯಾರು ?

೨. ನೀರಲ್ಲಿ ನೆನೆಯುವದಿಲ್ಲ, ತೆನೆಯಿಲ್ಲದೆ ಬೆಳೆದ ಕಾಳು, ನೇರಿ ನಿಂದಳೆಯದ, ಬೀಸದಕಾಳು, ಜನರು ಬೆಲೆಕೊಟ್ಟು ಕೊಳ್ಳುವರು. ಅದು ಯಾವದು ?

೩. ನಾಲ್ಕು ಮುಖಗಳಿದ್ದರೂ ಬ್ರಹ್ಮನಲ್ಲ, ಎತ್ತಿನ ಮೇಲೆ ಹತ್ತಿದ್ದರೂ ಶಿವನಲ್ಲ, ನೀರು ಸುರಿಯುತ್ತಿದ್ದರೂ ಮೇಘವಲ್ಲ. ಅಂಥದು ಏನು?

೪. ಕಾಲಿಲ್ಲದೆ ಹರಿಯುವದು, ತೋಳಿಲ್ಲದೆ ಹೊರುವದು, ನಾಲಿಗೆ ಇಲ್ಲದೆ ಉಲಿಯುವದು. ಅಂಥವನು ಯಾರು ?

೫. ಕಚ್ಚಿದರೆ ಕಚ್ಚುವದು; ಕಿಚ್ಚಲ್ಲ, ಚೇಳಲ್ಲ ಅದೇನು ?

೬. ನಡೆಯುವಾಗ ಉಣ್ಣುವದು, ನಡುನೆತ್ತಿಯೊಳು ಬಾಯಿ, ದ್ಯಾಷ್ಟ ಸ್ವರದಿಂದ ಗಾಯನ ಮಾಡುವದು, ಅಡವಿಯೊಳು ಹುಟ್ಟುವದು

ಹೊಡೆಕವನ್ನು ತಿನ್ನುವದು, ಎಂಜಲವ ತಿನಿಸುವದು ಸಕಲಜಗಕ್ಕೆ ಅದು ಯಾವದು ?

೭. ನೀರಿಗಿಂತ ತಿಳಿವು, ಲಿಂಬಿಗಿಂತ ಕಹಿ ಯಾವದು ?

೮. ಮದುವೆಯಾಗುವವರೆಗೆ ಹೊಡೆ ಆ ಮೇಲೆ ಹೊಡೆದರೆ ಸತ್ತು ಹೋಗುವನು ಯಾರು ?

೯. ಮೂರ್ತಿ ಚಿಕ್ಕದಾದರೂ ಮನೆ ಕಾಯುವನು ಯಾರು ?

೧೦. ಸಣ್ಣ ಗುಡಿಯಲ್ಲಿ ಸದಾ ಮಡಿಯಾಗಿರುವದು. ಯಾವದು?

೧೧. ದೇವರು ಹಚ್ಚಿದ ಬಾಳೆಯ ಹಣ್ಣು ಅಗಳಾಡುವವು ಆದರೆ ಕಿತ್ತುವದಿಲ್ಲ.

೧೨. ಕರೇ ಸೀರೆ ಉಟ್ಟಿರುವಳು ಕಾಲುಂಗರ ಹಾಕಿರುವಳು. ಸರ್‍ರನೆ ಹೋಗುವಳು. ಭರ್‍ರನೆ ಬರುವಳು ಅವಳಾರು ?

೧೩. ಪೇಟೆಯಿಂದ ತರುವರು ಅದನ್ನು ಮುಂದಿಟ್ಟುಗೊಂಡು ಕಣ್ಣೀರು ಸುರಿಸುವರು ಅದು ಏನು ?

೧೪. ಅಂಗೀ ಕಳೆ ಭಾವಿಯೊಳಗೆ ಇಳಿ ಅಂದರೇನು ?

ಉ:— ೧ ಸೂರ್ಯ ೨. ಮುತ್ತು ೩. ಪಕಾಲಿ ೪ ಹೊಳೆ ೫. ಮೆಣಸಿನಕಾಯಿ ೬. ಬೀಸುವಕಲ್ಲು ೭. ಹೊಗೆ ೮ ಗಡಿಗೆ ೯. ಕೀಲಿ ೧೦. ನಾಲಿಗೆ ೧೧. ಚುಕ್ಕಿ ೧೨. ವನಿಕೆ ೧೩. ಉಳ್ಳಿಯ ಗಡ್ಡಿ ೧೪. ಬಾಳೆಯಹಣ್ಣು.

೧೮. ಕನ್ನಡ ಪ್ರಕೃತಿಗಳು

ಅಂಜು: (ಭಯಪಡು) ಅಂಜಿಕೆ, ಅಂಜಿಗ; ಅಂಜುಗುಳಿ; ಅಂಜುಬುರುಕ.

ಅಕ್ಕರು:— (ಬಯಸು) ಅಕ್ಕರತೆ; ಅಕ್ಕರಿಕೆ; ಅಕ್ಕರಿಗೆ; ಅಕ್ಕರ್ತೆ;

ಅಗಲು: (ತೊಲಗು) ಅಗಲ, ಅಗಲಿಕೆ, ಅಗಲು, ಅಗಲುವಿಕೆ, ಅಡ್ಡಗಲು.

ಅಗಿ:— (ತೋಡು) ಅಗೆತ, ಅಗಿ, (ನೋಳಿಕೆ, ಸಸಿ.)

ಅಡಕು:— ಅಲಗು, ತುಂಬು, ಮುಚ್ಚಿರು; ಅಡಕು, ಅಡಕಲ (ಒಂದರ ಮೇಲೊಂದು ಏರಿಸಿದ ಪಾತ್ರೆಗಳು, ಅಡಿಕೆ,) ಅಡಕೊತ್ತು.

ಅಡು:— (ಬೇಯಿಸು, ಅಡಿಗೆಮಾಡು) ಅಡಿಗೆ. ಅಡಿಗೆಯುವ ಅಡಬಳ, ಅಡಗುಳಿ, ಅಡುಗಲಜ್ಜಿ.

ಅಡ್ಡು:— (ನಡುವೆ ಬರು) ಅಡ್ಡ, ಅಡ್ಡಣ (ಕಾಳಗದಲ್ಲಿ ಪೆಟ್ಟು ತಾಕಬಾರದೆಂದು ನಡುವೆ ತರುವ ಆಯುಧ, ಢಾಲು.) ಅಡ್ಡಣಿ, ಅಡ್ಡಣಿಗೆ, ಅಡ್ಡಿ ಅಡ್ಡಿಕೆ.

ಅರ್:—(ಅರ್ಧ) ಅರಿವೆ, ಪಚನ, ಅಜೀರ್ಣ, ಅರಿಕೆ, ಅರೆಗಾಲು, (ಅರೆ+ಕಾಲು,) ಅರೆನೋಟ, ಅರೆವಾಸಿ, (ಅರ್ಧಪಾಲು).

ಅಲರು:— (ಅರಳು) ಅಲರು, (ಹೂವು,) ಅಲರಿಜ (ಇಜ=ಹುಟ್ಟಿದವ, ಬ್ರಹ್ಮ), ಅಲರುಣಿ (ಉಣಿ=ತಿನ್ನುವದು, ಗುಂಗೀಹುಳ)— ಅರ್ಣವಕ್ಕಿ (ಪಕ್ಕಿ, ಹಕ್ಕಿ, ಪಕ್ಷಿ ಗುಂಗೀಹುಳ), ಅಲರ್ಪೊಡೆಯ (ಪೊಡೆ=ಹೊಟ್ಟೆ, ಕಮಲನಾಭ, ವಿಷ್ಣು).

ಆಡು: (ಕ್ರೀಡಿಸು) ಅ. ಆಟಿಗೆ, ಆಡು, ಆಟಗುಳಿ (ಯಾವಾಗಲೂ ಆಟಕ್ಕೆ ಮೆಚ್ಚಿದವ); ಆಟಿಡಪು (ಇಡಪು=ವೇಳೆ; ಆಟದ ದಿವಸ).

ಆನು— (ಆಧಾರ ಹೊಂದು). ಆನಿಕೆ; ಆನೆ; ಆಂದಿ (ಹೊಣೆ); ಆಂದಿಗ (ಹೊಣೆಗಾರ); ಆಂದುಗಲ್ಲು (ಒಜ್ಜೆ ಹೊತ್ತುಕೊಂಡು ಹೋಗುವ ದಾರಿಕಾರರು ದಾರಿಯಲ್ಲಿ ಹೋಗುವಾಗ ದಣಿದರೆ, ಅವರು ಒಜ್ಜೆ ಇಳಿಸುವದಕ್ಕಾಗಿ ನಿಲ್ಲಿಸಿದಕಲ್ಲು.)

ಆರು— (ತಣ್ಣಗಾಗು) ಆರಿಕೆ; ಬಾಯಾರಿಕೆ (ಬಾಯ್+ಆರಿಕೆ) ನೀರಡಿಕೆ.

ಆಳು—(ಅಧಿಕಾರ ಮಾಡು; ಸಮರ್ಥನಾಗು). ಆಳಿಕೆ; ಆಳ್ವಿಕೆ; ಆಳು (ಮನಷ್ಯ; ಸೇವಕ); ಆಳುತನ; ಆಳ್ಕೆ; ಆಳುಂಬ (ಆಳ್+ಉಂಬ= ಮನುಷ್ಯನ ತಿನ್ನುವವ); ಆಳ್ದಳ; ಆಳ್ಬಲ; (ಆಳ್ + ಬಲ; ಕಾಲಾಳ ದಂಡು); ಆಳೊತ್ತೆ (ಹೊಣೆ; ಆಳ್ದಾರ; ಆಳ್ದೊಡೆಯ

ಇಡು (ಇರಿಸು), ಇಡುಕು, ಇಡುದಿ (ದಾರಿಕಾರರು ಇಳಿಯುವ ಸ್ಥಳ, ಇಡೆ (ಎಡೆ=ಸ್ಥಳ.)

ಇರ್ (ಎರಡು) ಇಕ್ಕಟ್ಟು (ಇರ್+ಕಟ್ಟು); ಇಕ್ಕೆಲ (ಇರ್+ಕೆಲ) = ಪಾರ್ಶ್ವ; ಇತ್ತಡ (ಇರ್+ತಡ, ದಡ, ತೀರ); ಇತ್ತಂಡ (ಇರ್+ತಂಡ); ಇಪ್ಪತ್ತು (ಇರ್+ಪತ್ತು); ಇಮ್ಮಡಿ (ಇರ್+ಮಡಿ; ಎರಡು ಪಾಲು; ಇರ್ಮೆ (ಇರ್+ಮೆ; ಎರಡು ಬಾರಿ).

ಉಣ್ಣು:— (ತಿನ್ನು), ಉಣಿ (ತಿನ್ನುವವ), ಊಟ, ಉಂಡಾಡಿಗ (ಉಂಡ ಕೂಡಲೆ ಹೊರಗೆ ಹೋಗುವವ); ಉಂಬಳಿ (ಉಂಬುವ ಹಳ್ಳಿ— ಇನಾಮು ಗ್ರಾಮ; ಉಂಬಳಿಗಾರ.

ಉರಿ— (ಸು.ಡು) ಉರಿ, ಉರಿವು, ಉರುಪು, ಉರುಬೆ (ನೋವು ಉರುವಣಿ, ಉರುವಣಿಗೆ, ಉರುವಣೆ, ಉರ್ಪು (ಉಪ್ಪು)

ಎಗ್ಗು- (ಕುಕ್ಕು) ಎಗ್ಗ (ಯಾವಾಗಲೂ) ತಲೆಯ ಮೇಲೆ ಕುಕ್ಕಿಸಿ ಕೊಳ್ಳುವವ, ತಿಳಿಗೇಡಿ), ಎಗ್ಗು (ನಾಚಿಕೆ, ಅಪಮಾನ), ಎಗ್ಗಳಿ (ಎಗ್ಗು+ಗುಳಿ, ಮಾನಗೇಡಿ).

ಎಣಿಸು— [ಲೆಕ್ಕಿಸು] ಎಣಿಕೆ [ಲೆಕ್ಕ, ಯೋಗ್ಯತೆ], ಎಣೆ, ಎಣೆಯ [ಗೆಳೆಯ], ಎಣೆಗಾರ.

ಎಸೆ— [ಒಗೆ, ಹೊರಚಲ್ಲು] ಎಸಳು, ಎಸಿಗೆ [ಅಲಗು ಹೊಡೆಯೋಣ] , ಎಸೆ ಎಸಗಾರ [ಬಲೆಯಿಂದ ಅಲಗು ಹೊಡೆಯುವ].

ಒಲಿ [ಮೆಚ್ಚು], ಒಲವು, ಒಲಪು, ಒಲುಮೆ, ಒಲ್ಮೆ.

ಕರಿ— [ಸುಡು], ಕರಕು, ಕರಿಗಡಬು.

ಕರೆ— [ಆಮಂತ್ರಣ ಮಾಡು], ಕರವು, ಕರಹು, ಕರೆವಣ

ಕಾದು— [ಕಾಳಗ ಮಾಡು], ಕಾದಿಕೆ [ಕಾಳಗ, ಜಗಳ], ಕಾದು [ಜಗಳ ಮಾಡುವವ], ಕದನ.

ಕೂಗು— [ಗಟ್ಟಿಸಿ ಒದರು] ಕೂಗು; ಕೂಗಳತೆ [ಕೂಗು+ಅಳತೆ] [ಗಟ್ಟಿಯಾಗಿ ಒದರಿದ್ದು ಕೇಳಿಬರುವಷ್ಟು ಅಂತರ].

ಚರಿ— [ಜಾರು] ಚರಡಿ; ಚಾಡಿ [ಸಾಚಿಗೆ]; ಚರಿತ; ಚರಿಪು.

ತಿಳಿ — [ಅರಿ]; ತಿಳಿವು; ತಿಳಿವಳಿಗೆ

ತುಳಿ — [ಕಾಲಿಕ್ಕು, ಮೆಟ್ಟು]; ತುಳಿಲ್ [ಬಂಟತನ]; ತುಳಿಲು ತುಳಿಲಾಳು [ಆಳು = ಪುರುಷ; ಬಂಟ].

೧೯. ಉಪಸರ್ಗಗಳು

ಧಾತುಗಳಿಗೆ ಹಿಂದೆ ಹತ್ತುವ ಅವ್ಯಯ ರೂಪಗಳಿಗೆ ಉಪಸರ್ಗಗಳು ಅನ್ನುತ್ತಾರೆ ಅವು ಯಾವವೆಂದರೆ—

ಉಪಸರ್ಗ	ಅರ್ಥ	ಉದಾಹರಣೆಗಳು
ಅತಿ	ಅಧಿಕ; ಉಲ್ಲಂಘನ	ಅತಿರಿಕ್ತ; ಅತಿಕ್ರಮ [ಮೀರಿಹೋಗೋಣ]
ಅಧಿ	ಶ್ರೇಷ್ಠತ್ವ; ಮೇಲೆ	ಅಧಿಕಾರ; ಅಧಿಪತಿ [ಒಡೆಯ]
ಅನು	ಹಿಂದೆ; ಹಾಗೆ	ಅನುಜ [ಹಿಂದಿನಿಂದ ಹುಟ್ಟಿದವ, ತಮ್ಮ] ಅನುಮಾನ.
ಅಪ	ಕೆಳಗೆ, ಕೆಟ್ಟ, ದೂರ	ಅಪಶಬ್ದ, ಅಪಸರಣ (ಹಿಂದಕ್ಕೆ ಸರಿಯೋಣ) ಅಪಮಾನ, ಅಪಾನ
ಅಪಿ	ಆವರಣ	ಅಪಿಧಾನ (ಮುಚ್ಚೋಣ, ಮುಚ್ಚಳ).
ಅಭಿ	ಸುತ್ತರೆ, ಸಮೀಪ	ಅಭಿಗಮನ, ಅಭಿಜ್ಞ (ಒಳ್ಳೇ ಜಾಣ.
ಅವ	ಕೊರತೆ, ಹೆಚ್ಚಿಗೆ, ಕೆಳಗೆ	ಅವಮಾನ (ಕಡಿಮೆ ಮಾನ), ಅವಧಾರಣ (ಹೆಚ್ಚಿಗೆ ತಿಳಕೊಳ್ಳೋಣ). ಅವನತ (ಕೆಳಗೆ ಬಾಗಿದ).
ಆ	ಕಿಂಚಿತ್, ವ್ಯಾಪ್ತಿ, ಮೇರೆ	ಆಕಂಪಿತ (ತುಸು ಅಲ್ಲಾಡಿದ್ದು,) ಆಮರಣ (ಸಾಯುವತನಕ), ಆ ಭೂಮಂಡಲ (ಭೂಮಂಡಲ ತುಂಬ).
	ಮೇಲೆ, ಆಧಿಕ್ಯ	ಉತ್‌ಕೃಷ್ಟ (ಮೇಲೆ ಜಗ್ಗಿ ತೆಗೆದ ಅರಿಸಿದ), ಉನ್ಮತ್ತ (ಬಹಳ ಸೊಕ್ಕಿದ),
ಉಪ	ಸಮೀಪ, ಆಧಿಕ್ಯ	ಉಪನೇತ್ರ, ಉಪಭೋಗ [ಅಧಿಕವಾದ ಭೋಗ.]
ದುರ್	ದುಷ್ಟ, ಕಠಿಣ	ದುರ್ಭಾಷಣ [ಕೆಟ್ಟ ನುಡಿ]; ದುರ್ಭೋಧ [ತಿಳಿಯುವದಕ್ಕೆ ಕಠಿಣವಾದದ್ದು]; ದುರ್ಗತಿ [ನಿಂದ್ಯ ಗತಿ].

ನಿ	ಅತ್ಯಂತ, ರಹಿತ	ನಿಪಾತ ಅತ್ಯಂತ=ದೊಡ್ಡ ಪಾತ] ನಿಗರ್ವ [ಗರ್ವರಹಿತ]
ನಿರ್ / ನಿಸ್	ಅತ್ಯಂತ ಭಾವ	ನಿರ್ಬಂಧ [ಅತ್ಯಂತ ಬಂಧ, ಆಗ್ರಹ]; ನಿರಭ್ರ [ಮೋಡವಿಲ್ಲದ]
ಪರಾ	ಹಿಂದೆ, ವಿಪರೀತ	ಪರಾವೃತ [ಹಿಂದೆ ವರ್ತಿಸಿದಂಥ, ಹಿಂದಿರುಗಿದ]; ಪರಾಜಯ, ಜಯದ ವಿಪರೀತ ಸೋಲುವಿಕೆ],
ಪರಿ	ಸುತ್ತಲೆ; ಅತ್ಯಂತ	ಪರ್ಯಟನ [ಸುತ್ತಲೆ ತಿರುಗೋಣ], ಪರಿತ್ಯಾಗ [ಅತ್ಯಂತ ತ್ಯಾಗ, ಶೀರ ಬಿಟ್ಟು ಬಿಡೋಣ]
ಪ್ರ	ಅಧಿಕ	ಪ್ರಗಲ್ಭ [ಹೆಚ್ಚು ಧೈರ್ಯವುಳ್ಳವ];
ಪ್ರತಿ	ವಿರುದ್ಧ, ಬದಲಾಗಿ	ಪ್ರತಿವಾದಿ [ವಿರುದ್ಧ ಮಾತಾಡುವವ]; ಪ್ರತಿಭೂ [ಬದಲಾಗಿ ನಿಲ್ಲುವವ, ಹೊಣೆಗಾರ]
ವಿ	ವಿರುದ್ಧ, ವಿಶೇಷ	ವಿಪಕ್ಷ [ವಿರುದ್ಧ ಪಕ್ಷ ಹಗೆ;] ವಿಜ್ಞಾನ [ವಿಶೇಷ ಜ್ಞಾನ].
ಸಮ್	ನೆಟ್ಟಗೆ; ಒಟ್ಟು	ಸಂಸ್ಕೃತ [ನೆಟ್ಟಗೆಮಾಡಿದ್ದು, ತಿದ್ದಿದ್ದು, ಒಟ್ಟು ಮಾಡೋಣ, ಬೆರಿಕೆ].
ಸು	ವಿಶೇಷ, ಅತ್ಯಂತ	ಸುಲಭ [ವಿಶೇಷವಾಗಿ ದೊರೆಯತಕ್ಕದ್ದು ಸುವೀರ (ಕಡುಗಲಿ).

೨೦. ಕಾರಕಾರ್ಥ

ಕಾರಕಗಳು ಕ್ರಿಯೆ ನಡೆಯುವದಕ್ಕೆ ಬೇಕಾಗುವಂಥವು. ಕಾರಕವು ನಾಮ ಮತ್ತು ಕ್ರಿಯಾಪದಗಳ ನಡುವಿರುವ ಸಂಬಂಧವನ್ನು ತೋರಿಸುವದು ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಎಂಬ ಆರು ಕಾರಕಗಳು.

ಕರ್ತೃ: ಕ್ರಿಯೆಯನ್ನು ಯಾರು ಮಾಡುವರೋ ಅವರು ಕರ್ತೃ. ಉದಾ: – ಬಸವನು ಊಟವನ್ನು ಮಾಡಿದನು ಇಲ್ಲಿ ಮಾಡಿದನು ಈ ಕ್ರಿಯೆಗೆ ಬಸವನು ಕರ್ತೃ ಕರ್ತರಿ ಪ್ರಯೋಗದ ವಾಕ್ಯದಲ್ಲಿ ಕರ್ತೃವು

ಪ್ರಥಮಾ ವಿಭಕ್ತಿಯಲ್ಲಿಯೂ ಕರ್ಮಣಿ ಪ್ರಯೋಗದ ವಾಕ್ಯದಲ್ಲಿ ಕರ್ತೃವು ತೃತೀಯಾ ವಿಭಕ್ತಿಯಲ್ಲಿಯೂ ಇರುತ್ತವೆ.

ಕರ್ಮ:— ಕರ್ಮದ ಮೇಲೆ ಕ್ರಿಯೆಯ ಪರಿಣಾಮವಾಗುತ್ತದೆ. ಮೇಲಿನ ವಾಕ್ಯದಲ್ಲಿ ಊಟವನ್ನು ಇದು ಕರ್ಮ. ಕರ್ತರಿ ಪ್ರಯೋಗದಲ್ಲಿ ಕರ್ಮವು ದ್ವಿತೀಯಾ ವಿಭಕ್ತಿಯಲ್ಲಿಯೂ ಕರ್ಮಣೀ ಪ್ರಯೋಗದಲ್ಲಿ ಕರ್ಮವು ಪ್ರಥಮಾ ವಿಭಕ್ತಿಯಲ್ಲಿಯೂ ಇರುತ್ತದೆ.

ಕರಣ:— ಇದು ಕ್ರಿಯೆಯನ್ನುಂಟು ಮಾಡುವ ಸಾಧನವು. ಕರಣವು ತೃತೀಯಾ ವಿಭಕ್ತಿಯಲ್ಲಿರುತ್ತದೆ. ಉದಾ:—ರಾಮನು ಕೊಡಲಿಯಿಂದ ಮರವನ್ನು ಕಡಿದನು. ಇಲ್ಲಿ ಮರವನ್ನು ಕಡಿಯುವದಕ್ಕೆ ಕೊಡಲಿಯು ಸಾಧನವು. ಕಾರಣ ಕೊಡಲಿಯಿಂದ ಇದು ಕರ್ಣವು.

ಸಂಪ್ರದಾನ:—ಕೊಡುವ ವಸ್ತುವನ್ನು ಹೊಂದುವವನಿಗೆ ಸಂಪ್ರದಾನ ಎಂಬ ಹೆಸರು. ಸಂಪ್ರದಾನವು ಚತುರ್ಥಿ ವಿಭಕ್ತಿಯಲ್ಲಿ ಇರುತ್ತದೆ. ಉದಾ:—ಬಸವನು ಭಿಕ್ಷುಕನಿಗೆ ಹಿಟ್ಟನ್ನು ಕೊಟ್ಟನು. ಇಲ್ಲಿ ಕೊಡುವ ಹಿಟ್ಟನ್ನು ಹೊಂದವದು ಭಿಕ್ಷುಕನು. ಕಾರಣ ಭಿಕ್ಷುಕನು ಸಂಪ್ರದಾನವು.

ಅಪಾದಾನ:—ಅಗಲುವ ಕ್ರಿಯೆ ಆರಂಭ ಸ್ಥಾನವೇ ಅಪಾದಾನವು. ಉದಾ—ಮರದಿಂದ ಹಣ್ಣು ಬಿತ್ತು. ಅಗಲಿಕೆಯು ಮರದಿಂದ ಆರಂಭವಾಗಿದೆ. ಆದ್ದರಿಂದ 'ಮರದಿಂದ' ಅಪಾದನವು. ಅಪಾದಾನವು ಪಂಚಮೀ ವಿಭಕ್ತಿಯಲ್ಲಿ ಇರುತ್ತದೆ.

ಅಧಿಕರಣ:—ಕ್ರಿಯೆ ನಡೆಯುವ ಸ್ಥಾನ ಮತ್ತು ಕಾಲ ಇವು 'ಅಧಿಕರಣ' ಅಧಿಕರಣವು ಸಪ್ತಮಿ ವಿಭಕ್ತಿಯಲ್ಲಿ ಇರುತ್ತದೆ. ಉದಾ ಒಕ್ಕಲಿಗರು ಹೊಲದಲ್ಲಿ ದುಡಿಯುತ್ತಾರೆ. ಇಲ್ಲಿ ಹೊಲದಲ್ಲಿ ಅಧಿಕರಣ.

ಪ್ರ: ೧. ಕತ್ತಿಯ ಕಡತ, ೨. ಮನೆಯ ಊಟ, ೩. ಕಳ್ಳರ ಅಂಜಿಕೆ, ೪. ಕುದುರೆಯ ಓಟ, ೫ ದೇವರ ನಮಸ್ಕಾರ, ಈ ಪದಗಳ ಷಷ್ಠೀ ವಿಭಕ್ತಿಯ ಕಾರಕಾರ್ಥವೇನು ?

ಉ: ೧. ಕತ್ತಿಯಿಂದ ಕಡತ, (ಸಾಧನ) ೨. ಮನೆಯಲ್ಲಿ ಊಟ (ಅಧಿಕರಣ) ೩. ಕಳ್ಳರಿಂದ ಅಂಜಿಕೆ (ನಿಮಿತ್ತ), ೪. ಕುದುರೆಯು ಓಡುವದು (ಕರ್ತೃ), ೫ ದೇವರಿಗೆ ನಮಸ್ಕಾರ (ಕರ್ಮ).

ಪ್ರ:—೧ ಪರದ್ರವ್ಯಕ್ಕೆ ಆಶಿಸಬೇಡ. ೨ ಶಿಷ್ಯರು ಗುರುಗಳನ್ನು ಸಂಶಯವನ್ನು ಕೇಳಿದರು. ೩ ಅರಸೇ, ನಿನಗೆ ಕಲ್ಯಾಣವಾಗಲಿ, ೪ ರಾಮನು ವಿಶ್ವಾಮಿತ್ರನಿಂದ ಶಸ್ತ್ರವಿದ್ಯೆಯನ್ನು ಕಲಿತನು. ಇವುಗಳ ಕಾರಕಾರ್ಥಗಳನ್ನು ಹೇಳಿರಿ.

ಉ: — ೧ ಪರದ್ರವ್ಯವನ್ನು [ಕರ್ಮ], ಆಶಿಸಬೇಡ. ೨. ಗುರುಗಳಿಗೆ [ಚತುರ್ಥಿ] ೩. ನಿನ್ನ [ನಿನಗೆ] (ಸಂಬಂಧ) ೪. ವಿಶ್ವಾಮಿತ್ರನಿಂದ [ಸಾಧನ].

ಪ್ರ:— ೧. ಹಿತದ ಉಪದೇಶ ೨ ಕಾಶಿಯ ವಾಸ ೩. ಉರಿಯ ಕಾವು ೪. ಕೋಳಿಯ ಕೂಗು.

ಉ: — ೧ ಹಿತವನ್ನು ಉಪದೇಶಿಸುವದು. ಹಿತ ವಿಷಯಕವಾದ [ಹಿತಕರ್ಮವಾದ] ಉಪದೇಶ [ಕರ್ಮ] ೨ ಕಾಶಿಯಲ್ಲಿ ವಾಸ [ಅಧಿಕರಣ] ೩. ಉರಿಯಿಂದ ಕಾವು [ಹೇತು] ೪. ಕೂಗುವದು ಕೋಳಿ— ಕೋಳಿಯ ಕಾರಕಾರ್ಥ ಕರ್ತೃ.

ಪ್ರ:— ಕೆಳಗಿನ ವಾಕ್ಯಗಳಲ್ಲಿ ಗೆರೆಹಾಕಿದ ಶಬ್ದಗಳ ಕಾರಕಾರ್ಥವನ್ನು ಹೇಳಿರಿ. ೧. ಅವನು ಒಂದು ದಿನ ಸಹ ಮಲಗುವದಿಲ್ಲ. ೨. ಆ ನದಿಯು ಆರು ಮೈಲು ದೂರ ಇರುವದು. ೩. ನನಗೆ ಹಾಡಲು ಬರುವದಿಲ್ಲ. ೪. ಅವರು ಹೆಸರಿಗೆ ಪಂಡಿತರು.

ಉ:— ೧. ಒಂದು ದಿನ ಈ ಶಬ್ದವು ಪ್ರಥಮೆಯಲ್ಲಿದೆ. ಕ್ರಿಯೆ ನಡೆದ ಕಾಲವನ್ನು ಸೂಚಿಸುವದು. ೨. ಆರು ಮೈಲು ಇದು ಪ್ರಥಮೆಯಲ್ಲಿದೆ. ಇದು ಸ್ಥಳದ ಪರಿಣಾಮವನ್ನು ಸೂಚಿಸುವದು. ೩. ಕರ್ತೃಪದಕ್ಕೆ ಚತುರ್ಥಿ ಬಂದಿದೆ. ೪. ಇಲ್ಲಿ ಚತುರ್ಥಿಯು ವಿಕಲ್ಪದಿಂದ ಬಂದಿದೆ. ಹೆಸರಿಗೆ ಪಂಡಿತರು ಎಂದರೆ ಹೆಸರಿನಿಂದ ಪಂಡಿತರು.

ಪ್ರ: ಕೆಳಗಿನ ವಾಕ್ಯದಲ್ಲಿ ಗೆರೆ ಹೊಡೆದ ಪದಗಳ ವಿಭಕ್ತಿಗಳನ್ನೂ ಅವುಗಳ ಕಾರಕಾರ್ಥಗಳನ್ನೂ ಹೇಳಿರಿ. [೧೯೯].

ರಾಮನು ತನ್ನ ಊಟ ಮುಗಿಸಿ ಶಾಲೆಗೆ ಮೋಟಾರ ಗಾಡಿಯಿಂದ ಹೋದನು.

ಉ:— ಊಟ ಇದು ಪಕ್ರಿಯಾಂತ್ಯ ಅಕಾರಾಂತವಿದ್ದರೂ ದ್ವಿತೀಯಾ ವಿಭಕ್ತಿಯಲ್ಲಿದೆ. ಊಟವನ್ನು ಎಂಬುದು ಮುಗಿಸಿ ಎಂಬ ಕ್ರಿಯೆಯ ಕರ್ಮ, ಮೋಟಾರ ಗಾಡಿಯಿಂದ ಇದು ಸಾಧನವಾಗಿದೆ ಕಾರಣ ಇದು ತೃತೀಯಾವಿಭಕ್ತಿಯಲ್ಲಿದೆ.

ಪ್ರ:— (೧) ನಾನು ಇರುಳನ್ನು ನಿದ್ದೆಯಿಲ್ಲದೆ ಕಳೆದೆನು.

(೨) ಸನ್ಯಾಸಿಯು ದುಡ್ಡನ್ನು ಹುಲ್ಲಿಗೆ ಬಗೆಯುತ್ತಾನೆ.

( ) ಮಳೆಗಾಲದಲ್ಲಿ ಮೋಡಗಳು ಪಡುವಲಿನಿಂದ ಎದ್ದು ಬರುತ್ತವೆ

ಈ ವಾಕ್ಯಗಳಲ್ಲಿಯ ಅಧೋರೇಖಿತ ಪದಗಳ ಕಾರಕಾರ್ಥಗಳನ್ನು ಹೇಳಿರಿ. (೧೯೫೦)

ಉ:— [೧] ಇರುಳನ್ನು ಇದು ದ್ವಿತೀಯಾ ವಿಭಕ್ತಿಯಲ್ಲಿದೆ. ಕಾಲವನ್ನು ಸೂಚಿಸುತ್ತದೆ. [೨] 'ಹುಲ್ಲಿಗೆ' ಇದು ತುಚ್ಛತೆಯನ್ನು ಹೇಳುವಾಗ ಚತುರ್ಥಿ ಬಂದಿದೆ. [೩] ಪಡುವಲಿನಿಂದ ಇದು ದಿಕ್ಕು ಹೇಳುವಲ್ಲಿ ಸಪ್ತಮಿ ಬಂದಿದೆ.

ಪ್ರ:— ಗಿಡದಿಂದ ಬೀಳುತ್ತಿರುವ ಹಣ್ಣನ್ನು ಅವನು ಕೈಯಿಂದ ಹಿಡಿದು ಚೀಲದಲ್ಲಿ ಹಾಕಿಕೊಂಡನು.

ಗೆರೆ ಕೊಡೆದ ಪದಗಳ ವಿಭಕ್ತಿಗಳನ್ನೂ ಅವುಗಳ ಕಾರಕಾರ್ಥಗಳನ್ನೂ ಹೇಳಿರಿ. (೧೯೪೮)

ಉ: ಗಿಡದಿಂದ ಇದು ಪಂಚಮಿ ವಿಭಕ್ತಿಯು. ಅಗಲುವಿಕೆಯ ಸ್ಥಾನವನ್ನು ತೋರಿಸುತ್ತದೆ. ಕಾರಕಾರ್ಥ ಅಪಾದಾನ. ಕೈಯಿಂದ ತೃತೀಯಾ ವಿಭಕ್ತಿಯು. ಕೈಯು ಹಣ್ಣನ್ನು ಹಿಡಿಯುವ ಸಾಧನವು. ಕಾರಣ ಕಾರಕಾರ್ಥ-ಕರಣ. ಚೀಲದಲ್ಲಿ ಸಪ್ತಮಿ ವಿಭಕ್ತಿ. ಚೀಲವು ಹಣ್ಣನ್ನು ಹಾಕುವ ಕ್ರಿಯೆಗೆ ಆಧಾರವಾಗಿದೆ ಕಾರಕಾರ್ಥ ಅಧಿಕರಣ.

ಪ್ರ:— ಶಾಲೆಯಲ್ಲಿ ಬಾಲಕರು ಪುಸ್ತಕಗಳನ್ನು ಓದುತ್ತಾರೆ. ಈ ವಾಕ್ಯದಲ್ಲಿ ಗೆರೆಹೊಡೆದ ಪದಗಳ ವಿಭಕ್ತಿಯನ್ನು ಹೇಳಿ ಅವುಗಳ ಕಾರಕಾರ್ಥಗಳನ್ನು ಬರೆಯಿರಿ. (೧೯೪೭ ಅಕ್ಟೋಬರ)

ಉ:— ಶಾಲೆಯಲ್ಲಿ ಇದು ಸಪ್ತಮಿ ವಿಭಕ್ತಿ ಅಧಿಕರಣಕಾರಕಾರ್ಥ. ಪುಸ್ತಕಗಳನ್ನು ಇದು ದ್ವಿತೀಯಾ ವಿಭಕ್ತಿ. ಕಾರಕಾರ್ಥ ಕರ್ಮ

ಪ್ರ:— ಅವನು ಗುಡ್ಡದಿಂದ ಕಲ್ಲನ್ನು ಉರುಳಿಸಿದನು. ಈ ವಾಕ್ಯದಲ್ಲಿಯ ಗೆರೆಹೊಡೆದ ಪದಗಳ ವಿಭಕ್ತಿ ಹಾಗೂ ಕಾರಕಾರ್ಥಗಳನ್ನು ಹೇಳಿರಿ. (೧೯೪೭)

ಉ: ಗುಡ್ಡದಿಂದ ಪಂಚಮಿ ವಿಭಕ್ತಿಯು ಕಾರಕಾರ್ಥ ಅಪಾದಾನ. ಕಲ್ಲನ್ನು ದ್ವಿತೀಯಾ ವಿಭಕ್ತಿ. ಕಾರಕಾರ್ಥ—ಕರ್ಮ.

೨೧. ಸಂಧಿಗಳು

ಕನ್ನಡ ಸ್ವರಸಂಧಿ

೧. ಸ್ವರಲೋಪಸಂಧಿ—ಸ್ವರದ ಮುಂದೆ ಸ್ವರವು ಬರಲು ಮೊದಲಿನ ಶಬ್ದದ ಕೊನೆಯ ಸ್ವರವು ಲೋಪವಾಗುವದು. ಉದಾ: — ಬೇರೆ + ಒಂದು= ಬೇರೊಂದು; ರಂಗ+ಅಣ್ಣ=ರಂಗಣ್ಣ. ಸಾವು+ಇಲ್ಲದವ = ಸಾವಿಲ್ಲದವ. ರಾಮನ+ಇರುವು=ರಾಮನಿರವು;

೨. ಯಕಾರಾಗಮಸಂಧಿ: —ಅ, ಇ, ಈ, ಉ, ಏ, ಐ, ಕಾರಗಳ ಮುಂದೆ ಸ್ವರವು ಬಂದರೆ ಯಕಾರಾಗಮವಾಗುವದು. ಉದಾ: ಬಾ+ಎಂದು= ಬಾಯೆಂದು; ಕರಿ+ಅಪ್ಪ= ಕರಿಯಪ್ಪ; ಕೈ+ಎತ್ತಿದನು = ಕೈಯೆತ್ತಿದನು; ಅಡಿ+ಆಳು=ಅಡಿಯಾಳು; ಅತಿ+ಅಲ್ಪ=ಅತ್ಯಲ್ಪ.

ವಕಾರಾಗಮ ಸಂಧಿ: ಉ, ಊ, ಓ, ಕಾರಗಳ ಮುಂದೆ ಸ್ವರವು ಬಂದರೆ ವಕಾರಾಗಮವಾಗುವದು. ಉದಾ: ಗುರು+ಅನ್ನು=ಗುರುವನ್ನು

ಕನ್ನಡ ವ್ಯಂಜನ ಸಂಧಿಗಳು

೧. ಗ, ದ, ಬಾದೇಶಸಂಧಿ: —ಕ, ತ, ಪ, ಕಾರಗಳಿಗೆ ಗ, ದ, ಬ ಕಾರಗಳ ಆದೇಶವಾಗುವದು. ಉದಾ—ಎಳ+ಕರು=ಎಳಗರು; ಹಳ+ಕನ್ನಡ=ಹಳಗನ್ನಡ; ಸುಖ+ಬಡು= ಸುಖಬಡು, ಮರ+ತುದಿ=ಮರದುದಿ, ಓರೆ+ಕಣ್ಣು=ಓರೆಗಣ್ಣು ಕೈ+ಕೋಲು=ಕೈಗೋಲು.

೨. ವಕಾರಾದೇಶಸಂಧಿ: ಪ, ಬ, ಮ, ಕಾರಗಳಿಗೆ ವಕಾರಾದೇಶವಾಗುವದು. ಉದಾ:- ಕೆನೆ+ಪಾಲು ಕೆನೆವಾಲು. ತೆರೆ+ಬಾಯಿ=ತೆರೆವಾಯಿ. ಉರಿ+ಮನೆ=ಉರಿವನೆ

ಪ್ರ: ಕೆಳಗಿನವುಗಳ ಸಂಧಿ ಬಿಡಿಸಿ ಬರೆಯಿರಿ. [೫೪೯]

೧. ತಂಗಾಳಿ . ಇತರೇತರು ೩. ಪ್ರತ್ಯಕ್ಷ ೪. ಹುಲಿದೊಗಲು.

ಉ:-೧. ತಣ್+ಗಾಳಿ=ತಂಗಾಳಿ.

೨. ಇತರ+ಇತರ=ಇತರೇತರ.

೩. ಪ್ರತಿ+ಅಕ್ಷ=ಪ್ರತ್ಯಕ್ಷ

೪. ಹುಲಿ+ತೊಗಲು=ಹುಲಿದೊಗಲು.

—೧೯೪೮—

ಸತ್+ಮಾರ್ಗ=ಸನ್ಮಾರ್ಗ. ಧನುಃ+ಧಾರಿ=ಧನುರ್ಧಾರಿ.

ಕೆನೆ+ಪಾಲು=ಕೆನೆವಾಲು ಅತಿ+ಅಲ್ಪ=ಅತ್ಯಲ್ಪ

—೧೯೪೭— (ಅಕ್ಟೋಬರ)

ಮನೆ+ಇಂದ=ಮನೆಯಿಂದ ನೆಲ+ಮನೆ=ನೆಲಮನೆ

ಪಿತೃ+ಆಜ್ಞೆ=ಪಿತ್ರಾಜ್ಞೆ. ವೈ+ಉಬ್ಬಿಸು=ವೈಯುಬ್ಬಿಸು.

ಕುರುಡು+ಕಣ್ಣು=ಕುರುಡಗಣ್ಣು ಅತಿ+ಉತ್ತಮ=ಅತ್ಯುತ್ತಮ

ಬಿಸಿದು+ಬೂದಿ=ಬೆಂಬೂದಿ ತಪಸ್+ವನ=ತಪೋವನ

—೧೯೪೭—

ದಿಕ್+ಭ್ರಮಣ=ದಿಗ್ಭ್ರಮಣ ತಲೆ+ಬಾಗಿ=ತಲೆವಾಗಿ

ತಣ್+ಪುಳಿಲ್=ತಂಬುಳಿಲ್ ಧನುಸ್+ಆಕಾರ=ಧನುರಾಕಾರ

ಪೆಣ್+ಅಲ್ಲವೆ=ಪೆಣ್ಣಲ್ಲವೆ ಉಷ್ಣ+ಉದಕ=ಉಷ್ಣೋದಕ

ತಪಸ್+ಭಾಗ=ತಪೋಭಾಗ

—೧೯೪೬—

ವಿದ್ಯಾ+ಉದಯ=ವಿದ್ಯೋದಯ ಬಾನ್+ತಳ=ಬಾಂದಳ

ತ್ರಿ+ಅಂಬಕ=ತ್ರ್ಯಂಬಕ ಜಾಣ್+ನುಡಿ=ಜಾಣ್ನುಡಿ

ಮನಸ್+ಅನುರಾಗ=ಮನೋನುರಾಗ ಪೊನ್+ಸುರಿಗೆ=ಪೊಂಜುರಿಗೆ

೨೨ ವಾಕ್ಯಶುದ್ಧವಡು

ಕೆಳಗಿನ ವಾಕ್ಯಗಳನ್ನು ಶುದ್ಧಿ ಬರೆಯಿರಿ.

ಪ್ರ:—೧. ಇಂದು ಕೆಲಸ ಮಾಡಿದ ವಿನಃ ಮನೆಗೆ ಹೋಗವೊಲ್ಲೆವು. ೨. ಕೆಳಗಣ ಇ[illegible]ತ್ತಿಯು ಸಂಖ್ಯೆ [illegible] ಕಡಿಮೆ ಪರಿಮಾಣದಲ್ಲಿ ಉಂಟಾಗಿತ್ತು. [illegible] ಬಂದರು.

ಉ:— [illegible] [illegible] ನಾನು ಮನೆಗೆ ಹೋಗಲು [illegible] [illegible] ಸಂಖ್ಯೆ ಶೀರ ಕಡಿಮೆಯು ಪ್ರಮಾಣದಲ್ಲಿ [illegible] [illegible] ರಾಜನೂ ರಾಣಿಯೂ ಬಂದರು

ಪ್ರ:— [೫] ಚನ್ನಾಗಿ ಪ್ರಜೆಗಳಿಂದ ಧಾರ್ಮಿಕನಾದ ಅರಸನು ಕಾಪಾಡುತ್ತಾನೆ [ಬ] ನಾನು ವರ್ತಮಾನವನ್ನು ಮೊದಲೇ ಹೇಳುವದಿಲ್ಲೇ? [ಕ] ರಾಮನ ಪಟ್ಟಾಭಿಷೇಕ [illegible] ದಶರಥನು ಸಂತೋಷದಿಂದ ಮಾಡಿದನು. [ಡ] ಭೀಮಾರ್ಜುನರು ಆಡುತ್ತಿರಲು, ದುರ್ಯೋಧನನು ನಡುವೆ ಬಂದು ಅವನು ಇವನನ್ನು ಹೊಡೆದನು.

ಉ:—[೫] ಧಾರ್ಮಿಕನಾದ ಅರಸನು, ಪ್ರಜೆಗಳನ್ನು ಚನ್ನಾಗಿ ಕಾಪಾಡುತ್ತಾನೆ [ಬ] ನಾನು ಈ ವರ್ತಮಾನವನ್ನು ಮೊದಲೇ ಹೇಳಲಿಲ್ಲೇ? [ಕ] ರಾಮನ ಪಟ್ಟಾಭಿಷೇಕದ ಕೆಲಸವನ್ನು ದಶರಥನು ಮಾಡಲಿಲ್ಲ. [ಡ] ಭೀಮಾರ್ಜುನರು ಆಡುತ್ತಿರಲು, ದುರ್ಯೋಧನನು ನಡುವೆ ಬರಲು, ಭೀಮನು ದುರ್ಯೋಧನನನ್ನು ಹೊಡೆದನು

ಪ್ರ:—ಇವುಗಳಲ್ಲಿ ಸರಿಯಾದ ರೂಪಗಳು ಯಾವವು? ೧. ಬೆಳಿಸು, ಬೆಳಿಯಿಸು, ಬೆಳೆಸು, ಬೆಳಸು [illegible] ಕಳಿಹಿಸು, ಕಳುಹಿಸು, ಕಳಿಸು, ಕಳುಹು, ೩. ತಿಳಿಹಿಸು, ತಿಳಿಸು, ತಿಳುಹು ೪. ವೊಂದು. ವಂದು. ಒಂದು. ೫. ವೂರು ಊರು.

ಉ: ೧. ಬೆಳಿ+ಇಸು=ಬೆಳಿಯಿಸು, ಬೆಳಸು ೨. ಕಳು+ಇಸು=ಕಳಿಸು. ಕಳು+ಹು= ಕಳುಹು ೩. ತಿಳಿ+ ಇಸು= ತಿಳಿಸು ತಿಳಿ+ಹು= ತಿಳುಹು. ೪. ಒಂದು. ೫. ಊರು.

ಪ್ರ:— ಕೆಳಗೆ ಕೊಟ್ಟವಾಕ್ಯಗಳನ್ನು ಸರಿಪಡಿಸಿ ಬರೆಯಿರಿ ೧. ತಾಯಿಯು ಮಗುವನ್ನು ತೊಟ್ಟಿಲದ ಮೇಲೆ ಮಲಗಿಸಿದಳು. ೨. ಧರ್ಮರಾಜನು ಭೀಮಸೇನನ ಅಣ್ಣ; ಎಂದರೆ ಭೀಮಸೇನನು ಧರ್ಮರಾಜನಿಗಿಂತ ಹಿರಿಯ. ೩. ಆಕಳ ಮೂತ್ರವು ಜಂತುನಾಶಕವೆಂದು ಅನ್ನುವರು. ೪. ಎಲ್ಲರೂ ಆಹಾರವನ್ನೂ ನುರಿಸಿ ತಿನ್ನಬೇಕು

ಉ:— ೧ ತಾಯಿಯು ಮಗನನ್ನು ತೊಟ್ಟಿಲಲ್ಲಿ ಮಲಗಿಸಿದಳು. ೨ ಧರ್ಮರಾಯನು ಭೀಮಸೇನನ ಅಣ್ಣ, ಅಂದರೆ ಭೀಮಸೇನನು ಧರ್ಮರಾಯನಿಗಿಂತ ಕಿರಿಯ. ೩ ಆಕಳ ಮೂತ್ರವು ಜಂತುನಾಶಕವು. ೪. ಎಲ್ಲರೂ ಆಹಾರವನ್ನು ನುರಿಸಿ ತಿನ್ನಬೇಕು.

೨೩. ವಾಕ್ಯಗಳ ಅರ್ಥಭೇದಗಳು

೧. ಪರೀಕ್ಷೆಗೆ ಕುಳಿತವನು ಕಲ್ಲನೇ? ಪರೀಕ್ಷೆಗೆ ಕುಳಿತವನೇ ಕಲ್ಲನು. ೨ ರಾತ್ರಿಯಲ್ಲಿ ತೊಳಲಿದನು. ರಾತ್ರಿಯನ್ನು ತೊಳಲಿದನು ೩. ಎಲ್ಲ ವಿದ್ಯೆಗಳನ್ನು ಬಲ್ಲಿದನು ಎಲ್ಲ ವಿದ್ಯೆಗಳ ತವರೂರು ೪. ಆತನು ಬಡವರಿಗೆ ಕಾಮಧೇನು. ಆತನು ಬಡವರಿಗೆ ಕಾಮಧೇನುವಿನಂತೆ. ೫. ಕಲ್ಲನೂ ಬಂದನು. ಕಲ್ಲನೇ ಬಂದನು. ೬. ನಾನು ಯಮನು. ನಾನೇ ಯಮನು. ೭. ಸತ್ತರೆ ಸುಖ. ಸತ್ತರೇ ಸುಖ. ೮. ಚಿಕ್ಕಮಕ್ಕಳು ಧರ್ಮ ಇಕ್ಕುವರು. ಚಿಕ್ಕಮಕ್ಕಳೇ ಧರ್ಮ ಇಕ್ಕುವರು.

ಉ:—೧ ಮೊದಲನೇ ವಾಕ್ಯವು ಪ್ರಶ್ನಾರ್ಥಕವದೆ. ಸಂಶಯಾರ್ಥವನ್ನು ಸೂಚಿಸುವದು. ಎರಡನೇ ವಾಕ್ಯ ಪರೀಕ್ಷೆಗೆ ಕುಳಿತವನೇ ಕಲ್ಲನು ನಿಶ್ಚಯ ತೋರಿಸುತ್ತದೆ.

೨. ೧ನೇ ವಾಕ್ಯ:—ರಾತ್ರಿಯ ವೇಳೆಯಲ್ಲಿ ತೊಳಲಿದನು ಎಂಬರ್ಥ. ೨ನೇ ವಾಕ್ಯ:- ಇಡೀರಾತ್ರಿಯನ್ನೇ ತೊಳಲಿದನು ಎಂಬರ್ಥ.

೩. ಎಲ್ಲ ವಿದ್ಯೆಗಳಲ್ಲಿ ನಿಪುಣ. ಎಲ್ಲ ವಿದ್ಯೆಗಳ ಉಗಮಸ್ಥಾನ.

೪. (ರೂಪಕ) ಒಂದು ಮಾತ್ರೊಂದೆಯೇ ಆದೆ. ಒಂದು ಮಾತ್ರೊಂದರಂತೆ ಆದೆ. (ಉಪಮಾ)

೫. ಬಂದವರಲ್ಲಿ ಕಲ್ಲನು ಒಬ್ಬನಾಗಿದ್ದನು. ಬೇರೆ ಯಾರೂ ಬಾರದೆ ಕಲ್ಲನೊಬ್ಬನೇ ಬಂದನು.

೬. ಮೊದಲನೆಯದರಲ್ಲಿ ಯಮನಿಗೆ ಹೋಲಿಕೆ ಅದೆ; ನಾನೇ ಯಮನು, ಬೇರೆ ಯಾರು ಇಲ್ಲ.

೭. ಒಂದು ಬರೇ ನಿಶ್ಚಯ ತೋರಿಸುತ್ತದೆ. ಇನ್ನೊಂದು ಸತ್ತರೇನೆ ಸುಖವು ದೊರೆಯುವದು.

೮. ಧರ್ಮ ಇಕ್ಕುವದು ಚಿಕ್ಕವರ ಸ್ವಭಾವ. ಧರ್ಮ ಇಕ್ಕುವವರು ಚಿಕ್ಕ ಮಕ್ಕಳೇ. ಬೇರೆಯಾರೂ ಇಲ್ಲ.

ಪ್ರ:—೧ ಮಲ್ಲನು ಹೋದನು. ೨. ಮಲ್ಲನೂ ಹೋದನು. ೩. ಮಲ್ಲನೇ ಹೋದನು. ೪. ಮಲ್ಲನು ಹೋದನೆ ? ೫. ಮಲ್ಲನು ಹೋದನು. ೬. ಮಲ್ಲನು ಹೋದನೇ !

ಉ: ೧. ಇನ್ನೊಬ್ಬರು ಹೋದರೆಂದು ನಿಶ್ಚಿತ ಹೇಳದೆ ಮಲ್ಲನು ಹೋದನೆಂದು ಅರ್ಥವಾಗುವದು. ೨. ಕೆಲವರು ಹೋದರು; ಅವರ ಕೂಡ ಮಲ್ಲನು ಹೋದನು ೩. ಬೇರೊಬ್ಬರು ಹೋಗದೆ ಮಲ್ಲನೇ ಹೋದನೆಂದು ನಿಶ್ಚಯ ತೋರಿಸುತ್ತದೆ. ೪. ಮಲ್ಲನು ಹೋದದ್ದು ಗೊತ್ತಿಲ್ಲದಲ್ಲಿ ಇನ್ನೊಬ್ಬನನ್ನು ಕುರಿತು ಮಾಡಿದ ಪ್ರಶ್ನವು. ೫. ಮಲ್ಲನು ಹೋದನೆಂದು ಹೇಳುವದು ನಿಶ್ಚಯಾರ್ಥದಲ್ಲಿದೆ ೬. ಮಲ್ಲನು ಹೋದ ವಿಷಯದಲ್ಲಿ ಆಶ್ಚರ್ಯ ತೋರುವದು.

ಪ್ರ: ೧. ರಾಮ ಭೀಮರು ಹೋಗಲಿ. ೨. ರಾಮನೂ ಭೀಮನೂ ಹೋಗಲಿ. ೩. ರಾಮನು ಇಲ್ಲವೆ ಭೀಮನು ಹೋಗಲಿ. ಈ ಮಾತುಗಳಲ್ಲಿ ಹೆಚ್ಚು ಕಡಿಮೆಯಿದ್ದರೆ ಹೇಳಿರಿ.

ಉ:— ೧. ರಾಮನೂ ಭೀಮನೂ ಕೂಡಿ ಹೋಗಲಿ. ೨. ರಾಮನು ಮತ್ತು ಭೀಮನು ಬೇರೆ ಬೇರೆಯಾಗಿ ಹೋಗಬಹುದು. ೩. ರಾಮನು ಮತ್ತು ಭೀಮನು ಇವರಿಬ್ಬರಲ್ಲಿ ಬೇಕಾದವನು ಹೋಗಲಿ.

ಪ್ರ: ೧. ಗುಡಿಯು ಕಟ್ಟಿದೆ ೨. ಗುಡಿಯನ್ನು ಕಟ್ಟಿದೆ.

ಉ:— ಗುಡಿಯು ಕಟ್ಟಲ್ಪಟ್ಟದೆ, ಇದರ ಸಂಕ್ಷಿಪ್ತ ರೂಪವಿರುತ್ತದೆ. ಇದು ಸಂಕ್ಷಿಪ್ತ ಕರ್ಮಣಿ ಪ್ರಯೋಗವಿರುತ್ತದೆ. . . ಗುಡಿಯನ್ನು ಕಟ್ಟದೆ ಇದು ಗುಡಿಯನ್ನು ಕಟ್ಟಲಾಯಿತು. ಇದರ ಸಂಕ್ಷಿಪ್ತ ರೂಪವು.

ಪ್ರ: ೧. ಕೆಲಸವನ್ನು ಮುಗಿಸಲೇಬೇಕು. ೨. ಈ ಕೆಲಸವನ್ನೇ ಮುಗಿಸಬೇಕು.

ಉ:— ೧. ಮುಗಿಸುವದರ ಕಡೆಗೆ ಮಹತ್ವ ಕೊಡಲಾಗಿದೆ. ೨. ಕೆಲಸದ ಮೇಲೆ ಮಹತ್ವಕೊಡಲಾಗಿದೆ

ಪ್ರ:— ೧. ಲೀಲೆಯು ಶ್ರೀಮಂತನನ್ನು ಪ್ರೀತಿಸುತ್ತಾಳೆ ೨. ಲೀಲೆಯು ಶ್ರೀಮಂತಿಕೆಯನ್ನು ಪ್ರೀತಿಸುತ್ತಾಳೆ.

ಉ:- ೧. ಶ್ರೀಮಂತನಿದ್ದರೆ ತೀರಿತು. ೨ ಶ್ರೀಮಂತಿಕೆ ಇದ್ದರೆ ತೀರಿತು.

ಪ್ರ:— [ಅ] ಮಾತಿಗೊಂದು ಗಾದೆ; [ಆ] ಮಾತುಮಾತಿಗೊಂದು ಗಾದೆ.

ಉ:- [ಅ] ಸಾಮಾನ್ಯ ವಾಕ್ಯ. [ಆ] ಪ್ರತಿಯೊಂದು ಮಾತಿಗೆ ಒಂದು ಗಾದೆ.

ಪ್ರ:— [ಅ] ನೋಟದ ಸವಿಯನ್ನುಂಡನು. [ಆ] ನೋಟಕ್ಕೆ ಸವಿಯನ್ನುಂಡನು.

ಉ:— [ಅ] ಸವಿಯು ನೋಟದಲ್ಲಿದೆ. [ಆ] ಸವಿಯಾದದ್ದನ್ನು ನೋಡಿದನು.

ಪ್ರ:— [ಅ] ವಿನೋದಕ್ಕೆ ಆಟವಾಡಿದೆನು. [ಆ] ವಿನೋದದಿಂದ ಆಟವಾಡಿದೆನು.

ಉ:— [ಅ] ಆಟ ವಿನೋದಕ್ಕಾಗಿ ಆಡಿದೆನು [ಆ] ಆಟವನ್ನು ವಿನೋದದಿಂದ ಆಡಿದೆನು.

ಪ್ರ: [ಅ] ಜಾಣ್ಮೆಯಿಂದಲೇ ಮಾತು ತಿಳಿಯುವದು. [ಆ] ಜಾಣ್ಮೆ ಮಾತಿನಿಂದ ತಿಳಿಯುವದು.

ಉ: — ಅ. ಜಾಣ್ಮೆ ಮಹತ್ವವಾದದ್ದು. ಆ ಮಾತು ಮಹತ್ವದ್ದು.

ಪ್ರ:— ಅ. ಆತನೇ ಕರ್ಣನಂತೆ ದಾನಶೂರನು. ಆ ಆತನು ಕರ್ಣನಂತೆ ದಾನಶೂರನು.

ಉ: — ಅ. ಇಲ್ಲಿ, ಆತನೇ ಮುಖ್ಯ ಪಾತ್ರನು. ಆ. ಅನೇಕ ಜನರಲ್ಲಿ ಆತನೊಬ್ಬನು.

ಪ್ರ:—[ಅ] i ರಾಮನು ನಕ್ಕು ನುಡಿದನು.

[ii] ರಾಮನು ನಗುತ್ತ ನುಡಿದನು.

[iii] ರಾಮನು ನಗದೆ ನುಡಿದನು.

ಇಲ್ಲಿ ಗೆರೆ ಹೊಡೆದ ರೂಪಗಳು ಎಂತಹವು? ಆಯಾ ವಾಕ್ಯಗಳ ಅರ್ಥಗಳಲ್ಲಿರುವ ವ್ಯತ್ಯಾಸವನ್ನು ಳಿಡು, ನಗು ಧಾತುವಿನಿಂದ ಕ್ರಿಯಾಪದವಲ್ಲದ ಮತ್ತಾವ ರೂಪವಾಗುವದು? ಅದನ್ನು ವಾಕ್ಯದಲ್ಲಿ ಉಪಯೋಗಿಸಿ ತೋರಿಸಿರಿ.

[ಆ] ಮೂರು ಕಾಲಗಳಲ್ಲಿಯೂ ಸರಿಯಾಗಿಯೇ ಉಪಯೋಗಿಸಲ್ಪಡುವ ಕನ್ನಡದ ಕ್ರಿಯಾಪದಗಳು ಯಾವವು? ಉದಾಹರಣಗಳನ್ನು ಕೊಡಿರಿ.

ಉ: [ಅ] [i] ಭೂತನ್ಯೂನ ನಗುವ ಕ್ರಿಯೆ ಹಿಂದೆ ಆಗಿದೆ.

[ii] ವರ್ತಮಾನನ್ಯೂನ ನುಡಿಯುವಾಗ ನಗುವ ಕ್ರಿಯೆ ನಡೆಯಿತು ಎಂಬರ್ಥ.

[iii] ನಿಷೇಧನ್ಯೂನ. ನಗುವ ಕ್ರಿಯೆ ನಡೆಯಲಿಲ್ಲ ಎಂಬರ್ಥ
ನಗು ಧಾತುವಿನ ಕ್ರಿಯಾಪದವಲ್ಲದ ರೂಪವೆಂದರೆ–ನಗುವಿಕೆ; ರಾಮನ ನಗುವಿಕೆಯು ಮನೋಹರವಾಗಿತ್ತು.

[ಆ] ಮೂರೂ ಕಾಲಗಳಲ್ಲಿ ಸರಿಯಾಗಿ ಉಪಯೋಗಿಸಲ್ಪಡುವ ಕನ್ನಡ ಕ್ರಿಯಾಪದಗಳು–ಮಾಡ, ಕೊಡ, ಕೇಳ,

೨೪. ಪ್ರಶ್ನಾರ್ಥಕ ವಾಕ್ಯ ಮಾಡುವದು

ಪ್ರಶ್ನೆ ಕೇಳುವಾಗ, ಸಾಮಾನ್ಯವಾಗಿ ಯಾರು, ಯಾವಾಗ, ಎಂದು, ಯಾವ ಎಲ್ಲಿ, ಏಕೆ ಯಾಕೆ, ಎಂತು, ಎಷ್ಟು ಹೇಗೆ ಮೊದಲಾದವು ಗಳನ್ನು ಉಪಯೋಗಿಸುವರು.

ಪ್ರ:— ದೇವರ ಭಯವೇ ಭಕ್ತಿಯ ಮೂಲ

ಉ:—ದೇವರ ಭಯವೇ ಭಕ್ತಿಯ ಮೂಲವಲ್ಲವೇ ?

ಪ್ರ:— ಈ ದಾರಿಯು ಹಾಸನಕ್ಕೆ ಹೋಗುತ್ತದೆ.

ಉ:— ಈ ದಾರಿಯು ಹಾಸನಕ್ಕೆ ಹೋಗುತ್ತದೆಯೋ ?

ಪ್ರ:— ಒಳ್ಳೇ ಜನರು ಪ್ರಾಣಿಗಳನ್ನು ಕಷ್ಟಪಡಿಸುವದಿಲ್ಲ.

ಉ: — ಒಳ್ಳೇ ಜನರು ಪ್ರಾಣಿಗಳನ್ನು ಕಷ್ಟಪಡಿಸುವರೇ ?

ಪ್ರ:— ಕೋಣನಿಗೆ ತಂಬೂರಿಯ ನಾದವು ತಿಳಿಯುವದಿಲ್ಲ.

ಉ:— ಕೋಣನಿಗೆ ತಂಬೂರಿಯ ನಾದವು ತಿಳಿಯುವದೇ ?

ಪ್ರ: — ಮೂರ್ಖನಿಗೆ ಉಪದೇಶವು ಬೇಡ.

ಉ:— ಮೂರ್ಖನಿಗೆ ಉಪದೇಶವು ಏತಕ್ಕೆ ಬೇಕು ?

ಪ್ರ:— ಸೂರ್ಯನು ಪಶ್ಚಿಮದಲ್ಲಿ ಮೂಡುವದಿಲ್ಲ.

ಉ:— ಸೂರ್ಯನು ಪಶ್ಚಿಮದಲ್ಲಿ ಮೂಡುವನೇ ?

ಪ್ರ:— ಕತ್ತೆಗೆ ಕಸ್ತೂರಿಯ ಪರಿಮಳ ತಿಳಿಯದು.

ಉ: ಕತ್ತೆಗೆ ಕಸ್ತೂರಿಯ ಪರಿಮಳವು ತಿಳಿಯುವದೇ ?

ಪ್ರ:— ಇಂದೇ ಬರೆಯಿರಿ. ಇಲ್ಲವೆ ಸಮಕ್ಷಮ ಭೆಟ್ಟಿಯಾಗಿರಿ. [೧೯೪೯]

ಉ: — ಇಂದೇ ಬರೆಯುವಿರಾ ? ಇಲ್ಲವೆ ಸಮಕ್ಷಮ ಭೆಟ್ಟಿಯಾಗುವಿರಾ ?

೨೫. ನಿಷೇಧಾರ್ಥಕ ವಾಕ್ಯ ಮಾಡುವದು

ಇಲ್ಲ ಎಂದು ಅರ್ಥ ಮಾಡುವ ವಾಕ್ಯಗಳಿವು.

ಪ್ರ: — ನಾನು ಈ ಮನೆಯಲ್ಲಿ ಉಳಿಯಬಹುದೇ ? [ಈ ಪ್ರಶ್ನೆಗೆ ಉತ್ತರವಾಗಿ ಒಂದು ನಿಷೇಧ ವಾಕ್ಯವನ್ನು ಬರೆಯಿರಿ.]

ಉ:— ನಾನು ಈ ಮನೆಯಲ್ಲಿ ಉಳಿಯಲಾರೆನು.

ಪ್ರ:— ೧ ನಗನು, ೨. ನಗುವದಿಲ್ಲ, ೩. ನಕ್ಕಿಲ್ಲ, ೪ ನಗಲಾರನು ೫. ನಗಬಾರದು, ೬. ನಗಲಿಲ್ಲ. ಇವುಗಳ ಅರ್ಥಭೇದ ಹೇಳು.

ಉ:—೧. ನಗಲಾರನು, ಭವಿಷತ್‌ದಲ್ಲಿ ನಿಶ್ಚಯ, ೩. ಭೂತ ಕಾಲದಲ್ಲಿ ೪. ನಗುವದು ಶಕ್ಯವಿಲ್ಲ, ೫. ನಗುವ ಆವಶ್ಯಕತೆ ಇಲ್ಲ, ೬. ಭೂತಕಾಲದಲ್ಲಿ ನಿಷೇಧ, ನಗುವ ಪ್ರಸಂಗ ದೊರೆತರೂ ನಗಲಿಲ್ಲ.

ಪ್ರ:— ನೀನು ಮನೆಗೆ ಹೋಗು (ಕ್ರಿಯಾಪದದ ನಿಷೇಧಾರ್ಥಕ ರೂಪವನ್ನು ಉಪಯೋಗಿಸಿರಿ.)

ಉ:— ನೀನು ಮನೆಗೆ ಹೋಗಬೇಡ.

ಪ್ರ:—ಹೋಗಬೇಕು, ಮಲಗಿದನು, ಹೂರುವನು, ನುಡಿಯುವನು ಈ ಕ್ರಿಯಾಪದಗಳಿಗೆ ಅನುರೂಪವಾದ ನಿಷೇಧಾರ್ಥಕ ರೂಪಗಳನ್ನು ಬರೆಯಿರಿ.

ಉ:—ಹೋಗಬಾರದು (ಹೋಗಬೇಡ), ಮಲಗಲಿಲ್ಲ, ಹೊರನು (ಹೊರುವದಿಲ್ಲ), ನುಡಿಯನು (ನುಡಿಯುವದಿಲ್ಲ).

ಪ್ರ:— (ಅ) ನಗುತ್ತಾನೆ, ಹೊತ್ತನು, ಕೇಳಲಿ, ಉಳುವನು, ಕೊಂಡನು, ಹೋಗಬೇಕು ಇವುಗಳಿಗೆ ಅನುರೂಪವಾದ ನಿಷೇಧರೂಪ, ಕ್ರಿಯಾಪದಗಳನ್ನು ಹೇಳು.

ಉ:— ನಗುತ್ತಾನೆ, ಇದರ ನಿಷೇಧರೂಪ ನಗು+ಉವದು (ಉವುದು)+ಇಲ್ಲ=ನಗುವದಿಲ್ಲ (ನಗುವುದಿಲ್ಲ) ಹೊತ್ತನು,-ಹೊತ್ತು+ಇಲ್ಲ =ಹೊತ್ತಿಲ್ಲ, ಹೊರು+ಇಲ್=ಹೊರಲಿಲ್ಲ; ಕೇಳಬಾರದು, ಕೇಳಕೂಡದು, ಕೇಳಲಾಗದು . ಉಳುವನು= ಉಳು+ ಉವದು+ ಇಲ್ಲ,= ಉಳುವದಿಲ್ಲ; (ಉಳುವುದಿಲ್ಲ) ಕೊಂಡನು= ಕೊಂಡು+ಇಲ್ಲ = ಕೊಂಡಿಲ್ಲ; ಕೊಳ್ಳು+ ಅಲ್+ಇಲ್ಲ= ಕೊಳ್ಳಲಿಲ್ಲ, ಹೋಗಬೇಕು:-ಹೋಗಬಾರದು, ಹೋಗ ಕೂಡದು ಹೋಗಬೇಡ, ಹೋಗಬೇಡಿರಿ.

೨೬. ಪ್ರಯೋಗಗಳು

ಪ್ರಯೋಗ – [೧] ಕರ್ತರಿ ಪ್ರಯೋಗ. [೨] ಕರ್ಮಣಿ ಪ್ರಯೋಗ. [೩] ಸಂಕ್ಷಿಪ್ತ ಕರ್ಮಣಿ ಪ್ರಯೋಗ ಎಂಬ ಮೂರು ಪ್ರಕಾರಗಳಿವೆ.

೧. ಕರ್ತರಿ ಪ್ರಯೋಗದ ಲಕ್ಷಣ: ಪ್ರಥಮಾಂತ ಕರ್ತೃ, ದ್ವಿತೀಯಾಂತ ಕರ್ಮ ಕರ್ತೃವಿನ ಪುರುಷ, ಲಿಂಗ, ವಚನಗಳು ಕ್ರಿಯಾ ಪದಕ್ಕೆ ಹತ್ತುವವು.

೨. ಕರ್ಮಣಿ ಪ್ರಯೋಗದ ಲಕ್ಷಣ: ತೃತೀಯಾಂತ ಕರ್ತೃ ಪ್ರಥಮಾಂತ ಕರ್ಮ, ಕರ್ಮದ ಪುರುಷಲಿಂಗ ವಚನಗಳು ಕ್ರಿಯಾಪದಕ್ಕೆ ಹತ್ತುವವಲ್ಲದೆ ಅಲ್ಪಡು ಎಂಬುದೊಂದು ಆಗಮವಾಗುತ್ತದೆ.

೩. ಸಂಕ್ಷಿಪ್ತ ಕರ್ಮಣಿ ಪ್ರಯೋಗದ ಲಕ್ಷಣ: ಅಲ್ಪಡು ಎಂಬ ದನ್ನು ಸೇರಿಸದೆ ಕರ್ಮಣಿ ಪ್ರಯೋಗ ಮಾಡುತ್ತಾರೆ.

ಉದಾ: ದಕ್ಷಿಣೆಯು ಕೊಟ್ಟಿತು. ಪಾಟಿಗಳು ತಂದಿವೆ.
ಕೆಳಗಿನವುಗಳನ್ನು ಕರ್ಮಣಿ ಪ್ರಯೋಗ ಮಾಡಿರಿ.
ಪ್ರ: — ನೀನು ನನ್ನ ಕೆಲಸವನ್ನು ಕೆಡಿಸಿದಿ.
ಉ: — ನಿನ್ನಿಂದ ನನ್ನ ಕೆಲಸವು ಕೆಟ್ಟಿತು.
ಪ್ರ: — ನಾನು ಮುಂಜಾನೆ ಔಷಧವನ್ನು ತೆಗೆದುಕೊಂಡಿದ್ದೇನೆ.
ಉ: — ನನ್ನಿಂದ ಔಷಧವು ಮುಂಜಾನೆ ತೆಗೆದುಕೊಳ್ಳಲ್ಪಟ್ಟಿತು.
ಪ್ರ: — ನೀನು ಮರಗಳನ್ನು ಕಡಿಯುತ್ತೀಯಾ ?
ಉ: — ನಿನ್ನಿಂದ ಮರಗಳು ಕಡಿಯಲ್ಪಡುವವೋ ?
ಪ್ರ: — ನಾವು ಕೈಲಾಸಪರ್ವತವನ್ನು ದೂರದಿಂದಲೇ ನೋಡುವೆವು
ಉ: — ಕೈಲಾಸಪರ್ವತವು ನಮ್ಮಿಂದ ದೂರದಿಂದಲೇ ನೋಡಲ್ಪಡುವದು
ಪ್ರ: — ನಾನು ಗಂಗಾನದಿಯನ್ನು ದೂರದಿಂದಲೇ ನೋಡಿದೆನು.
ಉ: — ಗಂಗಾನದಿಯು ನನ್ನಿಂದ ದೂರದಿಂದಲೇ ನೋಡಲ್ಪಟ್ಟಿತು
ಪ್ರ: — ರಾವಣನು ಸೀತೆಯನ್ನು ಕದ್ದೊಯ್ದನು

ಉ: ಸೀತೆಯು ರಾವಣನಿಂದ ಕದ್ದೊಯ್ಯಲ್ಪಟ್ಟಳು.

ಪ್ರ: ವಿದ್ಯಾರ್ಥಿಗಳಿಗೆ ಗುರುಗಳು ವಿದ್ಯೆಯನ್ನು ಕಲಿಸುತ್ತಾರೆ.

ಉ: ವಿದ್ಯೆಯು ವಿದ್ಯಾರ್ಥಿಗಳಿಗೆ ಗುರುಗಳಿಂದ ಕಲಿಸಲ್ಪಡುತ್ತದೆ.

ಪ್ರ: ಹಿಟ್ಲರನು ಯುದ್ಧವನ್ನು ಪ್ರಾರಂಭ ಮಾಡಿದನು.

ಉ: ಯುದ್ಧವು ಹಿಟ್ಲರನಿಂದ ಪ್ರಾರಂಭ ಮಾಡಲ್ಪಟ್ಟಿತು.

ಪ್ರ:— ಚೀನಿ ಜನರು ರೇಶಿಮೆ ಹುಳಗಳನ್ನು ಸಾಕುತ್ತಾರೆ.

ಉ: ರೇಶಿಮೆ ಹುಳಗಳು ಚೀನಿ ಜನರಿಂದ ಸಾಕಲ್ಪಡುವವು.

ಪ್ರ:—ನನ್ನ ಗೆಳೆಯನು ನನಗೆ ಮೂರು ರೂಪಾಯಿಗಳನ್ನು ಬೇಡಿದನು (೧೯೪೩)

ಉ:— ನನ್ನ ಗೆಳೆಯನಿಂದ ನನಗೆ ಮೂರು ರೂಪಾಯಿಗಳು ಬೇಡಲ್ಪಟ್ಟವು

ಪ್ರ:— ಕೆಳಗಿನವುಗಳ ಪ್ರಯೋಗಗಳನ್ನು ಹೇಳಿ, ಆ ಪ್ರಯೋಗಗಳನ್ನು ಬದಲಾಯಿಸಿ ಬರೆಯಿರಿ.

(ಆಕ್ಟೋಬರ ೧೯೪೭)

ಕ. ಹನುಮಂತನಿಂದ ಸೀತಾದೇವಿಯು ಹುಡುಕಲ್ಪಟ್ಟಳು.

ಬ ಭಕ್ತರು ಬಹು ವಿಧವಾಗಿ ದೇವರನ್ನು ಭಜಿಸುತ್ತಾರೆ.

ಗ ನೀನೇ ಆ ಕೆಲಸವನ್ನು ಮಾಡು.

ಉ: ಕ. ಕರ್ಮಣಿ ಪ್ರಯೋಗದಲ್ಲಿದೆ. ಅದರ ಕರ್ತರಿ ಪ್ರಯೋಗ-ಹನುಮಂತನು ಸೀತಾದೇವಿಯನ್ನು ಹುಡುಕಿದನು.

ಬ. ಕರ್ತರಿ ಪ್ರಯೋಗದಲ್ಲಿದೆ. ಅದರ ಕರ್ಮಣಿ ಪ್ರಯೋಗ— ದೇವರು ಭಕ್ತರಿಂದ ಬಹುವಿಧವಾಗಿ ಭಜಿಸಲ್ಪಡುತ್ತಾನೆ.

ಗ ಕರ್ತರಿಪ್ರಯೋಗದಲ್ಲಿದೆ ಅದರ ಕರ್ಮಣಿಪ್ರಯೋಗ–ನಿನ್ನಿಂದಲೇ ಆ ಕೆಲಸವು ಮಾಡಲ್ಪಡಲಿ

೧೯೪೭ ಎಪ್ರೀಲ.

ಪ್ರ: ಕ. ಹನುಮಂತನು ಲಂಕಾಪಟ್ಟಣವನ್ನು ಸುಟ್ಟು ಬೂದಿ ಮಾಡಿದನು

ಬ. ಕುರುಕ್ಷೇತ್ರದಲ್ಲಿ ಪಾಂಡವರಿಂದ ಕೌರವನಾಯಕರೆಲ್ಲರೂ ಕೊಲ್ಲಲ್ಪಟ್ಟರು.

ಗ ಪರಮಪತಿವ್ರತೆಯಾದ ಸಾವಿತ್ರಿಯು ಕಳೆದು ಹೋದ ಗಂಡನ ಜೀವವನ್ನು ಮರಳಿ ಪಡೆದಳು.

ಉಃ –ಕ. ಕರ್ತರಿ ಪ್ರಯೋಗದಲ್ಲಿದೆ/ ಕರ್ಮಣಿಪ್ರಯೋಗ–ಹನುಮಂತನಿಂದ ಲಂಕಾಪಟ್ಟಣವು ಸುಟ್ಟು ಬೂದಿ ಮಾಡಲ್ಪಟ್ಟಿತು.

ಬ. ಕರ್ಮಣಿಪ್ರಯೋಗದಲ್ಲಿದೆ. ಕರ್ತರಿಪ್ರಯೋಗ–ಕುರುಕ್ಷೇತ್ರದಲ್ಲಿ ಪಾಂಡವರು ಕೌರವನಾಯಕರೆಲ್ಲರನ್ನು ಕೊಂದರು.

ಗ. ಕರ್ತರಿಪ್ರಯೋಗದಲ್ಲಿದೆ. ಇದರ ಕರ್ಮಣಿಪ್ರಯೋಗಃ— ಪರಮಪತಿವ್ರತೆಯಾದ ಸಾವಿತ್ರಿಯಿಂದ ಕಳೆದಹೋದ, ಗಂಡನ ಜೀವವು ಮರಳಿತು.

ಕೆಳಗೆ ಕೊಟ್ಟ ವಾಕ್ಯಗಳಲ್ಲಿಯ ಪ್ರಯೋಗಗಳನ್ನು ಹೇಳಿ. ಆ ಪ್ರಯೋಗಗಳನ್ನು ಬದಲು ಮಾಡಿ ಬರೆಯಿರಿ

[೧] ರಾವಣನು ರಾಮನಿಂದ ಕೊಲ್ಲಲ್ಪಟ್ಟನು.

[೨] ರಂಗನು ಹತ್ತು ರೂಪಾಯಿಗಳನ್ನು ಕೊಟ್ಟನು.

[೩] ನೀವು ಯಾವಾಗಲೂ ಸತ್ಯವನ್ನು ಮಾತಾಡತಕ್ಕದು,

[೪] ನಿಂಗನಿಂದ ಗಿಡವು ಕೊಡಲಿಯಿಂದ ಕಡಿಯಲ್ಪಡುತ್ತದೆ.

ಉ:— [೧] ಇದು ಕರ್ಮಣಿಪ್ರಯೋಗದ ವಾಕ್ಯವು ಇರುತ್ತದೆ. ಇದರ ಕರ್ತರಿಪ್ರಯೋಗ . ರಾಮನು ರಾವಣನನ್ನು ಕೊಂದನು.

[೨] ಇದರ ಕರ್ತರಿಪ್ರಯೋಗದ ವಾಕ್ಯವು ಇದರ ಕರ್ಮಣಿ ಪ್ರಯೋಗ..ರಂಗನಿಂದ ಹತ್ತು ರೂಪಾಯಿ ಕೊಡಲ್ಪಟ್ಟವು.

[೩] ಇದು ಕರ್ತರಿಪ್ರಯೋಗವು ಇದೆ. ಇದರ ಕರ್ಮಣಿ ಪ್ರಯೋಗಃ–ನಿನ್ನಿಂದ ಯಾವಾಗಲೂ ಸತ್ಯವು ಮಾತಾಡ[illegible]ತಕ್ಕ

[೪] ಇದು ಕರ್ತರಿಪ್ರಯೋಗದ ವಾಕ್ಯ. ಇದರ ಕರ್ತರಿ ಪ್ರಯೋಗ–ನಿಂಗನು ಗಿಡವನ್ನು ಕೊಡಲಿಯಿಂದ ಕಡಿಯುತ್ತಾನೆ.

ಪ್ರಃ—ಯಾಕೆ ಚಿಂತಿಸುವೆ ದುಃಖಿಸುವೆ ಮನುಜನೆ ಬರಿದೆ।
ಸಾಕು ಬಿಡು ಪರಮಾತ್ಮನನ್ನು ನೆನೆಮನದೆ ॥

ಇಲ್ಲಿರುವ ವಾಕ್ಯಗಳು ಎಂತೆಂತಹವು ? 'ಬರಿದೆ' ಇದಕ್ಕೆ ವ್ಯಾಕರಣದಲ್ಲಿ ಹೆಸರೇನು ? ಬುಡದಲ್ಲಿ ಗೆರೆ ಹೊಡೆದು ಗುರುತಿಸಿದ ವಾಕ್ಯದ ಪ್ರಯೋಗವನ್ನು ಕರ್ತ್ರಾದಿಗಳೊಡನೆ ಹೇಳಿ, ವ್ಯಾಕರಣದ ದೃಷ್ಟಿಯಿಂದ ಪ್ರತಿಪದದ ಸ್ವರೂಪವನ್ನು ರೂಪಿಸಿರಿ. [೧೯೩೦]

ಉ:— ಇದರಲ್ಲಿ ನಾಲ್ಕು ವಾಕ್ಯಗಳಿವೆ (೧) ಮನುಜನೆ ಯಾಕೆ ಚಿಂತಿಸುವೆ. (೨) ಬರಿದೆ ದುಃಖಿಸುವೆ. (೩) ಸಾಕುಬಿಡು. (೪) ಮನದೆ ಪರಮಾತ್ಮನನ್ನೆ ನೆನೆ.

ಮೊದಲಿನವೆರಡು ಪ್ರಶ್ನಾರ್ಥಕ ವಾಕ್ಯಗಳು. ಮೂರನೆಯದು ಸಾಮಾನ್ಯವಾಕ್ಯ ನಾಲ್ಕನೇಯದು ವಿಧ್ಯರ್ಥಕ.

ಬರಿದೆ ಅವ್ಯಯ.

ಪರಮಾತ್ಮನನ್ನು=ಪರಮ+ಆತ್ಮ+ಅನ್ನು; ದ್ವಿತೀಯಾವಿಭಕ್ತಿ ಏಕವಚನ ಕರ್ಮ.

ಮನದೆ ಮನ ಇದರ ಸಪ್ತಮಿ ಏಕವಚನ.

ನೆನೆ ನೆನೆ ಧಾತು, ವಿಧ್ಯರ್ಥಕ, ದ್ವಿತೀಯ ಪುರುಷ; ಏಕ ವಚನ, ನೀನು ಎಂಬ ಅಧ್ಯಾಹಾರ ಕರ್ತೃವಿಗೆ ಕ್ರಿಯಾಪದ. ಸಕರ್ಮಕ ಕರ್ತರಿ ಪ್ರಯೋಗ.

೨೭ ವಾಕ್ಯಸಂಯೋಗ

ಹಿಂದುಮುಂದಿನ ವಾಕ್ಯಗಳ ಸಂಬಂಧವಿಲ್ಲದೆ ಪೂರ್ಣ ವಿಚಾರವನ್ನು ಹೇಳುವ ವಾಕ್ಯವು ಸ್ವತಂತ್ರ ವಾಕ್ಯವು

ಒಂದೇ ಕ್ರಿಯಾಪದವುಳ್ಳ ಸ್ವತಂತ್ರ ವಾಕ್ಯವು, ಸಾಮಾನ್ಯವಾಕ್ಯವು, ಉದಾ:—ರಾಮನು ರಾವಣನನ್ನು ಕೊಂದನು.

ವಾಕ್ಯಗಳನ್ನೇ ಅಂಗವಾಗಿ ಹೊಂದಿರುವ ವಾಕ್ಯವು ಮಿಶ್ರವಾಕ್ಯವು.

ಉದಾ:—ಓದದಿದ್ದರೆ ವಿದ್ಯೆ ಬರುವದಿಲ್ಲವೆಂದು ಸರ್ವರೂ ತಿಳಿದಿದ್ದಾರೆ. ಈ ವಾಕ್ಯದಲ್ಲಿ ಓದದಿದ್ದರೆ ವಿದ್ಯೆ ಬರುವದಿಲ್ಲವೆಂಬ ಅಂಗ

ವಾಕ್ಯವು. ಸರ್ವರೂ ತಿಳಿದಿದ್ದಾರೆ. ಎಂಬ ಪ್ರಧಾನ ವಾಕ್ಯಕ್ಕೆ ಕರ್ಮ ಸ್ಥಾನದಲ್ಲಿ ಇರುತ್ತದೆ.

ಎರಡು ಇಲ್ಲವೆ ಹೆಚ್ಚಾದ ಸ್ವತಂತ್ರ ವಾಕ್ಯಗಳು. ಮತ್ತು. ಮೊದಲಾದ ಅವ್ಯಯಗಳಿಂದ ಸೇರಿಸಲ್ಪಟ್ಟಿದ್ದರೆ. ಅದು ಸಂಯೋಜಿತ ವಾಕ್ಯವೆನಿಸುವದು.

ಉದಾ: - ವಿದ್ಯಾರಣ್ಯರು ಮೃತ್ಯುಲೋಕದಲ್ಲಿ ಜನ್ಮವೆತ್ತಿದರು. ಮತ್ತು ಮಾನವ ಜನ್ಮದ ಸಾರ್ಥಕತೆಯನ್ನು ಮಾಡಿಕೊಂಡರು

ವಾಕ್ಯಗಳ ಸಂಯೋಗಕ್ಕೆ ಸಮುಚ್ಚಾಯಕಾವ್ಯಯಗಳು ಆವಶ್ಯಕವಾದವುಗಳು. ಉದಾ: – ಮತ್ತು ಅಲ್ಲದೆ, ಇದಲ್ಲದೆ, ಬಳಿಕ. ಕೂಡಲೆ. ಹಾಗು. ಇನ್ನು ಇತ್ಯಾದಿ

ಕಾರಣಾರ್ಥಗಳು ವಾಕ್ಯಗಳನ್ನು ಒಂದುಗೂಡಿಸುತ್ತವೆ. ಉದಾ— ಆದ್ದರಿಂದ, ಇದರಿಂದ, ಆದುದರಿಂದ, ಆದಕಾರಣ, ಏಕೆಂದರೆ ಮುಂತಾದವುಗಳು.

ವಿರುದ್ಧಾರ್ಥಕಗಳು ಎರಡು ವಿರುದ್ಧ ಅರ್ಥಗಳುಳ್ಳ ವಾಕ್ಯಗಳನ್ನು ಕೂಡಿಸುತ್ತವೆ.

ಉದಾ: ಆದರೆ, ಆದರೂ, ಇದ್ದರೂ ಮುಂತಾದವುಗಳು, ಕೆಲವು ವಿಕಲ್ಪಾರ್ಥಗಳು ಅಲ್ಲಲ್ಲಿ ಕಂಡುಬರುತ್ತವೆ.

ಉದಾ:— ಇಲ್ಲವೆ, ಅಲ್ಲವೆ, ಅಥವಾ ಮುಂತಾದವು.

ಒಂದು ವಾಕ್ಯವಾಗಲಿ ಅಥವಾ ಪದವಾಗಲಿ ಇನ್ನೊಂದು ವಾಕ್ಯದ ಅಥವಾ ಪದದ ವಿವರಣೆಯನ್ನು ಮಾಡುತ್ತಿದ್ದರೆ, ನಡುವೆ ವಿವರಣಾರ್ಥಕಗಳು ಬರುತ್ತವೆ.

ಉದಾ: ಹೇಗೆಂದರೆ, ಎಂತೆಂದರೆ, ಏನಂದರೆ ಮುಂತಾದವು.

ಸಂಬಂಧ ಸೂಚಕಗಳು:— ಎಂಬ, ಯಾವದು ಅದು; ಎಷ್ಟು— ಅಷ್ಟು; ಎಂಥ–ಅಂಥ; ಎಷ್ಟು–ಅಷ್ಟು, ಇವು ಜತೆಯಾಗಿ ಬಂದಿರಲು ಅವುಗಳಿಗೆ 'ಓ' 'ಎಂದರೆ' ಎಂಬ ಸಂಬಂಧ ಸೂಚಕಗಳ ಅಪೇಕ್ಷೆ ಇರುತ್ತದೆ.

ಉದಾಹರಣೆಗಳು

೧. ಸಮುಚ್ಚಯಕ್ಕೆ–ಪ್ರೀತಿಯಿಂದಲೂ ಭಕ್ತಿಯಿಂದಲೂ ದೇವರನ್ನು ಭಜಿಸು; ಬಳಿಕ ನಿನಗೆ ಸಂಪತ್ತು ಹಾಗೂ ಸುಖವು ದೊರಕುವವು.

೨. ಕಾರಣಕ್ಕೆ–ರಾವಣನು ಸೀತೆಯನ್ನು ಕದ್ದೊಯ್ದನು; ಅದ್ದರಿಂದ ರಾವಣನು ರಾಮನನ್ನು ಸಂಹರಿಸಿದನು.

೩. ವಿರೋಧಕ್ಕೆ–ನೀನು ಹೊರಡುವದಕ್ಕೆ ನನಗೆ ಅಡ್ಡಿ ಎಳ್ಳಷ್ಟೂ ಇಲ್ಲ; ಆದರೆ ನೀನು ಅಲ್ಲಿಯವುಟ್ಟಿಗೆ ಹೋಗದಿರು.

೪. ವಿಕಲ್ಪಕ್ಕೆ (ಗೌಣಾರ್ಥಕ್ಕೆ)–ಹರನಾಗಲಿ ಅಥವಾ ಹರಿಯಾಗಲಿ ನಿನಗೆ ಭೇದವೆಲ್ಲಿಂದ ಬರಬೇಕು?

೫. ವಿವರಣಾರ್ಥಕ್ಕೆ– ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು. ಹೇಗೆಂದರೆ, ಕುಳಿತು ಉಣ್ಣುವವನು ದುಡ್ಡನ್ನು ಗಳಿಸದಿರುವದರಿಂದ ಇದ್ದ ದುಡ್ಡೆಲ್ಲ ಹೊಟ್ಟೆಗೇ ಹೋಗುವದು.

೬. ಸಂಬಂಧ ಸಮುಚ್ಚಯಕ್ಕೆ–(ಅ) ಯಾವಾಗ ಎರಡು ಮಹಾಸಾಗರಗಳು ಅಭಿಘಟಿಸುತ್ತ ಬಂದು ಒಂದಕ್ಕೊಂದು ತಿಕ್ಕೆ ಹಾಯ್ದವೋ ಆಗ ಭಯಂಕರವಾದ ಅಲ್ಲೋಲಕಲ್ಲೋಲವುಂಟಾಗಿ, ಭೋರೆಂಬ ಗಂಭೀರವಾದ ಉದ್ಘೋಷವು ಹುಟ್ಟುತ್ತದೆ.

(ಆ) ಯಾವನು ತನ್ನ ಧೈರ್ಯೋತ್ಸಾಹ, ವಿಕ್ರಮಗಳಿಂದ ವಿಪತ್ಪರಂಪರೆಗಳೆಲ್ಲವನ್ನು ಚದರಿಸುವನೋ, ಅವನು ಸುಖಬಡುವನು.

(ಇ) ಎಲ್ಲಿ ಪಾಂಡವರು ಜಯಶೀಲರಾದರೋ, ಇಬ್ರಾಹಿಮ ಲೋಡಿ ಸೋತು ಹೋದನೋ, ಅಲ್ಲಿ ಅಕಬರನು ಹೇಮುವನ್ನು ಸೋಲಿಸಿದನು.

ಕೆಳಗೆ ಮಾದರಿಗಾಗಿ ಕೆಲವು ವಾಕ್ಯ ಸಮೂಹಗಳನ್ನು ಸಂಯೋಗ ಮಾಡಿ ಬರೆದು ತೋರಿಸಿದೆ.

ಬೇರೆ ಬೇರೆ ವಾಕ್ಯಗಳು	ಸಂಯೋಗ ವಾಕ್ಯಗಳು
೧ ಅವನು ನನ್ನ ಮನೆಗೆ ಬಂದನು. ನಾನು ಮನೆಯಲ್ಲಿದ್ದಿಲ್ಲ.	೧. ಅವನು ಬಂದಾಗ ನಾನು ಮನೆಯಲ್ಲಿದ್ದಿಲ್ಲ

೨. ಒಂಬತ್ತು ಹೊಡೆಯಿತು. ನಾನು ನನ್ನ ಕೆಲಸ ಆರಂಭಿಸಿದೆನು.	೨. ಒಂಬತ್ತು ಹೊಡೆದ ಕೂಡಲೆ ನಾನು ನನ್ನ ಕೆಲಸವನ್ನು ಆರಂಭಿಸಿದೆನು.
೩. ಹನುಮಂತರಾಯರು ಬೆಳಗಾವಿಯನ್ನು ಬಿಟ್ಟರು ಆ ಹೊತ್ತಿನಿಂದ ಅವರು ಸುಖವಾಗಿದ್ದಾರೆ.	೩. ಹನುಮಂತರಾಯರು ಬೆಳಗಾವಿಯನ್ನು ಬಿಟ್ಟಂದಿನಿಂದ ಸುಖವಾಗಿದ್ದಾರೆ.
೪. ನಾನು ಬಹಳ ಹೊತ್ತು ಹಾದೀ ನೋಡಿದೆನು ನಾನು ಬೇಸತ್ತೆನು.	೪. ನಾನು ಹಾದೀ ನೋಡಿ ಬೇಸತ್ತೆನು.
೫. ಹರಿಯು ಜಾಣ ಹುಡುಗನು. ಅವನು ಅವಿಶ್ವಾಸಕನು.	೫ ಹರಿಯು ಜಾಣನಾದರೂ ವಿಶ್ವಾಸಕ್ಕೆ ತಕ್ಕವನಲ್ಲ
೬. ಸಿಕಂದರನು ಹಿಂದೂಕುಶಪರ್ವತವನ್ನು ದಾಟಿದನು. ಅಟಕದ ದಾರಿಯಿಂದ ಪಂಜಾಬದ ಮೇಲೆ ದಂಡೆತ್ತಿ ಬಂದನು; ಅಲ್ಲಿದ್ದ ಹಲವು ಅರಸರು ಪರಸ್ಪರ ದ್ವೇಷಬುದ್ಧಿಯುವರಾಗಿದ್ದರು; ಅವರು ಒಟ್ಟುಗೂಡಲಿಲ್ಲ. ಅವರು ಅವನಿಗೆ ಶರಣು ಬಂದರು.	೬. ಸಿಕಂದರನು ಹಿಂದೂಕುಶಪರ್ವತವನ್ನು ದಾಟಿ, ಅಟಕದ ದಾರಿಯಿಂದ ಪಂಜಾಬದ ಮೇಲೆ ದಂಡೆತ್ತಿ ಬಂದಾಗ, ಅಲ್ಲಿದ್ದ ಅರಸರು ಪರಸ್ಪರ ದ್ವೇಷಬುದ್ಧಿಯಿಂದ ಒಟ್ಟುಗೂಡಿ ಅವನಿಗೆ ಶರಣು ಬಂದರು.

ಸಾಮಾನ್ಯ ವಾಕ್ಯ— ಮರಾಠರ ಅಪಜಯದ ರೀತಿಯನ್ನು ಹೇಳು,

ಮಿಶ್ರವಾಕ್ಯ- ಮರಾಠರು ಹೇಗೆ ಅಪಜಯಪಟ್ಟರೆಂಬುದನ್ನು ಹೇಳು.

ಸಾ. ವಾಕ್ಯ-ಜನರು ಹಲವು ಬಗೆಯ ಉದ್ಯೋಗಗಳನ್ನು ಮಾಡಿದರೂ ಈಗ ಅವರ ಉಪಜೀವನ ಸಾಗಲಾರದು.

ಸಂಯೋಜಿತ ವಾಕ್ಯ— ಜನರು ಈಗ ಹಲವು ಬಗೆಯ ಉದ್ಯೋಗ ಮಾಡುತ್ತಾರೆ. ಆದರೂ ಅವರ ಉಪಜೀವನ ಸಾಗಲಾರದು.

ಮಿಶ್ರವಾಕ್ಯ ರಾಮನು ಜಾಣನೆಂಬುದನ್ನು ನಾನು ಬಲ್ಲೆನು.

ಸಂಯೋಜಿತ ವಾಕ್ಯ— ರಾಮನು ಜಾಣನು; ಅದನ್ನು ನಾನು ಬಲ್ಲೆನು.

ಪ್ರ— ೧. ಮಕ್ಕಳಿರಾ, ಗುರುಹಿರಿಯರನ್ನು ಸೇವಿಸಿರಿ. ಅವರು ನಿಮ್ಮನ್ನು ಮೆಚ್ಚುವರು. (ವಾಕ್ಯ ಕೂಡಿಸಿರಿ.)

ಉ— ಮಕ್ಕಳಿರಾ, ಗುರುಹಿರಿಯರನ್ನು ಸೇವಿಸಿದರೆ ಅವರು ನಿಮ್ಮನ್ನು ಮೆಚ್ಚುವರು.

ಪ್ರ: ೨. ಸೂರ್ಯನು ಅದೇ ಉದಯವಾಗುತ್ತಿದ್ದನು; ಮೂಡಣ ದಿಶೆಯು ಕೆಂಪೇರಿ ಕಂಗೊಳಿಸುತ್ತಿತ್ತು; ಇಷ್ಟರಲ್ಲಿ ನಾವು ನದಿಯಲ್ಲಿ ಜಳಕ ಮಾಡಿದೆವು; ಮಡಿಯ ಬಟ್ಟೆಗಳನ್ನು ಉಟ್ಟುಕೊಂಡೆವು; ಬಳಿಕ ದೇವರ ದರ್ಶನಕ್ಕೆ ಹೋದೆವು.

ಉ:—ಸೂರ್ಯನು ಅದೇ ಉದಯವಾಗುವಾಗ ಮೂಡಣ ದಿಶೆಯು ಕೆಂಪೇರಿ ಕಂಗೊಳಿಸುವಾಗ ನಾವು ನದಿಯಲ್ಲಿ ಜಳಕ ಮಾಡಿ ಮಡಿಯ ಬಟ್ಟೆಗಳನ್ನು ಟ್ಟುಕೊಂಡು ದೇವರ ದರ್ಶನಕ್ಕೆ ಹೋದೆವು

೩. ಕೆಳಗಿನ ವಾಕ್ಯಗಳನ್ನು ಕೂಡಿಸಿ ಒಂದೇ ವಾಕ್ಯಮಾಡಿ ಬರೆಯಿರಿ (ಹೈ. ಸ್ಕಾ ೧೯೪೫).

ಪ್ರ:— ಉಮರಖಯಾಮನು ಎಂಬ ಕವಿಯು ಇದ್ದನು. ಅವನು ಪಾರಸೀ ಭಾಷೆಯಲ್ಲಿ'ರುಬಾಯಿ-ಮಾತ್'ಎಂಬ ಕಾವ್ಯವನ್ನು ಬರೆದನು. ಅದು ಪ್ರಸಿದ್ಧವದೆ. ಫಿಟ್ಸ ಜಿರಾಲ್ಡನು ಅದರಲ್ಲಿಯ ಕೆಲವು ಪದ್ಯಗಳನ್ನು ಆರಿಸಿಕೊಂಡನು. ಅವುಗಳ ಭಾವವನ್ನು ಅವನು ಇಂಗ್ಲೀಷ ಪದ್ಯಗಳಲ್ಲಿ ಅನುವಾದಿಸಿದನು.

ಉ: - ಉಮರಖಯಾಮನು ಎಂಬ ಕವಿಯು ಪಾರಸೀ ಭಾಷೆಯಲ್ಲಿ ರುಬಾಯಿಮಾತಾ ಎಂಬ ಕಾವ್ಯ ಬರೆದದ್ದು ಪ್ರಸಿದ್ಧವಿದ್ದು, ಫಿಟ್ಸ ಜಿರಾಲ್ಡನು ಅದರಲ್ಲಿಯ ಕೆಲವು ಪದ್ಯಗಳನ್ನು ಆರಿಸಿಕೊಂಡು, ಅವುಗಳ ಭಾವವನ್ನು ಇಂಗ್ಲೀಷ ಪದ್ಯಗಳಲ್ಲಿ ಅನುವಾದಿಸಿದನು

೪ ಕೆಳಗಿನ ವಾಕ್ಯಗಳನ್ನು ಕೂಡಿಸಿ ಒಂದೇ ವಾಕ್ಯ ಮಾಡಿ ಬರೆಯಿರಿ. (ಹೆ. ಮು. ೧೯೪೫).

ಪ್ರ:—ಬರಬರುತ್ತ ಹೂಬಿಸಿಲು ಅಳಿಯುತ್ತ ಹೋಯಿತು. ಪ್ರದೋಷ ಕಾಲವು ಪ್ರಾಪ್ತವಾಯಿತು. ಎಚ್ಚಮ್ಮನಾಯಕನು ತನ್ನ ಖಡ್ಗವನ್ನು ತೊಡೆಯಮೇಲೆ ಇಟ್ಟುಕೊಂಡಿದ್ದನು. ಅವನು ಉಸುರುಗರೆಯುತ್ತಿದ್ದನು; ಆಗ ಆತನ ಕುದುರೆಯು ಶ್ರೀವಿರೂಪಾಕ್ಷನ ಗೋಪುರದ ಬಾಗಿಲಿಗೆ ಬಂದು ನಿಂತಿತು.

ಉ:— ಬರಬರುತ್ತ ಹೂಬಿಸಿಲು ಅಳಿಯುತ್ತ ಹೋಗಲು, ಪ್ರದೋಷಕಾಲವು ಪ್ರಾಪ್ತವಾಗಲು, ಎಚ್ಚಮ್ಮನಾಯಕನು ತನ್ನ ಖಡ್ಗವನ್ನು ತೊಡೆಯಮೇಲೆ ಇಟ್ಟುಕೊಂಡು, ಉಸುರ್ಗರೆಯುತ್ತಿದ್ದಾಗ ಆತನ ಕುದುರೆಯು ಶ್ರೀವಿರೂಪಾಕ್ಷನ ಗೋಪುರದ ಬಾಗಿಲಿಗೆ ಬಂದು ನಿಂತಿತು.

ಪ್ರ:— ಈ ಮಾಸ್ಕೋ ಪಟ್ಟಣವು ರಶಿಯ ದ ರಾಜಧಾನಿ; ಅದು ಅತಿ ಸುಂದರವಾದದ್ದು; ಅಲ್ಲಿ ಅಪಾರ ಸಂಪತ್ತು ಇತ್ತು; ಫ್ರೆಂಚರು ಅದನ್ನು ಮುತ್ತಿದರು; ಕೂಡಲೆ ರಶಿಯನ್ನರು; ಫ್ರೆಂಚರಿಗೆ ಆಶ್ರಯ ಸಿಗಬಾರದೆಂದು ಅದನ್ನು ಸುಟ್ಟು ಬೂದಿಮಾಡಿದರು;[ಪ್ರೈ, ಸ್ಕೂ. ಗಳಲ್ಲ]

ಉ:— ಅತಿ ಸುಂದರವಾದದ್ದೂ, ಅಪಾರ ಸಂಪತ್ತುಳ್ಳದ್ದೂ ಇದ್ದ ರಶಿಯದ ರಾಜಧಾನಿಯಾದ ಮಾಸ್ಕೋ ಪಟ್ಟಣವನ್ನು ಫ್ರೆಂಚರು ಮುತ್ತಲು, ಕೂಡಲೆ ರಶಿಯನ್ನರು ಅವರಿಗೆ ಆಶ್ರಯ ಸಿಗಬಾರದೆಂದು, ಅದನ್ನು ಸುಟ್ಟು, ಬೂದಿ ಮಾಡಿದರು;

ಪ್ರ:—ಒಮ್ಮೆ ಹರಿಹರನು ತುಂಗಭದ್ರಾ ತೀರದ ಅಡವಿಯಲ್ಲಿ ಬೇಟೆಯಾಡುತ್ತಿದ್ದನು; ಆಗ ಅವನ ನಾಯಿಯನ್ನು ಒಂದು ಮೊಲವು ಕೆಣಕಿತು, ಕಚ್ಚತೊಡಗಿತು; ಈ ವಿಚಿತ್ರ ಸಂಗತಿಯನ್ನು ಹರಿಹರನು ಕಂಡನು. ಆತನು ಆಶ್ಚರ್ಯಪಟ್ಟನು; ಅದನ್ನು ತಾನು ಹಿಂದೆ ಕಂಡ ಸನ್ಯಾಸಿಗೆ ಹೇಳಿದನು;

ಉ:—ಒಮ್ಮೆ ಹರಿಹರನು ತುಂಗಭದ್ರಾ ತೀರದ ಅಡವಿಯಲ್ಲಿ ಬೇಟೆಯಾಡುವಾಗ ಅವನ ನಾಯಿಯನ್ನು ಒಂದು ಮೊಲವು ಕೆಣಕಿ ಕಚ್ಚತೊಡಗಲು, ಈ ವಿಚಿತ್ರ ಸಂಗತಿಯನ್ನು ಕಂಡು ಆತನು ಆಶ್ಚರ್ಯಪಟ್ಟು, ತಾನು ಹಿಂದೆ ಕಂಡ ಸನ್ಯಾಸಿಗೆ ಹೇಳಿದನು.

ಪ್ರ ಕೆಳಗಿನ ವಾಕ್ಯಗಳನ್ನು ಸಮಿಶ್ರ ವಾಕ್ಯಗಳನ್ನಾಗಿ ಮಾಡಿರಿ;

೧. ಹೊತ್ತು ಮುಳುಗಿತು, ಕತ್ತಲೆಯು ಎಲ್ಲ ಕಡೆಗೆ ಹಬ್ಬಿತು. ಪ್ರವಾಸವನ್ನು ಕೈಕೊಳ್ಳಲಿಲ್ಲ; (ಹೈ, ಸ್ಕಾ, ೧೯೪೭,)

೨. ಮಾನವನ ಬಯಕೆಗಳು ಬಹಳ; ಅದರಲ್ಲಿ ದೀರ್ಘಾಯುಸ್ಸಿನ ಬಯಕೆಯು ಅತಿ ಪ್ರಬಲವಾದದ್ದು; ಇದನ್ನು ಧಾರಾಳವಾಗಿ ಹೇಳಬಹುದು.

ಉ:— ೧. ಹೊತ್ತು ಮುಳುಗಿ ಕತ್ತಲೆಯು ಹಬ್ಬಿದ್ದರಿಂದ ಪ್ರವಾಸವನ್ನು ಕೈಕೊಳ್ಳಲಿಲ್ಲ.

೨. ಮಾನವನ ಬಹಳ ಬಯಕೆಗಳಲ್ಲಿ ದೀರ್ಘಾಯುಸ್ಸಿನ ಬಯಕೆಯು ಅತಿ ಪ್ರಬಲವಾದದ್ದೆಂದು ಧಾರಾಳವಾಗಿ ಹೇಳಬಹುದು;

ಪ್ರ: — ಕೆಳಗಿನ ವಾಕ್ಯಗಳನ್ನು ಕೂಡಿಸಿ ಒಂದೇ ವಾಕ್ಯ ಮಾಡಿರಿ.

೧ ನನ್ನ ತಂದೆಯವರು ಬಲು ಉದಾರರು. ಅವರು ಬಹಳ ಸಾಲ ಮಾಡಿದರು; ಅದರಿಂದ ನನಗೆ ತುಂಬಾ ತೊಂದರೆಯಾಯಿತು; (ಹೈ; ಸ್ಕಾ; ೧೯೪೬;)

೨. ನಿಜವಾದ ದೇಶಭಕ್ತರು ಸ್ವಹಿತದ ಕೆಲಸವನ್ನು ಬದಿಗಿರಿಸುವರು. ಜನಹಿತಕ್ಕಾಗಿ ಹಗಲಿರುಳು ದುಡಿಯುವರು. ದೇಶಸೇವೆಯೇ ಈಶಸೇವೆಯೆಂಬ ಭಾವನೆ ಅವರದು. ಮಾನಾಪಮಾನಗಳನ್ನು ಲಕ್ಷಕ್ಕೆ ತರರು ಸಮಾಧಾನದಿಂದ ಜೀವನ ಸಾಗಿಸುವರು. [ಹೈ, ಸ್ಕಾ, ೧೯೪೭]

ಉ: ಉದಾರರಾದ ನನ್ನ ತಂದೆಯವರು ಬಹಳ ಸಾಲ ಮಾಡಲು, ನನಗೆ ತುಂಬಾ ತೊಂದರೆಯಾಯಿತು.

೨ ನಿಜವಾದ ದೇಶಭಕ್ತರು ದೇಶಸೇವೆಯೇ ಈಶ ಸೇವೆಯೆಂಬ ಭಾವನೆಯಿಂದ ಸ್ವಹಿತದ ಕೆಲಸವನ್ನು ಬದಿಗಿರಿಸಿ, ಜನಹಿತಕ್ಕಾಗಿ ಹಗಲಿರುಳು ದುಡಿಯುತ್ತ, ಮಾನಾಪಮಾನಗಳನ್ನು ಲಕ್ಷಿಸದೆ ಸಮಾಧಾನದಿಂದ ಕಾಲ ಕಳೆಯುವರು

೨೮. ವಾಕ್ಯಪಲ್ಲಟ

ಒಂದರ್ಥದ ವಾಕ್ಯವನ್ನು ಅರ್ಥವು ವ್ಯತ್ಯಾಸವಾಗದಂತೆ ಮತ್ತೊಂದು ಬಗೆಯ ವಾಕ್ಯವನ್ನಾಗಿ ಮಾರ್ಪಡಿಸುವದಕ್ಕೆ ವಾಕ್ಯಪಲ್ಲಟವೆನ್ನುತ್ತಾರೆ. ಇಲ್ಲಿ ಕೆಲವು ಉದಾಹರಣೆಗಳಿಂದ ಮಾರ್ಗವನ್ನು ಸೂಚಿಸುವೆವು.

ಉದಾಹರಣೆಗಳು

೧. ಜ್ಞಾನವು ಇದ್ದವನಿಗೆ ಸುಖವುಂಟು,
ನಿಷೇಧಃ— ಜ್ಞಾನವಿಲ್ಲದವನಿಗೆ ಸುಖವಿಲ್ಲ.

೨. ನಿಶ್ಚಿತಾರ್ಥಕ-ಇದು ರಾಮನ ಕೆಲಸವಾಗಿದೆ.
ಪ್ರಶ್ನಾರ್ಥಕ-ಇದು ರಾಮನ ಕೆಲಸವಲ್ಲವೇನು ?

೩. ಪ್ರಶ್ನಾರ್ಥಕ-ಅವನು ಬಹಳ ಜಾಣನಲ್ಲವೇ ?
ಭಾವಬೋಧಕ-ಅವನು ಎಂತಹ ಜಾಣ !

೪. ನಿಶ್ಚಯಾರ್ಥಕ-ಅವನು ಬಹಳ ಶೂರನು.
ಭಾವಬೋಧಕ-ಅವನು ಎಷ್ಟು ಶೂರನು !
ಪ್ರಶ್ನಾರ್ಥಕ-ಅವನು ಬಹಳ ಶೂರನಲ್ಲವೇ ?

೫. ನಿಶ್ಚಯಾರ್ಥಕ-ಸರ್ವರು ಸುಖಿಯಾಗಲೆಂದು ಇಚ್ಛಿಸುವೆವು.
ವಿಧ್ಯರ್ಥ-ಸರ್ವರು ಸುಖಿಯಾಗಲಿ.

ಪ್ರಃ—೧. ಮನುಷ್ಯನ ಮನಸ್ಸೇ ಸುಖದುಃಖಗಳನ್ನು ಉಂಟು ಮಾಡುವದು. (ಸುಖ ದುಃಖವನ್ನು ಕರ್ತೃವನ್ನಾಗಿ ಮಾಡಿ ಬರೆಯಿರಿ.)

ಉಃ -ಸುಖದುಃಖವು ಮನುಷ್ಯನ ಮನಸ್ಸಿನಿಂದಲೇ ಉಂಟಾಗುತ್ತದೆ.

ಪ್ರಃ ೨. ದೇಹದ ಆರೋಗ್ಯವು ದುಡಿತದ ಕೊಡುಗೆಯಾಗಿದೆ. (ಆರೋಗ್ಯ ಎಂಬ ಶಬ್ದವನ್ನು ಕರ್ಮಪದವನ್ನಾಗಿ ಮಾಡಿ ವಾಕ್ಯವನ್ನು ಬರೆಯಿರಿ,)

ಉಃ—ದುಡಿತವು ಆರೋಗ್ಯವನ್ನು ಉಂಟು ಮಾಡುತ್ತದೆ,

ಪ್ರಃ—೩. ಯುಕ್ತಿಯು ಶಕ್ತಿಗಿಂತ ಮೇಲಾದುದು. (ಶಕ್ತಿ ಎಂಬುದನ್ನು ಕರ್ತೃವನ್ನಾಗಿ ಮಾಡಿ ವಾಕ್ಯವನ್ನು ಬರೆಯಿರಿ)

ಉಃ— ಯುಕ್ತಿಗಿಂತ ಶಕ್ತಿ ಕೀಳಾದದ್ದು,

ಪ್ರಃ ೪ ಮಳೆಗಾಲದಲ್ಲಿ ಬಹಳ ಮಳೆಯಾಯಿತು, (ವರ್ತಮಾನಕಾಲದ ರೂಪ ಕೊಡಿರಿ,

ಉಃ—ಮಳೆಗಾಲಲ್ಲಿ ಬಹಳ ಮಳೆಯಾಗುತ್ತದೆ,

ಪ್ರ:—೫. ನಾನು ಈ ಕೆಲಸವನ್ನು ಮಾಡಬಹುದೇ? (ಈ ಪ್ರಶ್ನೆಗೆ ಉತ್ತರವಾಗಿ ಒಂದು ನಿಷೇಧಾರ್ಥಕ ವಾಕ್ಯವನ್ನು ಬರೆಯಿರಿ).

ಉ: - ನೀನು ಈ ಕೆಲಸವನ್ನು ಮಾಡಕೂಡದು.

ಪ್ರ ೬. ಏ ಮತ್ತು ಓ ಈ ನಿಪಾತಗಳನ್ನು ಉಪಯೋಗಿಸಿ, ಬೇರೆ ಬೇರೆ ಅರ್ಥವಾಗುವ ಮೂರು ವಾಕ್ಯಗಳನ್ನು ರಚಿಸಿರಿ; ಮತ್ತು ಆ ವಾಕ್ಯಗಳ ಅರ್ಥವನ್ನು ಬರೆಯಿರಿ.

ಉ:— ೧. ಭೀಮನು ಉಂಡನೇ? (ಪ್ರಶ್ನೆ); ೧. ರಾಮನು ಬಂದನೋ? ೨. ಭೀಮನೇ ಉಂಡನು (ನಿಶ್ಚಯ) ೨. ರಾಮನು ಬಂದನೋ! (ಆಶ್ಚರ್ಯ) ೩. ಭೀಮನು ಎಷ್ಟು ಉಂಡನೇ! [ಆಶ್ಚರ್ಯ]. ೪. ಕೃಷ್ಣನೋ ಮಲ್ಲನೋ ಯಾರಾದರೂ ಈ ಕೆಲಸವನ್ನು ಮಾಡಿದರಾಯಿತು. [ವಿಕಲ್ಪ]

ಪ್ರ: ೭. ಕೆಳಗಿನ ವಾಕ್ಯಗಳನ್ನು ಮುಂದೆ ಕೊಟ್ಟ ಸೂಚನೆಯಂತೆ ಬದಲಿಸಿ ಬರೆಯಿರಿ. [ಪ್ರ. ಪ್ರ. [illegible]]

(ಅ) ಬಡಿಗನಿಂದ ಗಿಡವು ಕಡಿಯಲ್ಪಟ್ಟಿತು (ಕರ್ತರೀ ಪ್ರಯೋಗ ಮಾಡಿರಿ)

(ಆ) ನೀನು ಈ ಹೊತ್ತು ಊರಿಗೆ ಹೋಗುವಿಯಾ? (ನಿಷೇಧಾರ್ಥಕ ವಾಕ್ಯ ಮಾಡಿರಿ.)

(ಇ) ಗಂಗೆಯು ಹಿಮಾಲಯದಿಂದ ಇಳಿದು ಬರುತ್ತಾಳೆ. (ಭೂತಕಾಲದ ಕ್ರಿಯಾಪದವನ್ನು ಉಪಯೋಗಿಸಿರಿ.)

(ಈ) ರಾಮನು ಈ ಕೆಲಸವನ್ನು ಮಾಡಿರಬಹುದೋ? (ನಿಶ್ಚಯಾರ್ಥದ ವಾಕ್ಯ ಮಾಡಿರಿ.)

(ಉ) ಮಳೆ ಬಂದಿತು ಹೊಳೆ ತುಂಬಿತು (ಒಂದೇ ವಾಕ್ಯ ಮಾಡಿ ಬರೆಯಿರಿ)

ಉ:—(ಅ) ಬಡಿಗನು ಗಿಡವನ್ನು ಕಡಿದನು. (ಆ) ನೀನು ಈಹೊತ್ತು ಊರಿಗೆ ಹೋಗುವದಿಲ್ಲವಲ್ಲವೇ? (ಇ) ಗಂಗೆಯು ಹಿಮಾಚಲದಿಂದ ಇಳಿದು ಬರುತ್ತಿದ್ದಳು. (ಈ) ರಾಮನು ಈ ಕೆಲಸವನ್ನು ಮಾಡಿರುವನಲ್ಲವೇ? (ಉ) ಮಳೆ ಬರಲು ಹೊಳೆ ತುಂಬಿತು.

ಪ್ರ: - ಅವನು ಅತ್ಯಂತ ಶೂರನು (ಉದ್ಗಾರವಾಚಕ ವಾಕ್ಯ ಮಾಡಿರಿ.)

ಉ: - ಅವನು ಎಷ್ಟು ಶೂರನು!

ಕೆಳಗಿನ ವಾಕ್ಯಗಳಲ್ಲಿ ಅವುಗಳ ಮುಂದೆ ಸೂಚಿಸಿದಂತೆ ಬರೆಯಿರಿ.

(೧೯೪೯)

೧. ನಮ್ಮ ದೇಶದಲ್ಲಿ ಗಾಂಧೀಜಿಯವರ ಹೆಸರನ್ನು ಕೇಳದವರೇ ಇಲ್ಲ. (ನಿಷೇಧಾರ್ಥಕವನ್ನು ತೆಗೆಯಿರಿ.)

ಕುಲಕರ್ಣಿ ಶ್ರೀನಿವಾಸರಾಯರಿಂದ ನೃತ್ಯಪ್ರದರ್ಶನವು ಮಾಡಲ್ಪಟ್ಟಿತು. (ಕರ್ತರಿ ಪ್ರಯೋಗವನ್ನು ಮಾಡಿರಿ.)

ಉ: ೧ ನಮ್ಮ ದೇಶದಲ್ಲಿ ಗಾಂಧೀಜಿಯವರ ಹೆಸರನ್ನು ಎಲ್ಲರೂ ಕೇಳಿರುವರು.

೨. ಕುಲಕರ್ಣಿ ಶ್ರೀನಿವಾಸರಾಯರು ನೃತ್ಯಪ್ರದರ್ಶನವನ್ನು ಮಾಡಿದರು.

೨೯. ವೈಶಿಷ್ಟ್ಯಗಳು

೧. ಉಳ್ಳ (ಇರು) ಧಾತುವಿನ ಪ್ರ. ಪು. ನ. ಲಿಂಗದ ಏಕವಚನ ಉಂಟು ಎಂಬ ರೂಪವು ಬಳಕೆಯಲ್ಲಿ ಇರುತ್ತದೆ. ಅದು ವರ್ತಮಾನ, ಭೂತಕಾಲಗಳಲ್ಲಿ ಎಲ್ಲ ಲಿಂಗಗಳಲ್ಲಿ ಎಲ್ಲ ವಚನಗಳಲ್ಲಿ ಉಪಯೋಗಿಸಲ್ಪಡುತ್ತದೆ.

ಉದಾಹರಣೆ ಅಂಗಡಿಯು ಉಂಟು, ಅಂಗಡಿಗಳು ಉಂಟು, ಮನುಷ್ಯನು ಉಂಟು, ಮನುಷ್ಯರು ಉಂಟು.

೨. ಹಲವು ಕರ್ತೃಪದಗಳು ಒಂದು ವಾಕ್ಯದಲ್ಲಿ ಬಂದರೆ, ಅವು ಬೇರೆ ಬೇರೆ ಲಿಂಗದವು ಇದ್ದರೂ ಕೂಡ ಕ್ರಿಯಾಪದಕ್ಕೆ ಕೊನೆಯ ಕರ್ತೃಪದದ ಲಿಂಗವು ಬರುವದು.

ಉ - :-ಅರಸನೂ ರಾಣಿಯೂ ರಥವೂ ಬಂದವು. ರಥವೂ ಅರಸನೂ ರಾಣಿಯೂ ಬಂದರು.

೩. ಉತ್ತರ ವಿಶೇಷಣಕ್ಕೆ ವಿಶೇಷ್ಯದ ಲಿಂಗ ವಚನಗಳನ್ನು ವಿಶೇಷಣವು ಹೊಂದುವದೆಂಬ ನಿರ್ಬಂಧವಿಲ್ಲ.

ಉದಾ — ವಿದ್ವಾಂಸರು ದೇಶಕ್ಕೆ ಭೂಷಣರು

೪. ಬಹುವಚನದ ವಿಭಕ್ತಿಪ್ರತ್ಯಯಗಳು ಲೋಪ ಹೊಂದಿದ ಪದಗಳಿಗೆ ಬಹುವಚನದ ಅರ್ಥವಿರುತ್ತದೆ; ಕಾರಣ ಅವುಗಳಿಗೆ ಬಹುವಚನದ ಆಖ್ಯಾತ ಬರುವದು.

ಉದಾ: ಕುದುರಿ ಬಂದವು, ಮುಳ್ಳು ಚುಚ್ಚಿದವು.

೫. ತಿರಸ್ಕಾರಾರ್ಥದಲ್ಲಿ ಪುಲ್ಲಿಂಗ ಇಲ್ಲವೆ ಸ್ತ್ರೀಲಿಂಗದ ಆಖ್ಯೇಯುಗಳಿಗೆ ನಪುಸಕಲಿಂಗ ಬರುತ್ತದೆ.

ಉದಾ:— ನಿನ್ನ ಗಂಡ ಏನು ಮಾಡುತ್ತದೆ.

೬. ಒಂದೇ ವಾಕ್ಯದಲ್ಲಿ ಹಲವು ಆಖ್ಯೇಯಗಳಿದ್ದರೆ ಆಖ್ಯಾತವು ಬಹುವಚನವಾಗುತ್ತದೆ.

ಉದಾ — ರಾಮನು ಕೃಷ್ಣನು ಮತ್ತು ಗೋವಿಂದನು ಬಂದರು.

೭. ಸನ್ಮಾನಾರ್ಥ ಮತ್ತು ಹಾಸ್ಯಾರ್ಥಗಳಲ್ಲಿ ಏಕವಚನಕ್ಕೆ ಬಹುವಚನವು ಬರುವದು.

ಉದಾ ರಾಜಗೋಪಾಲಾಚಾರ್ಯರು ಸ್ವತಂತ್ರ ಭಾರತದ ಪ್ರಥಮ ಹಿಂದೀ ಗವ್ಹರ್ನರ ಜನರಲ್ಲರಾಗಿದ್ದರು. ಓಹೋ ನೀವು ಬಂದಿರಾ?

೮. ಕೆಲವೆಡೆಯಲ್ಲಿ ವಿಭಕ್ತಿಗಳ ಪರಿಣಾಮವಾಗುತ್ತದೆ ಉದಾ— ಒಂದು ವರ್ಷ ಅಭ್ಯಾಸ ಮಾಡಿದನು.

[ಒಂದು ವರ್ಷದಲ್ಲಿ ಅಭ್ಯಾಸ ಮಾಡಿದನು.]

ಇಲ್ಲಿ ಸಪ್ತಮಿಗೆ ಪ್ರಥಮೆಯು ಬಂದಿದೆ.

೯. ಕಿವಿಯಲ್ಲಿ ಕೇಳಿದೆವು. [ಕಿವಿಯಿಂದ ಕೇಳಿದೆವು] ಕೈಯಲ್ಲಿ ಮಾಡಿದ ವಸ್ತುವು ಇಲ್ಲಿ ತೃತೀಯೆಗೆ ಸಪ್ತಮಿಯು ಬಂದಿರುತ್ತದೆ.

೧೦. ಸುಳ್ಳಿಗೆ ನಾಚಿದನು. ಸುಳ್ಳಿನಿಂದ ನಾಚಿದನು.

ಬೆಳಗಾಂವಿಗೆ ಕೊಲ್ಲಾಪುರವು ಎಪ್ಪತ್ತು ಮೈಲು.

೧೧. ನನ್ನ ಹಳ್ಳಿಯು ಮರೆಯಲು ನನಗಾಗುವದಿಲ್ಲ ಇಲ್ಲಿ ದ್ವಿತೀಯೆಗೆ ಷಷ್ಠಿ ಬರುವದು.

೧೨. ಅಂಗಡಿ ಉತ್ಸವವನ್ನು ನೋಡುವದಕ್ಕೆ ಊರಿಗೆ ಊರೇ ಬಂದಿತ್ತು; (ಇಡೀ ಊರು ಹೋಗುವದು ಅಶಕ್ಯ ಊರಲ್ಲಿರುವ ಜನರು ಎಂಬ ವಾಕ್ಯಾರ್ಥ.)

೧೩. ಕಣ್ಣಲ್ಲಿ ಕೆಂಕಿಯನ್ನು ಸುರಿಸುತ್ತ ಗರ್ಜಿಸಿದನು.

(ಕಣ್ಣಿನಲ್ಲಿ ಕೆಂಕಿಯನ್ನು ಸುರಿಸುತ್ತ ಗರ್ಜಿಸುವದು ಅಶಕ್ಯ. ಕೆಂಪಾದ ಕಣ್ಣಿನಿಂದ ಸಿಟ್ಟನ್ನು ತೋರಿಸುತ್ತ, ಜೋರಿನಿಂದ ಒದರಿದನು ಎಂಬರ್ಥ.)

ಪ್ರ:— ಕೆಳಗಿನವುಗಳಿಗೆ ವ್ಯಾಕರಣದ ಯಾವ ವಿಶೇಷ ನಿಯಮಗಳು ಹತ್ತುವವು ?

೧. ಕಾಮನ ಬಿಲ್ಲಿನಲ್ಲಿ ಏಳು ಬಣ್ಣದ ಪಟ್ಟಿಗಳು ಕಾಣುವವು. (೨) ನೀನು ಯಾರು? (೩) ಹಕ್ಕಿ ಹಾರಿದವು. (೪) ಪಿತ್ತದ ಬವಣೆ ತಲೆಗೇರಿತು.

ಉ:— [೧] ಏಳು ಬಣ್ಣದ=ಏಳು ಬಣ್ಣಗಳು ಎಂದು ಇರಬೇಕಾದುದು, ಆದರೆ ಸಂಖ್ಯೆಯು ವಾಚಕ ವಿಶೇಷಣವಿದ್ದಾಗ, ವಿಶೇಷಣವನ್ನು ಏಕವಚನದಲ್ಲಿ ಉಪಯೋಗಿಸುವ ವಾಡಿಕೆಯುಂಟು ಉದಾ:- ಹದಿನೆಂಟು ಜಾತಿ[ಹದಿನೆಂಟು ಜಾತಿಗಳು] [೨] ನೀನು ಯಾರು? ನೀನು ಯಾವನು? ಎಂದು ಇರಬೇಕಾದುದು; ಆದರೆ ಪ್ರಶ್ನೆ ಕೇಳುವಾಗ, ಯಾವನು ಎಂದು ಪ್ರಯೋಗಿಸದೆ ಯಾರು ಎಂದು ಬಹುವಚನ ಉತ್ತರ ಪದವಾಗಿಯೇ ಇರುವದುಂಟು. [ ] ಜಾತಿವಾಚಕ ಪದವು ಏಕವಚನಾಂತವಿದ್ದರೂ ಕ್ರಿಯಾಪದವು ಬಹುವಚನಾಂತವಾಗಿಯೇ ಇರುವದು. [ಹಕ್ಕಿಗು ಹಾರುವವು] ಜಾತಿವಾಚಕ ಪದವು ಏಕವಚನವಿದ್ದರೂ ಅದರ ಅರ್ಥವು ಬಹುವಚನದಂತೆಯೇ ಇರುವದು. [೪] ವಿಭಕ್ತಿ ಪಲ್ಲಟಕ್ಕೆ ಉದಾಹರಣವು ತಲೆಯನ್ನು+ಏರಿತು [ತಲೆಗೆ+ಏರಿತು] ದ್ವಿತೀಯೆಗೆ ಚತುರ್ಥಿ.

೩೦. ಛಂದಸ್ಸು

ಕಾವ್ಯವು ಸಾಹಿತ್ಯದ ಮುಖ್ಯಾಂಗವಾಗಿ ಹೃದಯದ ಭಾಷೆಯಾಗಿದೆ. ರಸವೇ ಕಾವ್ಯದ ಆತ್ಮ. ಪದ್ಯಗಳು ಕಾವ್ಯರಸದ ಕಾವಲಿಗಳು ಪದ್ಯಗಳ ನಿಯಮದಿಂದ ಕೂಡಿದ ಶಾಸ್ತ್ರವೇ ಛಂದಸ್ಸು.

ಪದ್ಯಗಳು ಚರಣ ಅಥವಾ ಪಾದ ಅಥವಾ ಸಾಲುಗಳಿಂದ ಕೂಡಿರುತ್ತವೆ. ಪಾದವು ಗಣ, ಪ್ರಾಸ, ಯತಿ ಇವುಗಳ ನಿರ್ಬಂಧನೆಯಲ್ಲಿ ಕುಳಿತಿರುತ್ತದೆ.

ಗಣ: ಕೆಲವು ನಿಯಮಗಳಿಗನುಸರಿಸಿ ವಿಂಗಡಿಸಿದ ಅಕ್ಷರಗಳ ಗುಂಪಿಗೆ ಗಣವೆನ್ನುವರು ಇದರಲ್ಲಿ ವರ್ಣಗಣ, ಮಾತ್ರಾಗಣ ಎಂಬ ಎರಡು ವಿಧವುಂಟು. ವರ್ಣಗಣವನ್ನು ಲಘು, ಗುರುಗಳಿಂದ ತಿಳಿಯಬೇಕು. ಹ್ರಸ್ವಸ್ವರಗಳಿಗೆ ಲಘುವೆನ್ನುವರು. ದೀರ್ಘಸ್ವರ, ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರ, ಸಂಯುಕ್ತಾಕ್ಷರಕ್ಕೆ ಹಿಂದಿರುವ ಅಕ್ಷರ, ಇವುಗಳಿಗೆ 'ಗುರು' ಎಂಬ ಸಂಕೇತ. ಲಘುವಿಗೆ ◡ ಈ ಚಿನ್ಹವನ್ನೂ ಗುರುವಿಗೆ - ಈ ಚಿನ್ಹವನ್ನೂ ಉಪಯೋಗಿಸುವದುಂಟು. ಒಂದು ಲಘುವಿಗೆ ಒಂದು ಮಾತ್ರೆ, ಗುರುವಿಗೆ ಎರಡು ಮಾತ್ರೆಗಳು. ಅವಶ್ಯವಿದ್ದಾಗ ಪಾದದ ಕೊನೆಯ ಅಕ್ಷರವನ್ನು ಗುರು ಎಂದು ಎಣಿಸುವರು. ಮಾತ್ರಾಗಣವನ್ನು ಮಾತ್ರೆಗಳಿಂದ ತಿಳಿಯಬೇಕು.

ಪ್ರಾಸ: ಪದ್ಯದ ಪ್ರತಿಸಾಲಿನಲ್ಲಿ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವು ಬಂದರೆ ಅದು ಪ್ರಾಸವೆನಿಸುವದು.

ಯತಿ:— ಪದ್ಯಗಳನ್ನು ಓದುವಾಗ ಅರ್ಥಕ್ಕೆ ಬಾಧೆ ಬರದಂತೆ ಒಂದೆಡೆಯಲ್ಲಿ ನಿಲ್ಲಿಸುವದು ಯತಿಯು

ದ್ವಿಪದಿ: ಎರಡು ಚರಣಗಳಿರುತ್ತವೆ. ದಾಸರ ಪದಗಳಲ್ಲಿ ಕೆಲವು ಈ ಮಾದರಿಯವು ಇರುತ್ತವೆ.

ತ್ರಿಪದಿ:— ಮೂರು ಚರಣಗಳುಳ್ಳದು. ಸರ್ವಜ್ಞನ ಪದ್ಯಗಳು ಇದಕ್ಕೆ ಉದಾಹರಣೆ.

ಚೌಪದಿ:—ನಾಲ್ಕು ಚರಣಗಳುಳ್ಳ ಪದ್ಯ. ಪ್ರತಿ ಚರಣದಲ್ಲಿ ಐದು ಮಾತ್ರೆಯ ೩ ಗಣಗಳೂ ನಾಲ್ಕು ಮಾತ್ರೆಯ ೪ನೆಯ ಗಣವೂ ಇರುತ್ತವೆ.

ರಗಳೆ:— ಇದರಲ್ಲಿ ಸಾಲುಗಳಿಗೆ ನಿಯಮವಿಲ್ಲ, ಆದರೆ ಸಮಾನವಾದ ಮಾತ್ರಾ ಗಣಗಳುಳ್ಳದ್ದು. ಮುಖ್ಯವಾಗಿ ಉತ್ಸಾಹ, ಮಂದಾನಿಲ, ಲಲಿತ ಎಂದು ಮೂರು ವಿಧವಾದ ರಗಳೆಗಳು ಪ್ರಸಿದ್ಧವಾಗಿರುವವು.

ಸಾಂಗತ್ಯ: ಇದು ಒಂದು ತರದ ಹಾಡು; ಕನ್ನಡದಲ್ಲಿ ಇದರಂತೆಯೇ ದ್ವಿಪದಿ, ತ್ರಿಪದಿ, ಚೌಪದಿ, ಮುಂತಾದ ಕೆಲವು ಮಾತ್ರಾವೃತ್ತಗಳು(ಹಾಡಿನ ರೂಪದಿಂದಿರುವವು) ಇದಕ್ಕೆ ನಾಲ್ಕು ಚರಣಗಳಿರುತ್ತವೆ. ೧ ೩, ಪಾದಗಳಲ್ಲಿ ೫ ಮಾತ್ರೆಗಳ ೪ ಗಣಗಳೂ, ೨, ೪ನೆಯ ಚರಣಗಳಲ್ಲಿ ೫ ಮಾತ್ರೆಗಳ ೩ ಗಣಗಳಿರಬೇಕೆಂಬುದು ಕನ್ನಡ ಕೈಪಿಡಿಕಾರರ ಅಭಿಪ್ರಾಯವಿರುತ್ತದೆ. ಹಾಡುವಾಗ ಮಾತ್ರ ಅನೇಕ ಕಡೆಗಳಲ್ಲಿ ದೀರ್ಘವನ್ನು ಹ್ರಸ್ವದಂತೆಯೂ, ಹ್ರಸ್ವವನ್ನು ದೀರ್ಘದಂತೆಯೂ, ಉಚ್ಚರಿಸಿ ಮಾತ್ರೆಗಳನ್ನು ಕೂಡಿಸಿಕೊಳ್ಳುವರು. ಲಯವನ್ನನುಸರಿಸಿ ಅಕ್ಷರಗಳನ್ನು ಎಳೆಯುವದರಿಂದ ಮಾತ್ರಾಗಣಗಳನ್ನು ತಿಳಿಯಬೇಕು. (ಷಟ್ಪದಿಗಳು ಹಾಡಿನ ರೂಪದಲ್ಲಿರುವವಷ್ಟು.) ೧, ೩ನೆಯ ಚರಣಗಳ ೧೦ನೆಯ ಮಾತ್ರೆಗೂ ೨, ೪ನೆಯ ಚರಣಗಳ ಎಂಟನೆಯ ಮಾತ್ರೆಗೂ ಯತಿಯು ಬರುವದು.

ಭಾವಗಿತೆ:—ಇದು ಆಂಗ್ಲ ಸಾಹಿತ್ಯದ ಸಂಸ್ಕಾರಗಳನ್ನು ಹೊಂದಿ ತನ್ನದೇ ಆದ ತಾಳ, ಲಯಗಳಿಂದ ಹೊರಬೀಳುವದು ಇವುಗಳಲ್ಲಿಯೂ ಮಾತ್ರೆಗಳಿವೆ, ಗಣಗಳಿವೆ. ಗಣಗಳು ೩-೪-೫ ಮಾತ್ರೆಗಳಿಂದಲೇ ಕೂಡಿರುವವು. ಕೆಲವು ಕಡೆ ಒಂದು ಪಾದದಲ್ಲಿಯ ಗಣಗಳ ಕ್ರಮವೂ, ಸಂಖ್ಯೆಯೂ ಹಿಂದಿನಂತೆ ಇಡಲಾಗುವದು ದ್ವಿಪದಿಯಿಂದ ಷಟ್ಪದಿಯವರೆಗೆ ಪದ್ಯಗಳಿವೆ, ಮುಂದೆ ಅಷ್ಟಷಟ್ಪದಿಯಿದೆ. (೮ ಸಾಲಿನದು)

ಅಕ್ಷರ (ವರ್ಣ) ವೃತ್ತಗಳು

ಮೂರು ಮೂರು ಅಕ್ಷರ ಕೂಡಿ, ಒಂದೊಂದು ಅಕ್ಷರಗಣವಾಗುವದು. ಈ ಅಕ್ಷರ ಗಣಗಳಿಂದ ರಚಿಸಲ್ಪಟ್ಟ ವೃತ್ತಗಳು ಅಕ್ಷರವೃತ್ತಗಳು.

ಕನ್ನಡ ಕಾವ್ಯದಲ್ಲಿ ಆರು ವೃತ್ತಗಳಿವೆ. ಅವುಗಳಿಗೆ ಸಮಚರಣಗಳಿರುತ್ತವೆ. ಅವುಗಳ ಲಕ್ಷಣಗಳನ್ನು ಕೆಳಗೆ ಕೊಟ್ಟಿರುವೆವು.

ಉದಾಹರಣೆ	ಪ್ರಸ್ತಾರ	ವಿವರಣೆ	ಗಣದ ಹೆಸರು
೧. ಭೂಪಾಲಂ	— — —	ಮೂರು ಗುರು	ಮ
೨. ಮಹಾತ್ಮಾ	∪ — —	ಲಘು ಮೊದಲ	ಯ
೩. ಕಾಲಿಕಾ	— ∪ —	ಮಧ್ಯ ಲಘು	ರ
೪. ಸರಸಂ	∪ ∪ —	ಅಂತ್ಯ ಗುರು	ಸ
೫. ಆಕಾಶ	— — ∪	ಅಂತ್ಯ ಲಘು	ತ
೬. ಸ್ವರಾಜ್ಯ	∪ — ∪	ಮಧ್ಯ ಗುರು	ಜ
೭. ಬಾಲಕ	— ∪ ∪	ಆದಿ ಗುರು	ಭ
೮. ಕನಕ	∪ ∪ ∪	ಮೂರು ಲಘು	ನ

ಮೇಲಿನ ಗಣಗಳ ಹೆಸರನ್ನು ನೆನಪಿಡಲು ಕೆಳಗಿನ ಪದ್ಯವನ್ನು ಮುಖೋದ್ಗತವಿಡಬೇಕು.

ಗುರುಲಘು ಮೂರಿರೆ ಮನಗಣ ।
ಗುರು ಲಘು ಮೊದಲಲ್ಲಿ ಬರಲು ಭಯಗಣವತ್ತುಂ ॥
ಗುರುಲಘು ನಡುವಿರೆ ಜರಗಣ ।
ಗುರುಲಘು ಕಡೆಯಲ್ಲಿ ಬರಲು ಸತಗಣಮಕ್ಕುಂ ॥

(೧) ಶಾರ್ದೂಲ ವಿಕ್ರೀಡಿತ—೧೯ ಅಕ್ಷರಗಳು.
ಮ, ಸ, ಜ, ಸ, ತ, ತ, ಗುರು

(೨) ಮತ್ತೇಭವಿಕ್ರೀಡಿತ - ೨೦ ಅಕ್ಷರಗಳು.
ಸ, ಭ, ರ, ನ, ಮ, ಯ, ಲಘು, ಗುರು.

(೩) ಉತ್ಪಲಮಾಲೆ ೨೦ ಅಕ್ಷರಗಳು.
ಭ, ರ, ನ, ಭ, ಭ, ರ, ಲ. ಗು.

(೪) ಚಂಪಕಮಾಲೆ ೨೧ ಅಕ್ಷರಗಳು
ನ, ಜ, ಭ, ಜ, ಜ, ಜ, ರ.

(೫) ಸ್ರಗ್ಧರಾ—೨೧ ಅಕ್ಷರಗಳು
ಮ, ರ, ಭ, ನ, ಯ, ಯ, ಯ

(೬) ಮಹಾಸ್ರಗ್ಧರಾ—೨೨ ಅಕ್ಷರಗಳು.
ಸ, ತ, ತ, ನ, ಸ, ರ, ರ, ಗುರು

ಪ್ರ: ಕೆಳಗಿನ ಸಾಲಿಗೆ ಪ್ರಸ್ತಾರ ಹಾಕಿ ಅದು ಯಾವ ವೃತ್ತದ್ದೆಂಬದನ್ನು ಹೇಳಿರಿ. [೧೯೪೭]

ಇರದುಯ್ದೀಗಳೆ ಕೊಟ್ಟೊಡೆನ್ನ ಕಡಪುಂಕಟ್ಟಾಯಮುಂ ಬೀರುಮುಂ

ಮೂರು ಮೂರು ಅಕ್ಷರಗಳ ಆರು ಗುಂಪು ಆಗುತ್ತವೆ. ಕಡೆಗೆ ಒಂದು ಲಘು ಒಂದು ಗುರು ಅಕ್ಷರಗಳಿವೆ. ಒಟ್ಟು ೨೦ ಅಕ್ಷರಗಳಿವೆ.

ಪ್ರಸ್ತಾರ

∪ ∪ — | ∪ ∪ ∪ | — ∪ — | ∪ ∪ ∪ | — — — | ∪ — — | ∪ —
ಸ ಭ ರ ನ ಮ ಯ

ಮಾತ್ರಾವೃತ್ತಗಳು

ಅಕ್ಷರಗಣಗಳಲ್ಲಿ ಅಕ್ಷರಗಳು ನಿಯಮಿತವಾಗಿರುವಂತೆ ಮಾತ್ರಾಗಣಗಳಲ್ಲಿ ಮಾತ್ರೆಗಳು ನಿಯಮಿತವಾಗಿರುವವು. ೩, ೪, ೫, ೬, ೭, ೮ ಹೀಗೆ ಮಾತ್ರೆಗಳ ಎಣಿಕೆಯಿಂದ ಮಾತ್ರಾಗಣಗಳು ಆಗುತ್ತವೆ. ಇಂತಹ ಮಾತ್ರಾಗಣಗಳಿಂದ ರಚಿತವಾದ ವೃತ್ತಗಳಿಗೆ ಮಾತ್ರಾವೃತ್ತವೆನ್ನುವರು. ಕಂದಪದ್ಯಗಳೂ. ಷಟ್ಪದಿಗಳೂ ಮಾತ್ರಾವೃತ್ತದವಿರುತ್ತವೆ.

ಕಂದಪದ್ಯ—ಇದು ನಾಲ್ಕು ಚರಣಗಳ ವೃತ್ತವು. ಇದರಲ್ಲಿ ನಾಲ್ಕು ಮಾತ್ರೆಗಳ ಗಣಗಳಿರುವವು ಮೊದಲನೆಯ ಹಾಗೂ ಮೂರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಗಳ ಮೂರು ಗಣಗಳೂ, ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ೪ ಮಾತ್ರೆಯ ಐದು ಗಣಗಳೂ ಇರುತ್ತವೆ.

ಕಂದಪ್ರಸ್ತಾರ

೪	೪	೪
— —	∪ ∪ ∪ ∪	— ∪ ∪
ಕಾ ಲೋ	ಚಿ ತ ವ ರಿ	ತಿ ತ್ತೊ ಡೆ

೪	೪	೪	೪	೪
—	∪ ∪ —	∪ ∪ ∪ ∪	— ∪ ∪	— —
ಮೂ ಲೋ	ಕ ವ ನಿ	ತ್ರ ಸ ರಿ ಸ	ಮಾ ನ ಮ	ದ ಕ್ಕಂ

ಷಟ್ಪದಿ— ಇದು ಆರು ಚರಣಗಳ ವೃತ್ತ ಇವುಗಳಲ್ಲಿ ೧, ೨, ೪, ೫ ಪಾದಗಳಿಗೆ ಸಮಾನ ಗಣಗಳು ಇವು ಕಿರಿಯ ಪಾದಗಳೂ ೩, ೬ ನೆಯ ಪಾದಗಳು ಹಿರಿಯವು. ಇದರಲ್ಲಿ ಕಿರಿಯ ಪಾದಗಳ ಒಂದೂವರೆಯಷ್ಟು ಗಣಗಳೂ, ಕೊನೆಗೊಂದು ಗುರುವೂ ಇರುವದು.

ಹೆಸರು	ಕಿರಿಯ ಪಾದ	ಹಿರಿಯ ಪಾದ
೧ ಶರ	೪ ಮಾತ್ರೆಯ ೨ ಗಣ=೮	೪ ಮಾ ೩ಗಣ+೧ ಗುರು=೧೪
೨ ಕುಸುಮ	೫ ಮಾತ್ರೆಯ ೨ ಗಣ=೧೦	೫ ಮಾ. ೩ಗಣ+೧ ಗುರು=೧೭
೩ ಭೋಗ	೩ ಮಾತ್ರೆಯ ೪ ಗಣ=೧೨	೩ ಮಾ ೬ಗಣ+೧ ಗುರು=೨೦
೪ ಭಾಮಿನಿ	೩| ೪| ೩, ೪ ಗಣ=೧೪	೩ ೪|೩| ೪| ೩| ೪| +ಗುರು=೨೩
೫ ಪರಿವರ್ಧಿನಿ	೪ ಮಾತ್ರೆಯ ಗಣ=೧೬	೪ ಮಾ. .. ಗಣ + ಗುರು=೨೬
೬ ವಾರ್ಧಿಕ	ಮಾತ್ರೆಯ ಗಣ=೨೦	೫ ಮಾ ೬ ಗಣ + ಗುರು=೩೨

ಭಾಮಿನಿಷಟ್ಪದಿ

ಉದಾ:

೩	೪	೩	೪
— ∪	∪ ∪ —	∪ ∪ ∪	∪ ∪ ∪ ∪
ಆ ರೊ	ಡ ನೆ ಕಾ	ದು ವೆ ನು	ಕೆ ಲ ಬ ರು

ಬ್ರ	ವಿ	ಬ್ರ	ವಿ
— ⏑	∪ ∪ ∪ ∪	— ∪	∪ ∪ ∪ ∪
ಹಾ ರು	ವ ರು ಕೆ ಲ	ರಂ ತ	ಕ ನ ನೆ ರಿ

ಬ್ರ	ವಿ	ಬ್ರ	ವಿ	ಬ್ರ	ವಿ	ಗು
— ∪	∪ ∪ ∪ ∪	∪ ∪ ∪	∪ ∪ ∪ ∪	∪ ∪ ∪	— ∪ ∪	—
ಯೂ ರ	ವ ರು ಕೆ ಲ	ರ ಥ ವ	ಕು ಲ ದ ಲಿ	ಜ ನಿ ಸಿ	ಬಂ ದ ವ	ರು

ವಾರ್ಧಿಕಷಟ್ಪದಿ [೧೫೪೭]

ಅ ರ ಸ ಕೇ	ಳ ನು ಜ ರಾ	ಡಿ ದ ನು ಡಿ ಗೆ	ತ ಲೆ ವಾ ಗಿ
∪ ∪ ∪ —	∪ ∪ ∪ —	∪ ∪ ∪ ∪ ∪	∪ ∪ — ⏑
೫	೫	೫	೫

ತ ರ ಣಿ ಕು ಲ	ತಿ ಲ ಕ ನೊ	ಯ್ಯ ನೆ ದ್ದೈ ನ್ಯ	ಭಾ ವ ದಿಂ
∪ ∪ ∪ ∪ ∪	∪ ∪ ∪ —	∪ ∪ ⏑	— ∪ —
೫	೫	೫	೫

ತ ರ ಹ ರಿ ಸ	ಬಾ ರ ದ ಸ	ವಾ ದ ಹೃ ಚ್ಛೂ ಲ ಮಂ	ತ ನ ಗೆ ಜಾ
∪ ∪ ∪ ∪ ∪	— ∪ ∪ ∪	— ∪ ∪ —	∪ ∪ ∪ —
೫	೫	೫ ೫	೫

ನ ತಿ ಯು ನು ಳಿ	ದು
∪ ∪ ∪ ∪ ∪	—
೫	ಗು

— ೧೫೪೮ —

ಅ ತಿ ಲ ಜ್ಜೆ	ಗೆ ಟ್ಟ ನ್ನೆ	ರಾಃ ರಾ ಗಿ	ದು ಡಿ ದು ಥಾ
∪ ∪ —	— — ∪	— — ∪	∪ ∪ ∪ —
ವತಿಗೊಂಡು	ಥನವಸ್ತಾ	ರ್ಜಿಸಿಹರಿ	ಶ್ಚಂದ್ರಭೂ,
∪ ∪ — ∪	∪ ∪ ∪	∪ ∪ —	— ∪ —
ಪತಿ ನಮ್ಮ	ಬಿಡಿಸುವಾ	ರ್ತದ ಮೋಃಹ	
∪ ∪ — ∪	∪ ∪ ∪ —	∪ ∪ — ∪	—
ದಿಂದಣಿವು	ಸಿದ್ಧೆಯಂ	ತೊರೆದು ಬಂ	ದು॥
— ∪ ∪ ∪	— ∪ —	∪ ∪ ∪ —	—

ಈ ಅರ್ಧ ಪದ್ಯವು ವಾರ್ಧಿಕಷಟ್ಪದಿಯಲ್ಲಿದೆ.

ಜೈಮಿನಿಭಾರತ, ಹರಿಶ್ಚಂದ್ರ ಕಾವ್ಯ, ಚೆನ್ನಬಸವಪುರಾಣ ಇವು ವಾರ್ಧಿಕಷಟ್ಪದಿಯಲ್ಲಿವೆ. ಕರ್ನಾಟಕ ಮಹಾಭಾರತ, ಆನಂದರಾಮಾಯಣ, ಅನುಭವಾಮೃತ, ಭಾಗವತ, ಸಾಳ್ವಭಾರತ, ನಳಚರಿತ್ರೆ ತೊರವೆಯ ರಾಮಾಯಣ ಇವು ಭಾಮಿನಿಷಟ್ಪದಿಯಲ್ಲಿವೆ.

ಕವಿ ಪರಿಚಯ

೧೧ನೆಯ ಶತಮಾನ

ರನ್ನ :— ಜೈನಕವಿ. ಈತನ ಕಾವ್ಯಗಳು ಅಜಿತನಾಥ ಪುರಾಣ, ಸಾಹಸ ಭೀಮ ವಿಜಯ. ಅಥವಾ ಗದಾಯುದ್ಧ. ಮುಧೋಳವು ಈತನ ಮಾತೃ ಭೂಮಿಯು.

ಆದಿಪಂಪ: ಆದಿಪುರಾಣ, ವಿಕ್ರಮಾರ್ಜುನವಿಜಯಗಳು ಈತ ಸಾಹಿತ್ಯ ಕೃತಿಗಳು.

೧೨ನೆಯ ಶತಮಾನ

(೧) ಹರಿಹರ ದೇವ, ವೀರಶೈವ ಕೃತಿಗಳು ಗಿರಿಜಾಕಲ್ಯಾಣ, ಪಂಪಾಶತಕ, ಶಿವಗಣದ ರಗಳೆ.

(೨) ರಾಘವಾಂಕ:— ಕೃತಿಗಳು-ಹರಿಶ್ಚಂದ್ರ ಕಾವ್ಯ, ಸೋಮನಾಥ ಚರಿತ್ರೆ, ವೀರಶೈವ ಚರಿತ್ರೆ, ಸಿದ್ಧರಾಮ ಪುರಾಣ, ಶರಭ ಚರಿತ್ರೆ.

(೩) ನಾಗವರ್ಮ:—ಗ್ರಂಥಗಳು—ಕಾವ್ಯಾವಲೋಕನ, ಛಂದೋಂಬುಧಿ, ಭಾಷಾ ಭೂಷಣ, ವಸ್ತುಕೋಶ, ಬಾಣ ಕಾದಂಬರಿ.

(೪) ರುದ್ರಭಟ್ಟ ಇವನ ಕೃತಿ- ಜಗನ್ನಾಥ ವಿಜಯ

(೪) ಅಭಿನವ ಪಂಪ: ಕೃತಿ –ರಾಮಚಂದ್ರ ಚರಿತ ಪುರಾಣ ಮಲ್ಲಿನಾಥ ಪುರಾಣ.

೧೩ನೆಯ ಶತಮಾನ

[೧] ಅಂಡಯ್ಯ ಜೈನ ಮತದವ ಕೃತಿ:- –ಕಬ್ಬಿಗರಕಾವ

೧೪ನೆಯ ಶತಮಾನ

[೧] ಸೋಮೇಶ್ವರ [ಸೋಮನಾಥ] ಸೋಮೇಶ್ವರ ಶತಕ

[೨] ಭೀಮಕವಿ: ಕೃತಿ–ಬಸವಪುರಾಣ. ಭೀಮಕವೀಶ್ವರರಗಳೆ.

೧೫ನೆಯ ಶತಮಾನ

[೧] ಕುಮಾರ ವ್ಯಾಸ: — ಕೃತಿ–ಮಹಾಭಾರತ. (ಕನ್ನಡ)

೧೬ನೆಯ ಶತಮಾನ

[೧] ಸರ್ವಜ್ಞ:— ವೀರಶೈವಕವಿ–ಕೃತಿ–ಸರ್ವಜ್ಞ ಮೂರ್ತಿಯ ವಚನಗಳು.

[೨] ವಿರೂಪಾಕ್ಷ ಪಂಡಿತ: ಕೃತಿ ಚನ್ನಬಸವಪುರಾಣ.

[೩] ಕನಕ ದಾಸ:—ಕೃತಿ ಮೋಹನ ತರಂಗಿಣಿ, ನಳ ಚರಿತ್ರೆ, ವಿಷ್ಣು ಭಕ್ತಿ ಸಾರ, ದಾಸರ ಪದಗಳು.

[೪] ಕುಮಾರ ವಾಲ್ಮೀಕಿ:—ಕೃತಿ–ತೊರವೆಯ ರಾಮಾಯಣ.

[೫] ಹಂಸರಾಜ: - ರತ್ನಾಕರ ಶತಕ.

[೬] ಪುರಂದರ ದಾಸ:—ದಾಸರ ಪದಗಳು.

[೭] ಚಾಟು ವಿಠ್ಠಲನಾಥ :— ಭಾಗವತ.

೧೭ ನೆಯ ಶತಮಾನ

(೧) ಷಡಕ್ಷರಿ : — ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಶಬರ ಶಂಕರ ವಿಳಾಸಗಳು ಈತನ ಕಾವ್ಯಗಳು.

(೨) ಲಕ್ಷ್ಮೀಶ :—ಕೃತಿ-ಜೈಮಿನಿ ಭಾರತ.

(೩) ಹೊನ್ನಮ್ಮ:— ಕೃತಿ–ಹದಿಬದೆಯ ಧರ್ಮ.

(೪) ನರಹರಿ: - ಪ್ರಲ್ಹಾದ ಚರಿತ್ರೆ.

ಆಧುನಿಕ ಕವಿಗಳು : ಶ್ರೀ. ದ. ರಾ. ಬೇಂದ್ರೆ ಶ್ರೀ ಬೆಟಗೇರಿ ಕೃಷ್ಣಶರ್ಮ. ಶ್ರೀ. ಮೇಘಂಡಿ ಮಲ್ಹಾರಿ ಶ್ರೀ ಈಶ್ವರ ಸಣಕಲ್. ರಬಕವಿ. ಶ್ರೀ. ಕೆ. ವಿ. ಪುಟ್ಟಪ್ಪ. ಶ್ರೀ. ಡಿ ವ್ಹಿ. ಗುಂಡಪ್ಪ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ. ಶ್ರೀ ಪಂಜೇ ಮಂಗೇಶರಾವ ಶ್ರೀ. ಗೋವಿಂದ ಪೈ. ದಿವಂಗತ ಬಿ. ಎಮ್. ಶ್ರೀಕಂಠಯ್ಯ ಶ್ರೀ. ರಂ. ಶ್ರೀ. ಮುಗಳಿ ಶ್ರೀ. ವಿ. ಸೀತಾರಾಮಯ್ಯನವರು ವಿ. ಕೃ. ಗೋಕಾಕ ಮುಂತಾದವರು.

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಪ್ರಶ್ನೆಗಳು.

— ೧೯೫೧ —

ಚೆಲುವ ದೇವಿ ರೂಪುಗೊಂಡು ಜಗಕೆ ಬಂದಳೊ!
ಜಗಕೆ ಬಂದು ನಮ್ಮ ನಾಡ ಹುಡುಕಿಕೊಂಡಳೊ!
ಹುಡುಕಿಕೊಂಡು ನಮ್ಮ ಸೇರಿ,
ನಾಡಿಗೊಂದು ಪೆಂಪ ಬೀರಿ,
ಧರೆಗೆ ಮಧುರ ಮುಖವ ತೋರಿ,
ದೇಶಕೊಂದು ಯಶವ ಕೋರಿ,
ಚೆಲುವ ದೇವಿ ರೂಪುಗೊಂಡು ಜಗಕೆ ಬಂದಳೊ!
ಜಗಕೆ ಬಂದು ನಮ್ಮ ನಾಡ ಹುಡುಕಿಕೊಂಡಳೊ!!

(೨)

ಚೆಲುವ ದೇವಿ ತಾಜಮಹಲ್! ಏನು ಬೆಡಗಿದು?
ಜಗವನೆಲ್ಲ ಮರುಳು ಮಾಡಿ ಗೆಲಿದ ಸೊಗಸಿದು!
ಲೋಕ ನಿನ್ನ ಕಾಣ ಬಂದು,
ಕಾಣದಾಯ್ತು ಕಿರಿಯ ಕುಂದು,
ಶೋಕ ಕಂಡ ತೆರದಿ ನಿಂದು,
ಮೂಕವಾಯ್ತು ನಿನ್ನ ಕಂಡು,
ಚೆಲುವ ದೇವಿ ತಾಜಮಹಲ್! ಏನು ಬೆಡಗಿದು!
ಜಗವನೆಲ್ಲ ಮರುಳು ಮಾಡಿ ಗೆಲಿದ ಸೊಗಸಿದು!!

ಮೇಲಿನ ಕವಿತೆಯನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

(೧) ಕವಿ ಹೇಳುವ ಚೆಲುವ ದೇವಿ ಯಾರು? ಕನ್ನಡ ನಾಡಿನಲ್ಲಿಯ ಅಂತಹದೊಂದು ಕಲಾಕೃತಿಯ ಹೆಸರು ಹೇಳಿರಿ

(೨) ಆ ಚೆಲುವ ದೇವಿ ಬರುವದರಿಂದ ನಮ್ಮ ನಾಡಿನ ಕೀರ್ತಿ ಹೇಗೆ ಬೆಳೆಯಿತು?

(೩) ಜಗವನೆಲ್ಲ ಮರುಳು ಮಾಡಿ ಗೆಲಿದ ಸೊಗಸಿದು ! " ಎಂದು ಕವಿಯು ಏಕೆ ಅಂದಿರುವನು ?

(೪) ಆಕೆಯನ್ನು ಕಾಣಬಂದ ಜನರು ಏನನ್ನು ಕಾಣರು ? ಯಾಕೆ ?

(೫) " ನಾಕ ಕಂಡ ಕಿರದಿ ನಿಂದು
ಮೂಕವಾಯ್ತು ನಿನ್ನ ಕಂಡು "
ಈ ಸಾಲುಗಳ ಅರ್ಥವನ್ನು ಸ್ಪಷ್ಟಮಾಡಿರಿ.

೨. ಕೆಳಗಿನ ಗದ್ಯ ಭಾಗವನ್ನು ಸಾಕಷ್ಟು ಸಲ ಓದಿ, ಅದರ ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

ಕನ್ನಡ, ಕನ್ನಾಡು, ಕರಿನಾಡು ಏನು ಸೊಗಸು, ಎಷ್ಟು ಮಧುರ, ಎಂತಹ ಹೊಳವು ! ನಮ್ಮ ಕನ್ನಡ ನಾಡು ಭಾರತಾಂಬೆಯ ಭವ್ಯ ಮುಖದರ್ಶನಕ್ಕೆ ಕೈಗನ್ನಡಿಯಂತಿದೆ. ಕನ್ನಾಡು ತನ್ನ ಪ್ರಕೃತಿ ಸೌಂದರ್ಯದಿಂದ, ಸಂಸ್ಕೃತಿ ಸೌಷ್ಠವದಿಂದ ಅತ್ಯಂತ ಕಮನೀಯವಾಗಿದೆ ; ಅನನ್ಯ ಸಾಧಾರಣವಾಗಿದೆ. ಕನ್ನಡದ ಚೆಲುವು ಚಿನ್ನದ ಗಣಿಯಾಗಿ ಚಿಮ್ಮಿದೆ. ಕನ್ನಡದ ಕಂಪು ಶ್ರೀಗಂಧದ ಹುಡಿಯಾಗಿ ಹರಡಿದೆ. ಕನ್ನಡದ ಸಂಗೀತವು " ಕರ್ನಾಟಕ ಸಂಗೀತ " ನಾಮಾಂಕಿತದಿಂದ ಪ್ರಸಿದ್ಧವಾಗಿದೆ, ಪ್ರಬುದ್ಧವಾಗಿದೆ, ಪ್ರಾಚೀನವಾಗಿದೆ. ಕನ್ನಡ ರುಚಿಯು ಸೊಗಸು ರನ್ನ ಪೊನ್ನರ, ಹರಿಹರ—ರಾಘವಾಂಕರ, ಲಕ್ಷ್ಮೀಶ-ಮುದ್ದಣರ ಕಾವ್ಯ ಪಾಕಗಳಲ್ಲಿ ಪರಿಪಕ್ವಗೊಂಡಿದೆ; ಹರಿದಾಸರ ಪದಗಳಲ್ಲಿ, ಶಿವಶರಣರ ವಚನಗಳಲ್ಲಿ ಸೂರೆಗೊಂಡಿದೆ. ಕನ್ನಡದ ರುಚಿ ರಸವು ಕಾವು ಏರಿ " ಕಾವೇರಿ " ಹರಿದಿದೆ. ಕನ್ನಡದ ನೈರ್ಮಲ್ಯವು " ಮಲಾಪಹಾರಿಣಿ " ಯಿಂದ ನಿತ್ಯವಾಗಿ ನಿಂತಿದೆ. ಕನ್ನಡದ ಗಾಂಭೀರ್ಯವು " ಜೋಗದ ಜಲಪ್ರಪಾತ " ದಿಂದ ಇಡಿಯ ವಿಶ್ವವನ್ನೇ ಬೆರಗುಗೊಳಿಸಿದೆ. ಕನ್ನಡದ ಗೌರವ ಸಂಪತ್ತು ಶ್ರೀಗಿರಿಯಾಗಿ

ಉತ್ತುಂಗವಾಗಿದೆ, ಉತ್ತಮವಾಗಿದೆ. ಕನ್ನಡದ ಪ್ರಕೃತಿ
ಶೋಭೆಗೆ ನಂದಿಗಿರಿಯು ನಾಂದಿಯಾಗಿದೆ. ಕನ್ನಡದ ಕ್ಷಾತ್ರ
ಶಕ್ತಿ ಪುಲಿಕೇಶಿ—ಕೃಷ್ಣದೇವರಾಯರ ಮೂರ್ತಿ ಮತ್ತಾಗಿ
ಮೂಲೋಕ ಖ್ಯಾತಿಗೊಂಡಿದೆ. ಕನ್ನಡದ ಶಿಲ್ಪಕಲೆ ಜಕ್ಕಣ
ನಿಂದ ಜೀವಂತವಾಗಿ ವ್ಯಾಪಿಸಿದೆ. ಕನ್ನಡದ ಪ್ರತಿಭೆ ವಿದ್ಯು
ಚ್ಛಕ್ತಿಯಾಗಿ ವಿರಾಜಿಸುತ್ತಿದೆ ಇಂತಹ ನಾಡಿನಲ್ಲಿ ಹುಟ್ಟಿ
ಬಂದುದೆ ತಮ್ಮ ಭಾಗ್ಯವೆಂದು ಕನ್ನಡಿಗರೆಲ್ಲರು ಭಾವಿಸಬೇಕು.
ನಾಡು ನುಡಿಗಳ ಮೇಲ್ಮೆಗಾಗಿ ಹಗಲಿರುಳು ಯತ್ನಿಸುವುದು
ತಮ್ಮ ಪವಿತ್ರ ಕರ್ತವ್ಯವೆಂದು ಅರಿಯಬೇಕು ಕನ್ನಡ ನಾಡ
ಸಿರಿ, ಕನ್ನಡ ನುಡಿಯ ಸಂಪತ್ತು ಇವು ಭಾರತೀಯ ಸಂಸ್ಕೃತಿಗೆ
ಪೋಷಕವಾಗಿ, ಭಾರತದ ಘನತೆಯನ್ನು ವಿಶ್ವದಲ್ಲಿ ಹೆಚ್ಚಿಸು
ವಂತಾಗಬೇಕು; ವಿಶ್ವ ಬಾಂಧವ್ಯವನ್ನು ಬೆಳೆಯಿಸುವಂತಾಗ
ಬೇಕು.

ಈ ಗದ್ಯ ಭಾಗದ ಸಾರಾಂಶವನ್ನು ಅದರ ಮೂರನೆಯ ಪಾಲಿನಷ್ಟ
ರಲ್ಲಿ ಬರೆಯಿರಿ.

(ಆ) (೧) ಕನ್ನಡದ ರುಚಿರಸವು ಕಾವು ಏರಿ ಕಾವೇರಿಯಾಗಿಹರಿದಿದೆ.

(೨) ಕನ್ನಡದ ಶಿಲ್ಪಕಲೆ ಜಕ್ಕಣನಿಂದ ಜೀವಂತವಾಗಿ ವ್ಯಾಪಿಸಿದೆ.

ಈ ಮಾತುಗಳಲ್ಲಿ ಅಡಗಿದ ವಿಚಾರವನ್ನು ವಿಸ್ತರಿಸಿ ಬರೆಯಿರಿ.

೩. ಕೆಳಗಿನ ಪದ್ಯಗಳಲ್ಲಿ ಬೇಕಾದ ಎರಡನ್ನು ಆಯ್ದು, ಅವುಗಳ
ಸರಳಾನುವಾದವನ್ನು ಬರೆಯಿರಿ.

(ಅ) ಭ್ರಾತೃ ಕೇಳೆಲೆ ! ಭರತ, ಶೋಕಿಸದಿರೈ ಶ್ವೇತ
ಛತ್ರ ಛಾಯೆಯು ನಿನಗೆ, ವೃಕ್ಷದಾ ನೆರಳೆನಗೆ ;
ಶತ್ರುಘ್ನ ಬೆಂಬಲನು ನಿನಗೆ, ಸೌಮಿತ್ರಿ ಒತ್ತಾಸೆ
ಎನಗಿರಲು ಕೇಳು ||

ಭ್ರಾತೃ ಪ್ರೇಮಕೆ ನಿನ್ನ ಎಣೆಯುಂಟೇ ? ನೀ ಧನ್ಯ !
ಧಾತ್ರಿಯೊಳು ಪಿತೃವಾಕ್ಯವೆ ಶ್ರೇಷ್ಠ ಪುತ್ರಂಗೆ,

ಮಾತ್ರ ಸೇವಾ ನಿರತನಾಗಿ ಬಾಳ್ವಭರತ

ಇಕ್ಷ್ವಾಕುವಂಶದರಸ ||

(೨)

ಎಲೆ ಕಿರಾತವರೇಣ್ಯ । ಸುಜನಾ

ವಳಿಯ ಬಡಿದಪಹರಿಸಿ ನೀ ಮಿಗೆ

ಗಳಿಸಿದರ್ಥವನುಂಬಜ ನರೀ ಸುಕೃತ ದುಷ್ಕೃತದ ।

ಫಲಕೆ ಬಹರೋ ಬಾರರೋ ಇದ

ತಿಳಿದು ಬಾ ಹೋಗೆನಲು, ತನ್ನಯ

ಬಳಗವಿದ್ದೆಡೆಗೈದು ಕೇಳ್ದನು ಮನದ ಸಂಶಯವ

(೩)

ಇಂದು ಮೌಳಿಯ ಪದಧ್ಯಾನಮಂ ಮಾಡುವಾ

ನೆಂದ ವಿಷ್ನೇತರತಿಶಯುವೊ ಶಿವನರಿ ವೈಯೊ

ಳೊಂದಿದ್ದ ಸೌಖ್ಯಮಂ ಮರೆದು ಪಾರ್ವತಿ ತಪಸ್ವಿನಿಯಾಗಿ

ತಿಳಿಗೊಳದೊಳು ।

ಮಿಂದನುದಿನಂ ಜಪ ತಪೋನಿಯಮ ಯೋಗಂಗ

ಳಿಂದೆ ಭಜಿಸಿದಳಂತರಾತ್ಮನಂ ಸಕಲ ಸುರ

ವೃಂದ ವಂದಿತ ಪಾದಪದ್ಮನಂ ಸುಜ್ಞಾನ ಸದ್ಮನಂ

ಕಾನನದೊಳು ||

(೪) ಕೆಳಗಿನ ಮಾತುಗಳಲ್ಲಿಯ ಬೇಕಾದ ಎರಡರ ಅರ್ಥವನ್ನು ವಿಶದೀಕರಿಸಿರಿ.

(೧) ಗೂಳಿ ಬಿದ್ದ ಮೇಲೆ ಆಳಿಗೊಂದು ಕಲ್ಲು.

(೨) ತಾಳಿದವನು ಬಾಳುವನು.

(೩) ಗಿಡಗಳಿಲ್ಲದ ನಾಡು ಹಾಳು ಬೀಡು.

(೪) ಮಾಡು ಇಲ್ಲವೆ ಮಡಿ.

ತಣ್ಣೀರೆರಚು, ಉಸುಬಿನ ಮೇಲೆ ಮನೆಕಟ್ಟು, ನಡು ನೀರಿನಲ್ಲಿ ಕೈ ಬಿಡು, ಕಾಲು ಕೆದರು, ಕಣ್ಣೆಡು, ಹಲ್ಲುಕಡಿ.

ಇವುಗಳಲ್ಲಿಯು ನಾಲ್ಕರ ಅರ್ಥ ಹೇಳಿ. ಅವುಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿರಿ.

(೫) (ಅ) ಕೆಳಗಿನ ಶಬ್ದಗಳ ಅರ್ಥ ಬೇಧವು ಸ್ಪಷ್ಟವಾಗುವಂತೆ ವಾಕ್ಯಗಳನ್ನು ರಚಿಸಿರಿ:

ಕೈಕೊಡು, ಕೈನೀಡು, ಕೈಮೀರು, ಕೈಕೊಳ್ಳು, ಕೈಬಿಡು.

(ಆ) ಕೆಳಗೆ ಕೊಟ್ಟ ಶಬ್ದಗಳಿಗೆ ಅದೇ ಅರ್ಥ ಹೇಳುವ ಬೇರೆ ಎರಡೆರಡು ಶಬ್ದಗಳನ್ನು ಬರೆಯಿರಿ:—

ಕಮಲ, ಪಾರ್ವತಿ, ಸಮುದ್ರ, ಸೂರ್ಯ, ಮುಖ.

(೬.) (ಅ) ಕೆಳಗೆ ಕೊಟ್ಟ ಶಬ್ದಗಳು ಯಾವ ಯಾವ ಪೌರಾಣಿಕ ವ್ಯಕ್ತಿಗಳ ಹೆಸರನ್ನು ಸೂಚಿಸುವವೆಂಬುದನ್ನು ಬರೆಯಿರಿ:—

ಪಿತೃಭಕ್ತಿ, ಸತ್ಯ, ಧನುರ್ವಿದ್ಯೆ; ನಿದ್ರೆ, ಪ್ರಯತ್ನ.

(ಆ) ಕೆಳಗೆ ಕೊಟ್ಟ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ:—

ಉನ್ನತಿ, ಸುಖ, ಹಗಲು, ಉಪಕಾರ, ಶೂರ.

(೭) (ಅ) (೧) ರಾವಣನು ಪ್ರಳಯ ಕಾಲದ ಸಮುದ್ರದಂತೆ ಸಿಟ್ಟಿಗೆದ್ದನು

(೨) ಇಂದ್ರನ ವಜ್ರಾಯುಧದ ಹೊಡೆತದಿಂದ ಪರ್ವತವು ಭೂಮಿಗೆ ಬಿದ್ದಿತೋ ಎಂಬಂತೆ ರಾವಣನ ಖಡ್ಗದ ಹೊಡೆತದಿಂದ ಜಟಾಯುವು ಭೂಮಿಗೆ ಬಿದ್ದಿತು.

(೩) ರಾಮನಷ್ಟು ಶೂರನು ರಾಮನೇ.

ಮೇಲಿನ ವಾಕ್ಯಗಳಲ್ಲಿ ಅಡಕವಾಗಿರುವ ಅಲಂಕಾರಗಳು ಯಾವವು ? (ಅವುಗಳ ಲಕ್ಷಣಗಳನ್ನು ಹೇಳಿರಿ.)

(ಆ) ೩–ನೆಯ ಪ್ರಶ್ನೆಯಲ್ಲಿಯ ೩ ನೆಯ ಪದ್ಯಕ್ಕೆ ಪ್ರಸ್ತಾರ ಹಾಕಿರಿ; ಅದು ಯಾವ ಷಟ್ಪದಿಯೆಂಬುದನ್ನು, ಅದರ ಲಕ್ಷಣಗಳನ್ನೂ ಹೇಳಿರಿ.

(೪) (ಅ) ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನೂ, ತದ್ಭವಗಳಿಗೆ ತತ್ಸಮಗಳನ್ನೂ ಬರೆಯಿರಿ: –

ಚೂರ್ಣ, ಆರ್ಯ, ದೀಪಿಕಾ, ಪುಸ್ತಕ. ಸಂಧ್ಯಾ.
ಹುಣ್ಣಿವೆ, ಕಂಬಳ, ಕೊಡಲಿ, ಸಂತೆ, ಬೀದಿ.

(ಆ) ಕೆಳಗಿನ ಸಮಸ್ತ ಪದಗಳ ವಿಗ್ರಹಮಾಡಿ, ಸಮಾಸಗಳ ಹೆಸರು ಹೇಳಿರಿ: -

ಇಂದುವದನೆ, ಪೂತಳಿಗಗಳ್, ಕೆಂದಾವರೆ, ಒಕ್ಕಟ್ಟು, ತಿಂಗ್ಳು.

(ಇ) ಕೆಳಗಿನ ವಾಕ್ಯಗಳನ್ನು ಕಂಸದಲ್ಲಿ ಸೂಚಿಸಿದಂತೆ ಬದಲಿಸಿ ಬರೆಯಿರಿ: –

(೧) ಇದು ಭವ್ಯವಾದ ಕಟ್ಟಡ. (ಉದ್ಗಾರವಾಚಕ ವಾಕ್ಯ ಮಾಡಿರಿ.)

(೨) ಸಂಪತ್ತನ್ನು ಬಯಸದವರಾರು ? (ಸಂಭವಾರ್ಥಕ ವಾಕ್ಯ ಮಾಡಿರಿ.)

(೩) ನೀನು ಊರಿಗೆ ಹೋಗುತ್ತೀಯಾ ? (ವಿಧ್ಯರ್ಥಕವಾಕ್ಯ ಮಾಡಿರಿ).

(೪) ರಂಗನು ಸಿಹಿಯಾದ ಹಣ್ಣನ್ನು ತಿಂದನು. (ಕರ್ಮಣಿ ಪ್ರಯೋಗ)

(೫) ಶೂರನಾದ ಭೀಮನಿಂದ ವೈರಿಗಳು ಓಡಿಸಲ್ಪಟ್ಟರು. (ಕರ್ತರಿ ಪ್ರಯೋಗ)

ಮೇಲಿನ ಪ್ರಶ್ನೆಗಳ ಉತ್ತರಗಳು

೧ನೇ ಪ್ರ. ಉ. (೧) ಈ ಪದ್ಯಗಳಲ್ಲಿ ಬಂದ ಚಲುವ ದೇವಿಯೆಂದರೆ:- ಯಮುನಾ ನದಿಯ ತೀರದ ಮೇಲಿರುವ ಆಗ್ರಾಪಟ್ಟಣದಲ್ಲಿ ದಿಲ್ಲಿಯ ಚಕ್ರವರ್ತಿ ಶಹಾಜಹಾನನು ಕಟ್ಟಿಸಿದ 'ತಾಜಮಹಾಲ್'

ಕನ್ನಡನಾಡಿನಲ್ಲಿ ಬೇಲೂರ ಚೆನ್ನಕೇಶವನ ಮಂದಿರವು ರಮಣೀಯವಾದುದಿರುತ್ತದೆ.

(೨) ಆ ತಾಜಮಹಲ್ ಎಂಬ ಚೆಲುವದೇವಿಯು ಜಗತ್ತಿನ ಹಲವು ದೇಶಗಳನ್ನು ಬಿಟ್ಟು ನಮ್ಮ ದೇಶಕ್ಕೆ ಬಂದುದು ನಮ್ಮ ದೇಶದ ಗೌರವತೆಯನ್ನು ವ್ಯಕ್ತಪಡಿಸುತ್ತದೆ, ಆ ದೇವಿಯು ನಮ್ಮದೇಶಕ್ಕೆ ಸೊಬಗನ್ನೂ ಯಶವನ್ನೂ ಉಂಟುಮಾಡಿದ್ದರಿಂದ ಹಿಂದು ದೇಶದ ಕೀರ್ತಿಯು ಫಲದ್ರೂಪವಾಯಿತು.

(೩) ತಾಜ ಮಹಲಿನಲ್ಲಿ ಕುಂದನ್ನು ಕಂಡು ಬಂದವರು ಮತ್ತೊಮ್ಮೆ ಅದನ್ನು ಕಂಡು ನೋಡುವಷ್ಟರಲ್ಲಿ ಮೊದಲು ತೋರಿದ ಕುಂದು ಕಾಣದಂತಾಗುವದು ಅಂದಮೇಲೆ ಈ ತಾಜಮಹಲಿನ ಸೊಗಸು ' ಜಗವನೆಲ್ಲ ಮರುಳುಮಾಡಿ ಗೆಲಿದ ಸೊಗಸಿದು ' ಎಂದು ಕವಿಯು ಹಾಡಿಕೊಂಡಿರುವನು.

(೪) ಆ ತಾಜಮಹಲೆಂಬ ಚೆಲುವ ದೇವಿಯನ್ನು ನೋಡಲು ಬಂದವರು ಆಕೆಯಲ್ಲಿ ಏನೊಂದು-ದೋಷವನ್ನು ಕಾಣರು. ಯಾಕಂದರೆ ಆಕೆಯು (ಆ ಮಂದಿರವು) ಸರ್ವಾಂಗ ಸುಂದರವಾಗಿರುವಳು (ದು)

(೫) ಒಂದು ಸಾರಿ ಆ ಮಂದಿರವನ್ನು ಕಂಡವರು ಇನ್ನೊಂದು ಸಾರಿ ಕಂಡು ಮೊದಲಿಗೆ ಕಂಡ ದೋಷಗಳನ್ನು ಅಳಿಸಿಕೊಳ್ಳಬಹುದು. ಅರ್ಥಾತ್ ದೋಷವಿದೆ ಇದರಲ್ಲಿ ಎಂದು ಹೇಳುವವನು ಅವಾಕ್ಕಾಗುವನು ಎಂದರ್ಥ.

೨ನೇ ಪ್ರ. ಉ. (ಅ) ಗದ್ಯಭಾಗದ ಸಂಕ್ಷಿಪ್ತತೆ—

ನಮ್ಮ ಸೊಗಸಿನ ಕನ್ನಾಡು ಭಾರತಾಂಬೆಯ ಕರದರ್ಪಣವಾಗಿರುವದು; ಇಲ್ಲಿಯ ಸೃಷ್ಟಿ ಸೌಂದರ್ಯವು ಮಿಗಿಲು; ಇದರ ಚೆಲುವು ಚಿನ್ನದಗಣಿ; ಕರ್ನಾಟಕ ರಾಗದಿಂದ ಈ ನಾಡಿನ ಪ್ರಸಿದ್ಧಿ; ರನ್ನ ಮೊದಲಾದ ಕವಿಗಳ ಕಾವ್ಯಗಳಿಂದ ಹಾಗು ದಾಸ-ಶಿವಶರಣರ ಪದ-ವಚನಗಳಿಂದ ರುಚಿಯು; ಕಾವೇರಿ ಮೊದಲಾದ ನದಿ-ಪ್ರವಾಹಗಳಿಂದ ಆ ರುಚಿಯರಸವು; ಜೋಗದ ಜಲಪಾತದಿಂದ ಕನ್ನಾಡಿಗೆ ಗೌರವ; ಉನ್ನತಗಿರಿಗಳಿಂದ ಕನ್ನಾಡಿನ ಶೋಭೆ; ಪುಲಕೇಶಿ ಮೊದಲಾದ ರಾಜರ ಮೂರ್ತಿ ಮತ್ತತೆಯು ಕನ್ನಾಡಿನ

ಕ್ಷಾತ್ರ ವೃತ್ತಿಯು; ಜಕ್ಕಣನ ಶಿಲ್ಪಕಲೆಯು ಈ ನಾಡಿನ ಜೀವನವು; ವಿದ್ಯಚ್ಛಕ್ತಿಯು ಕನ್ನಡದ ಪ್ರಭೆ;

ಇಂಥ ನಾಡಿನವರಾದ ನಾವು ಧನ್ಯರು; ನಮ್ಮ ನಾಡಿನ ಹಾಗು-ನುಡಿಯು ಅಭಿವೃದ್ಧಿಗಾಗಿ ಹೆಣಗುವದು ನಮ್ಮ ಪರಮ ಕರ್ತವ್ಯ; ನಮ್ಮ ನಾಡಿನಿಂದ ಭಾರತದ ಘನತೆ ವರ್ಧಿಸುವಂತೆಯೂ, ವಿಶ್ವ ಬಾಂಧವ್ಯವು ಹೆಚ್ಚಾಗುವಂತೆಯೂ ಆಗಬೇಕು.

(ಆ) ೧. 'ಕಾವೇರಿ' ಎಂಬ ನದಿಯು ಕನ್ನಡ ನಾಡಿನಲ್ಲಿ ಹರಿದದೆ, ಅದು ಹರಿದ ಪ್ರದೇಶದಲ್ಲೆಲ್ಲ ಕನ್ನಡ ಭಾಷೆಯೇ ನಡೆದಿದೆ. ಅದಕ್ಕಾಗಿ ಕವಿಯು. 'ಕಾವೇರಿ' ಎಂಬಶಬ್ದವನ್ನು ವಿಂಗಡಿಸಿ ಕಾವು+ಏರಿ ಎಂಬದಾಗಿ ಮಾಡಿರುವನು. ಕನ್ನಡ ಭಾಷೆಯ ರುಚಿಯನ್ನು ಸವಿಯುವವರ ಪ್ರದೇಶದಲ್ಲಿ ಹರಿದಿರುವದರಿಂದ 'ಕನ್ನಡದ ರುಚಿ ರಸವು ಏರಿ' ಎಂಬದಾಗಿ ಅಲಂಕಾರಿಕವಾಗಿ ನುಡಿದಿರುವನು. ೨. ಜಕ್ಕಣಾಚಾರ್ಯನಿಂದ ಕನ್ನಡ ನಾಡಿನಲ್ಲೆಲ್ಲ ಶಿಲ್ಪಕಲೆಯನ್ನು ಪ್ರದರ್ಶಿಸುವ ಕಟ್ಟಿದ ಕಟ್ಟಡಗಳು ಅಪ್ರತಿಮವಾಗಿವೆ ಅವು ಶಿಲೆಯಲ್ಲಿ ರಚಿಸಲ್ಪಟ್ಟಿರುವದಿಂದ ಬಹುದಿನಸ್ಥಾಯಿಯಾಗಿ ಉಳಿಯುವದರಿಂದ ಕವಿಯು—ಶಿಲ್ಪಕಲೆಯು ಜೀವಂತವಾಗಿ ವ್ಯಾಪಿಸಿದೆ ಎಂದು ಕವಿಯವಿಚಾರ.

೩ನೇ. ಪ್ರ. ಉ. **೧ನೆಯ ಪದ್ಯದ ಸರಳಾನುವಾದ**

(ವನಕ್ಕೆ ಹೋದ ರಾಮನನ್ನು ಕರೆಯಹೋದ ಭರತನನ್ನು ಕುರಿತು ರಾಮನಾಡಿದನುಡಿಯು)

ಎಲೈ ಇಕ್ಷ್ವಾಕುವಂಶದ ಅರಸನಾದ ಭರತನೇ ಕೇಳು, (ಇನ್ನು) ಶೋಕಮಾಡಬೇಡ, ರಾಜ್ಯಛತ್ರದ ನೆರಳು ನಿನಗೆ;—ವನದಲ್ಲಿಯ ಮರದನೆರಳು ನನಗೆ, ಶತ್ರುಘ್ನನ ಬೆಂಬಲವು ನಿನಗೆ;—ಲಕ್ಷ್ಮಣನ ಹಂಬಲವು ನನಗೆ, (ಹೀಗಿದ್ದಮೇಲೆ) ನಿನ್ನಲ್ಲಿಯ ಬಂಧುಪ್ರೇಮವು ಮಿಗಿಲಾದದ್ದು, ನೀನು ಧನ್ಯನು. ಮಕ್ಕಳಿಗೆ ಪಿತೃವಾಕ್ಯವು ಹೆಚ್ಚಿನದು, ತಾಯಿಯ ಸೇವೆಯಲ್ಲಿ ನಾನು ಮಗ್ನನಾಗಿ ಜೀವಿಸುವೆ,

೩ನೆಯ ಪದ್ಯದ ಸರಳಾನುವಾದ

(ಬೇಡನು ನಾರದರನ್ನು ಸುಲಿಯಲು ಬಂದಾಗ್ಗೆ ಆ ಬೇಡನಿಗೆ ನಾರದರು ಕೇಳಿದ ಪ್ರಶ್ನೆ ಈ ನುಡಿಯಲ್ಲಿವೆ).

ಎಲೈ ಶ್ರೇಷ್ಠನಾದ ಬೇಡನೆ! ಸಜ್ಜನರನ್ನು ಹಿಂಸೆಪಡಿಸಿ ನೀನು ಗಳಿಸಿದ ಸಂಪತ್ತನ್ನು ಉಪಭೋಗಿಸುವ ಜನರು (ಹೆಂಡಿರು ಮಕ್ಕಳು ಮೊದಲಾದವರು) ಈ ನಿನ್ನ ಪುಣ್ಯ-ಪಾಪಗಳ ಫಲದಲ್ಲಿ ಭಾಗಿಗಳಾಗುವರೇ ಹೇಗೆ? ಇದನ್ನು ತಿಳಿದುಕೊಂಡು ಬಾ, ಹೋಗು ಎಂದು (ನಾರದರು-ನುಡಿಯಲು) ಬೇಡನು ಸಂಶಯವುಳ್ಳವನಾಗಿ ತನ್ನ ಬಳಗದವರ ಹತ್ತಿರಹೋಗಿ ಅವರನ್ನು ಕೇಳಿದನು.

೩ನೆಯ ಪದ್ಯದ ಸರಳಾನುವಾದ

(ಪಾಂಡವರ ಅಶ್ವಮೇಧಯಾಗದ ಕುದುರೆಯು ಸ್ತ್ರೀರಾಜ್ಯದ ಒಂದು ಸರೋವರದಲ್ಲಿ ತೀರಕ್ಕೆ ಬಂದಾಗ ಅದರರೂಪ ಪಲ್ಲಟವಾಯಿತು. ಆ ಸರೋವರದ ವರ್ಣನೆಯ ಒಂದು ಪದ್ಯವಿದು)

ಶಿವನ ಪಾದಸ್ಮರಣೆ ಮಾಡುವ ಆನಂದಕ್ಕೆ ಮಿಗಿಲಾದದ್ದಿನ್ನೊಂದಿಲ್ಲೆಂದು ಭಾವಿಸಿದ ಪಾರ್ವತಿಯು ಶಿವನನ್ನು ಒಂದುಗೂಡಿದ್ದ ಸೌಖ್ಯವನ್ನು ಮರೆತು ತಪಸ್ವಿನಿಯಾಗಿ ಆ ಸರೋವರದಲ್ಲಿ ಸ್ನಾನ ಮಾಡಿ ಜಪ-ತಪಾದಿಗಳಿಂದ, ಯಾವತ್ತು ದೇವತೆಗಳಿಂದ ನಮಸ್ಕರಿಸಲ್ಪಟ್ಟ ಪಾದವುಳ್ಳವನಾದ, ಒಳ್ಳೆಜ್ಞಾನವೆಂಬ ಕಮಲ ರವಿಯಾದ ಅಂತರಾತ್ಮನನ್ನು ಸ್ಮರಿಸಿದಳು.

೮ನೇ ಪ್ರ. (ಅ) ೧ ಮನುಷ್ಯನು ಸುಸ್ಥಿತಿಯಲ್ಲಿದ್ದ ಕಾಲದಲ್ಲಿ ಎಲ್ಲರು ಅವನನ್ನು ಗೌರವಿಸುವರು. ಅದೇ ಅವನು ದುಸ್ಥಿತಿಗೀಡಾಗಲು ಅವನಿಗೆ ಪೂಜ್ಯತೆಯನ್ನರ್ಪಿಸುವವರು ಹೀಯಾಳಿಸುವರು. ಇಂಥ ಪ್ರಸಕ್ತಿಗಳಲ್ಲಿ—'ಗೂಳಿಬಿದ್ದಮೇಲೆ ಆಳಿಗೊಂದುಕಲ್ಲು' ಎಂಬ ನುಡಿಯು ಅನ್ವಯಿಸುವದು.

(೨) ಸಹನ ಶಕ್ತಿಯುಳ್ಳವನಿಗೆ ದುರ್ಘಟಿ ಪ್ರಸಂಗವೊದಗಲು ವಿಚಾರದಿಂದ ಆ ಪ್ರಸಂಗವನ್ನು ನೀಗುವನು. ಅದೇ ಶೀಘ್ರಕೋಪಿಯು ಅದನ್ನು ಸಹಿಸಲಾರದಾಗಿ ಅನರ್ಥಗಳನ್ನು ಹೊಂದುವನು ಇಂಥಲ್ಲಿ 'ತಾಳಿದವನು ಬಾಳುವನು' ಎಂಬ ಸಾಮತಿಯನ್ನು ಬಳಿಸುವರು.

(೩) ಸೃಷ್ಟಿಸೌಂದರ್ಯವು ಗಿಡ-ಮರಗಳಿಂದ ಚಂದಕಾಣುವದು. ಬೈಲಿನ ಪ್ರದೇಶವು ಹಾಗೆ ಕಾಣುವದಿಲ್ಲ. ಅದ್ದರಿಂದ 'ಗಿಡಗಳಿಲ್ಲದ ನಾಡು ಹಾಳಬೀಡು' ಎಂಬ ಮಾತು ಬಳಿಸುವದುಂಟು.

(೪) ದೇಶಕಲ್ಯಾಣದ ಕಾರ್ಯವನ್ನು ಪ್ರತಿಯೊಬ್ಬರು ಮಾಡಲೇ ಬೇಕು. ಮಾಡದಿದ್ದರೆ ದೇಶವು ಹೀನದೆಸೆ ಹೊಂದುವದು. ಅದಕ್ಕಾಗಿ ಮಹಾತ್ಮರು 'ಮಾಡು ಇಲ್ಲವೆ ಮಡಿ' ಎಂದು ಬೋಧೆಮಾಡುವರು.

(೫) 'ತಣ್ಣೀರೆರಚು': — ಶಾಂತಮಾಡು ಎಂಬರ್ಥ.

ವಾಕ್ಯ: — ರಾಮ—ಕೃಷ್ಣರ ನ್ಯಾಯವು ಭರಕ್ಕೆ ಬಂದ ಕಾಲಕ್ಕೆ ಅವರ ತಂದೆ ಬಂದಕೂಡಲೆ ಅವರ ನ್ಯಾಯಕ್ಕೆ ತಣ್ಣೆರೆರಚಿದಂತಾಯಿತು.

'ಉಸುಬಿನ ಮೇಲೆ ಮನೆಕಟ್ಟು': — ಅಸ್ಥಿರತೆಯ ದರ್ಶಕದಲ್ಲಿ.

ವಾಕ್ಯ: — ಶಾಮನ ಗಿಳಿಯೊಂದು (ಬಾಯಿಪಾಠ) ವಿನಿಂದ ಪಾಠ ಮಾಡಿದ ವಿಷಯಗಳು ಅವನ ಪರೀಕ್ಷೆಯಲ್ಲಿ ಉಪಯೋಗಕ್ಕೆ ಬಾರದಾದವು. ಹೀಗಾಗಿ ಅವನು ಅಭ್ಯಾಸ ಮಾಡಿದ್ದೆಲ್ಲ 'ಉಸುಬಿನ ಮೇಲೆ ಮನೆಕಟ್ಟಿದಂತಾಯಿತು.

'ನಡುನೀರಿನಲ್ಲಿ ಕೈಬಿಡು': — ಬೇರೊಬ್ಬನನ್ನು ಅಸಹಾಯಸ್ಥಿತಿಗೀಡುಮಾಡುವದು.

ವಾಕ್ಯ: ಜಯವಂತನು ಹೆಂಡಿರು-ಮಕ್ಕಳನ್ನು ಸಲುಹುತ್ತ ಕಾಲ ಕಳೆಯುತ್ತಿದ್ದವನು ಒಮ್ಮೆಲೇ ಸನ್ಯಾಸ ದೀಕ್ಷೆಪಡೆದು ಬದರಿಕಾಶ್ರಮ ಸೇರಿದ್ದರಿಂದ ಆತನು ತನ್ನ ಹೆಂಡಿರುಮಕ್ಕಳನ್ನು ನಡುನೀರಲ್ಲಿ ಕೈಬಿಟ್ಟಂತಾಯಿತು.

'ಕಾಲುಕೆದರು': ಕಾರಣವಿಲ್ಲದೆ ಇನ್ನೊಬ್ಬರನ್ನು ಕೆಣಕುವದು. 'ಆ ಸಂಗನು ಮೊನ್ನೆ ಒಬ್ಬ ಗೃಹಸ್ಥನ ಕೂಡ ಸುಮ್ಮಸುಮ್ಮನೆ ಕಾಲು ಕೆದರಿ ಜಗಳಾತೆಗೆದನು'

'ಕಣ್ಣಿಡು':—ವೈಷಮ್ಯ ಇಲ್ಲವೆ ವಿಷಯಭಾವನೆ ವ್ಯಕ್ತಪಡಿಸುವದು.

ವಾಕ್ಯ:—ಔರಂಗಜೇಬನು ದಕ್ಷಿಣೀ ಮುಸಲ್ಮಾನಿ ರಾಜ್ಯಗಳಮೇಲೆ ಕಣ್ಣಿಟ್ಟನು. ಬೇಡನು ಗುಡ್ಡದ ಓರೆಯಲ್ಲಿಯ ಹುಲಿಯನ್ನು ಕಣ್ಣಿಟ್ಟು ನೋಡಿದನು.

'ಹಲ್ಲುಕಡಿ':— ಸಿಟ್ಟಿನ ಆವಿರ್ಭಾವ—

ವಾಕ್ಯ...ಮುಸಲ್ಮಾನರು ರಾಮರಾಜನನ್ನು ಕಂಡು ಹಲ್ಲು ಕಡಿಯುತ್ತಿದ್ದರು.

೫ನೇ. ಪ್ರ. (ಅ) ಕೈಕೊಡು:—ಸಹಾಯಮಾಡು ಎಂಬರ್ಥ.

ವಾಕ್ಯ—ಈ ಸಾರೆ ನಮ್ಮ ಹೊಲವು ಚನ್ನಾಗಿ ಬೆಳೆದು ಕೈಕೊಟ್ಟಿತು.

ಕೈನೀಡು: - ಯಾಚನೆ. ಎಂಬರ್ಥದಲ್ಲಿ

ವಾಕ್ಯ:— ದರಿದ್ರರು ಶ್ರೀಮಂತರಿಗೆ ಕೈನೀಡುವರು.

ಕೈಮೀರು: – ಅಳವು ತಪ್ಪು ಎಂಬರ್ಥದಲ್ಲಿ

ವಾಕ್ಯ— ನಿಂಗನ ರೋಗವು ವೈದ್ಯನ ಕೈಮೀರಿತು.

ಕೈಕೊಳ್ಳು:-- ಸ್ವೀಕರಿಸು ಎಂಬರ್ಥದಲ್ಲಿ.

ವಾಕ್ಯ:—ರಾಮನು ಶಾಲಾಖಾತೆಯಲ್ಲಿಶಿಕ್ಷಕನ ಕೆಲಸ ಕೈಕೊಂಡನು.

ಕೈಬಿಡು: - ಉದಾರತೆಯನ್ನು ತೋರಿಸುವದು. ಹಾಗು ಅಗಲುವಿಕೆಯನ್ನು ತೋರಿಸುವದು.

ವಾಕ್ಯ:— ಗುರುರಾಯನ ಲಗ್ನದಲ್ಲಿ ಅವನ ತಂದೆಯು ಭಿಕ್ಷುಕರಿಗೆ ಕೈಬಿಟ್ಟು ದಾನನೀಡಿದನು.

ವಾಕ್ಯ:— ಶಿವರಾಯನ ಹೆಂಡತಿಯು ಮುಪ್ಪಿನಕಾಲದಲ್ಲಿ ಗಂಡನ ಕೈಬಿಟ್ಟು ಹೋದಳು.

(ಆ) ಕಮಲ:— ರಾಜೀವ; ನಳಿನ.

ಪಾರ್ವತಿ: — ಅಗಜೆ; ಉಮಾ.

ಸಮುದ್ರ:— ಶರಧಿ; ಸಾಗರ.

ಸೂರ್ಯ:— ಅರ್ಕ; ಭಾಸ್ಕರ.

ಮುಖ:— ವದನ; ವಕ್ತ್ರ.

೭ನೆ. ಪ್ರ. (ಅ) ಪಿತೃಭಕ್ತಿ — ಶ್ರವಣಕುಮಾರ

ಸತ್ಯ — ಹರಿಶ್ಚಂದ್ರ

ಧನುರ್ವಿದ್ಯೆ — ಅರ್ಜುನ

ನಿದ್ರೆ — ಕುಂಭಕರ್ಣ

ಪ್ರಯತ್ನ ಭಗೀರಥ

(ಆ) ಉನ್ನತಿ (ವಿರೋಧ—ಶಬ್ದ) ಅವನತಿ

ಸುಖ	,,	,,	ದುಃಖ
ಹಗಲು	,,	,,	ರಾತ್ರಿ
ಉಪಕಾರ	,,	,,	ಅಪಕಾರ
ಶೂರ	,,	,,	ಹೇಡಿ

೭ನೆ. ಪ್ರ. (ಅ) ೧. ಇದರಲ್ಲಿ ಉಪಮಾಲಂಕಾರವಿದೆ.

ಲಕ್ಷಣ:— ಸಾಧಾರಣ ಗುಣಧರ್ಮಗಳುಳ್ಳ ಎರಡು ವಸ್ತುಗಳ ವರ್ಣನೆ:— ?

೨. ಇದರಲ್ಲಿ ಉತ್ಪ್ರೇಕ್ಷಾಲಂಕಾರವಿದೆ.

೩. ಇದರಲ್ಲಿ ರೂಪಕಾಲಂಕಾರವಿದೆ.

ಲಕ್ಷಣ:—ಹಿಂದೆ ಬಂದಿವೆ.

(ಅ) ಪ್ರಸಾರಃ—

" ಇ೦ ದು ಮಹೌ ಳಿ ಯು ಪ ದ ಧ್ಯಾ ನ ಮಂ ಮಾಡುವಾ
ಕೆದ — ∪ — ∪ ∪ ∪ — — ∪ — — ∪ —
ನಂದ ಮಿ ನ್ನೇ ಶ ರ ತಿ ಶ ಯು ಮೊ ಶಿ ವ ನ ರಿ ವ್ಯೈ ಯೊ
— ∪ — — ∪ ∪ ∪ ∪ ∪ ∪ ∪ ∪ ∪ ∪ — —
ಳೊಂ ದಿ ದರ್ ಸೌ ಖ್ಯ ಮಾಂ ಮ ರೆ ದು ಪಾ ರ್ವ ತಿ ಶ ಪ ಸ್ವಿ ನಿ
ಕೇ — — ∪ — — — ∪ ∪ ∪ — ∪ ∪ ∪ — ∪ ∪
ನು
ಯಾ ಗಿ ತಿ ಳಿ ಗೊ ಳ ದೊ ಳು
— ∪ ∪ ∪ ∪ ∪ ∪ —

ಯು ಇದು ಒಂದು ಷಟ್ಪದಿ ವೃತ್ತದ ಅರ್ಥವಿದೆ, ಇನ್ನೊಂದು ಅರ್ಥ
ಲು ಪೂರ್ಣವಾಗುವದು.

ಈ ವೃತ್ತದ ೧ನೆಯ ಚರಣಕ್ಕೆ ೨೦ ಮಾತ್ರೆ
೨ „ „ ೨೦ „
೩ „ „ ೩೦ „

ಮೇಲೆ ಒಂದು ಗುರು (೨ ಮಾತ್ರೆ ಈ ಪ್ರಕಾರ ಮಾತ್ರೆಗಳ ಎಣಿಕೆ
ಇರುವದರಿಂದ– ಷಟ್ಪದಿಗಳಲ್ಲಿಯು " ವಾರ್ಧಿಕ್ಯ "ವೆಂದು ಹೇಳಲ್ಪಡುವ
ತ್ತವಿದು.

೧. ನೇ. ಪ್ರ. (ಅ):—

ೂರ್ಣ (ದ್ಭ) ಪುಣ್ಣ	ಹುಣ್ಣಿವೆ (ತ್ಸ) ಪೌರ್ಣಿಮೆ
ರ್ಯ (") ಅಯ್ಯ	ಕುಂಬಳ (") ಕೂಷ್ಮಾಂಡ
ೀಪಿಕಾ (") ದೀವಿಗೆ	ಕೊಡಲಿ (") ಪರಶು
ಸ್ತಕ (") ಹೊತ್ತಿಗೆ	ಸಂತೆ (") ಸಂಸ್ಥೆ
ಂಧ್ಯಾ (") ಸಂಜೆ	ಬೀದಿ (") ವೀಥಿ

(ಆ) ವೀಣೆಯನ್ನು ಪಾಣಿಯಲ್ಲಿ ಇಂದುವನ್ನು ಧರಿಸಿದವನಾವನೋ ಅವನು (ಬ. ಸ.)

ಪೂವು + ತಳಿರು = ಪೂತಳಿರ್ಗಳ್ (ದ್ವಂ. ಸ)

ಕೆಚ್ಚನೆ + ತಾವರೆ = ಕೆಂದಾವರೆ (ಕ. ಸ)

ಒಂದು + ಕಟ್ಟು = ಒಕ್ಕಟ್ಟು (ದ್ವಿ. ಸ)

ಕೈಯ + ಅಡಿ = ಅಂಗೈ (ಅ. ಸ)

(ಇ) ೧ ಅಹಹ ! ಇದೆಂಥ ಭವ್ಯವಾದ ಕಟ್ಟಡ !

೨. ಎಲ್ಲರೂ ಸಂಪತ್ತನ್ನು ಬಯಸುತ್ತಾರೆ.

೩. ನೀನು ಊರಿಗೆ ಹೋಗು.

೪. ರಂಗನಿಂದ ಸಿಹಿ ಹಣ್ಣು ತಿನ್ನಲ್ಪಟ್ಟಿತು.

೫. ಭೀಮನು ಶೌರ್ಯದಿಂದ ವೈರಿಗಳನ್ನು ಓಡಿಸಿದನು.

